₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 12.06.2024 ಸಂಪುಟ: 09 ಸಂಚಿಕೆ: 170 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪವಿತ್ರಾ ಗೌಡ ಎ1, ದರ್ಶನ್ ಎ2 ಆರೋಪಿಗಳು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ | ನಟ ದರ್ಶನ್ ಸೇರಿ 13 ಆರೋಪಿಗಳಿಗೆ ಆರು ದಿನ ಪೊಲೀಸ್ ಕಸ್ಟಡಿ

ಕಾಟೇರನಿಗೆ ಕಂಟಕ

ಬೆಂಗಳೂರು: ಅಭಿಮಾನಿಯೊಬ್ಬನ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದಲ್ಲಿ ನಟ ದರ್ಶನ್ ಹಾಗೂ ಗೆಳತಿ ಪವಿತ್ರಾ ಗೌಡ ಸೇರಿದಂತೆ 13 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಭಾಗಿಯಾಗಿರುವುದು ತನಿಖೆಯಿಂದ ಪತ್ತೆಯಾದ ತಕ್ಷಣವೇ ಕಾರ್ಯಾಚರಣೆ ಕೈಗೊಂಡ ಕಾಮಾಕ್ಷಿಪಾಳ್ಯ ಪೊಲೀಸರು ಮೈಸೂರಿನ ಕೆಂಪಯ್ಯನಹುಂಡಿ ಗ್ರಾಮದ ಫಾರ್ಮ್ ಹೌಸ್‌ನಲ್ಲಿದ್ದ ದರ್ಶನ್‌ನನ್ನು ಬಂಧಿಸಿದ್ದಾರೆ.

ಚಿತ್ರದುರ್ಗದ ರೇಣುಕಾಸ್ವಾಮಿ ಎಂಬಾತ ದರ್ಶನ್ ತೂಗುದೀಪ ಅವರ ಗೆಳತಿ ಪವಿತ್ರ ಗೌಡ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಸಂದೇಶ, ಫೋಟೋ, ವಿಡಿಯೋ ಕಳುಹಿಸುತ್ತಿದ್ದ. ಕಳೆದ ಒಂದು ತಿಂಗಳಿಂದ ಈ ರೀತಿ ಆಗುತ್ತಿದ್ದ ಕಾರಣ ಪವಿತ್ರ ಗೌಡ ಈ ವಿಚಾರವನ್ನು ದರ್ಶನ್ ಗಮನಕ್ಕೆ ತಂದಿದ್ದರು. ದರ್ಶನ್ ಮನೆಯಿಂದ ಯಾರೋ ಒಬ್ಬರು ಚಿತ್ರದುರ್ಗದ ದರ್ಶನ್ ಅಭಿಮಾನಿಗಳ ಸಂಘದ ರಾಘವೇಂದ್ರ ಎಂಬುವವರಿಗೆ ಕರೆ ಮಾಡಿ, ರೇಣುಕಾಸ್ವಾಮಿ ಬಗ್ಗೆ ವಿಚಾರಿಸಿದ್ದಾರೆ. ಅಲ್ಲದೆ ಬೆಂಗಳೂರಿಗೆ ಕರೆ ತರುವಂತೆ ಸೂಚಿಸಿದ್ದರು ಎಂಬುದು ತನಿಖೆಯ ವೇಳೆ ಬಹಿರಂಗವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಣ್ಣೀರಿಟ್ಟ ದರ್ಶನ್: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧನವಾಗಿರುವ ನಟ ದರ್ಶನ್, ಪವಿತ್ರಾ ಗೌಡ ಸೇರಿ 13 ಆರೋಪಿಗಳನ್ನು 6 ದಿನ ಪೊಲೀಸ್ ಕಸ್ಟಡಿಗೆ ನೀಡಿ ಕೋರಮಂಗಲದ 24ನೇ ಎಸಿಎಂಎಂ ಕೋರ್ಟ್‌ನ ನ್ಯಾಯಾಧೀಶ ವಿಶ್ವನಾಥ್ ಗೌಡ ಆದೇಶಿಸಿದ್ದಾರೆ. ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ಬಳಿಕ ಆರೋಪಿಗಳನ್ನು ಮಂಗಳವಾರ ಸಂಜೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿತ್ತು. ಈ ವೇಳೆ ಸರಕಾರಿ ಅಭಿಯೋಜಕರು ವಾದ ಮಂಡಿಸಿ, ಸಾಕ್ಷ್ಯಗಳ ನಾಶ ಆಗಿರುವುದರಿಂದ ಎ2 ಆರೋಪಿ ದರ್ಶನ್ ಅವರನ್ನು 14 ದಿನ ಕಸ್ಟಡಿಗೆ ನೀಡುವಂತೆ ಕೋರಿದರು. ದರ್ಶನ್ ಪರ ವಕೀಲ 14 ದಿನ ಯಾಕೆ? ನ್ಯಾಯಾಂಗ ಬಂಧನಕ್ಕೆ ನೀಡಬೇಕು ಎಂದು ಮನವಿ ಮಾಡಿದರು. ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಧೀಶರು ಪೊಲೀಸ್ ಕಸ್ಟಡಿಗೆ ನೀಡಲು ಸೂಚಿಸುತ್ತಿದ್ದಂತೆ ದರ್ಶನ್ ಕಣ್ಣೀರಿಟ್ಟರು.

ಯಾರ್‍ಯಾರ ಬಂಧನ?

- ದರ್ಶನ್ ತೂಗುದೀಪ
- ಪವಿತ್ರಾ ಗೌಡ
- ವಿನಯ್.ವಿ
- ನಾಗರಾಜು.ಆರ್
- ಲಕ್ಷ್ಮಣ್ ಎಂ
- ಪ್ರದೋಶ್.ಎಸ್
- ಪವನ್.ಕೆ
- ದೀಪಕ್ ಕುಮಾರ್ ಎಂ
- ನಂದೀಶ್
- ಕಾರ್ತಿಕ್
- ನಿಖಿಲ್ ನಾಯಕ್
- ರಾಘವೇಂದ್ರ ರಾಘು
- ಕೇಶವ ಮೂರ್ತಿ

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿಸಿರುವ ಆರೋಪಿಗಳ ವಿಚಾರಣೆ ಮಾಡುವಾಗ ನಟ ದರ್ಶನ್ ಹೆಸರು ಕೇಳಿಬಂದಿದ್ದು, ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣದ ಕುರಿತು ಇನ್ನಷ್ಟು ತನಿಖೆ ನಡೆಯಬೇಕಿದೆ. ಅಲ್ಲಿಯವರೆಗೂ ಈ ಬಗ್ಗೆ ಏನೂ ಹೇಳಲು ಬರುವುದಿಲ್ಲ. ಈ ಕೇಸ್‌ನಲ್ಲಿ ಅವರೇ ನೇರವಾಗಿ ಭಾಗಿಯಾಗಿದ್ದಾರಾ ಇಲ್ವಾ? ಯಾವ ಕಾರಣಕ್ಕೆ ಕೊಲೆ ನಡೆದಿದೆ ಎಂಬುದು ತನಿಖೆ ಬಳಿಕ ತಿಳಿಯಬೇಕಿದೆ.

-ಡಾ.ಜಿ.ಪರಮೇಶ್ವರ್, ಗೃಹ ಸಚಿವ

ದೇಹದ ಮೇಲೆ 15 ಕಡೆ ಗಾಯ

ಮರಣೋತ್ತರ ಪರೀಕ್ಷೆಯಲ್ಲಿ ರೇಣುಕಾಸ್ವಾಮಿ ದೇಹದ ಮೇಲೆ ಬರೋಬ್ಬರಿ 15 ಕಡೆ ಗಾಯಗಳಿರುವುದು ಬಯಲಾಗಿದೆ. ಮೂಗು, ಕಾಲು, ತಲೆ, ಬೆನ್ನು, ದವಡೆ ಸೇರಿದಂತೆ 15 ಕಡೆ ಗಾಯಾಗಳಾಗಿವೆ. ರಾಡ್ ಮತ್ತು ಕಟ್ಟಿಗೆಯಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಲಾಗಿದೆ.

ರೇಣುಕಾಸ್ವಾಮಿ ಪತ್ನಿ ಗರ್ಭಿಣಿ

ಚಿತ್ರದುರ್ಗದ ಅಪೋಲೋ ಫಾರ್ಮಸಿಯಲ್ಲಿ ಕೆಲಸ ಮಾಡುತ್ತಿದ್ದ ರೇಣುಕಾಸ್ವಾಮಿ ಕೆಇಬಿಯ ನಿವೃತ್ತ ಅಧಿಕಾರಿ ಶಿವನಗೌಡ ಮತ್ತು ರತ್ನಪ್ರಭಾ ದಂಪತಿಯ ಪುತ್ರ. ಚಿತ್ರದುರ್ಗದ ಲಕ್ಷ್ಮೀವೆಂಕಟೇಶ್ವರ ಬಡಾವಣೆಯ ನಿವಾಸಿ. ರೇಣುಕಾಸ್ವಾಮಿ ಅವರಿಗೆ ಕಳೆದ 2023ರ ಜೂ.28ರಂದು ಮದುವೆಯಾಗಿತ್ತು. ಅವರ ಪತ್ನಿ 5 ತಿಂಗಳ ಗರ್ಭಿಣಿ.

ರೇಣುಕಾಸ್ವಾಮಿ

ಸಿನಿಮಾ ರೀತಿ ಅಪಹರಣ

ಪವಿತ್ರಾ ಗೌಡಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಮೆಸೇಜ್ ಕಳುಹಿಸುತ್ತಿದ್ದ ಹಿನ್ನೆಲೆಯಲ್ಲಿ ರೇಣುಕಾಸ್ವಾಮಿ ಜತೆ ಸಂಪರ್ಕ ಸಾಧಿಸಲು ಹುಡುಗಿ ಹೆಸರಿನಲ್ಲಿ ನಕಲಿ ಖಾತೆಯನ್ನು ದರ್ಶನ್ ತಂಡ ತೆರೆದಿತ್ತು. ಈ ಖಾತೆಯ ಮೂಲಕ ರೇಣುಕಾಸ್ವಾಮಿಯ ಜತೆ ಸಂವಹನ ಮಾಡಲಾಗುತ್ತಿತ್ತು. ಶನಿವಾರ ಮಾತನಾಡಲು ಮನೆಯಿಂದ ಹೊರಗಡೆ ಬಾ ಎಂದು ಖಾತೆಯಿಂದ ಸಂದೇಶ ಕಳುಹಿಸಲಾಗಿತ್ತು. ಈ ಸಂದೇಶಕ್ಕೆ ಒಪ್ಪಿ ಆತನ ಮನೆಯಿಂದ ಹೊರಗೆ ಬಂದಿದ್ದ. ಚಿತ್ರದುರ್ಗದಲ್ಲಿರುವ ಅಖಿಲ ಕರ್ನಾಟಕ ದರ್ಶನ್ ತೂಗುದೀಪ ಸೇನಾ ಅಧ್ಯಕ್ಷ ರಘು ದರ್ಶನ್ ನೇತೃತ್ವದಲ್ಲಿ ಅಪಹರಣ ಮಾಡಿ ಬೆಂಗಳೂರಿಗೆ ಕರೆ ತರಲಾಗಿತ್ತು. ಹಲ್ಲೆ ನಡೆಸುವ ಸಂದರ್ಭದಲ್ಲಿ ದರ್ಶನ್ ಮತ್ತು ಪವಿತ್ರಾ ಗೌಡ ಸ್ಥಳದಲ್ಲಿ ಇದ್ದರು.

ಮೂಗು, ಬಾಯಿ ಕತ್ತರಿಸಿ ವಿಕೃತಿ

ದರ್ಶನ್ ಸ್ನೇಹಿತ, ಉದ್ಯಮಿ ವಿನಯ್‌ಗೆ ಸೇರಿದ ಆರ್‌ಆರ್ ನಗರದದ ಪಟ್ಟಣಗೆರೆ ಗೋಡೌನ್‌ಗೆ ರೇಣುಕಾಸ್ವಾಮಿಯನ್ನು ಕರೆ ತಂದು ಅಲ್ಲಿ ಮಾರಾಣಾಂತಿಕ ಹಲ್ಲೆ ನಡೆಸಿದ್ದಾರೆ. ರೇಣುಕಾ ಸ್ವಾಮಿಯ ಮೂಗು, ಬಾಯಿ, ದವಡೆ ಕತ್ತರಿಸಿ ವಿಕೃತಿ ಮೆರೆದು ಸುಮ್ಮನಹಳ್ಳಿ ಬಳಿಯ ಸತ್ವ ಅನುಗ್ರಹ ಅಪಾರ್ಟ್ ಮೆಂಟ್ ಮುಂಭಾಗದಲ್ಲಿರುವ ರಾಜಕಾಲುವೆಗೆ ಎಸೆದಿದ್ದರು. ಆರ್‌ಆರ್ ನಗರದ ವಿನಯ್ ಶೆಡ್‌ನಲ್ಲಿ ರೇಣುಕಾ ಸ್ವಾಮಿ ಕೊಲೆ ಮಾಡಿದ್ದಾರೆ. ಕೊಲೆ ನಂತರ ಆಟೋ ಹಾಗೂ ಸ್ಕಾರ್ಪಿಯೋ ಕಾರಿನಲ್ಲಿ ಮೃತದೇಹ ರವಾನೆ ಮಾಡಿದ್ದಾರೆ. ಬಡ್ಡಿ ಕಟ್ಟಲು ಸಾಧ್ಯವಾಗದಕ್ಕೆ ವಿನಯ್ ಆಟೋವನ್ನು ವಶಕ್ಕೆ ಪಡೆದಿದ್ದ. ಈ ಆಟೋದಲ್ಲಿ ಶವವನ್ನು ರವಾನೆ ಮಾಡಿ ರಾಜಕಾಲುವೆ ಎಸೆದಿದ್ದಾರೆ.

ಕೊಲೆ ಬೆಳಕಿಗೆ ಬಂದಿದ್ದು ಹೇಗೆ?

ಸತ್ವ ಅನುಗ್ರಹ ಅಪಾರ್ಟ್ ಮೆಂಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಸೆಕ್ಯುರಿಟಿ ಗಾರ್ಡ್ ಗಸ್ತು ತಿರುಗುತ್ತಿದ್ದಾಗ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಕೂಡಲೇ ಅವರು ಕಾಮಾಕ್ಷಿಪಾಳ್ಯ ಪೊಲೀಸರಿಗೆ ತಿಳಿಸಿದ್ದರು. ಪೊಲೀಸರು ಕೊಲೆಯಾದ ವ್ಯಕ್ತಿಯ ಮೂಲ ಪತ್ತೆ ಹಚ್ಚಲು ಆರಂಭಿಸಿದರು. ತನಿಖೆಯ ವೇಳೆ ಪತ್ತೆಯಾದ ಶವ ಚಿತ್ರದುರ್ಗ ಮೂಲದ ರೇಣುಕಾಸ್ವಾಮಿಯದ್ದು ಎನ್ನುವುದು ಗೊತ್ತಾಗಿದೆ. ನಂತರ ಫೋನ್ ಕರೆ, ಸಿಸಿಟಿವಿ ಇತ್ಯಾದಿ ತಾಂತ್ರಿಕ ಸಾಕ್ಷ್ಯಗಳನ್ನು ಕಲೆ ಹಾಕಿ ಆರೋಪಿಗಳನ್ನು ಬಂಧನ ಮಾಡಿದಾಗ ಈ ಪ್ರಕರಣದ ಮಾಹಿತಿ ಬೆಳಕಿಗೆ ಬಂದಿದೆ.

ಒಂದು ಪೋಸ್ಟ್ ತಂದ ಅನಾಹುತ

ಕಳೆದ 10 ವರ್ಷಗಳಿಂದ ನಟ ದರ್ಶನ್ ಹಾಗೂ ಪವಿತ್ರಾ ಗೌಡ ಸ್ನೇಹಿತರಾಗಿದ್ದರು. ದರ್ಶನ್ ಮತ್ತು ವಿಜಯಲಕ್ಷ್ಮೀ ಮಧ್ಯೆ ಪವಿತ್ರಾ ಗೌಡ ಬಂದಿದ್ದಾರೆ ಎಂದು ಅಭಿಮಾನಿ ರೇಣುಕಾ ಸ್ವಾಮಿ ಅವರಿಗೆ ಬೇಸರ, ಸಿಟ್ಟು ಇತ್ತು. ದರ್ಶನ್ ಮತ್ತು ವಿಜಯಲಕ್ಷ್ಮೀ ಸಂಸಾರ ಚೆನ್ನಾಗಿರಬೇಕು ಎಂಬ ಕಾರಣಕ್ಕೆ ಪವಿತ್ರಾ ಗೌಡಗೆ ರೇಣುಕಾಸ್ವಾಮಿ ಕೆಟ್ಟದಾಗಿ ಸಂದೇಶಗಳನ್ನು ಕಳುಹಿಸಿದ್ದರು. ಒಂದು ಪೋಸ್ಟ್‌ನಿಂದಾಗಿ ರೇಣುಕಾ ಸ್ವಾಮಿ ಜೀವಕ್ಕೆ ಕುತ್ತು ತಂದಿದೆ.

ಸಂಗೀತ ಕ್ಷೇತ್ರದ ಮೇರು ಕಲಾವಿದ

ಸರೋದ್ ಮಾಂತ್ರಿಕ ಪಂಡಿತ್ ರಾಜೀವ ತಾರಾನಾಥ್ ನಿಧನ

ಮೈಸೂರು: ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ್ (93) ಅವರು ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು.

ಕುವೆಂಪುನಗರದ ಪಂಚಮಂತ್ರ ರಸ್ತೆಯಲ್ಲಿರುವ ನಿವಾಸ ದಲ್ಲಿ ತಿಂಗಳ ಹಿಂದೆ ಕುಸಿದು ಬಿದ್ದು ಅವರ ತೊಡೆ ಮೂಳೆ ಮುರಿದಿತ್ತು. ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು. ರಾತ್ರಿ 7.05ರ ವೇಳೆಗೆ ಮೃತಪಟ್ಟಿದ್ದಾರೆ.

ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಮೇರು ಕಲಾವಿದರಾದ ಇವರು, ಸರೋದ್ ವಾದನದಲ್ಲಿ ಅಪ್ರತಿಮ ವಿದ್ವಾಂಸರು. ಇವರ ಸಂಗೀತ ಸೇವೆಗಾಗಿ ಪದ್ಮಶ್ರೀ, ನಾಡೋಜ ಸೇರಿ ಹತ್ತಾರು ಪ್ರಶಸ್ತಿ ಸಂದಿವೆ. ಕುವೆಂಪುನಗರದ ನಿವಾಸದಲ್ಲಿ ಬುಧವಾರ ಬೆಳಗ್ಗೆ 9ರಿಂದ ಮಧ್ಯಾಹ್ನ 12 ಗಂಟೆವರೆಗೆ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾ ಗಿದೆ. ನಂತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ರಾಜೀವ್ ತಾರಾನಾಥ್ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದಾರೆ.

24ರಿಂದ ಲೋಕಸಭೆ ಅಧಿವೇಶನ ನಿರೀಕ್ಷೆ

ದೆಹಲಿ: 18ನೇ ಲೋಕಸಭೆಯ ಮೊದಲ ಸಂಸತ್ ಅಧಿವೇಶನ ಜೂನ್ 24ರಿಂದ ಆರಂಭವಾಗುವ ಸಾಧ್ಯತೆ ಇದೆ. ಅಧಿವೇಶನದ ಮೊದಲ ಎರಡು ದಿನ ನೂತನ ಸಂಸದರ ಪ್ರಮಾಣ ವಚನ ಸ್ವೀಕಾರಕ್ಕೆ ಮೀಸಲು ಆಗಿರಲಿದೆ ಎನ್ನಲಾಗಿದೆ. ಜೂ.27ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೂತನ ಸಂಸದರನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆ ಇದೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ 71 ಸಚಿವರು ಪ್ರಮಾಣ ವಚನ ಸ್ವೀಕರಿಸಿದ್ದು ಖಾತೆ ಹಂಚಿಕೆ ಕೂಡ ಮುಗಿದಿದೆ. ಮಂಗಳವಾರ ಬಹುತೇಕ ಸಚಿವರು ಅಧಿಕಾರ ಸ್ವೀಕರಿಸಿದ್ದು, 18ನೇ ಲೋಕಸಭೆಯಲ್ಲಿ ಭಾಗಿಯಾಗಲು ಸಜ್ಜಾಗಿದ್ದಾರೆ.

ಜುಲೈ 3ರಂದು ಆರ್ಥಿಕ ಸಮೀಕ್ಷಾ ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವ ಸಾಧ್ಯತೆ ಇದೆ. ಜುಲೈ 22ರಂದು 2024-25 ನೇ ಹಣಕಾಸು ವರ್ಷದ ಬಜೆಟ್ ಮಂಡನೆಗೆ ಮೋದಿ ಸರಕಾರ ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ 3ನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದು, ಮೈತ್ರಿಕೂಟದ ಅನಿವಾರ್ಯತೆ ಹಿನ್ನೆಲೆಯಲ್ಲಿ ಮಂಡಿಸಲಿರುವ ಬಜೆಟ್ ಬಗ್ಗೆ ಕುತೂಹಲ ಮೂಡಿದೆ.

ದಾರಿದೀಪೋಕ್ತಿ

ಜೀವನದಲ್ಲಿ ಒಳ್ಳೆಯದೇ ಘಟಿಸುತ್ತಿರಬೇಕು ಎಂದು ಬಯಸುವುದು ಸಕಾರಾತ್ಮಕ ಆಲೋಚನೆ ಅಲ್ಲ. ಏನೇ ಘಟಿಸಿದರೂ ಅದು ಒಳ್ಳೆಯದಕ್ಕೇ ಮತ್ತು ನಾನು ಅದನ್ನು ಒಳ್ಳೆಯದಾಗಿ ಪರಿವರ್ತಿಸಿಕೊಳ್ಳುತ್ತೇನೆ ಎಂದು ಭಾವಿಸುವುದು ಸಕಾರಾತ್ಮಕ ಆಲೋಚನೆ. ಅಂಥ ಆಲೋಚನೆ ಬೆಳೆಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಜೀವನ ಅಂದ್ರೆ ಸೂಪ್ ಇದ್ದಂತೆ. ಆದರೆ ಅನೇಕರು ಅದನ್ನು ಸೇವಿಸಲು ಫೋರ್ಕ್ ಹಿಡಿದಿರುತ್ತಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕೇಂದ್ರ ಸಂಪುಟದಲ್ಲಿ ಕರ್ನಾಟಕಕ್ಕೆ 'ಜಾಕ್‌ಪಾಟ್'

ವಿವಿಗಳಲ್ಲಿ ವರ್ಷಕ್ಕೆ ಎರಡು ಬಾರಿ ಪ್ರವೇಶ

ದೆಹಲಿ: ಮುಂದಿನ ಶೈಕ್ಷಣಿಕ ವರ್ಷದಿಂದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವರ್ಷಕ್ಕೆ ಎರಡು ಬಾರಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಯುಜಿಸಿ ನಿರ್ಧರಿಸಿದೆ. ಜನವರಿ/ಫೆಬ್ರವರಿ ಮತ್ತು ಜುಲೈ/ಆಗಸ್ಟ್‌ನಲ್ಲಿ ಪ್ರವೇಶಗಳು ನಡೆಯಲಿವೆ. ಬೋರ್ಡ್ ಫಲಿತಾಂಶಗಳಲ್ಲಿನ ವಿಳಂಬ, ಆರೋಗ್ಯ ಸಮಸ್ಯೆ ಅಥವಾ ವೈಯಕ್ತಿಕ ಕಾರಣ ಗಳಿಂದಾಗಿ ಪ್ರವೇಶ ಪ್ರಕ್ರಿಯೆ ತಪ್ಪಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ.

ನೀಟ್ ಪಾವಿತ್ರ್ಯಕ್ಕೆ ಧಕ್ಕೆ

ದೆಹಲಿ: ನೀಟ್-ಯುಜಿ 2024 ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಉಂಟಾಗಿದೆ ಎಂದು ಹೇಳಿರುವ ಸುಪ್ರೀಂಕೋರ್ಟ್, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರ ಅಕ್ರಮಗಳ ಕಾರಣದಿಂದ ಹೊಸದಾಗಿ ಪರೀಕ್ಷೆ ನಡೆಸಬೇಕು ಎಂಬ ಕೋರಿಕೆ ಇರುವ ಅರ್ಜಿಯ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರಕಾರ ಹಾಗೂ ಎನ್‌ಟಿಎಗೆ ಸೂಚನೆ ನೀಡಿದೆ. ಆದರೆ ಎಂಬಿಬಿಎಸ್, ಬಿಡಿಎಸ್ ಹಾಗೂ ಇತರ ಕೋರ್ಸ್‌ಗಳ ಪ್ರವೇಶಕ್ಕೆ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನಡೆಸುವುದಕ್ಕೆ ತಡೆ ನೀಡಲು ನಿರಾಕರಿಸಿದೆ.

ಅರ್ಜುನನ ಸಾವಿನ ಆಘಾತದ ಬೆನ್ನಲ್ಲೇ ಆನೆ ಅಶ್ವತ್ಥಾಮ ಸಾವು

ವಿದ್ಯುತ್ ತಗುಲಿ ದಸರಾ ಆನೆ ಸಾವು

ಮೈಸೂರು: ದಸರಾ ಆನೆ ಅರ್ಜುನ ಸಾವಿನ ಆಘಾತದ ಬೆನ್ನಲ್ಲೇ ಮತ್ತೊಂದು ದಸರಾ ಆನೆ 38 ವರ್ಷದ ಅಶ್ವತ್ಥಾಮ ವಿದ್ಯುತ್ ತಗುಲಿ ಮೃತಪಟ್ಟಿದೆ.

ಮೈಸೂರು ಜಿಲ್ಲೆಯ ಹುಣಸೂರು-ಪಿರಿಯಾಪಟ್ಟಣ ತಾಲೂಕಿನ ಗಡಿ ಭಾಗದ ನಾಗರಹೊಳೆ ಹುಲಿಸಂರಕ್ಷಿತ ಪ್ರದೇಶ ವ್ಯಾಪ್ತಿಯ ಭೀಮನಕಟ್ಟೆ ಆನೆ ಶಿಬಿರದಲ್ಲಿ ಆನೆಯು ಆಹಾರ ಅರಸಿ ಕಾಡಿಗೆ ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಸೋಲಾರ್ ಬೇಲಿ ಮೇಲೆ ವಿದ್ಯುತ್ ತಂತಿಯು ಬಿದ್ದಿದ್ದರಿಂದ ವಿದ್ಯುತ್ ಆಘಾತದಿಂದ ಅಶ್ವತ್ಥಾಮ ಮೃತ ಪಟ್ಟಿದೆ. 2017ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನಲ್ಲಿ ಈ ಅಶ್ವತ್ಥಾಮ ಆನೆಯನ್ನು ಸೆರೆ ಹಿಡಿಯಲಾಗಿತ್ತು. ಶಾಂತ ಹಾಗೂ ಗಾಂಭೀರ್ಯ ಸ್ವಭಾವಕ್ಕೆ ಹೆಸರಾಗಿದ್ದ ಅದನ್ನು 2021ರ ದಸರೆಗೆ ಕರೆತರಲಾಗಿತ್ತು. ಅದಕ್ಕೆ ನಡಿಗೆ ತಾಲೀಮು ಸೇರಿದಂತೆ ವಿವಿಧ ತಾಲೀಮನ್ನು ನೀಡಲಾಗಿತ್ತು. 2022ರ ದಸರೆಯಲ್ಲಿ ಪಾಲ್ಗೊಂಡು ಗಮನ ಸೆಳೆದಿತ್ತು. ಆದರೆ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಿರಲಿಲ್ಲ.

ಇತ್ತೀಚೆಗಷ್ಟೇ ಹಾಸನದಲ್ಲಿ ಕಾಡಾನೆ ಕಾರ್ಯಾಚರಣೆ ವೇಳೆ ಅರ್ಜುನ ಆನೆ ಮೃತಪಟ್ಟಿತ್ತು. ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ಬರೋಬ್ಬರಿ 8 ವರ್ಷ ಅಂಬಾರಿ ಹೊತ್ತಿದ್ದ ಅರ್ಜುನ ಆನೆ ಸಾವಿಗೀಡಾಗಿದ್ದು, ಇಡೀ ಕರುನಾಡೇ ಮಮ್ಮಲ ಮರುಗಿತ್ತು. ಈ ಕರಾಳ ನೆನಪು ಜನರ ಮನಸ್ಸಿನಿಂದ ಮಾಸುವ ಮುನ್ನವೇ ಮತ್ತೊಂದು ದಸರಾ ಆನೆ ದುರಂತ ಅಂತ್ಯ ಕಂಡಿದೆ.



- 2017ರಲ್ಲಿ ಸಕಲೇಶಪುರದ ಸಮೀಪ ಅಶ್ವತ್ಥಾಮ ಆನೆಯನ್ನು ಸೆರೆ ಹಿಡಿಯಲಾಗಿತ್ತು
- ಎರಡು ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ 38 ವರ್ಷದ ಅಶ್ವತ್ಥಾಮ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ(ರಿ)

'ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ'

"Let's act on our commitments: End Child Labour"
"ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ : ನಾವೆಲ್ಲರೂ ಬದ್ಧತೆಯಿಂದ ಕಾರ್ಯನಿರ್ವಹಿಸೋಣ"

ಮಕ್ಕಳನ್ನು ಶಾಲೆಗೆ ಕಳುಹಿಸಿ, ಕೆಲಸಕ್ಕಲ್ಲ

ಬಾಲ ಕಾರ್ಮಿಕ ನಿರ್ಮೂಲನೆಗೆ ಕಾರ್ಮಿಕ ಇಲಾಖೆಯ ವತಿಯಿಂದ ಕೈಗೊಳ್ಳಲಾಗುತ್ತಿರುವ ಕ್ರಮಗಳು

ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಅನ್ವಯ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ ಅಂತಹ ಮೊದಲ ಅಪರಾಧಕ್ಕೆ ಮಾಲೀಕರಿಗೆ 06 ತಿಂಗಳಿಂದ 02 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ. 20,000/- ರಿಂದ ರೂ. 50,000/- ಗಳವರೆಗೆ ದಂಡ ಅಥವಾ ಎರಡೂ ಹಾಗೂ ಪುನರಾವರ್ತಿತ ಅಪರಾಧಕ್ಕೆ 01 ವರ್ಷದಿಂದ 03 ವರ್ಷಗಳವರೆಗೆ ಜೈಲು ಶಿಕ್ಷೆ.

ಮಕ್ಕಳನ್ನು ಕೆಲಸಕ್ಕೆ ದೂಡುವ ಪೋಷಕರಿಗೂ ಸಹ ಶಿಕ್ಷಾ ಪ್ರಾವಧಾನವಿದ್ದು, ಪುನರಾವರ್ತಿತ ಅಪರಾಧಕ್ಕೆ ರೂ. 10,000/-ಗಳ ದಂಡ.

ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪರಿಣಾಮಕಾರಿ ಅನುಷ್ಠಾನ.

ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಲಾಗಿದೆ.

ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ಕ್ರಮ ಕೈಗೊಳ್ಳಲಾಗಿದ್ದು ನಿರಂತರ ಪರಿಶೀಲನೆಯನ್ನು ನಡೆಸಲಾಗುತ್ತಿದೆ.

ಬಾಲ ಕಾರ್ಮಿಕ ನಿರ್ಮೂಲನೆಯ ಉದ್ದೇಶದಿಂದ ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.

ತಪ್ಪಿತಸ್ಥ ಮಾಲೀಕರು ತಾವು ನಿಯೋಜಿಸಿಕೊಂಡ ಪ್ರತಿ ಮಗುವಿಗೆ ರೂ. 20,000/-ಗಳಂತೆ ಮಕ್ಕಳ ಪುನರ್ವಸತಿಗೆ ರಚಿಸಲಾದ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ. ಸರ್ಕಾರದ ವತಿಯಿಂದ ಪ್ರತಿ ಮಗುವಿಗೆ ರೂ. 15,000/-ಗಳ ಸಮಾನಂತರ ವಂತಿಕೆಯನ್ನು ನಿಧಿಗೆ ಪಾವತಿಸಲಾಗುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳೊಂದಿಗಿರುವ ಸಾಂದರ್ಭಿಕ ಚಿತ್ರ.

ಜಾಥಾ ಕಾರ್ಯಕ್ರಮ

ದಿನಾಂಕ : 12ನೇ ಜೂನ್ 2024, ಬೆಳಗ್ಗೆ 8.30 ಗಂಟೆಗೆ
ಸ್ಥಳ : ಎಂ. ಜಿ. ರಸ್ತೆಯ ಗಾಂಧಿ ಪ್ರತಿಮೆಯಿಂದ ಕೆ.ಆರ್. ವೃತ್ತದವರೆಗೆ

ಜಾಥಾಗೆ ಚಾಲನೆ
ಶ್ರೀ ಸಂತೋಷ್ ಎಸ್. ಲಾಡ್
ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಪಿ.ಸಿ. ಮೋಹನ್
ಮಾನ್ಯ ಸಂಸದರು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ
ಶ್ರೀ ಎನ್. ಎ. ಹ್ಯಾರೀಸ್
ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ

ವಿಶೇಷ ಆಹ್ವಾನಿತರು
ರಾಗಿಣಿ ದ್ವಿವೇದಿ
ಖ್ಯಾತ ಚಲನಚಿತ್ರ ನಟಿ

ಅಂತರ್ಜಾಲ ವ್ಯವಸ್ಥೆ: https://pencil.gov.in/
https://ncpcr.gov.in/user.complaints.php / kscleps@gmail.com

ಮಕ್ಕಳ ದುಡಿಮೆ ತಡೆಯೋಣ- ಸದೃಢ ಭವಿಷ್ಯ ರೂಪಿಸೋಣ

ಸಹಾಯ ವಾಣಿಗಳು:
ಮಕ್ಕಳ ಸಹಾಯವಾಣಿ-1098
ಕಾರ್ಮಿಕರ ಸಹಾಯವಾಣಿ-155214
ಪೊಲೀಸ್ ಸಹಾಯವಾಣಿ-112

ಡಾ|| ಹೆಚ್.ಎನ್. ಗೋಪಾಲಕೃಷ್ಣ, ಭಾ.ಆ.ಸೇ
ಆಯುಕ್ತರು,
ಕಾರ್ಮಿಕ ಇಲಾಖೆ

ಶ್ರೀಮತಿ ಭಾರತಿ ಡಿ, ಭಾ.ಆ.ಸೇ
ಸಿಇಓ ಮತ್ತು ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣಕಾರ್ಮಿಕರ ಕಲ್ಯಾಣ ಮಂಡಳಿ

ಶ್ರೀ ಮೊಹಮ್ಮದ್ ಮೊಹಸಿನ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ "ಪ್ರಯತ್ನಿಸಿ ಶ್ರಮಿಸುವುದು"- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಎಸ್‌ಡಿಎಂಎಫ್ ನಿಂದ 100 ಕೋಟಿ ಬಿಡುಗಡೆ

ಬೆಂಗಳೂರು : ರಾಜ್ಯದ ಕರೆಗಳಲ್ಲಿ ಮುಂಗಾರು ಮಳೆಯ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ವೃದ್ಧಿಸುವ ನಿಟ್ಟಿನಲ್ಲಿ ಎಸ್ಡಿಎಂಎಫ್ ನಿಂದ 100 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಯಾಗಿದ್ದು, ಮೊದಲ ಹಂತದಲ್ಲಿ 93 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ತಿಳಿಸಿದ್ದಾರೆ.

ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಕಳೆದ ವರ್ಷ ತೀವ್ರ ಮಳೆ ಕೊರತೆಯಿಂದ ರಾಜ್ಯದಲ್ಲಿ ಉಂಟಾದ ಜಲಕ್ಷಾಮದಿಂದ 223 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿ ಸಲಾಗಿತ್ತು. ಈ ಬಾರಿ ಹೆಚ್ಚು ಮುಂಗಾರಿನ ಮಳೆ ಮುನ್ಸೂಚನೆಯಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಕೆರೆಗಳ ಸಾಮರ್ಥ್ಯ ಹೆಚ್ಚಿಸಲು ಹಾಗೂ ನೀರು ಪೋಲಾಗದಂತೆ ತಡೆಯಲು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು ಎಂದರು. ಮೊದಲ ಹಂತದಲ್ಲಿ 93 ಕೆರೆಗಳ ಅಭಿವೃದ್ಧಿ: ಮೊದಲ ಹಂತದಲ್ಲಿ ಈಗಾಗಲೇ 93 ಕೆರೆಗಳನ್ನು ಇಲಾಖೆ ಗುರುತಿಸಿದ್ದು ಕ್ರಿಯಾಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಾಮಗಾರಿ ಗಳನ್ನು ಶೀಘ್ರವಾಗಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಿದಲ್ಲಿ ಮುಂಬರುವ ದಿನಗಳಲ್ಲಿ ರೈತರ ಕೃಷಿ ಚಟುವಟಿಕೆಗಳಿಗೆ ನೀರಿನ ಅಭಾವ ತಡೆಯಲು ಸಹಾಯಕವಾಗಲಿದೆ. ಹಾಗೆಯೇ ಮಳೆ ನೀರು ಕೆರೆಗಳಿಗೆ ಸರಾಗವಾಗಿ ಹರಿದು ನೀರು ಶೇಖರಣೆ ಗರಿಷ್ಠ ಮಟ್ಟದಲ್ಲಿ ಆಗುವಂತೆ

ಬೆಂಗಳೂರಿನ ಮಲ್ಲೇಶ್ವರದ ಗಂಗಮ್ಮ ದೇವಿ ಜಾತ್ರೆ ಮಹೋತ್ಸವ ಮತ್ತು ಹಸಿಕರಗ ಮಹೋತ್ಸವದಲ್ಲಿ ಸಹಸ್ರಾರು ಭಕ್ತರು ಭಾಗವಹಿಸಿದ್ದರು.

ಶುಲ್ಕ ಹೆಚ್ಚಳಕ್ಕೆ ಖಾಸಗಿ ಕಾಲೇಜುಗಳ ನಿರ್ಧಾರ

ಬೆಂಗಳೂರು: ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಪರದಾಡುವ ಸ್ಥಿತಿ ಇದೆ. ಇದರ ನಡುವೆ ಈಗ ವೃತ್ತಿಪರ ಕೋರ್ಸ್ ಪ್ರವೇಶ ಶುಲ್ಕ ಏರಿಕೆಯ ಆತಂಕ ಪೋಷಕರಿಗೆ ಎದುರಾಗಿದೆ.

ಸಿಇಟಿ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಈ ವರ್ಷ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ' ಸರಕಾರಿ ಕೋಟಾ ಹಾಗೂ ಕಾಮೆಡ್-ಕೆ ಕೋಟಾ ಸೀಟುಗಳ ಪ್ರವೇಶ ಶುಲ್ಕ ಶೇ. 10ರಿಂದ 15ರಷ್ಟು ಏರಿಕೆಗೆ ಖಾಸಗಿ ಕಾಲೇಜುಗಳ ಒಕ್ಕೂಟ ಸರಕಾರಕ್ಕೆ ಮನವಿ ಮಾಡಿದೆ. ಸಿಇಟಿ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಪರೀಕ್ಷೆ ಬರೆದು ಉತ್ತಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು ಸರಕಾರಿ ಕೋಟಾದಲ್ಲಿ ಪ್ರತ್ಠಿತ ಕಾಲೇಜುಗಳಲ್ಲಿ ಸೀಟು ಪಡೆಯಲು ಮುಂದಾಗಿದ್ದಾರೆ. ಉತ್ತಮ ರ‍್ಯಾಂಕ್ ಬಾರದ ವಿದ್ಯಾರ್ಥಿಗಳು ಖಾಸಗಿ ಸೀಟ್ ಕೋಟಾದಡಿ ಖಾಸಗಿ ಎಂಜನಿಯರಿಂಗ್ ಪ್ರವೇಶಕ್ಕೆ ಮುಂದಾಗಿದ್ದಾರೆ. ಈಗ ಈ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳು ಶೇ. 20 ರಿಂದ 30ರಷ್ಟು ಶುಲ್ಕ ಹೆಚ್ಚಿಗೆ ಮಾಡಲು ಮುಂದಾಗಿವೆ. ಇದರಿಂದ ಬೆಂಗಳೂರಿನ ಪ್ರತಿಷ್ಠಿತ ಎಂಜನಿಯರಿಂಗ್ ಕಾಲೇಜಿನಲ್ಲಿ ಸೀಟ್ ಪಡೆಯಲು 6 ರಿಂದ 10 ಲಕ್ಷ ಶುಲ್ಕ ಕಟ್ಟಬೇಕಾದ ಸ್ಥಿತಿ ಪೋಷಕರಿಗೆ ಬಂದಿದೆ. ಇದರ ನಡುವೆಯೂ ಸರಕಾರಿ ಕೋಟಾದಡಿ ಈ ವರ್ಷ ಎಂಜಿನಿಯರಿಂಗ್ ಶುಲ್ಕ ಶೇ. 10-15ರಷ್ಟು ಏರಿಕೆಗೆ ಖಾಸಗಿ ಕಾಲೇಜುಗಳ ಸಂಘಟನೆ ಸರಕಾರಕ್ಕೆ ಒತ್ತಾಯಿಸಿದೆ.

ಸಮಾಚಾರ ಸಣ್ಣದಲ್ಲ

ಕ್ರಿಕೆಟ್ ವೀಕ್ಷಣೆ: ಸಾರಿಗೆ ಸೌಲಭ್ಯ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 13, 16, 19 ಮತ್ತು 23ರಂದು ನಡೆಯಲಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯ ವೀಕ್ಷಣೆಗೆ ಬಂದು ಹೋಗುವ ಸಾರ್ವಜನಿಕ ಪ್ರಯಾಣಿಕರಿಗೆ ಬೇಡಿಕೆಗನುಗುಣವಾಗಿ ಬಿಎಂಟಿಸಿ ಸಾರಿಗೆ ವ್ಯವಸ್ಥೆ ಮಾಡಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಿಂದ ಕಾಡುಗೋಡಿ ಬಸ್ ನಿಲ್ದಾಣ (ಎಚ್‌ಎಎಲ್ ರಸ್ತೆ)ಕ್ಕೆ ಎಸ್‌ಬಿಎಸ್-1ಕೆ, ಸರ್ಜಾಪುರಕ್ಕೆ ಜಿ-2, ಎಲೆಕ್ಟ್ರಾನಿಕ್ ಸಿಟಿ (ಹೊಸೂರು ರಸ್ತೆ)ಗೆ ಜಿ-3, ಬನ್ನೇರುಘಟ್ಟ ಮೃಗಾಲಯಕ್ಕೆ ಜಿ-4, ಜನಪ್ರಿಯ ಟೌನ್ಶಿಪ್ (ಮಾಗಡಿ ರಸ್ತೆ)ಗೆ ಜಿ-7, ಆರ್.ಕೆ. ಹೆಗಡೆ ನಗರ (ನಾಗವಾರ, ಟ್ಯಾನರಿ ರಸ್ತೆ)ಗೆ ಜಿ-10, ಹೊಸಕೋಟೆಗೆ 317 ಜಿ ಹಾಗೂ ಬನಶಂಕರಿಗೆ ಬಸ್ ಸಂ 13 ಸಂಚಾರಿಸಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾನಸಿಕವಾಗಿ ಸದೃಢರಾಗಿ: ಖಾದರ್

ಬೆಂಗಳೂರು: ನಾವೆಲ್ಲರೂ ದೈಹಿಕವಾಗಿ ಮಾತ್ರವಲ್ಲದೇ ಮಾನಸಿಕವಾಗಿಯೂ ಸದೃಢರಾಗಬೇಕು. ಜತೆಗೆ ಬೇರೆಯವರಿಗೆ ಸಂತೋಷ ನೀಡಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಬೇಕು ಎಂದು ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ತಿಳಿಸಿದರು.

ವಿಕಾಸಸೌಧದಲ್ಲಿ ಕರ್ನಾಟಕ ವಿಧಾನಸಭೆಯ ಅಧಿಕಾರಿಗಳಿಗೆ ಒತ್ತಡ ನಿರ್ವಹಣೆ' ಮತ್ತು ಸ್ಥಿತಿಸ್ಥಾಪಕತ್ವ ಅಭಿವೃದ್ಧಿ ಹಾಗೂ ಪರಿಣಾಮಕಾರಿ ಸಂವಹನ ಮತ್ತು ನಾಯಕತ್ವ ಅಭಿವೃದ್ಧಿ' ಕುರಿತ ತರಬೇತಿ ಶಿಬಿರವನ್ನು ಉದ್ಘಾಟಿಸಿದ ಅವರು, ಶಿಕ್ಷಣದ ಗುರಿ ಬರಿ ಅಂಕಗಳಿಕೆಗೆ ಅಷ್ಟೇ ಅಲ್ಲ, ವಿದ್ಯಾರ್ಥಿಗಳು ಸುಶಿಕ್ಷಿತವಾಗುವುದಲ್ಲದೇ, ಸತ್ಪ್ರಜೆಗಳಾಗಬೇಕು. ಸಮಸ್ಯೆಯಿಲ್ಲದ ಸಂಸಾರ, ಊರು, ವ್ಯಕ್ತಿಗಳಿಲ್ಲ, ಎಲ್ಲರಿಗೂ ಒತ್ತಡ, ಯೋಚನೆಗಳು ಇರುತ್ತವೆ. ಅದನ್ನು ಮೆಟ್ಟಿ ನಾವು ಉತ್ತಮವಾಗಿ ಕೆಲಸ ನಿರ್ವಹಿಸಬೇಕು. ನಾವು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಮಹಿಳಾ ಆಯೋಗದ ಅಧ್ಯಕ್ಷೆ ಮೆಟ್ರೋ ಪ್ರಯಾಣ

ಬೆಂಗಳೂರು: ಮೆಟ್ರೋ ರೈಲಿನಲ್ಲಿ ಪ್ರಯಾಣಿಸುವ ಮಹಿಳೆಯರ ಹಾಗೂ ಮೆಟ್ರೋ ಮಹಿಳಾ ಸಿಬ್ಬಂದಿಗಳ ಸಮಸ್ಯೆಗಳನ್ನು ತಿಳಿಯಲು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ವಿಜಯನಗರ ಮೆಟ್ರೋ ನಿಲ್ದಾಣದಿಂದ ವೈಟ್ಫೀಲ್ಡ್ ಮೆಟ್ರೋ ನಿಲ್ದಾಣದವರೆಗೆ ಪ್ರಯಾಣಿಸಿ ನಂತರ ಅಲ್ಲಿಂದ ವಿಶ್ವೇಶ್ವರಯ್ಯ ನಿಲ್ದಾಣಕ್ಕೆ (ಸೆಂಟ್ರಲ್ ಕಾಲೇಜು) ಪ್ರಯಾಣಿಸಿದರು.

ಈ ಸಮಯದಲ್ಲಿ ಮೆಟ್ರೋದ ಹಿರಿಯ ಅಧಿಕಾರಿಗಳೊಂದಿಗೆ ಹಾಗೂ ಮಹಿಳಾ ಪ್ರಯಾಣಿಕರೊಂದಿಗೆ ಮಹಿಳೆಯರ ಸಮಸ್ಯೆಗಳು, ಸುರಕ್ಷತೆ ಮುಂತಾದ ವಿಷಯಗಳ ಕುರಿತಂತೆ ಚರ್ಚಿಸಿದರು. ಪೀಕ್ ಅವರ್‌ನಲ್ಲಿ ಮಹಿಳಾ ಪ್ರಯಾಣಿಕರಿಗೆ ನಮ್ಮ ಮೆಟ್ರೋದಲ್ಲಿ ದಟ್ಟಣೆಯಿದ್ದು, ಆ ಸಮಯದಲ್ಲಿ ಮಹಿಳೆಯರಿಗಾಗಿ ಇನ್ನೊಂದು ಬೋಗಿಯನ್ನು ಮೀಸಲಿಡುವಂತೆ ಅಧಿಕಾರಿಗಳಿಗೆ ತಿಳಿಸಿದರು. ಈ ವಿಷಯಕ್ಕೆ ಮೆಟ್ರೋ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ತಿಳಿಸಿದ್ದಾರೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕುಮಟ್ಟದ ಆಸಕ್ತ ರೈತ, ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರಿಂದ ವಿವಿಧ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯಮಟ್ಟದ ಪ್ರಶಸ್ತಿಗಳು (ರಾಜ್ಯ ವ್ಯಾಪ್ತಿ), ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ / ರೈತ ಮಹಿಳೆ ಪ್ರಶಸ್ತಿ, ಡಾ. ಎಂ.ಎಚ್. ಮರಿಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ರಾಜ್ಯಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳು), ಕ್ಯಾನ್ ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳು), ಜಿಲ್ಲಾಮಟ್ಟದ ಪ್ರಗತಿಪರ ರೈತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮಹಿಳೆ ಪ್ರಶಸ್ತಿ, ತಾಲ್ಲೂಕು ಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 61 ತಾಲ್ಲೂಕುಗಳು), ತಾಲ್ಲೂಕುಮಟ್ಟದ ಯುವ ರೈತ ಪ್ರಶಸ್ತಿ ಹಾಗೂ ತಾಲ್ಲೂಕು ಮಟ್ಟದ ಯುವ ರೈತ ಮಹಿಳೆ ಪ್ರಶಸ್ತಿಗಳಿಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಮಶೀನ್ ಟೂಲ್ ವಲಯದ ಉತ್ಕರ್ಷಕ್ಕೆ ಒತ್ತು: ಎಂ.ಬಿ.ಪಾ

ಬೆಂಗಳೂರು: ಮಶೀನ್ ಟೂಲ್ ವಲಯವು ಜಾಗತಿಕ ಸ್ಪರ್ಧೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ಷ್ಮಾತಿಸೂಕ್ಷ್ಮ ಬಿಡಿಭಾಗಗಳನ್ನೂ ತಯಾರಿಸುವಂತಹ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳಬೇಕಾದ ಜರೂರಿದೆ. ಈ ಕುರಿತು ಉದ್ಯಮಿಗಳು ಸರಕಾರಕ್ಕೆ ರಚನಾತ್ಮಕ ಸಲಹೆ ನೀಡಬೇಕು. ಇದನ್ನು ಸರಕಾರವು ಗಂಭೀರವಾಗಿ ಪರಿಗಣಿಸಿ, ಮುಂದಿನ ಹೆಜ್ಜೆ ಇಡಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಮಶೀನ್ ಟೂಲ್ಸ್ ವಲಯದ ವಿಷನ್ ಗ್ರೂಪಿನ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಷನ್ ಗ್ರೂಪ್ ಉಪಾಧ್ಯಕ್ಷ ಸೆಲ್ವಕುಮಾರ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಸದಸ್ಯರಾದ ಟಿಮ್ ಕೆನ್ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಕೌಲ್ ಸೇರಿದಂತೆ ಮತ್ತಿತರಿದ್ದರು.

ರಾಜ್ಯ ಸರಕಾರವು ಮಹತ್ವಾಕಾಂಕ್ಷೆಯೊಂದಿಗೆ ರಚಿಸಿರುವ ಮಶೀನ್ ಟೂಲ್ಸ್ ವಲಯದ ವಿಷನ್ ಗ್ರೂಪಿನ ಸಭೆಯಲ್ಲಿ ಮಾತನಾಡಿದ ಅವರು, ಮಶೀನ್ ಟೂಲ್ಸ್ ತಯಾರಿಕೆಯಲ್ಲಿ ಪುಣೆ ಮತ್ತು ರಾಜಕೋಟ್ ಕೂಡ ಮುಂಚೂಣಿ ಯಲ್ಲಿವೆ. ರಾರಚಿಸಿರುವ ಮಶೀನ್ ಟೂಲ್ಸ್ ವಲಯದ ವಿಷನ್ ಗ್ರೂಪಿನ ಸಭೆಯಲ್ಲಿ ಮಾತನಾಡಿದ ಅವರು, ಮಶೀನ್ ಟೂಲ್ಸ್ ತಯಾರಿಕೆಯಲ್ಲಿ ಪುಣೆ ಮತ್ತು ರಾಜಕೋಟ್ ಕೂಡ ಮುಂಚೂಣಿಯಲ್ಲಿವೆ. ರಾಜ್ಯದಲ್ಲಿ ಈ ವಲಯದಲ್ಲಿ ಹೂಡಿಕೆ ಆಕರ್ಷಣೆ, ಉದ್ಯೋಗ ಸೃಷ್ಟಿ ಮುಂತಾದವುಗಳ ಕಡೆ ಗಮನ ಕೊಡಬೇಕಾಗಿದೆ. ಮದ್ರಾಸ್ ಐಐಟಿ ಸಂಸ್ಥೆಯಲ್ಲಿ ಮಶೀನ್ ಟೂಲ್ ವಲಯದ ಸಂಶೋಧನಾ ಅನ್ವಯಿಕತೆಗೆ ವಿಶೇಷ ಕೇಂದ್ರವಿದೆ. ಇದಕ್ಕೆ ಸರಕಾರವು ಶೇ 80ರಷ್ಟು ಮತ್ತು ಉದ್ಯಮ ವಲಯವು ಉಳಿದ ಶೇ.20ರಷ್ಟು ವೆಚ್ಚ ಭರಿಸುತ್ತಿವೆ. ಕರ್ನಾಟಕದಲ್ಲೂ ಇಂಥದೊಂದು ಕೇಂದ್ರ ಸ್ಥಾಪಿಸಬೇಕು ಎಂದು ಉದ್ಯಮಿಗಳು ಸಲಹೆ ನೀಡಿದರು.

ಜಾಗತಿಕ ಹೂಡಿಕೆದಾರರ ಸಮಾವೇಶ ದಲ್ಲಿ ಗಮನ: 2025ರ ಫೆಬ್ರವರಿಯಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮಶೀನ್ ಟೂಲ್ಸ್ ವಲಯದ ಕಡೆಗೂ ಆದ್ಯ ಗಮನ ಕೊಡಲಾಗುವುದು. ಮಶೀನ್ ಟೂಲ್ ವಿಭಾಗದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಆದ್ಯತೆ ಕೊಡಬೇಕಾಗಿದೆ. ಮೆಕ್ಯಾನಿಕಲ್ ಎಂಜಿನಿಯರುಗಳಿಗೆ ಉದ್ಯಮದ ನೇರ ಅನುಭವವನ್ನು ಒದಗಿಸಬೇಕಾಗಿದೆ. ಇದಕ್ಕಾಗಿ ಅತ್ಯುತ್ತಮ ಎಂಜಿನಿಯರಿಂಗ್ ಕಾಲೇಜುಗಳ ಜತೆ ಒಡಂಬಡಿಕೆಗೆ ಸಿದ್ಧರಾಗಿದ್ದೇವೆ. ಜಗತ್ತಿನ ಅತ್ಯುತ್ತಮ ಉದ್ಯಮಗಳು ನಮ್ಮಲ್ಲಿಗೆ ಬಂದು ಹೂಡಿಕೆ ಮಾಡುವಂತೆ ಆಗಬೇಕು ಎಂದು ಸಚಿವರು ನುಡಿದರು.

ತುಮಕೂರಿನಲ್ಲಿ ಮಶೀನ್ ಟೂಲ್ಸ್ ಪಾರ್ಕ್: ಸದ್ಯಕ್ಕೆ ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಮಶೀನ್ ಟೂಲ್ಸ್ ಪಾರ್ಕ್ ಇದೆ. ಇದರ ಜತೆಗೆ ಇನ್ನೂ ಹಲವು ಉಪಕ್ರಮಗಳು ಆಗಬೇಕಾಗಿದೆ. ಜತೆಗೆ ಉದ್ಯಮಿಗಳು ತಾವು ತಯಾರಿಸುವ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿ, ಗಮನ ಸೆಳೆಯಬೇಕು ಎಂದು ಒತ್ತಿ ಹೇಳಿದರು.

ಕಾರ್ಮಿಕರ ಮಕ್ಕಳ ಕಲ್ಯಾಣದ ಹಣ: ವಿವರಕ್ಕೆ ಸೂಚನೆ

ಬೆಂಗಳೂರು: ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ 6,700 ಕೋಟಿ ಹೇಗೆ ಬಳಕೆಯಾಗಿದೆ ಎಂಬುದರ ಸಂಬಂಧ ವಿವರ ಸಲ್ಲಿಸಿ ಎಂದು ಹೈಕೋರ್ಟ್ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿದೆ.

ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಕೆ.ಮಹಾಂ ತೇಶ್ ಹಾಗೂ ಇತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ. ನಾಗ ಪ್ರಸನ್ನ ಅವರಿದ್ದ ನ್ಯಾಯ ಪೀಠ ಈ ಆದೇಶ ನೀಡಿದೆ. ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮೀಸಲಾದ ವರ್ಗದಲ್ಲಿ ಶೈಕ್ಷಣಿಕ ಧನಸಹಾಯ ಕ್ಕಾಗಿ ಅರ್ಜಿ ಸಲ್ಲಿಸಿದ್ದ ಇಬ್ಬರು ಸ್ನಾತಕೋತ್ತರ ದ್ಯಾರ್ಥಿನಿಯರಿಗೆ ತಕ್ಷಣವೇ ನೆರವು ನೀಡಲು ಜಾರಿಮಾಡಿದ್ದ ಮಧ್ಯಂತರ ಆದೇಶ ಪಾಲಿಸದ ಕಲ್ಯಾಣ ಮಂಡಳಿ ನಿಲುವನ್ನು ನ್ಯಾಯಪೀಠ ತರಾಟೆಗೆ ತೆಗೆದುಕೊಂಡಿದೆ. ಬಿಸಿಲು, ಮಳೆ ಎನ್ನದೇ ಶ್ರಮಪಡುವ ಕಟ್ಟಡ ಕಾರ್ಮಿ ಕರ ದುಡಿಮೆಯಿಂದಾಗಿ ಸಾವಿರಾರು ಕೋಟಿ ರೂಪಾಯಿ ಸೆಸ್ ಸಂಗ್ರಹವಾಗುತ್ತಿದ್ದರೂ, ಅದನ್ನು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚುಮಾಡದೆ, ಅಧಿಕಾರಿಗಳು ಐಷಾರಾಮಿ ಜೀವನ ಸಾಗಿಸುತ್ತಿರುವುದು ಬೇಸರದ ಸಂಗತಿ ಯಾಗಿದೆ. ಈ ಕುರಿತಂತೆ ಮುಂದಿನ ವಿಚಾರಣೆ ವೇಳೆ ವಿವರಣೆ ನೀಡಬೇಕು ಎಂದು ಸೂಚನೆ ನೀಡಿ ವಿಚಾರಣೆ ಮುಂದೂಡಿತು.

ಲಂಡನ್ ಶೃಂಗಸಭೆಯಲ್ಲಿ ಎಐ ಕುರಿತು ಸಂವಾದ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಸಭೆ ನಡೆಸಲಾಯಿತು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಕೌಶಲ್ಯ ಅಭಿವೃದ್ಧಿ ಇಲಾಖೆ) ಉಮಾ ಮಹದೇವನ್ ಮತ್ತು ಮಿಷನ್ ನಿರ್ದೇಶಕಿ ವಿದ್ಯಾ ಇದ್ದರು.

ಬೆಂಗಳೂರು : ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು (ಎ.ಐ) ಪರಿಣಾಮಕಾರಿಯಾಗಿ ಬಳಸುವ ಕುರಿತು ಯುಕೆ ಮೈಕ್ರೋಸಾಫ್ಟ್ ಕಂಪನಿ ಜತೆ ರಾಜ್ಯದ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ನೇತೃತ್ವದ ತಂಡ ಚರ್ಚಿಸಿದೆ.

ಲಂಡನ್ ಟೆಕ್ ವೀಕ್ ಶೃಂಗಸಭೆಯಲ್ಲಿ ಮೈಕ್ರೋಸಾಫ್ಟ್ ಯುಕೆ ಸಂಸ್ಥೆಯ ಗ್ಲೆನ್ ರಾಬಿನ್ಸನ್ ಹಾಗೂ ಅಧಿಕಾರಿಗಳು ಚರ್ಚೆಯಲ್ಲಿ ಪಾಲ್ಗೊಂಡು, ಯುಕೆ ಮತ್ತು ಜಾಗತಿಕ ಮಟ್ಟದಲ್ಲಿ ಜಗತ್ತಿನ ವಿವಿಧ ಕೇಂದ್ರಗಳಲ್ಲಿ ಕ್ವಾಂಟಮ್ ಟೆಕ್ ಮತ್ತು ಡಿಜಿಟಲ್ ರೂಪಾಂತರಗಳಲ್ಲಿ ಆಗುತ್ತಿರುವ ಕುತೂಹಲಕಾರಿ ಬದಲಾವಣೆಗಳನ್ನು ಕುರಿತೂ ಎರಡೂ ರಾಷ್ಟ್ರಗಳ ಮುಖಂಡರು ಬೆಳಕು ಚೆಲ್ಲಿದರು.

ಸೂಕ್ತ ವೇದಿಕೆ ಮತ್ತು ಸಾಧನಗಳ ರಚನೆ: ಮೈಕ್ರೋಸಾಫ್ಟ್ ಕಾರ್ಪೊರೇಷನ್ ಒಂದು ಅಮೆರಿಕನ್ ಬಹುರಾಷ್ಟ್ರೀಯ ನಿಗಮ ಮತ್ತು ತಂತ್ರಜ್ಞಾನ ಕಂಪನಿಯಾಗಿದ್ದು, ಇದು ಮಾರುಕಟ್ಟೆಯ ವಿಕಸನದ ಅಗತ್ಯಗಳನ್ನು ಪೂರೈಸುವ ನವೀನ ಪರಿಹಾರಗಳನ್ನು ನೀಡಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಸೂಕ್ತ ವೇದಿಕೆಗಳು ಮತ್ತು ಸಾಧನಗಳನ್ನು ರಚಿಸುತ್ತಿದೆ. ಕಂಪನಿಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ವಿಶಾಲವಾಗಿ ಲಭ್ಯವಾಗುವಂತೆ ಮಾಡಲು ಮತ್ತು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಬದ್ಧವಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಫೋಟೊ ವಿವರ ; ಕರ್ನಾಟಕದ ಆರೋಗ್ಯ , ಆಡಳಿತದಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಮೈಕ್ರೋಸಾಫ್ಟ್ ಜೊತೆ ಚರ್ಚೆ ನಡೆಸಿದರು.

ಅಪರೂಪದ ಗುರುಗಳು ರಾಜೀವ್ ತಾರಾನಾಥರು..

ರಾಜೀವ್ ತಾರಾನಾಥ್ ಅವರು ಮೂಲತಃ ರಾಯಚೂರಿನವರು. ಭಾಳ ದೊಡ್ಡವರು, ದಿವ್ಯ ವ್ಯಕ್ತಿತ್ವದವರು

ಅವ್ರ ತಂದೆ ಪಂಡಿತ್ ತಾರಾನಾಥ್ ದೊಡ್ಡ ಆಯುರ್ವೇದ ಪಂಡಿತರು ಮತ್ತು ಸಂಗೀತ ಗಾರರು. ನಾನೂ ಪಂಡಿತ್ ತಾರಾನಾಥ್ ಒಂದೇ ಊರಿನವರು. ಹೀಗಾಗಿ ಅವರೊಂದಿಗೆ ಸ್ವಲ್ಪ ಹೆಚ್ಚೇ ಆತ್ಮೀಯತೆ . ರಾಜೀವ್ ತಾರಾನಾಥ್ ಗುರುಗಳು ರಾಯಚೂರಿಗೆ ಆಗಾಗ ಬರ್ತಾ ಇದ್ರು, ನನಗಿಂತ ತುಂಬಾ ಹಿರಿಯರು ಎಲ್ಲಾ ದೃಷ್ಟಿಯಲ್ಲಿ ಯೂ. ಆವಾಗ ತಬಲ ಕೂಡಾ ನುಡಿಸ್ತಾ ಇದ್ರೂ.

ಯಾವಾಗ ಅವ್ರು, ಬೆಂಗ್ಳೂರಿಗೆ ಬಂದು ನೋಡ್ರಿ ಆಮೇಲೆ ನಾನು ಆಗಾಗ ಅವರ ದರ್ಶನ ಮಾಡ್ತಾ ಇದ್ದೆ, ನಾನು ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡಮಿ ಯಲ್ಲಿದ್ದಾಗಲಂತೂ ಸುಮಾರು ಸಲ ಭೇಟಿ ಮಾಡಿದ್ದೆ.

ಭಾಳ ವರ್ಷದಿಂದ ಅವರು ಅಮೆರಿಕಾ ಕ್ಕೆ ಹೋಗ್ತಾ ಇದ್ರು. ಒಮ್ಮೆ ಅಮೆರಿಕಾಕ್ಕೆ ಹೋದಾಗ ನಮ್ಮೂರವ ಒಬ್ಬವ ಇದ್ದಾನೆ ರಾಯಚೂರ್ ನವನು ಅವನು ಛಲೋ ಸಂಗೀತ ಮತ್ತು ಕ್ಲಾರಿನೆಟ್ ಕಲಿಸ್ತಾನ ಅಂತ ಹೇಳಿ ನನ್ನನ್ನು ಅಮೆರಿಕಾಕ್ಕೆ ಕರೆಸಿಕೊಂಡ್ರು ಇವ್ನತ್ರ ಕಲೀರಿ ಅಂತ. ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಆರ್ಟ್ಸ್‌ಗೆ. ಅಲ್ಲಿ ಮಾಲತಿ ಅಂತ ಹುಡುಗಿ ಕ್ಲಾರಿನೆಟ್ ಕಲೀತಿದ್ಲು ಕೆಲವು ಟೆಕ್ನಿಕ್ ಗಳಾದ ಮಿಂಡ್ ಮತ್ತು ಗಮಕಗಳನ್ನು ಕಲಿಸಲು. ಅವಳಿಗೆ ತಾರಾನಾಥ್ ಸಾಹೇಬ್ರು ನನ್ನ ಎರಡು ಆಡಿಯೋ ಕ್ಯಾಸೆಟ್ ಗಳನ್ನು ಕೊಟ್ಟು ಇವನ್ನು ಕೇಳಿ ಅಂತ ಹೇಳಿದ್ರಂತೆ. ಒಂದು ದೊಡ್ಡ ಯೋಜನೆ ಹಾಕ್ಕೊಂಡು ಕ್ಯಾಲಿಫೋರ್ನಿಯಾ ಯೂನಿವರ್ಸಿಟಿಗೆ ಕರೆಸಿಕೊಂಡರು. ಶಾಸ್ತ್ರೀಯ ವಾಗಿ ಕ್ಲಾರಿಯೊನೆಟ್

ಕಲಿಸುವ ಸಲುವಾಗಿ. ಮುಂದೆ ಅವಳು ನನ್ನ ಜೊತೇನೇ ಮೈಸೂರು ಅರಮನೆ ಜುಗಲ್‌ಬಂದಿ ಆಡುವಷ್ಟು ಬೆಳೆದಳು.

ನಾನು ಅಮೆರಿಕಾಕ್ಕೆ ಮೊದಲನೇ ಸಲ ನಾನು ಹೋಗಿದ್ದು ಅಂದೆನಲ್ಲ ನಿಮಗೆ. ವಿಮಾನ ನಿಲ್ದಾಣದಲ್ಲಿ ಎದುರಿಗೊಳ್ಳಲು ವಿಲಿಯಮ್ ಪಾವೆಲ್ ಬರ್ತಾರೆ ಅಂತ ತಾರಾನಾಥ್ ಹೇಳಿದ್ರು. ಅವರಿಗೆ ಗೊತ್ತಿತ್ತು ನನಗೆ ವಿಲಿಯಮ್ ಪಾವೆಲ್‌ರವರು ವೆಸ್ಟರ್ನ್ ಕ್ಲಾರಿನೆಟ್ ಮೆದ್ರಾಸ್ ನಲ್ಲಿ ಜುಗಲ್ ಬಂದಿ ಇಟ್ಕೊಂಡಾಗ ಪರಿಚಯ ಆಗಿದ್ದವರು ಅಂತ. ಏರ ಪೋರ್ಟ್ ಇಳಿದಾಗ ಗುರೂಜಿ ತಾರಾನಾಥ್ ಅವರ ಕ ಕೃಪೆಯಿಂದ ಸಂದರ್ಭ ತಕ್ಕಂತೆ ಸ್ವಲ್ಪ ಇಂಗ್ಲಿಷ್ ಮಾತಾಡ್ತಿದ್ದೆ.ಅದು ಉಪಯೋಗ ಆವಾಗ ಆಯಿತು. ಅಮೆರಿಕಾದಲ್ಲಿ ಗೆಸ್ಟ್ ಹೌಸ್ ನಲ್ಲಿ ಆರು ದಿನ ಇದ್ದೆ. ಅವರು ಅಷ್ಟೇ ದಿನ ಅವಕಾಶ ಮಾಡಿ ಕೊಟ್ಟಿದ್ರು .

ಅಲ್ಲಿ ತಾರಾನಾಥ್ ಮನೆ ಮಾಡಿಕೊಂಡಿದ್ರು ಮುಂದೆ ನನಗೆ ತಾರಾನಾಥ್ ರವರ ಮನೆಯೇ ಆಶ್ರಯ. ಆವಾಗ ಏನಾತು ಕೇಳ್ರಿ ನನ್ಗೆ ಊಟದ ಸಮಸ್ಯೆ. ರಾಜೀವ್ ತಾರಾನಾಥರು ದಿನಾ ಅಡಿಗೆ ಮಾಡೋರು ನನಗಂತೂ ಚಹ ಕೂಡ ಮಾಡಲಿಕ್ಕೆ ಬರ್ತಿದ್ದಿಲ್ಲಾ. ಒಮ್ಮೆಯಂತೂ ಅವ್ರು ಜ್ವರದಲ್ಲಿ ಇದ್ದಾಗಲೇ ಅಡಿಗೆ ಮಾಡಿ ಊಟ ಬಡಿಸಿದೋ ರು ಮತ್ತೆ ಬೆಳಿಗ್ಗೆ ಬೇಗ ಎದ್ದು ಸರೋದ್ ತಾಲೀಮು. ಹೀಗೇ ಅಲ್ಲಿ ಇಪ್ಪತ್ತೈದು ದಿನ ಇದ್ದೆ. ಅವರ ಸೇವಾ ಮಾಡಿದೆ ನಿದ್ದೇನೇ ಮಾಡ್ತಿದ್ದಿಲ್ಲ ಅನ್ನುವಷ್ಟು ಕಡಿಮೆ ನಿದ್ದಿ ಮಾಡೋರು ಅವ್ರು. ಅಲ್ಲಿ ಬನ್ ತಿನ್ನೋದು ಕೂಡಾ ಕಲಿತೆ. ಒಂದೊಂದು ದಿನ ಉಪ್ಪಿಟ್ ಮಾಡೋರು ನನ್ನನ್ನು ಚೆನ್ನಾಗಿ ನೋಡ್ ಕೊಂಡ್ರು . ಅವ್ರಿಂದ ಸಂಗೀತ ಕಲಿತೆ, ಬುದ್ಧಿ ಕಲಿತೆ. ಮುಖ್ಯವಾಗಿ ಧೈರ್ಯ ಕಲಿತೆ. ಅವರು ನನ್ನ ಕಾರ್ಯಕ್ರಮ ಮೆಚ್ಚಿಕೊಂಡಿದ್ದಾರೆ ಇದೇ ಮುಂದೆ ಲಾಸ್ ಏಂಜಲೀಸ್ ನಲ್ಲಿ ನಡೆದ ಇಂಟರ್‌ನ್ಯಾಷನಲ್ ಕ್ಲಾರಿಯೊನೆಟ್ ಉತ್ಸವದ ಅಧ್ಯಕ್ಷರಾಗಿ ಅಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿದ್ದು ಅವರ ಕೃಪೆಯಿಂದಲೇ. ಅಕ್ಕ ಸಮ್ಮೇಳನ ನಾನು ನಾಲ್ಕು ಸಲ ಹೋದೆ.

ಒಮ್ಮೆ ಹೀಗಾಯ್ತು. ಮಧ್ಯ ಪ್ರದೇಶದ ಅಮರಾವತಿಯಲ್ಲಿ ಸಂಗೀತ ಕಾರ್ಯಕ್ರಮ. ನನ್ನ ಕ್ಲಾರಿಯೊನೆಟ್ ಕೂಡಾ ಇತ್ತು ಅಂದೇ ರಾಜೀವ್ ಜೀಯವರ ಕಾರ್ಯಕ್ರಮ ಅವರು ಕಲ್ಕತ್ತಾ ದಿಂದ ವಿಮಾನದಲ್ಲಿ ಅಮರಾವತಿಗೆ ಬಂದರು. ವಿಮಾನದಲ್ಲಿ ಅವರ ಸರೋದ್ ಸ್ವಲ್ಪ ಡ್ಯಾಮೇಜ್ ಆಗಿದ್ದನ್ನು ಬೆಳಿಗ್ಗೆ ನೋಡಿದ್ರು. ಅಲ್ಲಲೇ ನನಗೆ ಇವತ್ತು ಕಾರ್ಯಕ್ರಮ ಮಾಡ್ಲಿಕ್ಕೆ ಆಗಲ್ಲ ಅಂದ್ಬಿಟ್ರು. ಅದರಿಂದ ಅವರು ನಾನು ಕಾರ್ಯಕ್ರಮದಲ್ಲಿ ಸರೋದ್ ಬಾರಿಸಲು ಆಗಲ್ಲ ಎಂದರು. ಇಲ್ಲೇ ಇಂದೋರ್ ಗೆ ಹೋಗೋಣ ಎರಡು ತಾಸು ಕಾರಿನಲ್ಲಿ ಪ್ರಯಾಣ ಅಷ್ಟೆ

ಕ್ಲಾರಿಯೊನೆಟ್ ವಾದಕರಾದ ಪಂ.ನರಸಿಂಹಲು ವಡವಾಟಿ ಅವರು ಪಂ.ರಾಜೀವ ತಾರಾನಾಥರ ಕುರಿತು ಹೇಳಿದ್ದನ್ನು ಇಲ್ಲಿ ನಿರೂಪಿಸಲಾಗಿದೆ.

ನಡಿಲೇ ಹೋಗೋಣ ಅಂದ್ರು. ರಿಪೇರಿ ಮಾಡಿಯೇ ಸರೋದ್ ಬಾರಿಸುವಿರಂತೆ. ನನ್ನ ಮಾತಿಗೆ ಒಪ್ಪಿ ಇಬ್ಬರೂ ಅಲ್ಲಿಗೆ ಹೋಗಿ ರಿಪೇರಿ ಮಾಡಿಸಿದಾಗ ಮಧ್ಯಾಹ್ನ ಮೂರು ಗಂಟೆ ಅಲ್ಲಿಂದಲೇ ಅಮರಾವತಿಗೆ ಫೋನ್ ಮಾಡಿ ತಿಳಿಸಿದರು ಅವ್ರ ಕಚೇರಿ ಏಳು ಗಂಟೆಗೆ ಇತ್ತು ಸರೋದ್ ಸರಿಯಾಗಿದೆ ಕಾರ್ಯಕ್ರಮ ಮಾಡ್ತೇನೆ ಅಂತ. ಹಾಗಾಗಿ ಒಂದೆರಡು ಕಾರ್ಯಕ್ರಮ ಆದಮೇಲೆ ಇವರ ಸರೋದ್ ಕಾರ್ಯಕ್ರಮ ಇಟ್ಟಗೊಂಡ್ರು

ಪ್ರೋಗ್ರಾಮ್ ನಲ್ಲಿ ಎರಡೆರಡು ಸಲ ಹೇಳಿದ್ರು, ವಡವಾಟಿಯವರ ಸಲಹೆ ಸಹಕಾರದಿಂದ ಪ್ರೋಗ್ರಾಮ್ ಕೋಡ್ ಲಿಕ್ಕೆ ಆಯ್ತು ಅಂತ . ಎಷ್ಟು ದೊಡ್ಡವರು ಅಂದರೆ ಎಲ್ಲ ರೀತಿಯಲ್ಲಿ ಸಣ್ಣವನಾದ ಮುಝೆ ನಾಗ್ ಪುರ್ ಲೇಕೆ ಗಯೇ ನನ್ನನ್ನು ಹೊಗಳಿ ಆಜ್ ಕಾ ಪ್ರೋಗ್ರಾಮ್ ಕಾ ಕ್ರೆಡಿಟ್ ಉನ್ಕಾ ಹೇ ಅಂದ್ರು ಅದು ಅವರ ದೊಡ್ಡಗುಣ ನನ್ನ ಪ್ರೋಗ್ರಾಮ್ಕೂಡಾ ಸಂಪೂರ್ಣ ಕುಳಿತು ಕೇಳಿದರು.

ನನ್ನನ್ನು ಲೇ ಇಲ್ಲಲೇ ಅಂತಲೇ ಪ್ರೀತಿಯಿಂದ ಕರಿಯೋರು. ಲೇ ನಾನು ರಾಯಚೂರ್ ಗೆ ಬರ್ತಿನ್ ನೋಡು ನನ್ ತಂಗೀಗ್ ಹೇಳಿ ಮನ್ಯಾಗ ಎಣ್ಣೆ ಬದನೆಕಾಯಿ ಅಂದ್ರೆ ಎಣ್ಣೆ ಗಾಯಿ ಪಲ್ಯ ನವಣೆ ಅನ್ನ, ಬಿಳಿಜ್ವಾಳದ ರೊಟ್ಟಿ ಮಾಡ್ಸ ಬೇಕು ಅನ್ನೋರು. ಮಾಡ್ಲಿಕ್ಕೆ ಹೇಳು ನಮ್ಮ ಮನೆಯವರು ಪ್ರೀತಿಯಿಂದ ಗೌರವದಿಂದ ಮಾಡಿಕೊಡೋರು. ಸಂತೋಷ ದಿಂದ ಊಟ ಮಾಡೋರು.

ರಾಜೀವ್ ತಾರಾನಾಥ್‌ರು ನನಗೆ ಹಲವು ರಾಗಗಳನ್ನು ಕಲಿಸಿ ಮಾರ್ಗದರ್ಶನ ಮಾಡಿದ್ದಾರೆ. ನಮ್ಮ ಗುರುಗಳಾದ ಪಂಡಿತ್ ಸಿದ್ದರಾಮ ಜಂಬಲ ದಿನ್ನಿ ಯವರೂ ಅವರಿಗೆ ಪರಿಚಯ. ಗುರುಗಳಲ್ಲಿ ನಾನು ಕಲಿತಿದ್ದು ಸಂಗೀತ ಹಾಡುಗಾರಿಕೆ. ವೋಕಲ್ ಸ್ಟೈಲ್ ನಲ್ಲಿ ಗಾಯಕಿ ಸ್ಟೈಲ್ ನಲ್ಲಿ ಕ್ಲಾರಿಯೊನೆಟ್. ಬಂದಿಶ್ ಗಾಯಕಿ ಶೈಲಿ ಕ್ಲಾರಿಯೊನೆಟ್ ನನ್ನದು ಬಾರಿಸುವವರು ಕ್ಲಾರಿನೆಟ್ ಒಂದು ಕರ್ಕಶ ವಾದ್ಯವನ್ನು ಇದನ್ನು ಸುಮಧುರ ವಾಗಿ ಬಾರಿಸಲೂ ಕಲಿತಿರುವುದರಿಂದ ರೇಡಿಯೋ ದಲ್ಲಿ ಏ ಗ್ರೇಡ್ ಇದೆ. ರಾಷ್ಟ್ರೀಯ ಕಾರ್ಯಕ್ರಮ ಕೊಟ್ಟಿದ್ದೇನೆ

ನನ್ನದು ಗ್ವಾಲಿಯರ್ ಮತ್ತು ಜೈಪುರ್ ಘರಾನಾ ಎರಡೂ ಇದೆ. ನಾನು ಅಪರೂಪದ ರಾಗಗಳನ್ನು ನುಡಿಸಿದ್ದೇನೆ ಬೆಳಗಿನ ಯಮನೀ ಬಿಲಾವಲ್, ಸಂಪೂರ್ಣ ಬಿಭಾಸ್ , ಬಹಾದೂರಿ ತೋಡಿ ಇತ್ಯಾದಿ ತಾ ಮ್ಹ ನ್ ಕರ್ ರವರೇ.. ವಿಶಿಷ್ಟ ರಾಗಗಳನ್ನೇ ಆರಿಸಿ ಹರಿವಲ್ಲಭ ಉತ್ಸವದಲ್ಲಿ ಜಲಂಧರ್ ಪಂಜಾಬ್‌ನಲ್ಲಿ ಕ್ಲಾರಿಯೊನೆಟ್ ಬಾರಿಸಿದೆ. 140 ಸಾಲ್ ಹೋಗಯಾ ಅಭಿ ತಕ್ ಕ್ಲಾರಿಯೊನೆಟ್ ನಹಿ ಬಜೆ ಇಧರ್ ಅಂದರು ಅಲ್ಲಿ . ರಾತ್ರಿ ಹನ್ನೆರಡು ಗಂಟೆಗೆ ಪೂರ್ವಾಗ ಉತ್ತರಾಂಗ ಎರಡನ್ನೂ ಬಾರಿಸಿದೆ.

ವೆಸ್ಟರ್ನ್ ಕ್ಲಾರಿಯೊನೆಟ್ ವೆಸ್ಟರ್ನ್ ವಾದ್ಯ ತಯಾರೋಗೋದು ಭಾರತದಲ್ಲೇ. ಅದನ್ನು ಇಂಡಿಯನ್ನೈಸ್ ಮಾಡಲು ಪೂರ್ಣ ಕಾರಣ ಪಂಡಿತ್ ರಾಜೀವ್ ತಾರಾನಾಥ್ ಅವರೇ. ಕೈಯ ಸಾಧನೆ ಮನಸ್ಸಿನ ಏಕಾಗ್ರತೆ ಆತ್ಮವಿಶ್ವಾಸ ಇರಬೇಕು. ಇದನ್ನೆಲ್ಲಾ ತುಂಬಿದವರು ತಾರಾನಾಥ್‌ರವರು. ಭಕ್ತಿಯೊಂದೊಡಗೂಡಿದ ಸಂಗೀತ ಅನಂತ ಕೋ ಟಿ ಜಪಕ್ಕೆ ಸಮ.

- ರಘುಪತಿ ತಾ ಮ್ಹ ನ್‌ಕರ್ ಮೈಸೂರು

ವಿಲಾಸಿ ಜೀವನಕ್ಕೆ ಕಳ್ಳತನ: ಐವರ ಸೆರೆ

ಬೆಂಗಳೂರು: ಐಷಾರಾಮಿ ಜೀವನ ನಡೆಸಲು ಚಿನ್ನದ ಸರಗಳನ್ನು ಕಳ್ಳತನ, ಮನೆಗಳವು ಮಾಡುತ್ತಿದ್ದ ಇಬ್ಬರು ಮಹಿಳೆ ಸೇರಿ ಐವರನ್ನು ಬಂಧಿಸಿ ಭರ್ಜರಿ ಬೇಟೆಯಾಡಿರುವ ದಕ್ಷಿಣ ವಿಭಾಗದ ಪೊಲೀಸರು 27.50 ಲಕ್ಷ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಕುಮಾರಸ್ವಾಮಿ ಲೇಔಟ್ ಪೊಲೀಸರು ದಾವಣಗೆರೆ ಜಿಲ್ಲೆಯ ಭರಮಸಾಗರದ ಬಾಬುಸಾಬ್ (45)ಹುಸೇನ್ ಬೀ(52)ಕೆರೆಬಿಳಿಚಿ ಗ್ರಾಮದ ದಾದಾಪೀರ್ (32) ಹಾಗೂ ಕ್ಯಾಸಿನಕೆರೆಯ ಗುಲಾಬ್ ಜಾನ್ (42) ನನ್ನು ಬಂಧಿಸಿ 11 ಲಕ್ಷ ಬೆಲೆ ಬಾಳುವ 174 ಗ್ರಾಂ ಚಿನ್ನಾಭರಣಗಳನ್ನು ಜಪ್ತಿ ಮಾಡಿದ್ದಾರೆ.

ಬನಶಂಕರಿ ದೇವಸ್ಥಾನಕ್ಕೆ ಪೂಜೆಗೆಂದು ಬಂದಿದ್ದ ಭಕ್ತರೊಬ್ಬರ ಕತ್ತಿನಲ್ಲಿದ್ದ 24 ಗ್ರಾಂ ಚಿನ್ನದ ಸರ ಕಳವು ಮಾಡಿದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಂಧಿತರಿಂದ 11 ಲಕ್ಷ ಮೌಲ್ಯದ ಒಟ್ಟು 174 ಗ್ರಾಂ ತೂಕದ ಚಿನ್ನದ ಸರಗಳನ್ನು ವಶಪಡಿಸಿಕೊಂಡು 6 ಕಳ್ಳತನ ಪ್ರಕರಣ ಪತ್ತೆಹಚ್ಚಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ಬನಶಂಕರಿ ಮೆಟ್ರೋ ಸ್ಟೇಷನ್ ಬಳಿ ಕಾರಿನಲ್ಲಿ ಕುಳಿತಿದ್ದ ನಾಲ್ವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಚಿನ್ನದ ಸರಗಳನ್ನು ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದು ಅವರನ್ನು ಬಂಧಿಸಲಾಗಿದೆ.

ಚಿನ್ನ ಕಳವು: ಅಪ್ರಾಪ್ತ ವಯಸ್ಕರು ವಶಕ್ಕೆ

ಬೆಂಗಳೂರು: ಅಜ್ಜಿಯ ನಿಂದನೆಯಿಂದ ಬೇಸತ್ತಿದ್ದ ಮೊಮ್ಮಗಳು ಸ್ವಂತ ಮನೆಯಲ್ಲೇ ಚಿನ್ನಾಭರಣ ಕಳವು ಮಾಡಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಅಪ್ರಾಪ್ತ ವಯಸ್ಕರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪರಪ್ಪನ ಅಗ್ರಹಾರ ಸಮೀಪದ ಚನ್ನಕೇಶವನಗರ ನಿವಾಸಿ ರೇವತಿ ಎಂಬುವರ ಮನೆಯಲ್ಲಿ ಕಳವು ನಡೆದಿತ್ತು. ಹೂವಿನ ವ್ಯಾಪಾರ ಮಾಡುವ ರೇವತಿ ಅ, ಒಬ್ಬಂಟಿಯಾಗಿ ವಾಸವಾಗಿದ್ದಾರೆ. ಅವರ ಮೂವರು ಮಕ್ಕಳು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಮೂವರು ಮಕ್ಕಳ ಪೈಕಿ ಮಣಿ ಎಂಬ ಅಪ್ರಾಪ್ತ ವಯಸ್ಸಿ ಮಗಳು ಕೆಲ ದಿನಗಳ ಹಿಂದೆ ಅಜ್ಜಿ ರೇವತಿಯ ಎಟಿಎಂ ಕಾರ್ಡ್ ಕದ್ದು ಹಣ ಡ್ರಾ ಮಾಡಿಕೊಂಡಿದ್ದಳು. ಈ ವಿಚಾರಕ್ಕೆ ರೇವತಿ, ಸದಾ ಮೊಮ್ಮಗಳಿಗೆ ಬೈಯ್ಯುತ್ತಿದ್ದರು. ಈ ನಿಂದನೆಯಿಂದ ಅವಮಾನಿತ ಳಾಗಿದ್ದ ಮೊಮ್ಮಗಳು ಅಜ್ಜಿಗೆ ತಕ್ಕ ಪಾಠ ಕಲಿಸಲು ನಿರ್ಧರಿಸಿ, ಇಬ್ಬರು ಸಹಪಾಠಿಗಳ ಜತೆ ಸೇರಿ ತನ್ನ ಮನೆಯಲ್ಲೇ ಚಿನ್ನಾಭರಣ ಕಳವು ಮಾಡಿಸಿದ್ದಳು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿವೇಶನ ಖರೀದಿಸುವ ಪ್ರಯತ್ನದಲ್ಲಿದ್ದ ಮಣಿ, ಅದಕ್ಕೆ ಹಣ ಹೊಂದಿಸುತ್ತಿದ್ದರು. ತಮ್ಮ ಬಳಿಯಿದ್ದ ಚಿನ್ನದ ಆಭರಣಗಳನ್ನು ತಂದು ತಾಯಿ ರೇವತಿಯವರ ಮನೆಯಲ್ಲಿ ಇಟ್ಟಿದ್ದರು. ಈ ವಿಚಾರ ತಿಳಿದಿದ್ದ ಮಣಿಯ ಮಗಳು ಆ ಆಭರಣಗಳನ್ನು ಕಳವು ಮಾಡಿಸಿ ಅಜ್ಜಿಗೆ ಪಾಠ ಕಲಿಸಬೇಕೆಂದು ನಿರ್ಧರಿಸಿದ್ದಳು. ಸ್ನೇಹಿತೆ ಮತ್ತು ಸ್ನೇಹಿತನ ಜತೆ ಸೇರಿ ಕಳವು ಮಾಡುವ ಸಂಚು ರೂಪಿಸಿದ್ದಳು.

ಬುರ್ಖಾ ಧರಿಸಿ ಬಂದು ಕೃತ್ಯ: ರೇವತಿ ಅವರು ಪ್ರತಿನಿತ್ಯದಂತೆ ಮೇ 27ರಂದು ಮನೆಗೆ ಬೀಗಹಾಕಿ ಕೀಯನ್ನು ಬಾಗಿಲ ಪಕ್ಕದ ಶೂ ಬಾಕ್ಸ್‌ನಲ್ಲಿ ಇಟ್ಟು ವ್ಯಾಪಾರಕ್ಕೆ ಹೋಗಿದ್ದರು. ಈ ಬಗ್ಗೆ ಮಣಿಯ ಮಗಳು ಸ್ನೇಹಿತನಿಗೆ ಸುಳಿವು ಕೊಟ್ಟಿದ್ದಳು. ಆತ ಆ ಬುರ್ಖಾ ಧರಿಸಿ ಹೋಗಿ ಕೈಚಳಕ ತೋರಿದ್ದ. ರೇವತಿ ಮನೆಯ ಹೊರಗಿನ ಶೂ ಬಾಕ್ಸ್‌ನಲ್ಲಿದ್ದ ಕೀ ತೆಗೆದುಕೊಂಡು ಬಾಗಿಲು ತೆರೆದು ಒಳಹೋಗಿ ಅಲ್ಮೇರಾದಲ್ಲಿದ್ದ ಆಭರಣಗಳನ್ನು ಕದ್ದು ಪರಾರಿಯಾಗಿದ್ದ.

ಸುಳಿವು ಕೊಟ್ಟ ಕ್ಯಾಮರಾ: ಕಳವು ಮಾಡಿದ ನಂತರ ಆರೋಪಿ ಬುರ್ಖಾ ಧರಿಸಿಯೇ ಮನೆಯಿಂದ ಹೊರಬಂದು ಸ್ವಲ್ಪದೂರ ನಡೆದು ಹೋಗಿ ಬಾಲಕಿಯೊಬ್ಬಳನ್ನು ಭೇಟಿಯಾಗಿದ್ದ. ಆ ಬಾಲಕಿ ಮಣಿಯ ಮಗಳ ಸಹಪಾಠಿ. ರೇವತಿ ಅವರ ಮನೆಯಿಂದ ಸುಮಾರು 3 ಕಿ.ಮೀ. ವ್ಯಾಪ್ತಿಯ 60 ಸಿ.ಸಿ ಕ್ಯಾಮರಾಗಳನ್ನು ಪರಿಶೀಲಿಸಿದಾಗ ಘಟನೆಯ ದಿನ ವ್ಯಕ್ತಿಯೊಬ್ಬರು ಬುರ್ಖಾ ಧರಿಸಿ ಹೋಗಿರುವುದು ಗೊತ್ತಾಯಿತು. ಆ ವ್ಯಕ್ತಿ ಬಾಲಕಿಯನ್ನು ಭೇಟಿಯಾಗಿ ಮಾತನಾಡಿರುವುದು ಸಿ.ಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಈ ಸುಳಿವು ಆಧರಿಸಿ ಆ ಬಾಲಕಿಯನ್ನು ಪತ್ತೆಮಾಡಿ ವಿಚಾರಣೆ ನಡೆಸಿದಾಗ ಕಳುವಿನ ರಹಸ್ಯ ಬಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷಕರಿಗೆ ಮಾರಿದ್ದ: ಮಣಿಯ ಮಗಳ ಸ್ನೇಹಿತನು ಕದ್ದ ಆಭರಣಗಳ ಪೈಕಿ ಕೆಲವನ್ನು ಟ್ಯೂಷನ್‌ನ ಶಿಕ್ಷಕರಿಗೆ ಮಾರಿದ್ದ. ಉಳಿದ ಆಭರಣಗಳನ್ನು ಮನೆಯಲ್ಲೇ ಬಚ್ಚಿಟ್ಟಿದ್ದ. ತನ್ನ ತಂದೆ ಮದ್ಯವ್ಯಸನಿಯಾಗಿದ್ದು, ಕಾಲೇಜಿನ ಫೀಸ್ ಕಟ್ಟಲು ಹಣವಿಲ್ಲ. ಹೀಗಾಗಿ, ಆಭರಣಗಳನ್ನು ತೆಗೆದುಕೊಂಡು ಹಣ ಕೊಡಿ ಎಂದು ಟ್ಯೂಷನ್‌ನ ಶಿಕ್ಷಕರಿಗೆ ಸುಳ್ಳು ಹೇಳಿ ಆಭರಣ ಮಾರಿದ್ದ. ಅದರಿಂದ ಬಂದ 1 ಲಕ್ಷ ರೂ. ಹಣದಲ್ಲಿ ಹೊಸ ಮೊಬೈಲ್ ಖರೀದಿಸಿದ್ದ. ಮಣಿಯ ಮಗಳು ಮತ್ತು ಆಕೆಯ ಇಬ್ಬರು ಸಹಪಾಠಿಗಳನ್ನು ಬಂಧಿಸಿ, 24.50 ಲಕ್ಷ ರೂ. ಮೌಲ್ಯದ 380 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಜೈಲಿನಲ್ಲಿ ಹಲ್ಲೆ ಪ್ರಕರಣ ಬೆಳಕಿಗೆ

ಬೆಂಗಳೂರು: ಬೆಂಗಳೂರು ಕೇಂದ್ರ ಕಾರಾಗೃಹ (ಪರಪ್ಪನ ಅಗ್ರಹಾರ) ಜೈಲಿನಲ್ಲಿ ಮತ್ತೊಂದು ಹಲ್ಲೆ ಪ್ರಕರಣ ಬೆಳಕಿಗೆ ಬಂದಿದೆ.

ವಿಚಾರಣಾಧೀನ ಕೈದಿ ನಾಗರಾಜ್ ಹಲ್ಲೆಗೊಳಗಾದವರು. ಪರಪ್ಪನ ಅಗ್ರಹಾರ ಜೈಲು ಸಿಬ್ಬಂದಿ ಮತ್ತು ಸಜಾ ಕೈದಿಗಳು ವಿಚಾರಣಾಧೀನ ಕೈದಿ ಮೇಲೆ ಹಲ್ಲೆ ಮಾಡಿರುವ ಆರೋಪ ಕೇಳಿಬಂದಿದೆ. ಹಲ್ಲೆಗೊಳಗಾದ ನಾಗರಾಜ್ ಕೊಲೆ ಪ್ರಕರಣದ ಆರೋಪಿಯಾಗಿದ್ದು, ಮಂಡ್ಯದಿಂದ ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರಗೊಂಡಿದ್ದಾನೆ.

ಹೇಳಿದ ಕೆಲಸ ಮಾಡದಿದ್ದರೆ ಸಜಾ ಕೈದಿಗಳು ವಿಚಾರಣಾ ಕೈದಿಗಳು ಮೇಲೆ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಮಾಡುತ್ತಾರೆ. ಜೈಲು ಸಿಬ್ಬಂದಿಗೆ ಸುಳ್ಳು ಹೇಳಿ, ವಿಚಾರಣಾ ಕೈದಿಗೆ ಹಲ್ಲೆ ಮಾಡುವಂತೆ ಕುಮ್ಮಕ್ಕು ನೀಡುತ್ತಾರೆ. ಸಜಾ ಕೈದಿಗಳ ಮಾತನ್ನು ನಂಬಿ 15 ಜೈಲು ಸಿಬ್ಬಂದಿ ನಾಗರಾಜ್ ಮೇಲೆ ಹಲ್ಲೆ ಮಾಡಿರುವ ಆರೋಪ ಕೇಳಿಬಂದಿದೆ. ಜೈಲಿನಲ್ಲಿನ ಹಿರಿಯ ಕೈದಿಗಳ ವಿರುದ್ಧವೂ ದೌರ್ಜನ್ಯ, ಹಲ್ಲೆ ಆರೋಪವಿದೆ. ಕೈದಿ ನಟರಾಜ್ ಎಂಬುವನು ನಾಗರಾಜ ಮೇಲ್ಲೆ ಹಲ್ಲೆ ಮಾಡಿರುವ ಹಲ್ಲೆ ಮಾಡಿದ್ದಾನೆ ಎಂಬ ಆರೋಪಿಸಲಾಗಿದೆ. ಈ ಹಲ್ಲೆಗಳ ಕುರಿತು ನಾಗರಾಜ್ ವಿಡಿಯೋ ಹೇಳಿಕೆ ನೀಡಿ, ತಾಯಿಗೆ ವಾಟ್ಸಪ್ ಮೂಲಕ ಕಳುಹಿಸಿದ್ದಾರೆ. ಜೈಲಿನಲ್ಲಿ ಮಗ ನಾಗರಾಜ್ ಪರಿಸ್ಥಿತಿ ಕಂಡು ತಾಯಿ ಕಣ್ಣೀರು ಹಾಕಿದ್ದಾರೆ.ನ್ಯಾಯಕ್ಕಾಗಿ ವಿಡಿಯೊ ಸಮೇತ ಮಾನವಹಕ್ಕು ಆಯೋಗಕ್ಕೆ ನಾಗರಾಜ್ ತಾಯಿ ದೂರು ನೀಡಿದ್ದಾರೆ.

ಜೈಲು ಸೇರಿದ ಜಗ್ಗುದಾದ

ದಾಸನಿಗೆ ಬೆಂಬಿಡದ ವಿವಾದ

ದರ್ಶನ್ ಕನ್ನಡ ಚಿತ್ರರಂಗದಲ್ಲಿ ಬಾಕ್ಸ್ ಆಫೀಸ್ ಸುಲ್ತಾನ ಎಂದೇ ಪ್ರಸಿದ್ಧಿ ಪಡೆದಿರುವ ನಾಯಕ ನಟ. 23 ವರ್ಷಗಳ ಮೆಜೆಸ್ಟಿಕ್ ಚಿತ್ರದ ಮೂಲಕ ಪ್ರಸಿದ್ಧಿಗೆ ಬಂದ ದರ್ಶನ್, ಅಲ್ಲಿಂದ ಇಲ್ಲಿವರೆಗೆ 55ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಾಯಕ ನಟನಾಗಿ ನಟಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನ ಚಿತ್ರಗಳು ಗೆದ್ದಿವೆ. ಕೆಲವು ಬಾಕ್ಸಾಫೀಸ್ ಕೊಳ್ಳೆ ಹೊಡೆದಿವೆ. ಈ ಕಾರಣಕ್ಕಾಗಿಯೇ ದರ್ಶನ್ ಚಂದನವನದಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಆದರೆ ದರ್ಶನ್ ಎಷ್ಟರ ಮಟ್ಟಿಗೆ ಜನಪ್ರಿಯತೆ ಹೊಂದಿದ್ದಾರೋ, ಅಷ್ಟೇ ವಿವಾದಗಳು ಅವರನ್ನು ಸುತ್ತಿಕೊಂಡಿವೆ. ಕಳೆದ ಒಂದು ದಶಕಗಳಲ್ಲಿ ಒಂದಲ್ಲ ಒಂದು ವಿವಾದಗಳು ಅವರನ್ನು ಸುತ್ತಿಕೊಳ್ಳುತ್ತಲೇ ಬಂದಿವೆ. ಆದರೆ ಈಗ ಬಂದಿರುವ ಆರೋಪದ ಅತ್ಯಂತ ಗಂಭೀರ ಸ್ವರೂಪದ್ದಾಗಿದ್ದು, ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ದರ್ಶನ್ ಜೈಲು ಸೇರಿದ್ದಾರೆ. ಪ್ರಕರಣದಲ್ಲಿ ದಾಸನ ಪಾತ್ರ ಸಾಬೀತಾದರೆ ಅಭಿಮಾನಿಯೊಬ್ಬನ ಬರ್ಬರ ಸಾವಿಗೆ ಕಾರಣವಾದ ಶಾಶ್ವತ ಕಳಂಕ ಹೊತ್ತುಕೊಳ್ಳಬೇಕಾಗಿದೆ.

ಪತ್ನಿ ಜತೆ ರಂಪಾಟ

2011ರಲ್ಲಿ ದರ್ಶನ್ ವಿರುದ್ಧ ಅವರ ಪತ್ನಿ ಕೌಟುಂಬಿಕ ದೌರ್ಜನ್ಯದ ದೂರು ದಾಖಲಿಸಿದ್ದರು. ನಟಿಯೊಬ್ಬರೊಂದಿಗೆ ಒಡನಾಟವನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ನಡೆಸಿದ್ದಾರೆಂದು ಪತ್ನಿ ವಿಜಯಲಕ್ಷ್ಮಿ ಪೊಲೀಸರಿಗೆ ದೂರು ನೀಡಿದ್ದರು. ಈ ಪ್ರಕರಣದಲ್ಲಿ ಜೈಲು ಸೇರಿದ್ದ ದರ್ಶನ್ 28 ದಿನಗಳ ಕಾಲ ಸೆರೆಮನೆಯಲ್ಲಿದ್ದರು. ಈ ಪ್ರಕರಣದಲ್ಲಿ ನಟಿ ನಿಖಿತಾ ತುಕ್ರಾಲ್ ಹೆಸರು ಕೇಳಿ ಬಂದಿತ್ತು. ಬಳಿಕ ರಾಜಿ ಸಂಧಾನ ನಡೆದು ಪ್ರಕರಣ ಇತ್ಯರ್ಥವಾಗಿತ್ತು. ಬಳಿಕ ಪ್ರಕರಣ ಸಂಬಂಧ ದರ್ಶನ್ ಸಾರ್ವಜನಿಕವಾಗಿ ಕ್ಷಮೆ ಕೋರಿದ್ದರು. ನಂತರ ದರ್ಶನ್ ನಟಿಸಿದ ಸಾರಥಿ ಸಿನಿಮಾ ಬಾಕ್ಸಾಫಿಸ್‌ನಲ್ಲಿ ಹಿಟ್ ಆಗಿ ಈ ನೋವನ್ನು ಮರೆಯುವಂತೆ ಮಾಡಿತ್ತು.

2001ರಲ್ಲಿ ಮೆಜೆಸ್ಟಿಕ್ ಚಿತ್ರದ ಮೂಲಕ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ದರ್ಶನ್, ದಾಸನೆಂದೇ ಖ್ಯಾತಿ ಪಡೆದವರು. ಮುಂದೆ ಸಾಲು ಸಾಲು ಹಿಟ್ ಸಿನಿಮಾಗಳಲ್ಲಿ ನಟಿಸಿ ಚಾಲೆಂಜಿಂಗ್ ಸ್ಟಾರ್, ಬಾಕ್ಸ್ ಆಫೀಸ್ ಸುಲ್ತಾನ ಎಂಬ ಬಿರುದು ಬಾವಲಿಗಳು ಅರಸಿ ಬಂತು. ಆದರೆ ದರ್ಶನ್‌ಗೆ ಮಾತಿನಲ್ಲಿ ಹಿಡಿತವಿರಲಿಲ್ಲ. ನಡೆ ನುಡಿಗಳಲ್ಲಿ ಸಂಯಮವಿರಲಿಲ್ಲ. ಹಾಗಾಗಿಯೇ ಹಲವು ವಿವಾದಗಳಿಗೆ ಸಿಲುಕಿದರು. ಪತ್ನಿ ಮೇಲೆ ಹಲ್ಲೆ ನಡೆಸಿ ಹಿಂದೊಮ್ಮೆ ಜೈಲುಪಾಲಾಗಿದ್ದ ದರ್ಶನ್, ಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಂಡಿದ್ದರು. ಆದರೆ ಅಂದಿನ ಗಲಾಟೆಯೇ ದರ್ಶನ್‌ಗೆ ಮತ್ತೆ ಜೈಲುದರ್ಶನ ಮಾಡಿಸಿದೆ.

ದೊಡ್ಮನೆ ಮೇಲೆ ಮುನಿಸು

ಪತ್ನಿಯೊಂದಿಗೆ ಜಗಳವಾದಾಗ ಹಿರಿಯ ನಟ ಶಿವಣ್ಣ ಮಧ್ಯಸ್ಥಿಕೆ ವಹಿಸಿದ್ದರು. ಆದರೆ ಬಳಿಕ ದೊಡ್ಮನೆ ಸದಸ್ಯರ ವಿರುದ್ಧ ತಿರುಗಿ ಬಿದ್ದಿದ್ದ ದರ್ಶನ್, ಸಿನಿಮಾದಲ್ಲಿ ಮತ್ತು ಹೊರಗೆ ಈ ಕುಟುಂಬಕ್ಕೆ ಟಾಂಗ್ ನೀಡುವ ಹೇಳಿಕೆಗಳನ್ನು ನೀಡಿ ವಿವಾದಕ್ಕೆ ಗುರಿಯಾಗುತ್ತಿದ್ದರು. ಸಮಾರಂಭವೊಂದರಲ್ಲಿ ದರ್ಶನ್ ವಿರುದ್ಧ ಚಪ್ಪಲಿ ತೂರಿದ್ದು ಸುದ್ದಿಯಾದ ಪುನೀತ್ ಅಭಿಮಾನಿಗಳ ಕೃತ್ಯ ಎಂದು ದೂರಲಾಗಿತ್ತು.

ಉರುಳಾದ ‘ಪವಿತ್ರಾ’ ನಂಟು

ಕಿರುತೆರೆ ನಟಿ ಪವಿತ್ರಾ ಎಂಬವರಿ ಕಳೆದ ಜನವರಿಯಲ್ಲಿ "One decade down; forever to go. It's been 10 years of our relationship. Thank you.‘ ಎಂದು ಪೋಸ್ಟ್ ಹಾಕಿದ್ದರು. ಇದನ್ನು ದರ್ಶನ್ ಪತ್ನಿ ವಿಜಯಲಕ್ಷ್ಮಿ ಆಕ್ಷೇಪಿಸಿದ್ದರು. ಬಳಿಕ ದರ್ಶನ್ ಅಭಿಮಾನಿಗಳಲ್ಲಿ ಕೆಲವರು ಪವಿತ್ರಾ ಗೌಡ ಅವರನ್ನು ನಿಂದಿಸಿ ಕಮೆಂಟ್ ಹಾಕುತ್ತಿದ್ದರು. ಇದೇ ಕಾರಣಕ್ಕೆ ಈಗ ಅಭಿಮಾನಿಯೊಬ್ಬನ ಕೊಲೆ ನಡೆದಿದೆ ಎನ್ನಲಾಗಿದೆ.

ನಿರ್ಮಾಪಕನ ಮೇಲೆ ಹಲ್ಲೆ

ದರ್ಶನ್ ಚಿಂಗಾರಿ ಸಿನಿಮಾದಲ್ಲಿ ಅಭಿನಯಿಸಿದ್ದರು. 2012ರಲ್ಲಿ ತೆರೆಗೆ ಬಂದ ಚಿಂಗಾರಿ ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಕಲೆಕ್ಷನ್ ಕೂಡ ಮಾಡಿತ್ತು. ಈ ಚಿತ್ರದ ನಿರ್ಮಾಪಕ ಮಹದೇವ್ ಮತ್ತು ದರ್ಶನ್ ನಡುವೆ ಯಾವುದೋ ವಿಚಾರಕ್ಕೆ ಮನಸ್ತಾಪ ಉಂಟಾಗಿತ್ತು. ಆಗ ಮಹಾದೇವ್ ಅವರನ್ನು ದರ್ಶನ್ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ಸುದ್ದಿಯಾಗಿತ್ತು.

ದೂರವಾದ ಗೆಳೆಯರು

ಅಂಬರೀಶ್ ಮತ್ತು ವಿಷ್ಣುವರ್ಧನ್ ಅವರಂತೆ ನಟ ಸುದೀಪ್ ಹಾಗೂ ದರ್ಶನ್ ಒಂದು ಕಾಲದಲ್ಲಿ ಆತ್ಮೀಯ ಸ್ನೇಹಿತರಾಗಿದ್ದರು. ಸಿನಿಮಾರಂಗದ ಕಾರ್ಯಕ್ರಮಗಳಲ್ಲಿ ಇಬ್ಬರೂ ಒಟ್ಟಿಗೆ ಕಾಣಿಸಿಕೊಂಡು ಅಭಿಮಾನಿಗಳ ಮನಸೂರೆಗೊಳ್ಳುತ್ತಿದ್ದರು. ಇಬ್ಬರು ಒಟ್ಟಿಗೆ ಸಿನಿಮಾ ಮಾಡುತ್ತಾರೆ ಎಂಬ ನಿರೀಕ್ಷೆಯೂ ಸಿನಿಪ್ರಿಯರಲ್ಲಿತ್ತು. ಆದರೆ ಇಬ್ಬರ ನಡುವೆ ಕಂದಕ ಸೃಷ್ಟಿಯಾಯಿತು. ದರ್ಶನ್, ಸುದೀಪ್ ಮತ್ತು ನಾನು ಸ್ನೇಹಿತರಲ್ಲ, ನಾವು ಕೇವಲ ಕನ್ನಡ ಚಿತ್ರರಂಗದ ನಟರಷ್ಟೆ ಎಂದು ಹೇಳಿ ಸುದೀಪ್ ಜತೆಗಿನ ಗೆಳೆತನಕ್ಕೆ ಎಳ್ಳು ನೀರು ಬಿಟ್ಟರು.

ಸಹಕಲಾವಿದನ ಮೇಲೆ ಹಲ್ಲೆ

ದರ್ಶನ್ ಯಜಮಾನ ಚಿತ್ರದಲ್ಲಿ ಅಭಿನಯಿಸುತ್ತಿದ್ದಾಗ ಹಾಡಿನ ಚಿತ್ರೀಕರಣದ ವೇಳೆ ಸಹ ನಟನ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪವೂ ಕೇಳಿ ಬಂದಿತ್ತು. ಸಹನಟ ಮೊಬೈಲ್‌ನಲ್ಲಿ ಹಾಡಿನ ಚಿತ್ರೀಕರಣದ ದೃಶ್ಯಗಳನ್ನು ಸೆರೆಹಿಡಿಯುತ್ತಿದ್ದರು. ಇದರಿಂದ ನಿರ್ಮಾಪಕರಿಗೆ ನಷ್ಟವಾಗುತ್ತದೆ ಎಂದು ದಚ್ಚು ಸಬೂಬು ನೀಡಿದ್ದರು.

ಜಗ್ಗಣ್ಣನನ್ನು ನಿಂದಿಸಿದ ಅಭಿಮಾನಿಗಳು

ದರ್ಶನ್ ಅಭಿಮಾನಿಗಳ ಬಗ್ಗೆ ನಟ ಜಗ್ಗೇಶ್ ಹಗುರವಾಗಿ ಮಾತನಾಡಿದ್ದಾರೆ ಎಂದು ಮೈಸೂರಿನಲ್ಲಿ ತೋತಾಪುರಿ ಸಿನಿಮಾ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ನವರಸನಾಯಕ ಮೇಲೆ ದರ್ಶನ್ ಅಭಿಮಾನಿಗಳು ಮುತ್ತಿಗೆ ಹಾಕಿ ಧಿಕ್ಕಾರ ಕೂಗಿದ್ದರು. ಇದರ ಬೆನ್ನಲ್ಲೇ ದರ್ಶನ್ ಅಭಿಮಾನಿಗಳು ಕ್ಷಮೆ ಕೇಳುವಂತೆ ಜಗ್ಗೇಶ್ ಅವರಲ್ಲಿ ಪಟ್ಟು ಹಿಡಿದಿದ್ದರು. ಈ ವಿವಾದ ಹಿಂದೆಯೂ ದರ್ಶನ್ ಇದ್ದಾರೆ ಎಂಬ ಆರೋಪ ಕೇಳಿಬಂದಿತ್ತು.

ಉಮಾಪತಿ ಜತೆ ಜಟಾಪಟಿ

ನಿರ್ಮಾಪಕ ಉಮಾಪತಿ ಶ್ರೀನಿವಾಸ್ ನಿರ್ಮಾಣದಲ್ಲಿ ರಾಬರ್ಟ್ ಚಿತ್ರ ನಿರ್ಮಾಣವಾಗಿತ್ತು. ಕೋವಿಡ್ ಸಮಯದಲ್ಲಿಯೇ ಬಿಡುಗಡೆಯಾದ ರಾಬರ್ಟ್ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಕಲೆಕ್ಷನ್ ಮಾಡಿತ್ತು. ಉಮಾಪತಿ ದರ್ಶನ್‌ಗಾಗಿ ಮತ್ತೊಂದು ಸಿನಿಮಾ ಮಾಡುತ್ತಾರೆ ಎಂದುಕೊಳ್ಳುತ್ತಿರುವಾಗಲೇ ಇಬ್ಬರ ನಡುವೆ ಕಿರಿಕ್ ಆರಂಭವಾಗಿತ್ತು. ನಟ ದರ್ಶನ್ ಅವರ ಹೆಸರು ಬಳಸಿಕೊಂಡು ನಿರ್ಮಾಪಕ ಉಮಾಪತಿ ಶ್ರೀನಿವಾಸ್ 25 ಕೋಟಿ ರೂ. ಸಾಲ ಪಡೆದು ವಂಚಿಸಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿತ್ತು. ಇಬ್ಬರ ನಡುವೆ ಮಾತಿನ ಜಟಾಪಟಿ ನಡೆದಿತ್ತು.

ಸಿಬ್ಬಂದಿ ಮೇಲೆ ಹಲ್ಲೆ

ಮೈಸೂರಿನ ಹೋಟೇಲ್‌ನಲ್ಲಿ ಪಾರ್ಟಿ ಮಾಡುತ್ತಿದ್ದ ದರ್ಶ ಸಪ್ಲೈಯರ್ ಗಂಗಾಧರ್ ಎಂಬವರ ಮೇಲೆ ಕ್ಷುಲ್ಲಕ ಕಾರಣಕ್ಕೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪ ಎದುರಾಗಿತ್ತು. ನಿರ್ದೇಶಕ ಇಂದ್ರಜಿತ್, ದರ್ಶನ್ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಒತ್ತಾಯಿಸಿದ್ದರು. ಈ ವೇಳೆ ವೈರಲ್ ಆಗಿದ್ದ ಸಂಭಾಷಣೆಯ ತುಣುಕು ಸದ್ದು ಮಾಡಿತ್ತು.

ಆಕ್ರೋಶ ಹೆಚ್ಚಿಸಿದ ಪುಡುಂಗಾ?

ಇಂದ್ರಜಿತ್ ಆರೋಪಕ್ಕೆ ತಿರುಗೇಟು ನೀಡುತ್ತಿದ್ದ ದಚ್ಚು, ಮಾತಿನ ಭರದಲ್ಲಿ ನಿರ್ದೇಶಕ ಪ್ರೇಮ್ ‘ದೊಡ್ಡ ಪುಡುಂಗಾ’ ಎಂದಿದ್ದರು. ‘ಪ್ರೇಮ್ ಏನು ಪುಡುಂಗಾ, ಎರಡು ಕೊಂಬೈ ಐತಾ ?, ಕರಿಯ ಚಿತ್ರದಲ್ಲಿ ನಾನು ನೋಡಿದ್ದೇನೆ. ಪ್ರೇಮ್ ಏನು ಅಂತ ? ಎಂದು ಜರಿದಿದ್ದರು. ಈ ಬಗ್ಗೆ ನೊಂದಿದ್ದ ಇನ್ನು ಮುಂದೆ ದರ್ಶನ್ ಜತೆಗೆ ಸಿನಿಮಾ ಮಾಡುವುದೇ ಇಲ್ಲ ಎಂದಿದ್ದರು.

ಕಿರಿಕ್ ಪಾರ್ಟಿ

ಈ ಎಲ್ಲಾ ವಿವಾದಗಳ ನಡುವೆಯೇ ದರ್ಶನ್ ಮಾಧ್ಯಮಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ವಿಚಾರ ಭಾರೀ ರಾದ್ಧಾಂತಕ್ಕೆ ಕಾರಣವಾಗಿತ್ತು. ಇದೇ ಕಾರಣಕ್ಕೆ ಎಲ್ಲಾ ಮಾಧ್ಯಮಗಳು ನಟ ದರ್ಶನ್ ವಿರುದ್ಧ ನಿರ್ಬಂಧ ಹೇರಿದ್ದವು. ದರ್ಶನ್ ಕುರಿತಾದ ಯಾವುದೇ ಸುದ್ದಿ ಪ್ರಸಾರ ಮತ್ತು ಪ್ರಕಟಿಸದಂತೆ ಮಾಧ್ಯಮ ಸಂಸ್ಥೆಗಳು ನಿರ್ಧಾರ ತೆಗೆದುಕೊಂಡಿದ್ದವು. ಬಳಿಕ ದರ್ಶನ್ ಈ ಬಗ್ಗೆ ಕ್ಷಮೆ ಯಾಚಿಸಿ ಪ್ರಕರಣ ಇತ್ಯರ್ಥಗೊಳಿಸಿಕೊಂಡಿದ್ದರು.

ಕಾಡಿದ ಪಕ್ಷಿ

ದರ್ಶನ್ ಮೈಸೂರಿನಲ್ಲಿ ದೊಡ್ಡದಾದ ಫಾರಂ ಹೌಸ್ ಹೊಂದಿದ್ದಾರೆ. ಅಲ್ಲಿ ಹಲವು ಪ್ರಾಣಿ ಪಕ್ಷಿಗಳನ್ನು ಸಾಕಿದ್ದಾರೆ. ಇಲ್ಲಿ ಬಾರ್ ಹೆಡೆಡ್ ಗೂಸ್ ಎಂಬ ವಿಶಿಷ್ಟ ಪ್ರಭೇದದ ಬಾತುಕೋಳಿಗಳನ್ನು ಸಾಕಲಾಗಿತ್ತು. ಈ ಪಕ್ಷಿಗಳನ್ನು ಸಾಕಲು ಅನುಮತಿ ಇಲ್ಲ. ಈ ಸಂಬಂಧ ಅರಣ್ಯ ಅಧಿಕಾರಿಗಳು ಫಾರ್ಮ್ ಹೌಸ್ ಮೇಲೆ ದಾಳಿ ನಡೆಸಿ ಆ ಪಕ್ಷಿಗಳನ್ನು ವಶಕ್ಕೆ ಪಡೆದಿದ್ದರು. ಈ ಪಕ್ಷಿಗಳನ್ನು ಸಾಕುವುದು ವನ್ಯಜೀವಿ ಸಂರಕ್ಷಣೆಯ ಕಾಯ್ದೆಯಡಿ ಅಪರಾಧ. ಹಾಗಾಗಿ ಅಧಿಕಾರಿಗಳು ದರ್ಶನ್ ವಿರುದ್ಧ ದೂರು ದಾಖಲಿಸಿದ್ದರು.

ಕಾಡಿದ್ದ ಹುಲಿ ಉಗುರು

ದರ್ಶನ್ ಹುಲಿ ಉಗುರಿನ ಪೆಂಡೆಂಟ್ ಧರಿಸಿದ್ದ ಫೋಟೊ ವೈರಲ್ ಆಗಿತ್ತು. ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ನಟ ದರ್ಶನ್ ಮನೆಯಲ್ಲಿ ಶೋಧ ನಡೆಸಿದ್ದರು. ಎಂಟು ಹುಲಿ ಉಗುರಿನ ಪೆಂಡೆಂಟ್ ದರ್ಶನ್ ಮನೆಯಲ್ಲಿ ಸಿಕ್ಕಿದ್ದವು. ಆದರೆ ಅದೆಲ್ಲ ಅಸಲಿ ಹುಲಿ ಉಗುರು ಅಲ್ಲ ಎಂಬ ಮಾಹಿತಿ ಮೇರೆಗೆ ಪ್ರಕರಣ ಕೈ ಬಿಡಲಾಗಿತ್ತು.

ನಾಯಿ ದಾಳಿ

ಶ್ವಾನ ಪ್ರಿಯ ದರ್ಶನ್ ಮನೆಯ ಸಾಕು ನಾಯಿ ದಾಳಿ ಮಾಡಿದೆ ಎಂದು ಮಹಿಳೆಯೊಬ್ಬರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದರು. ಈ ಸಂಬಂಧ ದರ್ಶನ್ ಅವರನ್ನು ಕರೆದು ವಿಚಾರಣೆ ನಡೆಸಲಾಗಿತ್ತು.

ಇತ್ತೀಚೆಗೆ ಮತ್ತೆ ನಿರ್ಮಾಪಕ ಉಮಾಪತಿ ವಿರುದ್ಧ ಕಾಟೇರ ಕಥೆಯ ವಿಚಾರಕ್ಕೆ ಹರಿಹಾಯ್ದಿದ್ದ ದರ್ಶನ್, ಅವರನ್ನು ‘ತಗಡು’ ಎಂದು ನಿಂದಿಸಿದ್ದರು. ಜತೆಗೆ ಮಹಿಳೆಯರ ವಿರುದ್ಧ ತುಚ್ಛವಾಗಿ ಮಾತನಾಡಿದ್ದಾರೆ ಎಂಬ ಆರೋಪದಲ್ಲಿ ನಟನ ವಿರುದ್ಧ ಮಹಿಳೆಯರು ಪ್ರತಿಭಟನೆ ನಡೆಸಿದ್ದರು.

ದಸರಾ ಆನೆಗಳ ದುರಂತ ಸಾವು

ದ್ರೋಣನಿಂದ ಅಶ್ವತ್ಥಾಮವರೆಗೆ ಹತ್ತು ಆನೆಗಳ ದಾರುಣ ಅಂತ್ಯ

ಕೆ.ಜೆ.ಲೋಕೇಶ್ ಬಾಬು ಮೈಸೂರು

ವಿಶ್ವವಿಖ್ಯಾತ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳುವ ಆನೆಗಳ ದುರಂತ ಸಾವಿನ ಸರಣಿ ಮುಂದುವರೆದಿದೆ.

ನಾಗರಹೊಳೆ ಉದ್ಯಾನದ ಸಾಕಾನೆ ಶಿಬಿರದಲ್ಲಿ 40 ವರ್ಷ ಪ್ರಾಯದ ಅಶ್ವತ್ಥಾಮ ಮಂಗಳವಾರ ಬೆಳಗ್ಗೆ ವಿದ್ಯುತ್ ತಂತಿ ತಗುಲಿ ತೀವ್ರ ಶಾಕ್‌ನಿಂದ ಸಾವನ್ನಪ್ಪಿದೆ. ಇದರೊಂದಿಗೆ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದ ಆನೆಗಳ ಪೈಕಿ ಈವರೆಗೆ ಹತ್ತು ಆನೆಗಳು ಸಾವಿಗೀಡಾಗಿವೆ..!

ತನ್ನ ಹೆಸರು ಹಾಗೂ ಮೈಕಟ್ಟಿನಿಂದಲೇ ಜನಾಕರ್ಷಣೆಯಾಗಿದ್ದ ಹಾಗೂ ಜಂಬೂಸವಾರಿ ಮೆರವಣಿಗೆಯ ಕೇಂದ್ರ ಬಿಂದುವಾಗಿದ್ದ ದ್ರೋಣನ ಸಾವಿನೊಂದಿಗೆ ಆರಂಭವಾದ ದಸರಾ ಆನೆಗಳ ಸಾವಿನ ಸರಣಿ ಇಂದಿನ ಅಶ್ವತ್ಥಾಮನವರೆಗೆ ಬಂದು ನಿಂತಿದೆ. ಕೆಲವೇ ವರ್ಷಗಳ ಅಂತರದಲ್ಲಿ ಹತ್ತು ಆನೆಗಳು ನಾನಾ ಕಾರಣಗಳಿಗಾಗಿ ಅಸುನೀಗಿವೆ.

ದ್ರೋಣ: ಕೊಡಗು ಜಿಲ್ಲೆ ಬಳ್ಳೆ ಶಿಬಿರದಲ್ಲಿ ನೆಲೆಯೂರಿದ್ದ ದ್ರೋಣ ಬಂಬೂಸವಾರಿಯ ಪ್ರಮುಖ ಆಕರ್ಷಣೆಯಾಗಿದ್ದ. ವಿಜಯ ದಶಮಿ ದಿನದಂದು 750 ಕೆಜಿ ತೂಕದ ಚಿನ್ನದ ಅಂಬಾರಿ ಮೇಲೆ ವಿರಾಜಮಾನಳಾಗಿದ್ದ ಬೆಟ್ಟದತಾಯಿ ಚಾಮುಂಡಿಯನ್ನು ಅಂಬಾರಿಯಲ್ಲಿ ಹೊತ್ತು ಸಾಗುತ್ತಿದ್ದ ದ್ರೋಣನನ್ನು ಕಣ್ತುಂಬಿ ಕೊಂಡವರು ಲಕ್ಷಾಂತರ ಮಂದಿ. ಅಂತಹ ಗಾಂಭೀರ್ಯದ ದ್ರೋಣ ಕಾಡಿನಲ್ಲಿ ಮೇಯುತ್ತಿದ್ದ ವೇಳೆ ಮಾವುತ ಅಪ್ಪಾಜಿ ಆಲದಮರದ ಸೊಪ್ಪನ್ನು ಕತ್ತರಿಸಿ ಮರದಿಂದ ಕೆಳಕ್ಕೆ ಹಾಕುತ್ತಿದ್ದ ವೇಳೆ ಸೊಪ್ಪಿದ್ದ ಕೊಂಬೆಯೊಂದು ವಿದ್ಯುತ್‌ತಂತಿ ಮೇಲೆ ಬಿದ್ದಿದೆ. ಅದನ್ನು ತನ್ನ ಸೊಂಡಿಲಿನಿಂದ ಎತ್ತಿಕೊಳ್ಳಲು ಹೋದ ದ್ರೋಣನಿಗೆ ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿತ್ತು.

ಗೋಪಾಲಸ್ವಾಮಿ: ಮತಿಗೋಡು ಶಿಬಿರದಲ್ಲಿದ್ದ ಗೋಪಾಲಸ್ವಾಮಿ ಎಂಬ ಆನೆ ಮೇಯಲು ಕಾಡಿಗೆ ತೆರಳಿದ್ದ ವೇಳೆ ಕಾಡಾನೆ ದಾಳಿಗೆ ಸಿಲುಕಿದ್ದು, ಚೇತರಿಸಿಕೊಳ್ಳಲಾಗದೆ ಸಾವಿಗೀಡಾಗಿತ್ತು.

ಬಲರಾಮ: ದಸರಾ ಮಹೋತ್ಸವದ ಮತ್ತೊಂದು ಪ್ರಮುಖ ಆಕರ್ಷಣೆ ಆನೆಯಾಗಿದ್ದ ಬಲರಾಮ ಜಮೀನಿನ ಮಾಲೀಕರೊಬ್ಬರು ಹಾರಿಸಿದ ಗುಂಡಿಗೆ ತೀವ್ರವಾಗಿ ಗಾಯಗೊಂಡಿತ್ತು. ಗಾಯ ಮಾಯುತ್ತಿದ್ದ ವೇಳೆ ಆಲದಮರದ ಕೊಂಬೆ ತಿನ್ನುವ ವೇಳೆ ಗಂಟಲಲ್ಲಿ ಸಿಕ್ಕಿಕೊಂಡು, ಅದರಿಂದ ಸೋಂಕು ಉಂಟಾಗಿ ಸಾವಿಗೀಡಾಯಿತು.

ಅರ್ಜುನ: ಬಳ್ಳೆ ಗಜ ಶಿಬಿರದ ಅರ್ಜುನ ದಸರಾ ಮಹೋತ್ಸವದ ಮತ್ತೊಂದು ಪ್ರಮುಖ ಕೇಂದ್ರ ಬಿಂದುವಾಗಿತ್ತು. ಇದು ಕೂಡ ಕಾಡಾನೆ ದಾಳಿಗೆ ಸಿಲುಕಿ ಸಾವಿಗೀಡಾಗಿತ್ತು.

ದುರ್ಗಾಪರಮೇಶ್ವರಿ: ಕೆ.ಗುಡಿ ಕ್ಯಾಂಪಿನಲ್ಲಿದ್ದ ದುರ್ಗಾಪರಮೇ ಶ್ವರಿ ದಸರಾ ಮಹೋತ್ಸವದ ಆನೆಗಳ ತಂಡದಲ್ಲಿ ಕುಮ್ಕಿ ಆನೆಯ ಸ್ಥಾನ ಪಡೆದಿತ್ತು. ಇದು ವಯೋ ಸಹಜ ಅನಾರೋಗ್ಯದಿಂದ ಕಾಲವಾಯಿತು.

ದ್ರೋಣ: ಮತ್ತಿಗೋಡು ಶಿಬಿರದಲ್ಲಿದ್ದ ದ್ರೋಣ ಹಲವಾರು ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದು, ಶಿಬಿರದಲ್ಲಿ ರುವಾಗಲೇ ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿತ್ತು.

ಶ್ರೀರಾಮ: ಕೆ.ಗುಡಿ ಕ್ಯಾಂಪಿನಲ್ಲಿದ್ದ ಶ್ರೀರಾಮ ಮತ್ತೊಂದು ಸಾಕಾನೆಯಾದ ಗಜೇಂದ್ರನ ದಾಳಿಗೆ ಸಿಲುಕಿ ಚೇತರಿಸಿಕೊಳ್ಳಲಾಗದೆ ಸಾವಿಗೀಡಾಗಿತ್ತು.

ಕಾಂತಿ: ಕೆ. ಗುಡಿ ಕ್ಯಾಂಪಿನಲ್ಲಿದ್ದ ಕಾಂತಿ ಗರ್ಭಿಣಿಯಾದ ನಂತರ ಅವಧಿ ಮುಗಿದರೂ ಮರಿ ಹೊರಬರಲಿಲ್ಲ. ನಂತರ ಮರಿ ಹೊಟ್ಟೆಯೊಳಗೆ ಸಾವನ್ನಪ್ಪಿತ್ತು. ಪ್ರಸವವಾಗದೇ ಗರ್ಭಕೋಶದಲ್ಲಿ ತೀವ್ರ ಸೋಂಕಿಗೆ ಒಳಗಾಗಿ ಕಾಂತಿ ಪ್ರಾಣಬಿಟ್ಟಿತ್ತು.

ಕವಿತಾ: ಕೆ.ಗುಡಿ ಕ್ಯಾಂಪಿನಲ್ಲಿದ್ದ ಕವಿತಾ ಹಲವು ಬಾರಿ ದಸರಾ ಮಹೋತ್ಸವದಲ್ಲಿ ಕುಮ್ಕಿ ಆನೆಯಾಗಿ ಕಾರ್ಯ ನಿರ್ವಹಿಸಿತ್ತು. ಇದೂ ವಯೋ ಸಹಜ ಸಾವಿಗೀಡಾಯಿತು.

ಅಶ್ವತ್ಥಾಮ: ನಾಗರಹೊಳೆ ಉದ್ಯಾನದ ಸಾಕಾನೆ ಶಿಬಿರದಲ್ಲಿ 40 ವರ್ಷ ಪ್ರಾಯದ ಅಶ್ವತ್ಥಾಮ ಮಂಗಳವಾರ ಸಾವನ್ನಪ್ಪಿದೆ. ನಾಗರಹೊಳೆ ಉದ್ಯಾನದ ಭೀಮನಕಟ್ಟೆ ಆನೆ ಕ್ಯಾಂಪ್‌ನಲ್ಲಿದ್ದ ಅಶ್ವತ್ಥಾಮ 2022 ಮತ್ತು 23ರ ದಸರಾದ ತಾಲೀಮಿನಲ್ಲಿ ಭಾಗವಹಿಸಿದ್ದ. ಆದರೆ ಸೋಲಾರ್ ವಿದ್ಯುತ್ ತಂತಿಬೇಲಿ ಶಾಕ್‌ಗೆ ಒಳಗಾಗಿ ಮೃತಪಟ್ಟಿದೆ.

ಪಿತ್ತಕೋಶ ಹಾಗೂ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅಶ್ವತ್ಥಾಮ ಮಂಗಳವಾರ ಬೆಳಗ್ಗೆ ಕ್ಯಾಂಪಿನ ಸುತ್ತ ಅಳವಡಿಸಿದ್ದ ಸೋಲಾರ್ ಬೇಲಿಯ ವಿದ್ಯುತ್ ಶಾಕ್‌ನಿಂದ ಅಸ್ವಸ್ಥಗೊಂಡು ಸಾವನ್ನಪ್ಪಿದ್ದಾನೆ.

2017ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಅಶ್ವತ್ಥಾಮನನ್ನು ಸೆರೆ ಹಿಡಿದು ನಾಗರಹೊಳೆ ಸಾಕಾನೆ ಶಿಬಿರದಲ್ಲಿ ಪಳಗಿಸಲಾಗಿತ್ತು. ಮಾವುತ ಶಿವು, ಕವಾಡಿ ಗಣೇಶನ ಆರೈಕೆಯಲ್ಲಿದ್ದ ಅಶ್ವತ್ಥಾಮ, ಗಾಂಭೀರ್ಯ ಸ್ವಭಾವಕ್ಕೆ ಹೆಸರಾಗಿದ್ದ. ಸರೆಸಿಕ್ಕ ನಾಲ್ಕು ವರ್ಷದಲ್ಲೇ 2021ರ ದಸರೆಗೆ ಕರೆತರಲಾಗಿತ್ತು. 2022ರ ದಸರೆಯಲ್ಲಿ ಪಾಲ್ಗೊಂಡು ಗಮನ ಸೆಳೆದಿತ್ತಾದರೂ ಜಂಬೂಸವಾರಿಯಲ್ಲಿ ಭಾಗವಹಿಸಿರಲಿಲ್ಲ.

ಉಡುಪಿಯಲ್ಲಿ ಧಾರಾಕಾರ ಮಳೆ, ಹಲವೆಡೆ ಹಾನಿ

ಉಡುಪಿ: ಉಡುಪಿ ಜಿಲ್ಲೆಯ ಬ್ರಹ್ಮಾವರ, ಕಾಪು, ಕಾರ್ಕಳ, ಕುಂದಾಪುರ ಭಾಗಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ. ಸೋಮವಾರ ರಾತ್ರಿ ಸುರಿದ ಮಳೆಗೆ ಕುಂದಾಪುರ ತಾಲೂಕಿನ ಬೇಳೂರು ಗ್ರಾಮದ ಶಂಕರ ಅವರ ಮನೆಯ ಗೋಡೆ ಭಾಗಶಃ ಹಾನಿಗೀಡಾಗಿದೆ.

ಪರಿಣಾಮ 45 ಸಾವಿರ ರೂ. ನಷ್ಟ ಸಂಭವಿಸಿದೆ. ಬಸ್ರೂರು ಗ್ರಾಮದ ಚಂದ್ರಕಲಾ ಕಿಣಿ ಅವರ ವಾಸ್ತವ್ಯದ ಮನೆ ಹಾನಿಯಾಗಿ 25 ಸಾವಿರ ರೂ. ನಷ್ಟವುಂಟಾಗಿದೆ. ಕಾವ್ರಡಿ ಗ್ರಾಮದಸಲಿಮಾಬಿ ಅವರ ಮನೆ ಗಾಳಿ ಮಳೆಯಿಂದ ಹಾನಿಯಾಗಿ 25 ಸಾವಿರ ರೂ. ನಷ್ಟವಾಗಿದೆ.

ಕಾರ್ಕಳ ತಾಲೂಕಿನ ಕಡ್ತಲ ಗ್ರಾಮದ ಸುಶೀಲ ನಾಯ್ಕ ಅವರ ಮನೆಗೆ ಸಿಡಿಲು ಬಡಿದು 10 ಸಾವಿರ ರೂ, ಕಾಪು ತಾಲೂಕಿನ ನಡ್ಸಾಲು ಗ್ರಾಮದ ನಜೀರ್‌ಅವರ ಮನೆಯ ಮೇಲೆ ಮರ ಬಿದ್ದು 25 ಸಾವಿರ ರೂ. ನಷ್ಟ ಉಂಟಾಗಿದೆ. ಬ್ರಹ್ಮಾವರ ತಾಲೂಕಿನ ಕುಮ್ರಗೋಡು ಗ್ರಾಮದ ಅಮೃತ ಕಲಾ ರೈ ಅವರ ಮನೆಗೆ ಹಾನಿಯಾಗಿದ್ದು 45 ಸಾವಿರ ರೂ., ಹಿಲಿಯಾಣ ಗ್ರಾಮದ ಶಾಮಿಮ್ ಬಾನು ಮನೆಯ ಮೇಲೆ ಮರ ಬಿದ್ದು 8 ಸಾವಿರ ರೂ., ನಾಲ್ಕೂರು ಗ್ರಾಮದ ಪಾಂಡು ನಾಯ್ಕ ಅವರ ಮನೆಗೆ ಸಿಡಿಲು ಬಡಿದು 40 ಸಾವಿರ ರೂ. ನಷ್ಟ ಅಂದಾಜಿಸಲಾಗಿದೆ.

ಜಿಲ್ಲೆಯಲ್ಲಿ ಸರಾಸರಿ 35. 5 ಮಿ. ಮೀ. ಮಳೆಯಾಗಿದೆ. ಕಾರ್ಕಳ 37. 6, ಕುಂದಾಪುರ 39. 4, ಉಡುಪಿ 35. 2, ಬೈಂದೂರು 19. 5, ಬ್ರಹ್ಮಾವರ 50. 5, ಕಾಪು 51. 9, ಹೆಬ್ರಿ 23. 9 ಮಿ. ಮೀ. ಮಳೆ ದಾಖಲಾಗಿದೆ.

ಮೂವರಿಗೆ ಡಿಸಿಎಂ ಹುದ್ದೆ: ಸಚಿವ ರಾಜಣ್ಣ ಆಗ್ರಹ

ತುಮಕೂರು: ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಬರಲಿದೆ. ಕಾಂಗ್ರೆಸ್ ಸರಕಾರದಲ್ಲಿ ಮೂವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಸಹಕಾರ ಸಚಿವ ರಾಜಣ್ಣ ಅಭಿಪ್ರಾಯ ಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದಲ್ಲಿ ಮುಖ್ಯಮಂತ್ರಿ ಆಗುವುದಿದ್ದರೆ ಬಹಳ ಹಿಂದೆಯೇ ಆಗಬೇಕಿತ್ತು. ಡಿ.ಕೆ.ಶಿವಕುಮಾರ್ ಸಹ ಮುಖ್ಯಮಂತ್ರಿಯಾಗಲು ಕುರ್ಚಿ ಖಾಲಿ ಇಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ತಿಳಿಸಿದರು.

ಲೋಕಸಭೆ ಚುನಾವಣೆ ಮುಗಿಯುವವರೆಗೂ ಉಪಮುಖ್ಯಮಂತ್ರಿ ವಿಚಾರ ಮಾತನಾಡದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಹಾಗಾಗಿ ಸುಮ್ಮನಿದ್ದೆ. ಈಗ ಖರ್ಗೆ ಅವರನ್ನು ಖುದ್ದಾಗಿ ಭೇಟಿಮಾಡಿ ಡಿಸಿಎಂ ವಿಚಾರ ಚರ್ಚಿಸಲಾಗುವುದು ಎಂದು ಸಚಿವ ರಾಜಣ್ಣ

ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಬದಲಾವಣೆ ಮಾಡಿದರೆ ಅಭ್ಯಂತರವಿಲ್ಲ. ಉಸ್ತುವಾರಿ ಮಾಡುವಂತೆ ನಾನು ಕೇಳಿರಲಿಲ್ಲ. ಬೇಕಿದ್ದರೆ ಬದಲಾವಣೆ ಮಾಡಿಕೊಳ್ಳಲಿ. ಆದರೆ ಮೂವರಿಗೆ ಡಿಸಿಎಂ ಹುದ್ದೆ ನೀಡಿದರೆ ಮುಂದೆ ಅನುಕೂಲವಾಗಲಿದೆ ಎಂದರು.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ, ಕಡೂರು.
ಸಂತಾಪಂಕಉಖಾಯೋ/ಸನಿ(ವಾಹನ) 01 /2024–25 ದಿನಾಂಕ: 06.06.2024
ಟೆಂಡರ್ ಅಹ್ವಾನ ಪ್ರಕಟಣೆ
ತಾಲ್ಲೂಕು ಪಂಚಾಯಿತಿ ಕಡೂರು ಇವರಿಂದ 2024–25 ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿ ಕಡೂರು ಕಚೇರಿಯ ಸಹಾಯಕ ನಿರ್ದೇಶಕರು (ಗ್ರಾ ಉ) ರವರ ಅಧಿಕೃತ ಉಪಯೋಗಕ್ಕಾಗಿ ಹಾಗೂ ಇತರೆ ಕಛೇರಿ ಕೆಲಸಗಳಿಗಾಗಿ AC ಹಳದಿ ಬೋರ್ಡ ಹೊಂದಿದ ಸುಸ್ಥಿತಿಯಲ್ಲಿರುವ 2020 ಅಥವಾ ನಂತರದ ಮಾದರಿಯ ಬಾಡಿಗೆ ಆಧಾರದ ಮೇಲಿನ ಪ್ರತ್ಯೇಕ ವಾಹನದ ಅವಶ್ಯಕತೆ ಇದ್ದು, ವಾಹನ ಮಾಲಿಕರಿಂದ/ RTO ನೋಂದಾಯಿತ ಟ್ರಾವೆಲ್ ಏಜೆನ್ಸಿಯವರಿಂದ – ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು 06.06.2024 ರಿಂದ 20.06.2024 ರವರೆಗೆ ಸಂಜೆ 4.00 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ: 21.06.2024 ರಂದು ಸಂಜೆ 4.00ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು Web site: www.kppp.karnataka.gov.in ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯಿತಿ, ಕಡೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/05/24–25/78

ಜಿಗಣಿ ಪುರಸಭಾ ಕಾರ್ಯಾಲಯ
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 105
ದೂರವಾಣಿ ಸಂಖ್ಯೆ : 080-27825780/29760400, Email :- itstaff_ulb_jigani@yahoo.com
ಕ್ರ.ಸಂ.ಜಿ.ಪು.ಕಾ/ಆ.ಶಾ/ಸಿ.ಆರ್/05/2024–25 ದಿನಾಂಕ: 11.06.2024
ಆಸಕ್ತ ಅಭಿವ್ಯಕ್ತ ಪಡಿಸುವಿಕೆ
ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಹಸಿಕಸ, ಒಣಕಸ ಮತ್ತು ನಿಸತ್ವ ತ್ಯಾಜ್ಯವನ್ನು ವಿಲೇವಾರಿ ಮಾಡುವ ಸಂಬಂಧ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಕ್ಕೆ ಸಾಗಿಸಲು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ನೊಂದಾಯಿತ ಏಜೆನ್ಸಿ / ಗುತ್ತಿಗೆದಾರರು, ತಮ್ಮ ಕನಿಷ್ಠ ದರಪಟ್ಟಿಯನ್ನು ಈ ಕಛೇರಿಗೆ **ದಿನಾಂಕ: 25.06.2024 ರಂದು ಸಮಯ ಸಂಜೆ 04:30 ಗಂಟೆಯೊಳಗೆ** ಮುದ್ದಾಂ / ಟಪಾಲಿನಲ್ಲಿ ಸಲ್ಲಿಸತಕ್ಕದ್ದು, ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ನಿಗಧಿತ ದಿನಾಂಕದ ಒಳಗೆ ಸಲ್ಲಿಸಬೇಕು, ಅವಧಿ ಮುಗಿದ ನಂತರ ಬರುವ ದರಪಟ್ಟಿಗಳನ್ನು ಮಾನ್ಯತೆ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿ / ವಿವರಕ್ಕಾಗಿ ಆರೋಗ್ಯ ಶಾಖೆಯನ್ನು **(e-mail:itstaff_ulb_jigani@yahoo.com and Phone No – 080-29760400)** ಸಂಪರ್ಕಿಸತಕ್ಕದ್ದು.
ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ ಜಿಗಣಿ
ವಾ.ಸಾ.ಸಂ.ಇ/ವಾಪ್ರ/262/ಶಿರಡಿ ಸಾಯಿ/2024–25

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ–581302
ದೂ: 08382-229672 ಇ–ಮೇಲ್: eepdkwr4@gmail.com/eepdk@rediffmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2024–25/77 ದಿನಾಂಕ: 10–06–2024
ಮರು ಟೆಂಡರು ಪ್ರಕಟಣೆ
(ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಮಾತ್ರ) (ದ್ವಿ ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು **www.kppp.karnataka.gov.in** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"
ಕಾಮಗಾರಿಯ ಹೆಸರು ಮತ್ತು ಇಂಡೆಂಟ ನಂ: (1) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮಾವಿನಕುರ್ವೆ ಮೀನುಗಾರಿಕೆ ಬಂದರಿನಲ್ಲಿ ಕಾಂಕ್ರೀಟಿಕರಣ ಕಾಮಗಾರಿ. **INDENT NO: IDD/2023-24/BR/WORK_INDENT50/CALL-2)**, ಟೆಂಡರಿಗಿಟ್ಟ ಮೊತ್ತ: ರೂ. **2441496.96** (2) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮಾವಿನಕುರ್ವೆ ಮೀನುಗಾರಿಕೆ ಬಂದರಿನಲ್ಲಿ ಕಾಂಕ್ರೀಟ ವಾಲ್ ನಿರ್ಮಾಣ ಕಾಮಗಾರಿ. **INDENT NO: IDD/2023-24/BR/WORK_INDENT49/CALL-2**, ಟೆಂಡರಿಗಿಟ್ಟ ಮೊತ್ತ: ರೂ. **1109855.19** (3) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮಾವಿನಕುರ್ವೆ ಬಂದರಿನಲ್ಲಿ ಮಹಿಳಾ ವಿಶ್ರಾಂತಿ ಕೊಠಡಿ ನಿರ್ಮಾಣ ಕಾಮಗಾರಿ. **INDENT NO: IDD/2023-24/BD/WORK_INDENT51/CALL-2**, ಟೆಂಡರಿಗಿಟ್ಟ ಮೊತ್ತ: ರೂ. **5868234.14**
ಮೇಲಿನ 3 ಕಾಮಗಾರಿಗಳಿಗೆ ಟೆಂಡರ್ ಬಗ್ಗೆ ಸ್ಪಷ್ಟನೆಗಳಿಗಾಗಿ ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: **18-06-2024 at 16.00 hours**, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: **20-06-2024 at 16.00 hours**
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/28/24-25 Dt.10.06.24

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಚೇರಿ
ಸಾರ್ವಜನಿಕ ಆಸ್ಪತ್ರೆ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
E-mail: gh.srpatna@gmail.com
Phone no: 08236-295435
ಸಂಖ್ಯೆ:ಸಾಆಶ್ರೀ/ಸರಬ/37/2024–25 ದಿನಾಂಕ:10.06.2024
ಇ– ಪ್ರಕ್ಯೂರ್‌ಮೆಂಟ್ ಪ್ರಕಟಣೆ
2024–25 ನೇ ಸಾಲಿನ 31.03.2025 ರವರೆಗೆ ಮಾತ್ರ ಹೊರ ಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ಕಾರ್ಮಿಕರ ಅರ್ಹ ಟೆಂಡರ್ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ ಮತ್ತು ಇತರೆ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಯನ್ನು **www.eproc.karnataka.gov.in** ವೆಬ್‌ಸೈಟ್ ನಿಂದ ಡೌನ್ ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ ಪ್ರಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ಭರ್ತಿಮಾಡಿದ ಟೆಂಡರ್‌ಗಳನ್ನು **ದಿ:01.07.2024 ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ಕಾಣಬಹುದು.
ಸಹಿ/–ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/034/2024–25

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071
ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ
ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **20.06.2024 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	46448160004611	ಮಹೇಶ	13.01
2	46448160004532	ಶಿವರಾಜು ಎಸ್ ಎ	36.9
3	46448160001779	ರಾಜು ಎಂ ಎನ್	53.6
4	46448160001766	ಪದ್ಮರಾಜಪ್ಪ ಎಂ ಸಿ	51.9
5	46448160001753	ನಾರಾಜಯ್ಯ ಎಂ ಸಿ	54.4
6	46448160001575	ಮಾದೇಶ್ ಎಸ್	31.7
7	46448160001562	ಮಾದೇಶ್ ಎಸ್	41.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.	
8	33458730022908	ಶಿವಮ್ಮ ಎಸ್	4.3
9	33458730022858	ಭೈರೇಗೌಡ ಎನ್	5.9
10	33458730022795	ವಿಜಯಲಕ್ಷ್ಮಿ ಅಂಕಯ್ಯ	5.1
11	33458730022772	ರುದ್ರಮೂರ್ತಿ	9.1
12	33458730022743	ಉಮೇಶ ಡಿ	4.9
13	33458730022693	ದರ್ಶನ್ ವಿ	6.4
14	33458160002930	ಶಾರದಮ್ಮ ಎನ್	29.6
15	33458160002927	ಶಾರದಮ್ಮ ಎನ್	45.4
16	33458160002914	ಮಹೇಂದ್ರ ಕುಮಾರ್ ಎಸ್	35.7
17	33458160002802	ಉಮೇಶ	6.8
18	33458160002291	ನಾಗೇಗೌಡ ಸಿ	48.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಜಯರಾಮ್ ಕಾಂಪ್ಲೆಕ್ಸ್, ಹುಣಸೂರು ಮುಖ್ಯರಸ್ತೆ, ಹಿಣಕಲ್ ಬಸ್ ನಿಲ್ದಾಣದ ಎದುರು, ಮೈಸೂರು–570017. ಕರ್ನಾಟಕ	
19	31788730014096	ಮಹಾಲಕ್ಷ್ಮಿ ಮಂಜುನಾಥ	6.39
20	31788730014018	ದುರ್ಗಾ ಪ್ರಸಾದ್ ಹೆಚ್ ಎಸ್	4.1
21	31788730013933	ಫಾತಿಮಾ	5.19
22	31788730013883	ಮಂಜಯ್ಯ ಜೆ	3
23	31788730013284	ಮಧು ಎಂ ಜಿ	8.3
24	31788160009386	ಮಹಾಲಕ್ಷ್ಮಿ ಮಂಜುನಾಥ	15.28
25	31788160009054	ಮಹೇಶ್ ಎಸ್	42.92
26	31788160008255	ಕವಿತ ಹೆಚ್ ಡಿ	10.93
27	31788160005196	ಚಂದನ ಕೆ	4.44
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8–1–501–66, ವಾರ್ಡ್ ನಂ.8–ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ–573201, ಕರ್ನಾಟಕ.	
28	46458730007141	ಚಂದ್ರ ಬಿ ಎಂ	13.55
29	46458730006980	ವೆಂಕಟೇಶ್ ವೆಂಕಟೇಶ್	19.15
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್, ಹೊಸಕೋಟೆ–562114, ಭಾರತ	
30	31838730048819	ಅಂಜಲಿ ಪಿ	6.4
31	31838730044582	ತೌಸಿಫ್ ಎ	8
32	31838160000161	ಸುಮಾ ಕ್ಷೇತ್ರಪಾಲ ಮೂರ್ತಿ	35.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಕರ್ಣಾಟಕ ಬ್ಯಾಂಕ್ ಬ್ಯಾಂಕ್ ಹಿಂಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಸುಬ್ರಮಣ್ಯಪುರ ಅಂಚೆ, ಬೆಂಗಳೂರು–560061.	
33	45358730013913	ಆರ್ ಕೆ ಲೋಕೇಶ್	10
34	45358730013646	ಶಾಂತ ಜಿ	7.5
35	45358160000365	ಕುಮಾರಸ್ವಾಮಿ ಎನ್	16.1
36	45358160000342	ಮಂಜುನಾಥ ಸಾಬಪ್ಪ ಸಣ್ಣೆಳ್ಳಿ	15.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ನೆಲ ಮಹಡಿ, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ಸ್ಯಾಟಲೈಟ್ ಟೌನ್, ಬೆಂಗಳೂರು –560060.	
37	32018730005410	ಸೋಮಪ್ಪ ಸೋಮಪ್ಪ ಮಾದಾರ್	3.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ್, ಬಾಗಲಕೋಟೆ–587101, ದೂ: 08354–225452	
38	30488730028314	ಹಜರತಾಲಿ ಮೊಹಮ್ಮದ್ ಗೌಸ್ ಬಿಡಿವಾಲೆ	8.8
39	30488730028264	ಜುಬೇದಾ ಗಡವಾಲೆ	3.5
40	30488160000348	ಮೌಲಾಸಾಬ್ ನಡಾಫ್	15.08
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಲಿಂಗರೆಡ್ಡಿ ಕಟ್ಟಡ, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ–580002	
41	33648730029821	ರಾಜಲಕ್ಷ್ಮಿ ಎ	8.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 12, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಾಪರೆಡ್ಡಿಪಾಳ್ಯ, ಬೆಂಗಳೂರು–560072.	
42	33638730054375	ಪ್ರಭಾವತಿ ಬಿ	4
43	33638730053310	ತುಳಸಿ ಜಿ	12.8
44	33638730046942	ಗುರು ಎಸ್ ಕೆ	49.65
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 2/1, ಹೊಸ ನಂ. 4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560023.	
45	34018730021761	ಮೇರಿ ಎಸ್	3
46	34018730021748	ಜಮೀಲಾ ಬಾನು	5.4
47	34018730021698	ಜುನೈದ್ ಖಾನ್	15
48	34018730021162	ಮಂಜುಳ ಜಿ	6.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092	
49	31128160001753	ಹರಿಶ್ ಜಿ	42.1
50	31128160001680	ಬಿಂದು ಸಿ	69.16
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.	
51	32568160002815	ಸವಿತ ಆರ್	33.2
52	32568160002676	ಅಭಿಲಾಷ್ ಎಂ	8.9
53	32568160002140	ಗಾಯತ್ರಿ	22
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು–562106.	
54	32508160000517	ರೇಖಾ ಎಂ	29.65
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು, ಕರ್ನಾಟಕ, ಪಿನ್–560068	
55	30948730017421	ಶಿಲ್ಪ ಆರ್	3.5
56	30948730017023	ಗಣೇಶ್ ಆರ್	3.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009.	
57	45398730001607	ರೇಣುಕಾದೇವಿ ಮೂಡಲಗಿ	40.28
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಕ್ ಟವರ್, ಬಿಗ್ ಬಜಾರ್ ಹತ್ತಿರ ಖಾನಾಪುರ ರಸ್ತೆ, ಬೆಳಗಾವಿ–590003.	
58	46658730021080	ಅಜಯ್ ವೈ	13.6
59	46658730021031	ಪ್ರಶಾಂತ್ ಎಸ್ ಎಸ್	12
60	46658730020943	ಅನಂತಮೂರ್ತಿ ಎಸ್ ಎಂ	19.6
61	46658160002254	ಲೋಕೇಶ್ ಕೆ ಎನ್	45.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.	
62	33878730039131	ಮೊಹಮ್ಮದ್ ಯೂಸುಫ್	28.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14–23–33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು–560086, ಬೆಂಗಳೂರು, ಕರ್ನಾಟಕ.	
63	31888730022935	ದಿವ್ಯ ಡಿ	3.5
64	31888730022106	ಎಸ್ ಲೀಲಾ	4.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞನಗರ, #01 ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.	
65	31138730050611	ಅಬ್ದುಲ್ ಶುಕುರ್ ಬಗವಾನ್	6.3
66	31138730050587	ಜಯ ರಜ್‌ಪೂತ್	10
67	31138730050410	ಜವೀದ್ ಅತ್ತರ್	4.6
68	31138730050407	ಅಬೇದ ಶೇಕ್	12.6
69	31138730048698	ಅಯೂಬ್ ಜಮಾದಾರ್	11.8
70	31138730048672	ಶಬ್ಬೀರ್ ಬಗ್ವಾನ್	22.1
71	31138730048238	ಗಣೇಶ್ ಬಾಗಲಕೋಟ್	9.8
72	31138730030238	ಶಿವಾನಂದ್ ಹಿರೇಮಠ್	5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ–586101	
73	45428730015445	ಅಜಯ್ ಸಹಾನೆ	11.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #9, ಎಂಐಜಿ, ಕೆಹೆಚ್‌ಬಿ ಕಾಲೊನಿ, ಸೋಲಾಪುರ ರಸ್ತೆ, ಬಿಜಾಪುರ–586103.	
74	45488730011304	ತಿರಜ ಎಸ್	9.9
75	45488730011228	ಬಸಮ್ಮ	7.7
76	45488730011139	ರಾಜೇಶ್ ನಾಯಕ್	6
77	45488160003982	ಸೈಯ್ಯದ್ ನೂರ್ ಅಹಮದ್	39.8
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101.	
78	33818730025513	ಶಂಕರ್ ಶಂಕರ್	5
79	33818730025401	ಸುದೀಪ ಹೆಚ್	5
80	33818730024128	ರಾಘವೇಂದ್ರ ಕೆ	9.7
81	33818160003450	ರವಿ	15.5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577005	
82	31988730029271	ಗೀತಾ ಬಿ ಕೈಮ್ ಸದ್	12.9
83	31988730028637	ಅನೀಸಾ ಅನೀಸಾ	6.8
84	31988160001431	ಕೆ ಜ್ಯೋತಿ	26.2
85	31988160001421	ಕೆ ಜ್ಯೋತಿ	56.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 143, 1, ಮಹಡಿ, ಮೋಕಾ ರಸ್ತೆ, ಗಾಂಧಿನಗರ ಮಾರುಕಟ್ಟೆ, ಬಳ್ಳಾರಿ–583101.	
86	45458730021201	ಲಕ್ಷ್ಮಿಕಾಂತ್ ಕಾಳೆ	4.9
87	45458730020082	ಮೀನಾಕ್ಷಿ	19.7
88	45458730020030	ಸಂತೋಷ್ ಪ್ರಕಾಶ್ ಭಾರತಿ	3.9
89	45458160001871	ಚಂದ್ರಕಾಂತ್ ಎಸ್	7.6
90	45458160001230	ಚಂದ್ರಕಾಂತ್ ಎಸ್	29.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003.	

ಸ್ಥಳ: ಕರ್ನಾಟಕ
ದಿನಾಂಕ: 12.06.2024
ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಭದ್ರಾವತಿ ವಿಭಾಗ, ಲೋಯರ್ ಹುತ್ತಾ, ಭದ್ರಾವತಿ –577301
Ph:08282-266355 Fax:08282-266647
Email: dcfbdvt@yahoo.in
ಸ:ಎ5:ಸಿಬ್ಬಂದಿ:ಹೊರಗುತ್ತಿಗೆ"E-Tender"–ಸಿ.ಆರ್–8/24–25 Dt: 10.06.2024
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
2024–25 ನೇ ಸಾಲಿಗೆ ಭದ್ರಾವತಿ ವಿಭಾಗ, ಕಛೇರಿ ಹಾಗೂ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ ಈ ಕೆಳಕಂಡ ಅನುಸೂಚಿಯಲ್ಲಿ ಅಗತ್ಯವಿರುವ ವಲಯಗಳಿಗೆ ಗಣಕಯಂತ್ರ ನಿರ್ವಾಹಕರು/ವಾಹನ ಚಾಲಕರು/ಕಾವಲುಗಾರರು/ರಕ್ಷಣಾ ಕ್ಯಾಂಪ್ ಕಾವಲುಗಾರರು/ಕಳ್ಳಬೇಟೆ ತಡೆ ಶಿಭಿರಕ್ಕೆ ಕಾವಲುಗಾರರು ಇತ್ಯಾದಿ ಸೇವೆಯನ್ನು ಒದಗಿಸಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24–06–2024 ರ ಸಂಜೆ 04.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ https:/Kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಅಂದಾಜು ಮೊತ್ತ:–58.69700 ಲಕ್ಷಗಳು.
ಸಹಿ/– (ಎಮ್.ವಿ ಆಶೀಶ್ ರೆಡ್ಡಿ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/38/06/24–25/76

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.
ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ/2024–25/460 ದಿನಾಂಕ : 10–06–2024
ಅವಧಿ ವಿಸ್ತರಣೆ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ **ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 2, 3, 4** ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಬಾಗಲಕೋಟೆ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ್ ಅಹ್ವಾನಿಸಲಾಗಿದೆ.**
ವರ್ಕ ಇಂಡೆಂಟ್ ನಂ. : ಸಾಮಾನ್ಯ : 9117/ಕರೆ–2, 10903, 9983, 9120.
ಪರಿಶಿಷ್ಠ ಜಾತಿ : 10499/ಕರೆ–2.
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 110.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 30.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	12–06–2024 ರಂದು ಸಂಜೆ 5.30 ಘಂಟೆಯವರೆಗೆ
ಬ) ಟೆಂಡರ್ ಸ್ವೀಕರಿಸುವ ದಿನಾಂಕ	:	21–06–2024 ರಂದು ಸಂಜೆ 4.00 ಘಂಟೆಯವರೆಗೆ
ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	24–06–2024 ರಂದು ಸಂಜೆ 4.30 ಘಂಟೆಯವರೆಗೆ
ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	25–06–2024 ರಂದು ಸಂಜೆ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ : **https://kppp.karnataka.gov.in** ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/18/ಮಣಿಪಾಲ್/2024–25

ಪುರಸಭೆ ಕಾರ್ಯಾಲಯ ವಾಡಿ (ಜಂ)
ತಾ. ಚಿತ್ತಾಪೂರ, ಜಿ. ಕಲಬುರಗಿ, www.waditown.mrc.gov.in Email: itstaff _ulb_wadi@yahoo.com
ಸಂ:ಪುಸವಾ/ಎಸ್.ಎಫ್.ಸಿ/ಕು.ನೀ/15ನೇಹಣಕಾಸು/2023–24 ದಿನಾಂಕ: 07.06.2024
ಅಲ್ಪಾವಧಿ ಇ– ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ
ಮುಖ್ಯಾಧಿಕಾರಿಗಳು ಪುರಸಭೆ ವಾಡಿ (ಜಂ) ರವರಿಂದ 2023–24 ನೇ ಸಾಲಿನ ಎಸ್.ಎಫ್.ಸಿ ಅನುದಾನ/ 2023–24 15ನೇ ಹಣಕಾಸು ಅನುದಾನ ಮಿಲಿಯನ್ ಪ್ಲಸ್ ಸಿಟಿ ಅನುದಾನ ಕುಡಿಯುವ ನೀರು ಅನುದಾನದ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ 1999–2000 ರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಟಿ.ಪಿ.) ಯಂತೆ ಅಲ್ಪಾವಧಿ ಟೆಂಡರ ಕರೆಯಲಾಗಿದ್ದು, ಅರ್ಹ ಆಸಕ್ತಿಯುಳ್ಳ ನವೀಕರಿಸಿದ/ನೊಂದಾಯಿತ ಗುತ್ತಿಗೆದಾರರಿಗೆ ಕೆ.ಡಬ್ಲ್ಯೂ.– 01, 02, & 03 ರ ಅನ್ವಯ http//eproc.karnataka.gov.in ಆನ್ ಲೈನ್‌ನಲ್ಲಿ ಸಲ್ಲಿಸಲು ತಿಳಿಸಿದೆ.
1) ಕಾಮಗಾರಿ /ಸರಕು/ಸೇವೆಯ/ವಿವರ: **ಕಾಮಗಾರಿಯ ವಿವರ ಮತ್ತು ಇಂಡೆಂಟ್ ನಂ:** **1.** DMA/2023-24/OW/WORK _ INDENT12765/CALL-3, **2.** DMA/2023-24/OW/WORK _ INDENT12762/CALL -3, **3.** DMA/2023-24/OW/WORK_INDENT10157/ CALL -3, **4.** DMA/2023-24/OW/WORK_INDENT16533/CALL-2. **5.** DMA/2023-24/OW/WORK_INDENT16536/CALL-2. **6.** DMA/2023-24/OW/WORK_INDENT16538/CALL-2. **7.** DMA/2023-24/OW/WORK_INDENT16588/CALL -2. **8.** DMA/2023-24/SE2099/CALL-2. **9.** DMA/2023-24/SE2036/CALL -2. **10.** DMA/2024-25/OW/WORK _INDENT17910. **11.** DMA/2024-25/OW/WORK _INDENT 17952. **12.** DMA/2024-25/OW/WORK _ INDENT17953. **13.** DMA/2024-25/OW/WORK _INDENT17958, **14.** DMA/2024-25/OW/WORK _INDENT17963. **15.** DMA/2024-25/OW/WORK_INDENT17966 **16.** DMA/2024-25/OW/WORK _INDENT17967, **17.** DMA/2024-25/OW/WORK _ INDENT18035. **18.** DMA/2024-25/OW/WORK _INDENT18036. **19.** DMA/2024-25/OW/WORK _INDENT18117, 2) ಕಾಮಗಾರಿ/ಸರಕು/ಸೇವೆಯ / ಅಂದಾಜು ಮೊತ್ತ: **ರೂ. ಕನಿಷ್ಟ 0.55 ಲಕ್ಷ ಗರಿಷ್ಟ 79.5 ಲಕ್ಷ.** 3) ಗುತ್ತಿದಾರರು ಅರ್ಹತೆ: 3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು, 4) ಟೆಂಡರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **22.06.2024 ಸಮಯ ಸಾಯಂಕಾಲ 5.30 ಗಂಟೆವರೆಗೆ,** 5) ಟೆಂಡರ ತೆರೆಯುವ ದಿನಾಂಕ: **24.06.2024 ಸಮಯ ಬೆಳಗ್ಗೆ 11.00 ಗಂಟೆವರೆಗೆ,** 6) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ಇ.ಎಂ.ಡಿ ಮೊತ್ತವು ಟೆಂಡರ ಮೊತ್ತಕ್ಕೆ ಪ್ರತಿಶತ 2.5% ಸಲ್ಲಿಸುವುದು. 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ ದೂರವಾಣಿ ಸಂಖ್ಯೆ: ಮುಖ್ಯಾಧಿಕಾರಿ ಪುರಸಭೆ ವಾಡಿ (ಜಂ), 08476–202030, 8) ಅಂತರ್ಜಲ ತಾಣದ ವಿಳಾಸ: E-Mail : Itstaff_ulb_wadi@yahoo.com, Website:www.waditown.gov.in
ಸಹಿ/– ಮುಖ್ಯಾಧಿಕಾರಿ, ಪುರಸಭೆ ವಾಡಿ (ಜಂ)
ವಾ.ಸಾ.ಸಂ.ಇ/ಕಲಬುರಗಿ/71/ಕೆ.ಎಸ್.ಎಂ.ಸಿ.&ಎ/2024–25

ಜಾತ್ರೆಯಲ್ಲಿ ಭಾಗಿಯಾಗಿದ್ದ 35 ಜನರು ಅಸ್ವಸ್ಥ

ತುಮಕೂರು : ತಾಲೂಕಿನ ಮಿಡಿಗೇಶಿ ಹೋಬಳಿಯ ಚಿನ್ನೇನಹಳ್ಳಿ ಗ್ರಾಮದ 35 ಜನ ವಾಂತಿ, ಬೇಧಿಯಿಂದ ಅಸ್ವಸ್ಥಗೊಂಡಿದ್ದಾರೆ. ಎಂಟು ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದವರ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಡಿಸ್ಚಾರ್ಜ್ ಮಾಡಲಾಗಿದೆ. 300 ಮನೆಗಳಿರುವ ಗ್ರಾಮದಲ್ಲಿ 29 ವರ್ಷದ ಬಳಿಕ ಲಕ್ಕಮ್ಮ-ಕೆಂಪಮ್ಮ ಜಾತ್ರೆ ನಡೆಯುತ್ತಿದೆ. ಭಾನುವಾರದಿಂದ ಆರಂಭವಾದ ಜಾತ್ರೆ 6 ದಿನಗಳ ಕಾಲ ನಡೆಯುತ್ತದೆ. ಭಾನುವಾರ ರಾತ್ರಿ, ದೇವರ ಕಾರ್ಯ ಮುಗಿಸಿದ ಬಳಿಕ ಜನರಲ್ಲಿ ವಾಂತಿ ಬೇಧಿ ಕಾಣಿಸಿಕೊಂಡಿದೆ.

ಇಬ್ಬರನ್ನು ತುಮಕೂರು ಜಿಲ್ಲಾಸ್ಪತ್ರೆ ಮತ್ತು ಉಳಿದವರನ್ನು ಮಧುಗಿರಿ ತಾಲ್ಲೂಕು ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗಂಭೀರವಾಗಿ ಅಸ್ವಸ್ಥಗೊಂಡು ಜಿಲ್ಲಾಸ್ಪತ್ರೆಗೆ ದಾಖಲಾಗಿರುವ ಲಕ್ಷ್ಮಮ್ಮ ಮತ್ತು ಪೆದ್ದಣ್ಣ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಕುಡಿಯುವ ನೀರಿನಿಂದಾಗಿ ವಾಂತಿ-ಬೇಧಿ ಕಾಣಿಸಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಮಿಡಿಗೇಶಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಸಚಿವ ಕೆ.ಎನ್ ರಾಜಣ್ಣ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಅಸ್ವಸ್ಥರ ಆರೋಗ್ಯ ವಿಚಾರಿಸಿದರು.

ಪುನೀತ್ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ: ಭೈರಪ್ಪ

ಮೈಸೂರು: ಪುನೀತ್ ರಾಜಕುಮಾರ್ ಬದುಕಿದ್ದಿದ್ದರೆ ಈ ಸಮಸ್ಯೆ ಇಷ್ಟೊಂದು ದೊಡ್ಡದಾಗುತ್ತಿರಲಿಲ್ಲ ಎಂದು ನಟ ಯುವ ರಾಜಕುಮಾರ್ ಅವರ ಮಾವ ಭೈರಪ್ಪ ಹೇಳಿದ್ದಾರೆ. ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದಂಪತಿ ನಡುವಣ ವೈಮನಸ್ಯ ಕುರಿತಂತೆ ಅಶ್ವಿನಿ ಪುನೀತ್ ಅವರೂ ಕೂಡ ಸಾಕಷ್ಟು ಬಾರಿ ಬುದ್ಧಿ ಹೇಳಿದ್ದಾರೆ. ಯುವನಿಗೆ ಕರೆದು ಮಾತಕತೆ ನಡೆಸಿದ್ದಾರೆ. ಇಷ್ಟಾದರೂ ಯುವ ಬುದ್ಧಿ ಕಲಿಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ನವೆಂಬರ್‌ನಲ್ಲಿ ವಿವಾಹ ವಿಚ್ಛೇದನ ನೋಟಿಸ್ ಕೊಟ್ಟಿದ್ದಾರೆ. ಯುವಗೆ ಸಿನಿಮಾ ಅವಕಾಶ ಸಿಗಬೇಕಾದರೆ ನನ್ನ ಮಗಳೇ ಕಾರಣ. ಸಿನಿಮಾ ನಟನಾದ ನಂತರ ಸಾಕಷ್ಟು ಬದಲಾಗಿದ್ದಾನೆ. ಬೇರೊಬ್ಬರ ಜೊತೆ ಸಂಬಂಧ ಇರುವ ವಿಚಾರ ಗೊತ್ತಿಲ್ಲ ಎಂದರು.

ಡೈವೊರ್ಸ್ ವಿಚಾರದ ಬಗ್ಗೆ ಮಾತನಾಡಲು ಹೋದಾಗ ರಾಘವೇಂದ್ರ ರಾಜಕುಮಾರ್ ಮತ್ತು ಪತ್ನಿ ಮಾತನಾಡಲು ಬಿಡಲಿಲ್ಲ. ನನ್ನ ಮಗಳಿಗೆ ಸಾಕಷ್ಟು ಕಿರುಕುಳ ಕೊಟ್ಟಿದ್ದಾರೆ. ರಾಜ್‌ಕುಮಾರ್ ಅಕಾಡೆಮಿ ಸ್ಥಾಪನೆಯಲ್ಲಿ ನನ್ನ ಮಗಳ ಪಾತ್ರ ದೊಡ್ಡದಿದೆ. ಅವರ ಮನೆಯ ಸಾಕಷ್ಟು ಸಾಲ ತೀರಿಸಿದ್ದಾಳೆ. ಕಾನೂನು ಮೂಲಕ ಸಮಸ್ಯೆ ಬಗೆಹರಿಸುವ ಕೆಲಸ ಮಾಡುತ್ತೇನೆ ಎಂದರು.

ಲವ್‌ಜಿಹಾದ್ ವಿರುದ್ಧ ಶ್ರೀರಾಮ ಸೇನೆ ಹೋರಾಟ

ಧಾರವಾಡ: ಹುಬ್ಬಳ್ಳಿಯ ನೇಹಾ ಹಿರೇಮಠ ಪ್ರಕರಣದ ನಂತರ ಲವ್ ಜಿಹಾದ್ ವಿರುದ್ಧ ಹೋರಾಡಲು ಹಾಗೂ ಪ್ರೀತಿಯ ಬಲೆಗೆ ಸಿಲುಕಿ ಬಳಿಕ ತಮ್ಮ ಜೀವವನ್ನೇ ಕಳೆದುಕೊಳ್ಳುವ ಹೆಣ್ಣು ಮಕ್ಕಳ ರಕ್ಷಣೆಗಾಗಿ ಶ್ರೀ ರಾಮಸೇನೆಯಿಂದ ಮೇ 29ರಂದು ಸಹಾಯವಾಣಿ ಆರಂಭಿಸಲಾಗಿದೆ.

ಸಂಕಷ್ಟದಲ್ಲಿರುವ ಹಿಂದು ಹೆಣ್ಣುಮಕ್ಕಳು ಈ ಸಹಾಯವಾಣಿ ಮೂಲಕ ನಮ್ಮನ್ನು ಸಂಪರ್ಕಿಸಿದರೆ ಅವರ ರಕ್ಷಣೆಗೆ ನಿಲ್ಲುತ್ತೇವೆ ಎಂದು ಶ್ರೀ ರಾಮಸೇನೆ ಹೇಳಿತ್ತು. ಸಹಾಯವಾಣಿ ಆರಂಭವಾಗುತ್ತಿದ್ದಂತೆಯೇ ಎರಡನೇ ವಾರದಲ್ಲಿ ಹಿಂದೂ ಹೆಣ್ಣುಮಕ್ಕಳಿಂದ 600ಕ್ಕೂ ಹೆಚ್ಚು ಫೋನ್ ಕರೆಗಳು ಬಂದಿವೆ ಎಂದು ಶ್ರೀ ರಾಮಸೇನೆ ತಿಳಿಸಿದೆ. ಸಹಾಯವಾಣಿ ಆರಂಭವಾದಾಗಿನಿಂದ ಅನೇಕ ಹೆಣ್ಣುಮಕ್ಕಳಿಗೆ ತಮ್ಮ ದುಃಖ, ನೋವು ಹೇಳಿಕೊಳ್ಳಲು ರಕ್ಷಣೆ ಪಡೆಯಲು ಸಹಾಯ ದೊರೆಯುತ್ತದೆ ಎಂಬ ನಂಬಿಕೆಯಿಂದ ಅನೇಕರು ಕರೆ ತಮ್ಮ ಪರಿಸ್ಥಿತಿಯನ್ನು ಹೇಳಿಕೊಂಡಿದ್ದಾರೆ.

ನೊಂದವರ ನೆರವಿಗೆ ಸಿದ್ಧ : 600 ಫೋನ್ ಕರೆಗಳನ್ನು ಪರಿಶೀಲಿಸಿದಾಗ ಅದರಲ್ಲಿ 100ಕ್ಕೂ ಮಹಿಳೆಯರು ಈಗಾಗಲೇ ಲವ್ ಜಿಹಾದ್ ಸಂಕಷ್ಟಕ್ಕೆ ಸಿಲುಕಿದವರಾಗಿದ್ದು, ಅದರಲ್ಲಿ ಬಹುತೇಕರದ್ದು ವಿಚಿತ್ರ ಹಾಗೂ ಯಾರ ಮುಂದೆಯೂ ಹೇಳಿಕೊಳ್ಳಲಾಗದ ಘಟನೆಗಳಿವೆ. ಈ ಮಹಿಳೆಯರಿಗೆ ಎಲ್ಲ ರೀತಿಯ ನೆರವು ನೀಡುವುದಕ್ಕಾಗಿಯೇ ಶ್ರೀ ರಾಮ ಸೇನೆ ವಿಶೇಷ ತಂಡ ಈಗ ಸಜ್ಜಾಗುತ್ತಿದೆ.

ಕುಖ್ಯಾತ ರೌಡಿ ವಿಶಾಲ್ ಸಿಂಗ್ ಬಂಧನ

ಬೆಳಗಾವಿ: ಕೊಲೆ, ಕೊಲೆ ಯತ್ನ, ಹಣಕ್ಕಾಗಿ ಅಪಹರಣ ಮತ್ತು ಇತರ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಕುಖ್ಯಾತ ರೌಡಿ ವಿಶಾಲ್ ಸಿಂಗ್ ಚೌಹಾಣ್‌ನನ್ನು ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿ, ಕಲಬುರಗಿ ಜೈಲಿಗೆ ಅಟ್ಟಿದ್ದಾರೆ.

ಹೈಕೋರ್ಟ್‌ನ ತ್ರಿಸದಸ್ಯ ಪೀಠ ಗೂಂಡಾ ಕಾಯ್ದೆಯಡಿ ಬಂಧನ ದೃಢಪಡಿಸಿದ ಮೊದಲ ಪ್ರಕರಣ ಇದಾಗಿದೆ.

ಚಿಕ್ಕನಂದಿಹಳ್ಳಿ ಮೂಲದ ವಿಶಾಲ್ ಸಿಂಗ್ ವಿರುದ್ಧ ಐದು ಕೊಲೆಗೆ ಯತ್ನ, ಎರಡು ಗಡಿಪಾರು ಆದೇಶ ಉಲ್ಲಂಘನೆ, ತಲಾ ಒಂದು ಕೊಲೆ, ಶಸ್ತ್ರಾಸ್ತ್ರ ಕಾಯ್ದೆ, ಸುಲಿಗೆ ಪ್ರಕರಣ ದಾಖಲಾಗಿವೆ. ಮಹಾ ರಾಷ್ಟ್ರದಲ್ಲಿ ಕೊಲೆಗೆ ಯತ್ನ ಮತ್ತು ಆಯುಧ ಕಾಯ್ದೆ ಪ್ರಕರಣ ಮತ್ತು ಗೋವಾದಲ್ಲಿ ಕಳ್ಳತನ ಸೇರಿದಂತೆ 14 ಪ್ರಕರಣ ದಾಖಲಾಗಿವೆ.

ಈ ಪ್ರಕರಣಗಳಲ್ಲಿ ಭಾಗಿಯಾಗಿದ್ದ ವಿಶಾಲ್ ಸಿಂಗ್ ಗಡಿಪಾರು ಆದೇಶ ಲೆಕ್ಕಿಸದೆ, ಬೆಳಗಾವಿ ನಗರ ಪ್ರವೇಶಿಸಿದ್ದ. ಹಣಕ್ಕಾಗಿ ಅಪಹರಣ ಮಾಡಿದ್ದ. ಈತನ ವಿರುದ್ಧ ನ್ಯಾಯಾಲಯಗಳು ಮೂರು ಬಾರಿ ಬಂಧನ ವಾರಂಟ್ ಹೊರಡಿಸಿದ್ದವು. ಮೂರು ರಾಜ್ಯಗಳ ಪೊಲೀಸರ ಕೈಗೆ ಸಿಗದೆ ಓಡಾಡುತ್ತಿದ್ದ ಚೌಹಾಣ್, ತನ್ನ ವ್ಯವಹಾರಗಳಿಗೆ ಕೇವಲ ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ ಆ್ಯಪ್‌ಗಳನ್ನು ಬಳಸುತ್ತಿದ್ದ.

ಸಮಾಚಾರ ಸಣ್ಣದಲ್ಲ

ರಷ್ಯಾ ಪ್ರಜೆಯ ಅಂತ್ಯಸಂಸ್ಕಾರ

ಉಡುಪಿ: ಮೃತಪಟ್ಟು 35 ದಿನಗಳ ಬಳಿಕ ರಷ್ಯಾದ ಪ್ರಜೆಯೊಬ್ಬರ ಅಂತ್ಯ ಸಂಸ್ಕಾರವು ಉಡುಪಿ ಸಿಎಸ್‌ಐ ಚರ್ಚ್‌ನಲ್ಲಿ ನಡೆದ ಹೃದಯ ವಿದ್ರಾವಕ ಸಂಗತಿ ಇದೀಗ ಬೆಳಕಿಗೆ ಬಂದಿದೆ. 2009ರಲ್ಲಿ ಉಡುಪಿಯ ನಿವಾಸಿ ದಿ. ಕುಲಿನ್ ಮಹೇಂದ್ರ ಷಾ ಅವರೊಂದಿಗೆ ರಷ್ಯಾದ ಖಜಕಿಸ್ಥಾನದ ಸುಲ್ತಾನೆಟ್ ಬೆಕ್ಟೆನೋವಾ ಅವರು ಮಣಿಪಾಲದ ಸಿಎಸ್‌ಐ ಚರ್ಚಿನಲ್ಲಿ ವಿವಾಹವಾಗಿದ್ದರು. ಉಡುಪಿಯ ಪುತ್ತೂರಿನಲ್ಲಿ ಬಾಡಿಗೆ ಮನೆಮಾಡಿಕೊಂಡು ವಾಸವಾಗಿದ್ದರು. ಕಳೆದ ಮೇ 7 ರಂದು ಸುಲ್ತಾನೆಟ್ ಬೆಕ್ಟೆನೋವಾ (51) ಸ್ನಾನದ ಕೊಠಡಿಯಲ್ಲಿ ಕುಸಿದು ಬಿದ್ದು ಸಾವಪ್ಪಿದರು. ಈಕೆಯ ಮಗ ರಷ್ಯಾದಲ್ಲಿದ್ದು ತಾಯಿಯ ಅಂತಿಮ ಸಂಸ್ಕಾರ ನಡೆಸಲು ಭಾರತಕ್ಕೆ ಬರಲು ಅಸಹಾಯಕತೆ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಮಾಜ ಸೇವಕ ನಿತ್ಯಾನಂದ ಒಳಕಾಡು ಅವರು ಮೃತರ ಅಂತಿಮ ಸಂಸ್ಕಾರ ನಡೆಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಅವರ ಮಾರ್ಗದರ್ಶನದಂತೆ ನಗರ ಪೊಲೀಸ್ ಠಾಣೆಯ ಎಸ್‌ಐ ಪುನೀತ್ ಕುಮಾರ್, ಸುಷ್ಮಾ ಹಾಗೂ ಠಾಣೆಯ ಸಿಬ್ಬಂದಿ ಕಾನೂನಿನಂತೆ ಅಂತಿಮ ಸಂಸ್ಕಾರ ಪ್ರಕ್ರಿಯೆ ಮುಗಿಸಿದರು.

ಕಬ್ಬಿನ ಬಾಕಿ ಹಣ ಬಡ್ಡಿ ಸಮೇತ ಪಾವತಿಸಿ

ಬೆಳಗಾವಿ: ಪ್ರಸಕ್ತ ಸಾಲಿನ ಕಬ್ಬಿನ ಎಫ್‌ಆರ್‌ಪಿ ದರ 10.25 ಇಳುವರಿಗೆ 3400 ನ್ಯಾಯ ಸಮ್ಮತವಲ್ಲ. ಕಬ್ಬಿನ ಬಾಕಿ ಬಡ್ಡಿ ಹಣ ಸಮೇತ ರೈತರಿಗೆ ಕೂಡಲೇ ಪಾವತಿಸಲು ಕ್ರಮಕೈಗೊಳ್ಳಬೇಕು ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ ಒತ್ತಾಯಿಸಿದ್ದಾರೆ. ಬರಗಾಲದಿಂದ ಕಬ್ಬಿನ ಇಳುವರಿ ಶೇ 30ರಷ್ಟು ಕಡಿಮೆಯಾಗಿರುವಾಗಲೇ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿ ಕಬ್ಬಿನ ಎಫ್‌ಆರ್‌ಪಿ ಬೆಲೆ ನಿಗದಿ ಮಾಡಿರುವುದು ನ್ಯಾಯ ಸಮ್ಮತವಲ್ಲ. ಸಕ್ಕರೆ ಕಾರ್ಖಾನೆಗಳು ಇಳುವರಿ ಕಡಿಮೆ ತೋರಿಸುವ ಕಾರಣ ಹೆಚ್ಚಿನ ಬೆಲೆ ಸಿಗಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರ ರೈತರ ಗಾಯದ ಮೇಲೆ ಬರೆ ಎಳೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಲುಷಿತ ನೀರು ಸೇವನೆ ಶಂಕೆ: ಐವರು ಅಸ್ವಸ್ಥ

ಹುಣಸಗಿ (ಯಾದಗಿರಿ ಜಿಲ್ಲೆ): ತೆರದಬಾವಿ ನೀರು ಸೇವಿಸಿದ ಪರಿಣಾಮ ಕಳೆದ ಮೂರು ದಿನಗಳಿಂದ ಕೆಂಭಾವಿ ಗ್ರಾಮದ ಐವರು ವಾಂತಿ -ಬೇಧಿಯಿಂದ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗುತ್ತಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಅಗ್ನಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಂಭಾವಿಯ ತೆರೆದಬಾವಿಯ ನೀರು ಸೇವಿಸಿದ 5ಜನರಲ್ಲಿ ವಾಂತಿ -ಬೇಧಿಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕಲುಷಿತ ನೀರು ಸೇವನೆ ಶಂಕೆ ವ್ಯಕ್ತವಾಗಿದೆ. ಅಸ್ವಸ್ಥರು ನೆರೆಯ ವಿಜಯಪುರ ಜಿಲ್ಲೆಯ ತಾಳಿಕೋಟೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾ.ಪಂ ಅಧಿಕಾರಿಗಳು ಮತ್ತು ವೈದ್ಯರ ತಂಡ ಭೇಟಿ ನೀಡಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದಾರೆ. ಗ್ರಾಮದಲ್ಲಿರುವ ಎರಡು ಬಾವಿಗಳ ನೀರನ್ನು ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಆರೋಗ್ಯಾಧಿಕಾರಿ ಡಾ. ರಾಜಾ ವೆಂಕಟಪ್ಪ ನಾಯಕ ತಿಳಿಸಿದ್ದಾರೆ.

ವಿದ್ಯುತ್ ಕಂಬಕ್ಕೆ ಡಿಕ್ಕಿ: ಬೈಕ್ ಸವಾರ ಸಾವು

ಗುಂಡ್ಲುಪೇಟೆ: ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರನೋರ್ವ ಮೃತಪಟ್ಟಿರುವ ಘಟನೆ ತಾಲೂಕಿನ ಮಲ್ಲಯ್ಯನಪುರ ಗೇಟ್ ಬಳಿ ನಡೆದಿದೆ. ತಾಲೂಕಿನ ಕೂತನೂರು ಗ್ರಾಮದ ಕೃಷ್ಣ(22) ಮೃತ ವ್ಯಕ್ತಿ. ಕೂತನೂರು ಕಡೆಯಿಂದ ಗುಂಡ್ಲುಪೇಟೆಗೆ ಬರುವಾಗ ಅಪಘಾತವಾಗಿದೆ.

{ಸಿ.ಟಿ.ರವಿ} ಎಂಎಲ್‌ಸಿ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಕೊಲೆಗಳು ಹೆಚ್ಚುತ್ತಿದ್ದು, ಜನ ಸಾಮಾನ್ಯರಿಗಿಂತ ಗೂಂಡಾಗಳು ನಿರ್ಭಯವಾಗಿದ್ದು ಜನರ ನೆಮ್ಮದಿಗೆ ಕೊಳ್ಳಿ ಇಡುವ ಕೆಲಸ ಸರಕಾರ ಮಾಡುತ್ತಿದೆ.

ರಾಜ್ಯದಲ್ಲಿ ನಿಲ್ಲದ ವರುಣನ ಆರ್ಭಟ | ಘಟಪ್ರಭಾ ನದಿಗೆ ಒಳಹರಿವು ಹೆಚ್ಚಳ

5 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಮುಂಗಾರು ಮಳೆಯ ಅಬ್ಬರ ಮುಂದುವರಿದಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಭೋರ್ಗರೆಯುತ್ತಿದ್ದು, ಇನ್ನಷ್ಟು ಮಳೆಯಾಗುವ ಸೂಚನೆಯಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಹವಾಮಾನ ಇಲಾಖೆಯು ಐದು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ ಮಾಡಿದೆ.

ಮಂಗಳವಾರ ಕರಾವಳಿ ಜಿಲ್ಲೆಯಾದ ಉತ್ತರ ಕನ್ನಡ, ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಿಗೆ ಆರೇಂಜ್ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಕನ್ನಡ, ಉಡುಪಿ, ಬಾಗಲಕೋಟೆ, ಕಲಬುರಗಿ, ರಾಯಚೂರು, ವಿಜಯಪುರ, ಯಾದಗಿರಿ, ಚಿಕ್ಕಮ ಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಂಗಳವಾರ ಗುಡುಗು ಸಹಿತ ಮಳೆಯಾಗಿದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಬೆಳಗಾವಿ, ಗದಗ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಚದುರಿದಂತೆ ಅಲ್ಲಲ್ಲಿ ಮಳೆಯಾಗಲಿದೆ. ಈ ಜಿಲ್ಲೆಗಳಲ್ಲಿ ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಮೈಸೂರು, ಹಾಸನ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಹಗುರ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಲಘುವಾಗಿ ಮಳೆಬೀಳುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಹಗುರದಿಂದ ಸಾಧಾರಣ ಮಳೆಯಾಗುವ ಸಂಭವವಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 30 ಡಿಗ್ರಿ ಮತ್ತು 21 ಡಿಗ್ರಿ ದಾಖಲಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಹೊನ್ನಾವರದಲ್ಲಿ ಸೋಮವಾರ ಬೆಳಗ್ಗೆಯಿಂದ ಅತಿ ಹೆಚ್ಚು ಅಂದರೆ 31.4 ಮಿ.ಮೀ ಮಳೆಯಾಗಿದೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ 25.8 ಮಿ.ಮೀ , ಶಿರಾಲಿಯಲ್ಲಿ 16.8 ಮಿ.ಮೀ , ಆಗುಂಬೆಯಲ್ಲಿ 14.5 ಮಿ.ಮೀ , ಕಲಬುರಗಿಯಲ್ಲಿ 11 ಮಿ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ರಬಕವಿಬನಹಟ್ಟಿ -ಅಥಣಿ ತಾಲೂಕಿಗೆ ಸಂಪರ್ಕ ಕಲ್ಪಿಸುವ ಮಹಿಷವಾಡಗಿ ಸೇತುವೆ....

ಮಹಿಷವಾಡಗಿ ಸೇತುವೆ ಜಲಾವೃತ: ಸಂಪರ್ಕ ಕಡಿತ

ಬಾಗಲಕೋಟೆ: ಕೃಷ್ಣಾ ನದಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ರಬಕವಿ ಬನಹಟ್ಟಿ ಹಾಗೂ ಅಥಣಿ ತಾಲೂಕಿನ ನಗರ ಮತ್ತು ಗ್ರಾಮೀಣ ಭಾಗದ ಜನರಿಗೆ ಸಂಪರ್ಕ ಕಲ್ಪಿಸುವ ಮಹಿಷವಾಡಗಿ ಸೇತುವೆ ಜಲಾವೃತಗೊಂಡಿದೆ. ಇದರಿಂದಾಗಿ ಎರಡು ತಾಲೂಕಿನ ಜನರಿಗೆ ಸಂಪರ್ಕ ಕಡಿತಗೊಂಡಿದೆ. ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶ ಗಳಾದ ಕೊಯ್ನಾ, ನವುಜಾ ಮತ್ತು ಮಹಾಬಲೇಶ್ವರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆ ಸುರಿಯುತ್ತಿದ್ದು ಮತ್ತು ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಕೃಷ್ಣಾ ನದಿಗೆ 20 ಸಾವಿರ ಕ್ಯೂಸೆಕ್ ಒಳಹರಿವು ಇರುವುದರಿಂದ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಸೇತುವೆ ಜಲಾವೃತವಾಗಿರುವುದರಿಂದ ಕೇವಲ ಐದಾರು ಕಿ.ಮೀ ದೂರದಲ್ಲಿರುವ ಗ್ರಾಮಗಳ ಜನರು ಈಗ ಇಪ್ಪತ್ತೈದು ಕಿ.ಮೀ ದೂರ ಸುತ್ತ ಹಾಕಿ ಬರಬೇಕಾಗಿದೆ. ಬೇಗನೆ ಬೋಟ್ ಸೇವೆಯನ್ನು ಆರಂಭಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಮಳೆ; ಘಟಪ್ರಭಾ ನದಿಗೆ ಒಳಹರಿವು ಹೆಚ್ಚಳ

ಮಹಾರಾಷ್ಟ್ರದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆಯ ಜಲಮೂಲಗಳು ಭರ್ತಿಯಾಗಿವೆ. ಇದರಿಂದಾಗಿ ಘಟಪ್ರಭಾ ನದಿಯಲ್ಲಿ ಒಳಹರಿವು ಹೆಚ್ಚಿದ್ದು, ಮುಧೋಳ ತಾಲೂಕಿನ ಜಾಲಿಬೇರಿ, ಮಿರ್ಜಿ ಗ್ರಾಮದ ಹಳೇ ಬ್ಯಾರೇಜ್ ಜಲಾವೃತವಾಗಿದೆ. ಅಲ್ಲದೆ ,ಮುಧೋಳ ಹೊರವಲಯದ ಯಾದವಾಡ ಹಳೇ ಸೇತುವೆ ಜಲಾವೃತ ಹಂತಕ್ಕೆ ತಲುಪಿದೆ. ಇನ್ನು ಮುಂದಿನ 24 ಗಂಟೆಗಳಲ್ಲಿ ದಕ್ಷಿಣ ಹಾಗೂ ಮಧ್ಯಮಹಾರಾಷ್ಟ್ರ, ಮರಾಠವಾಡ, ಕೊಂಕಣ, ಹಾಗೂ ಕರ್ನಾಟಕದ ಕರಾವಳಿ, ಉತ್ತರ ಒಳನಾಡಿನ ಕೆಲವು ಭಾಗಗಳಲ್ಲಿ ಅತಿ ಹೆಚ್ಚು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ವಾಲ್ಮೀಕಿ ನಿಗಮ ಹಗರಣದಿಂದ ರಾಜ್ಯದಲ್ಲಿ ದಿಗ್ಭ್ರಮೆ

ರಾಯಚೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣ ದಿಗ್ಭ್ರಮೆ ಉಂಟುಮಾಡಿದೆ ಎಂದು ವಿಧಾನ ಪರಿಷತ್ ನೂತನ ಕಾಂಗ್ರೆಸ್ ಸದಸ್ಯ ಎ.ವಸಂತಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಪರವಾಗಿ ಕೆಲಸ ಮಾಡಲು ಮೀಸಲಿಟ್ಟ ಹಣವನ್ನು ಅಧಿಕಾರಿಗಳು ಲೂಟಿಮಾಡಿ ಬೇರೆ ಖಾತೆಗಳಿಗೆ ವರ್ಗಾಯಿಸಿದ್ದಾರೆ. ಇಷ್ಟು ದೊಡ್ಡ ಹಗರಣವನ್ನು ಯಾರೂ ಒಪ್ಪುವುದಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು ಎಂದರು. ಈಗಾಗಲೇ ರಾಜ್ಯ ಸರ್ಕಾರ ತನಿಖೆಯನ್ನು ಎಸ್‌ಐಟಿಗೆ ವಹಿಸಿದೆ. 10 ಕೋಟಿಗೂ ಅಧಿಕ ಹಣ ವರ್ಗಾವಣೆ ಆಗಿದ್ದರೆ ಸಿಬಿಐ ತನಿಖೆ ಆಗಬೇಕು ಎಂಬ ನಿಯಮವಿದೆ. ಹೀಗಾಗಿ ಪ್ರಕರಣ ಸಿಬಿಐ ತನಿಖೆಗೆ ಒಳಪಟ್ಟಿದೆ. ಎಸ್‌ಐಟಿ ಮತ್ತು ಸಿಬಿಐ ಆಳವಾಗಿ ತನಿಖೆ ನಡೆಸುತ್ತಿವೆ. ಈಗಾಗಲೇ 8 ಜನರನ್ನು ಬಂಧಿಸಲಾಗಿದೆ ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಅವಕಾಶಗಳಿಂದ ವಂಚಿತವಾಗುತ್ತಿದ್ದಾರೆ ಎನ್ನುವ ಮಾತುಗಳಿದ್ದವು. ಇದನ್ನು ಮನಗಂಡ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್, ಸಿಎಂ ಸಿದ್ದರಾಮಯ್ಯನವರು ಈ ಭಾಗದ ತಳಮಟ್ಟದಿಂದ ಬೆಳೆದು ಬಂದು ಕಾರ್ಯಕರ್ತರನ್ನು ಗುರುತಿಸಿ ನನಗೆ ಸ್ಥಾನ ನೀಡಿದ್ದಾರೆ ಎಂದು ಹೇಳಿದರು.

ನಮ್ಮ ಭಾಗದ ನಾಯಕರ ಪಾತ್ರವಿಲ್ಲ

ತನಿಖೆ ನಡೆಯುತ್ತಿರುವಾಗ ಊಹಾಪೋಹದ ಹೆಸರು ಹೇಳುವುದು ಸರಿಯಲ್ಲ. ಇನ್ನು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಮ್ಮ ಭಾಗದ ನಾಯಕರ ಪಾತ್ರವಿಲ್ಲ. ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಸಚಿವ ಎನ್.ಎಸ್.ಬೋಸರಾಜು ಇವರು ಯಾರೂ ಕೂಡ ಈ ಹಗರಣದಲ್ಲಿ ಭಾಗಿಯಾಗಿಲ್ಲ. ವಿರೋಧ ಪಕ್ಷದವರು ಟೀಕೆ ಮಾಡಬೇಕು ಎಂಬ ಕಾರಣದಿಂದ ಟೀಕಿಸುತ್ತಿದ್ದಾರೆ ಎಂದು ವಸಂತಕುಮಾರ್ ಹೇಳಿದರು.

ಆಂಧ್ರಪ್ರದೇಶದ ಮಹಿಳೆ ಸಮುದ್ರಪಾಲು

ಉಳ್ಳಾಲ: ಇಲ್ಲಿನ ಸಮುದ್ರ ತೀರಕ್ಕೆ ವಿಹಾರಕ್ಕೆ ಬಂದಿದ್ದ ಆಂಧ್ರಪ್ರದೇಶ ಮೂಲದ ನಾಲ್ವರು ಮಹಿಳೆಯರಲ್ಲಿ ಒಬ್ಬಾಕೆ ಸಮುದ್ರಪಾಲಾಗಿದ್ದು, ಉಳಿದ ಮೂವರನ್ನು ಸ್ಥಳೀಯರು ರಕ್ಷಿಸಿದ್ದಾರೆ. ಆಂಧ್ರ ಪ್ರದೇಶದ ಕೊಂಡಾಪುರದ ಸಿರಿಲಿಂಗಪಲ್ಲಿ ನಿವಾಸಿ ಪಿ.ಎಲ್.ಪ್ರಸನ್ನ ಎಂಬುವರ ಪತ್ನಿ ಪರಿಮೀ ರತ್ನ ಕುಮಾರಿ (57) ಮೃತಪಟ್ಟವರು.

ಸೋಮವಾರ ಸಂಜೆ ಉಳ್ಳಾಲ ಬೀಚ್ ಸಮುದ್ರದಲ್ಲಿ ವಿಹರಿಸುತ್ತಿದ್ದ ಸಂದರ್ಭ ಬೃಹತ್ ಗಾತ್ರದ ಅಲೆಯೊಂದು ಅಪ್ಪಳಿಸಿದ ಪರಿಣಾಮ ನಾಲ್ವರು ಮಹಿಳೆಯರು ಸಮುದ್ರಪಾಲಾಗಿದ್ದರು. ಸ್ಥಳೀಯರು ತಕ್ಷಣ ನಾಲ್ವರನ್ನು ಸಮುದ್ರದಿಂದ ಹೊರಗೆಳೆದು ರಕ್ಷಿಸಿದ್ದಾರೆ. ಈ ಪೈಕಿ ಪರಿಮೀ ರತ್ನ ಕುಮಾರಿ ಪ್ರಜ್ಞೆ ತಪ್ಪಿದ್ದ ಹಿನ್ನೆಲೆಯಲ್ಲಿ ದೇರಳಕಟ್ಟೆ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಅವರು ಸಾವನ್ನಪ್ಪಿದ್ದಾರೆ.

ಕೊಪ್ಪಳದಲ್ಲಿ ಸಾಂಕ್ರಾಮಿಕ ರೋಗಗಳ ಭೀತಿ

ಗ್ರಾಮೀಣರಲ್ಲಿ ಹೆಚ್ಚುತ್ತಿದೆ ಡೆಂಗ್ಯೂ, ಚಿಕುನ್‌ಗುನ್ಯಾ: ಆತಂಕದ ಪರಿಸ್ಥಿತಿ

ಕೊಪ್ಪಳ: ಕಳೆದ ಕೆಲ ದಿನಗಳಿಂದ ಜಿಲ್ಲೆಯಲ್ಲಿ ಮಳೆಯಾಗುತ್ತಿದ್ದು, ಬೇಸಿಗೆ ನಾಡು ಕೊಪ್ಪಳ ಇದೀಗ ಮಲೆನಾಡಿನಂತಾಗಿದೆ. ಬಿಸಿಲಿಗೆ ಬಸವಳಿದಿದ್ದ ಜನರಿಗೆ ಮಳೆ ತಂಪೆರೆಯುತ್ತಿದೆ. ಆದರೆ, ಮಳೆಗಾಲ ಆರಂಭ ಆಗಿರುವುದು ಜನರ ಸಂತಸ ಹೆಚ್ಚಿಸಿರುವಷ್ಟೇ ಆತಂಕವನ್ನೂ ಹೆಚ್ಚಿಸುತ್ತಿದೆ. ಕಾರಣ ಹೆಚ್ಚಾಗುತ್ತಿರುವ ಸಾಂಕ್ರಾಮಿಕ ರೋಗಗಳು. ಮಳೆಗಾಲದಲ್ಲಿ ಸೊಳ್ಳೆಗಳ ಸಂಖ್ಯೆ ಹೆಚ್ಚಾಗುವುದರಿಂದ ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾ ಹೆಚ್ಚಾಗುವ ಆತಂಕ ಜನರಿಗೆ ಮತ್ತು ಆರೋಗ್ಯ ಇಲಾಖೆಯನ್ನು ಕಾಡುತ್ತಿದೆ.

ಇನ್ನು ಮಳೆಗಾಲ ಆರಂಭವಾಗುತ್ತಿದ್ದಂತೆ ಜ್ವರ, ನೆಗಡಿ, ಕೆಮ್ಮಿನಿಂದ ಬಳಲುವವರ ಸಂಖ್ಯೆ ಹೆಚ್ಚಾಗಿದ್ದು, ಇದೀಗ ಆಸ್ಪತ್ರೆಗಳು ರೋಗಿಗಳಿಂದ ತುಂಬುತ್ತಿವೆ. ಪ್ರತಿನಿತ್ಯ ಸಾವಿರಾರು ಜನರು ಜಿಲ್ಲಾ ಆಸ್ಪತ್ರೆ ಹಾಗೂ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಒಂದೆಡೆ ಕೊಪ್ಪಳ ಜಿಲ್ಲೆಯಲ್ಲಿ ಚಿಕುನ್‌ಗುನ್ಯಾ, ಡೆಂಗ್ಯೂ ಜ್ವರದ ಭೀತಿ ಹೆಚ್ಚಾಗುತ್ತಿದ್ದರೆ, ಇನ್ನೊಂದೆಡೆ ಕಲುಷಿತ ನೀರಿನ ಸಮಸ್ಯೆ ಆತಂಕಕ್ಕೆ ಕಾರಣವಾಗಿದೆ. ಈ ಹಿಂದಿನ ವರ್ಷದಲ್ಲಿ ಚರಂಡಿ ನೀರು ಕುಡಿಯುವ ನೀರಿನ ಜೊತೆ ಸೇರಿದ್ದರಿಂದ ಜಿಲ್ಲೆಯ ಅನೇಕ ಕಡೆ ಕೆಲ ಜನರು ಪ್ರಾಣ ಕಳೆದುಕೊಂಡಿದ್ದರು.

ಈ ಬಾರಿ ಕೂಡ ಗ್ರಾಮೀಣ ಭಾಗದಲ್ಲಿ ಕಲುಷಿತ ನೀರಿನ ಆತಂಕ ಕಾಡುತ್ತಿದೆ. ಹೀಗಾಗಿ ನೀರನ್ನು ಪರೀಕ್ಷೆ ಮಾಡುವುದು, ನೀರು ಎಲ್ಲೆಡೆ ನಿಲ್ಲದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳು ಜನಜಾಗೃತಿ ಮೂಡಿಸುತ್ತಿದ್ದಾರೆ. ಸೊಳ್ಳೆಗಳ ಉತ್ಪತ್ತಿಯಾಗುವ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಹೊಣೆ ಸಾರ್ವಜನಿಕರದ್ದಾಗಿದೆ. ಆರೋಗ್ಯ ಇಲಾಖೆ ಕೂಡ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬೇಕಿದೆ.

80 ಡೆಂಗ್ಯೂ ಪ್ರಕರಣ

ಕೊಪ್ಪಳ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ನೀರು ಸರಿಯಾಗಿ ಹರಿದುಹೋಗಲು ವ್ಯವಸ್ಥೆಯಿಲ್ಲ. ಹಾಗೆ ನಿಂತ ನೀರಿನಲ್ಲಿ ಸೊಳ್ಳೆಗಳು ಹೆಚ್ಚಾಗುತ್ತಿವೆ. ಕಳೆದ ಜನವರಿ ತಿಂಗಳಿಂದ ಈವರೆಗೆ ಜಿಲ್ಲೆಯಲ್ಲಿ 80 ಡೆಂಗ್ಯೂ ಪ್ರಕರಣ ವರದಿಯಾಗಿವೆ. ಜುಲೈ ತಿಂಗಳಲ್ಲಿ ಹೆಚ್ಚಿನ ಪ್ರಕರಣಗಳು ಕಂಡುಬಂದಿವೆ. ಕೊಪ್ಪಳ , ಗಂಗಾವತಿ ತಾಲೂಕಿನಲ್ಲಿಯೇ ಹೆಚ್ಚಿನ ಪ್ರಕರಣಗಳು ವರದಿಯಾಗಿದ್ದು, ಜನರು ಎಚ್ಚರಿಕೆ ವಹಿಸದಿದ್ದರೆ ಸಮಸ್ಯೆ ಹೆಚ್ಚಾಗುತ್ತದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಪರಿಹಾರ ಧನ ಪಾವತಿಸಿದ ಹಿನ್ನೆಲೆ: ಕೋರ್ಟ್ ಆದೇಶ

ಕೆಐಎಡಿಬಿ ಕಚೇರಿ ಜಪ್ತಿ ಮಾಡಿದ ರೈತರು

ದಾವಣಗೆರೆ : ಭೂಸ್ವಾಧೀನ ಮಾಡಿಕೊಂಡು ಪರಿಹಾರ ನೀಡದ್ದಕ್ಕೆ ದಾವಣಗೆರೆಯ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಚೇರಿ (ಕೆಐಎಡಿಬಿ)ಯನ್ನು ರೈತರು ವಶಪಡಿಸಿಕೊಂಡಿದ್ದಾರೆ.

ಕೋರ್ಟ್ ಆದೇಶದ ಅನ್ವಯ ಕೆಐಎಡಿಬಿ ಕಚೇರಿಯ ಪೀಠೋಪಕರಣಗಳನ್ನು ಬಳ್ಳಾರಿ ರೈತರು ಜಪ್ತಿ ಮಾಡಿದ್ದಾರೆ. ಸುಮಾರು 63 ಕೋಟಿ ರೂಪಾಯಿ ಪರಿಹಾರ ಬಾಕಿ ಉಳಿದಿದೆ. ಈ ಸಂಬಂಧ ದಾಖಲಾದ ಪ್ರಕರಣವೊಂದರಲ್ಲಿ ಕಚೇರಿ ಜಪ್ತಿ ಮಾಡಲಾಗಿದೆ. ಬಳ್ಳಾರಿ, ಹಾವೇರಿ ಹಾಗೂ ಚಿತ್ರದುರ್ಗ ಜಿಲ್ಲೆಗಳು ದಾವಣಗೆರೆಯ ಕೆಐಎಡಿಬಿ ಕಚೇರಿ ವ್ಯಾಪ್ತಿಗೆ ಸೇರಿವೆ. ಜಪ್ತಿ ಆದೇಶದ ಬೆನ್ನಲ್ಲೇ ಕಚೇರಿಯಲ್ಲಿದ್ದ ಕುರ್ಚಿ, ಟೇಬಲ್, ಅಲ್ಮೆರಾ ಸೇರಿದಂತೆ ಕಚೇರಿಯ ಸಮಗ್ರ ವಸ್ತುಗಳನ್ನು ರೈತರು ಲಾರಿಗೆ ತುಂಬಿಸಿಕೊಂಡು ಹೋಗಿದ್ದಾರೆ.

ಕೋರ್ಟ್ ಆದೇಶದ ಹಿನ್ನೆಲೆ ಬಳ್ಳಾರಿಯ ಕುಡುತಿನಿ, ವೇಣುವೀರಾಪುರ, ಕೊಳಗಲ್ಲು, ಹರಗಿನ ದೋಣಿ ಮತ್ತು ಸುತ್ತಮುತ್ತಲಿನ ಗ್ರಾಮದ ರೈತರು ಪೀಠೋಪಕರಣ ಜಪ್ತಿ ಮಾಡಿದ್ದಾರೆ.

2010ರಲ್ಲಿ ಮಾಜಿ ಸಚಿವ ಹಾಗೂ ಗಂಗಾವತಿ ಹಾಲಿ ಶಾಸಕ ಜನಾರ್ದನ ರೆಡ್ಡಿ ಮಾಲೀಕತ್ವದ ಬ್ರಹ್ಮಿಣಿ ಸ್ಟೀಲ್ಸ್, ಉತ್ತಮ್ ಗ್ಯಾಲೋ, ಎನ್‌ಎಮ್‌ಡಿಸಿ ಕಂಪನಿಗಳಿಗೆ ಕೆಐಎಡಿಬಿ ಭೂಮಿಯನ್ನು ಪರಭಾರೆ ಮಾಡಿತ್ತು. ಇದಕ್ಕೆ ಬಳ್ಳಾರಿ ತಾಲೂಕಿನ ಕುಡಿತಿನಿ ಗ್ರಾಮ ಸೇರಿದಂತೆ ಹತ್ತು ಗ್ರಾಮಗಳ ರೈತರು ಜಮೀನು ನೀಡಿದ್ದರು. ಪ್ರತಿ ಒಂದು ಎಕರೆಗೆ ಐದು ಲಕ್ಷ ರೂಪಾಯಿಗೆ ನಿಗದಿಪಡಿಸಿ ಕೆಐಡಿಎಬಿಗೆ ರೈತರು ಮಾರಾಟ ಮಾಡಿದ್ದರು. ಸುಮಾರು 1500 ಎಕರೆ ಭೂಮಿಯನ್ನು ರೈತರಿಂದ ಸ್ವಾಧೀನ ಪಡಿಸಿಕೊಂಡಿದ್ದ ಕೆಐಎಡಿಬಿ ಪ್ರತಿ ಎಕರೆಗೆ 5 ಲಕ್ಷ ರೂ. ಘೋಷಿಸಿತ್ತು.

ಜಮೀನು ಬೆಲೆ ತಾರತಮ್ಯ ಹಿನ್ನೆಲೆ 2013ರಲ್ಲಿ ರೈತರು ಕೋರ್ಟ್‌ನ ಮೊರೆ ಹೋಗಿದ್ದರು. 2023ರಲ್ಲಿ ರೈತರಿಗೆ ಪರಿಹಾರ ಧನ ನೀಡುವಂತೆ ಕೋರ್ಟ್ ಆದೇಶ ನೀಡಿತ್ತು. ಈ ಆದೇಶದ ಬಳಿಕವೂ ಪರಿಹಾರ ಪಾವತಿಯಾಗಿಲ್ಲ. ಈ ಹಿನ್ನೆಲೆ ಕೆಐಎಡಿಬಿ ಕಚೇರಿಯ ಪ್ರಾಪರ್ಟಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಕೋರ್ಟ್ ಆದೇಶ ಹೊರಡಿಸಿದೆ. ಪರಿಹಾರ ಧನ ಬರಬೇಕಿದ್ದ ರೈತರು ಕಚೇರಿ ಜಪ್ತಿ ಮಾಡಿದ್ದಾರೆ.

ಮೋದಿ ಅಲೆಗಿಂತ ಬಿಜೆಪಿ ಅಲೆ ಹೆಚ್ಚಿತ್ತು

ಹಾವೇರಿ: ಹಾವೇರಿ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಆಶೀರ್ವಾದವನ್ನು ಕೈ ನಾಯಕರು ಕೊಡಿಸಿದ್ದಾರೆ. ಚುನಾವಣೆಯಲ್ಲಿ ಸೋಲು ಗೆಲುವು ಸಹಜ, ಮತ ನೀಡಿದ ಎಲ್ಲರಿಗೂ ಧನ್ಯವಾದಗಳು ಎಂದು ಹಾವೇರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರ್ಯಕರ್ತರ ಜೊತೆ ಸಾಮಾನ್ಯ ಕಾರ್ಯಕರ್ತನಾಗಿ ಇರುತ್ತೇನೆ. ಚುನಾವಣೆಯಲ್ಲಿ ರಣತಂತ್ರಗಳು ನಡೆಯುತ್ತವೆ. ಹೊಂದಾಣಿಕೆ ರಾಜಕಾರಣ ಇಲ್ಲಿ ನಡೆದಿಲ್ಲ. ಹೊಂದಾಣಿಕೆ ರಾಜಕಾರಣ ನಡೆದಿದ್ದರೆ ನನಗೆ 6 ಲಕ್ಷ 60 ಸಾವಿರ ಮತಗಳು ಬರುತ್ತಿರಲಿಲ್ಲ. ನಗರ ಪ್ರದೇಶದಲ್ಲಿ ಬಿಜೆಪಿಗೆ ಹೆಚ್ಚಿನ ಲೀಡ್ ಸಿಕ್ಕಿದೆ ಎಂದರು.

ಗದಗದಲ್ಲಿ 16 ಸಾವಿರ ಅಂತರವಾಗಿದೆ. ಇದನ್ನ ಎಲ್ಲಿಯೂ ಮುರಿಯಲು ಸಾಧ್ಯವಾಗಿಲ್ಲ. ಹಿಂದಿನ ಚುನಾವಣೆಯಲ್ಲಿಯೂ ಗದಗದಲ್ಲಿ ಕಡಿಮೆ ಮತಗಳು ಬಂದಿತ್ತು. ನಮ್ಮ ಸೋಲು ದೊಡ್ಡದಲ್ಲ, ಅಂತರ ಕಡಿಮೆಯಿದೆ. ಶಹರದ ಟ್ರೆಂಡ್‌ನಿಂದ ಸೋಲಾಗಿದೆ. ಶಹರದಲ್ಲಿ ಮೋದಿ ಅಲೆಗಿಂತ ಜನರಲ್ಲಿ ಬಿಜೆಪಿ ಅಲೆಯಿತ್ತು ಎಂದು ಹೇಳಿದರು.

ಚಿರತೆ ಹಾವಳಿ: ಗ್ರಾಮಸ್ಥರಲ್ಲಿ ಆತಂಕ

ಚಾಮರಾಜನಗರ: ಹನೂರು ತಾಲೂಕಿನ ಗುಂಡಾಲ್ ಜಲಾಶಯ ಸಮೀಪದ ತೋಟದ ಮನೆಗಳ ಬಳಿ ನಾಲ್ಕೈದು ದಿನಗಳಿಂದ ಮೇಕೆ, ಕೋಳಿ ಹಾಗೂ ಕರುಗಳ ಮೇಲೆ ಚಿರತೆ ದಾಳಿ ನಡೆಸಿದ್ದು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಯಾಗಿದೆ.

ಐದು ದಿನಗಳಲ್ಲಿ ಹತ್ತು ಮೇಕೆಗಳು, ಎರಡು ಕೋಳಿ ಹಾಗೂ ಒಂದು ಕರುವನ್ನು ಚಿರತೆ ಬಲಿ ಪಡೆದಿದೆ. ಪ್ರತಿನಿತ್ಯ ಕಾಡಂಚಿನ ಜಮೀನಿಗೆ ಬರುವ ಚಿರತೆ ಸಿಕ್ಕ ಪ್ರಾಣಿಗಳನ್ನು ಹಿಡಿದು ತಿಂದುಹಾಕುತ್ತಿದೆ.

ನಿರಂತರವಾಗಿ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿರುವ ಚಿರತೆ ಜನರ ಮೇಲೆ ಎರಗಿದರೆ ಗತಿಯೇನು ಎಂಬ ಆತಂಕ ಸ್ಥಳೀಯರಲ್ಲಿ ಮನೆ ಮಾಡಿದೆ. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರೆ ದಾಳಿ ನಂತರ ಸ್ಥಳಕ್ಕೆ ಬಂದು ಫೋಟೊ ತೆಗೆದುಕೊಂಡು ಹೋಗುತ್ತಾರೆ. ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದ್ದಾರೆ.

ಅರಣ್ಯ ಇಲಾಖೆ ಸೂಚನೆ: ಕಾವೇರಿ ವನ್ಯಧಾಮದ ಕಡೆಯಿಂದ ಚಿರತೆ ಬಂದಿದ್ದು ದಾಳಿಮಾಡಿದ ಮೊದಲ ದಿನವೇ ಸ್ಥಳಕ್ಕೆ ಭೇಟಿನೀಡಿ ನಾಲ್ಕು ಸಾಮಾನ್ಯ ಬೋನುಗಳ ಜತೆ ವಿಶೇಷವಾಗಿ ತುಮಕೂರು ಬೋನ್ ಸಹ ಅಳವಡಿಸಲಾಗಿದೆ. ಚಿರತೆ ಚಲನ ವಲನ ವೀಕ್ಷಿಸಲು 20 ಕಡೆ ಕ್ಯಾಮರಾ ಅಳವಡಿಸಲಾಗಿದೆ. ಜತೆಗೆ ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿ ಪಾಳಿಯಲ್ಲಿ ಗಸ್ತು ತಿರುಗುತ್ತಿದ್ದಾರೆ. ವಲಯ ಅರಣ್ಯಾಧಿಕಾರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಿತ್ಯ ವರದಿ ನೀಡುವಂತೆ ಸೂಚಿಸಲಾಗಿದೆ.

ಧ್ವನಿವರ್ಧಕದ ಮೂಲಕ ಸ್ಥಳೀಯರಿಗೆ ಎಚ್ಚರಿಕೆ ನೀಡಲಾಗಿದ್ದು, ಜಾಗೃತಿ ಕರಪತ್ರಗಳನ್ನು ಹಂಚಲಾಗಿದೆ. ಉಪಟಳ ನೀಡುತ್ತಿರುವ ಚಿರತೆ ಸೆರೆಹಿಡಿಯಲು ಸ್ಥಳೀಯರು ಸಹಕರಿಸುವಂತೆ ಬಿಳಿಗಿರಿರಂಗನಾಥ ಸ್ವಾಮಿ ಹುಲಿ ರಕ್ಷಿತಾರಣ್ಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪ ಜೆ.ಕಂಟ್ರಾಕ್ಟರ್ ಮನವಿ ಮಾಡಿದ್ದಾರೆ.

ಚಿರತೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿಯಿಂದ ಬೋನು ಅಳವಡಿಕೆ

ಚೂರಿ ಇರಿತ ಪ್ರಕರಣ: ಆರು ಮಂದಿ ಬಂಧನ

ದಕ್ಷಿಣ ಕನ್ನಡ: ಬಿಜೆಪಿ ವಿಜಯೋತ್ಸವ ಮೆರವಣಿಗೆ ಬಳಿಕ ಇಬ್ಬರಿಗೆ ಚೂರಿ ಇರಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿ ವಿಡಿಯೋ ಆಧಾರದಲ್ಲಿ 20 ಜನರನ್ನು ವಶಕ್ಕೆ ಪಡೆದಿದ್ದು, ಪ್ರಕರಣಕ್ಕೆ ಸಂಬಂಧ ಆರು ಮಂದಿಯನ್ನು ಬಂಧಿಸಿದ್ದೇವೆ. ಮೂರು ತಂಡದ ಮೂಲಕ ತನಿಖೆ ನಡೆಯುತ್ತಿದ್ದು, ಇನ್ನುಳಿದವರ ಬಂಧನಕ್ಕೆ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸ್ ಕಮೀಷನರ್ ಅನುಪಮ್ ಅಗರ್‌ವಾಲ್ ಹೇಳಿದ್ದಾರೆ.

ಮೆರವಣಿಗೆ ನಂತರ ಮೂವರು ಮಸೀದಿ ಮುಂದೆ ಘೋಷಣೆ ಕೂಗಿದ್ದಾರೆ. ನಂತರ ಹಲ್ಲೆ ನಡೆಸಲಾಗಿದೆ. ಆರೋಪಿಗಳಲ್ಲಿ ಒಬ್ಬ ರೌಡಿ ಶೀಟರ್. ಆತ ಚೂರಿ ಇಟ್ಟುಕೊಂಡಿದ್ದ. ಭಾರತ್ ಮಾತಾ ಕೀ ಜೈ ಎನ್ನುವ ಘೋಷಣೆಗೂ ಮೊದಲು ಬೇರೆ ಪ್ರಚೋದನಾಕಾರಿ ಘೋಷಣೆ ಕೂಗಿದ್ದರು. ಮುಂದಿನ ದಿನಗಳಲ್ಲಿ ಎಲ್ಲಾ ಠಾಣೆಗಳಲ್ಲಿ, ಎಲ್ಲ ಧರ್ಮದ ಪ್ರಮುಖರನ್ನು ಕರೆದು ಶಾಂತಿಸಭೆ ನಡೆಸುತ್ತೇವೆ. ಸಾಮಾಜಿಕ ಜಾಲತಾಣಗಳ ಮೇಲೂ ನಿಗಾ ಇರಿಸಿದ್ದೇವೆ ಎಂದು ಅಗರ್‌ವಾಲ್ ತಿಳಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಅಭಿಮಾನಿಯ ಹತ್ಯೆ ಖಂಡನೀಯ

ಕನ್ನಡ ಚಿತ್ರೋದ್ಯಮ ಈಗ ಬೇಡದ ಕಾರಣಗಳಿಗೆ ಸುದ್ದಿಯಾಗುತ್ತಿದೆ. ತಮ್ಮ ಅಭಿಮಾನಿಯೊಬ್ಬರ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಅವರ ಹೆಸರು ಕೇಳಿ ಬಂದಿರುವುದು ಕನ್ನಡ ಚಿತ್ರಪ್ರೇಮಿಗಳಿಗೆ ಆಘಾತವನ್ನುಂಟು ಮಾಡಿದೆ. ಈ ಪ್ರಕರಣದ ಸತ್ಯಾಸತ್ಯತೆ ಏನೇ ಇರಲಿ, ಚಿತ್ರನಟನ ಅಭಿಮಾನಿಯೊಬ್ಬರು ಕ್ಷುಲ್ಲಕ ಕಾರಣಕ್ಕೆ ಈ ರೀತಿ ಬರ್ಬರವಾಗಿ ಕೊಲೆಯಾಗಿರುವುದು ರಾಜ್ಯದ ಜನತೆ ಕೇಳರಿಯದ ಸಂಗತಿ. ತಮ್ಮ ವಿನೀತ ನಡೆ-ನುಡಿಯ ಮೂಲಕ ಜನರಿಗೆ ಆದರ್ಶದ ಮಾದರಿಯಾಗಿದ್ದ ಡಾ.ರಾಜ್ ಕುಮಾರ್ ಅಭಿಮಾನಿಗಳಿಗೆ ದೇವರ ಸ್ಥಾನ ನೀಡಿದ್ದರು. ಅವರನ್ನೇ ಮೇರು ಪುರುಷರನ್ನಾಗಿ ಕಂಡು ಆರಾಧಿಸುತ್ತಿದ್ದ ಚಿತ್ರೋದ್ಯಮದಲ್ಲಿ ಇಂತಹ ಘಟನೆಯೊಂದು ನಡೆದಿರುವುದು ಖಂಡನೀಯ. ಪ್ರತಿಭಾವಂತ ನಟ ದರ್ಶನ್ ತಮ್ಮ ಸ್ವಪ್ರತಿಭೆಯಿಂದ ಕನ್ನಡ ಚಿತ್ರರಂಗದಲ್ಲಿ ಬೆಳೆದು ನಿಂತವರು. ಹಿರಿಯ ನಟ ತೂಗುದೀಪ ಶ್ರೀನಿವಾಸ್ ಅವರ ಮಗನಾದರೂ ಆರಂಭದಲ್ಲಿ ಚಿತ್ರರಂಗ ಪ್ರವೇಶಿಸಲು ಅವರು ಬಹಳ ಶ್ರಮ ಪಟ್ಟಿದ್ದರು. ಸಹಾಯಕ ನಿರ್ದೇಶಕನಾಗಿ ಚಿತ್ರರಂಗ ಪ್ರವೇಶಿಸಿದ ಅವರು 2001ರಲ್ಲಿ ಮೆಜೆಸ್ಟಿಕ್ ಚಿತ್ರದ ಯಶಸ್ಸಿನೊಂದಿಗೆ ನಾಯಕನ ಪಟ್ಟ ಅಲಂಕರಿಸಿದ್ದರು. ಇಲ್ಲಿಂದ ಯಶಸ್ಸಿನ ಮೆಟ್ಟಿಲನ್ನೇರುತ್ತಲೇ ಸಾಗಿದ ದರ್ಶನ್, ತಮ್ಮ ವೈಯಕ್ತಿಕ ಬದುಕಿನಲ್ಲಿ ಯಶಸ್ಸು ಕಾಣಲಿಲ್ಲ. 2011ರಲ್ಲಿ ಪತ್ನಿ ವಿಜಯಲಕ್ಷ್ಮಿ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ದರ್ಶನ್ ಬಂಧನವಾಗಿತ್ತು. ಈ ವಿಷಯ ಕೋರ್ಟ್ ಹೊರಗೆ ಇತ್ಯರ್ಥವಾದರೂ ನಂತರದ ದಿನಗಳಲ್ಲಿ ದಂಪತಿ ನಡುವಣ ಬಾಂಧವ್ಯ ಅಷ್ಟೇನೂ ಚೆನ್ನಾಗಿರಲಿಲ್ಲ ಎನ್ನುವುದು ಕೇಳಿ ಬರುತ್ತಿರುವ ಮಾತು. ಕಿರುತೆರೆ ನಟಿ ಪವಿತ್ರಾ ಗೌಡ, ದರ್ಶನ್ ಜೊತೆಗಿನ ಪ್ರೀತಿಯ ವಿಚಾರವಾಗಿ ಸೋಶಿಯಲ್ ಮೀಡಿಯಾದಲ್ಲಿ ಹಾಕಿದ ಪೋಸ್ಟ್ ಈಗ ಅಭಿಮಾನಿಯೊಬ್ಬರ ಸಾವಿನಲ್ಲಿ ಪರ್ಯಾವಸಾನಗೊಂಡಿದೆ ಎನ್ನಲಾಗುತ್ತಿದೆ. ಸಿನಿಮಾ ನಾಯಕ ನಟ-ನಟಿಯರು ನಮ್ಮಂತೆಯೇ ಮನುಷ್ಯರು. ಅವರೂ ತಪ್ಪುಗಳನ್ನು ಮಾಡುತ್ತಾರೆ. ಅವರಿಗೂ ವೈಯಕ್ತಿಕ ಜೀವನವಿದೆ. ಅವರ ಖಾಸಗಿತನವನ್ನು ನಾವು ಗೌರವಿಸಬೇಕು ಎಂಬ ಮಾತು ನಿಜ.ಆದರೆ ಯಾವುದೇ ವ್ಯಕ್ತಿ, ಸಾರ್ವಜನಿಕವಾಗಿ ಪ್ರಭಾವ ಬೀರಬಲ್ಲ ಸ್ಥಾನಕ್ಕೆ ಹೋದ ಬಳಿಕ, ತನ್ನ ನಡವಳಿಕೆ ಬಗ್ಗೆ ಎಚ್ಚರ, ವಿವೇಕ ಹೊಂದಿರಲೇಬೇಕು. ಇಲ್ಲದೇ ಹೋದರೆ ನಾಯಕನೆನಿಸಿಕೊಂಡವರು 'ಖಳನಾಯಕ'ನ ಪಟ್ಟ ಹೊರಬೇಕಾಗುತ್ತದೆ. ಈ ಪ್ರಕರಣದ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಸಿಗಬೇಕು.

ಸೊಂಪಾದಕೀಯ

ಅಪವಿತ್ರ ಮೈತ್ರಿಯ ಫಲ

ಅದೆಷ್ಟನೇ ಬಾರಿಗೋ ನಟ ದರ್ಶನ್ ಮತ್ತೆ ಸುದ್ದಿಯಲ್ಲಿದ್ದಾರೆ. ಆಫ್ ಕೋರ್ಸ್ ಕೆಟ್ಟ ಕಾರಣಗಳಿಂದ. ಹೆಂಡತಿಗೆ ದೈಹಿಕ ಹಿಂಸೆ ಕೊಟ್ಟು ಜೈಲು ಪಾಲಾಗಿದ್ದ ದರ್ಶನ್ ಅದರ ನಂತರವೂ ಬುದ್ಧಿ ಕಲಿಯುವ ಪ್ರಯತ್ನವನ್ನೇನೂ ಮಾಡಲಿಲ್ಲ. ಅದರ ನಂತರವೂ ಅವರು ಅನೇಕ ಬೇಡದ ವಿಷಯಗಳಿಗೆ ಸುದ್ದಿ ಆಗಿದ್ದರು. ಈಗ ಮತ್ತೆ ಅನಧಿಕೃತ ಹೆಂಡತಿಯ ಕಾರಣಕ್ಕೆ ಕೊಲೆ ಆರೋಪದಲ್ಲಿ ಮತ್ತೊಮ್ಮೆ ಜೈಲು ಪಾಲಾಗುವ ಪರಿಸ್ಥಿತಿ ಬಂದಿದೆ. ಕೇವಲ ಅಸಭ್ಯ ಮೆಸೇಜ್ ಕಳಿಸಿದ ಅನ್ನೋ ಕಾರಣಕ್ಕೆ ತನ್ನ ಅಭಿಮಾನಿಯನ್ನೇ ಕಿಡ್ನ್ಯಾಪ್ ಮಾಡಿಸಿ, ಕೂಡಿ ಹಾಕಿ ಮಾರಣಾಂತಿಕ ಹಲ್ಲೆ ಮಾಡಿ ಭೀಕರವಾಗಿ ಕೊಂದು ಹಾಕಿರುವ ಆರೋಪ ಎದುರಿಸುತ್ತಿರುವ ಈತ ಮಾಡಿದ್ದು ನಿಜ ಅಂತ ಪ್ರೂವ್ ಆದರೆ ಈತನನ್ನು ನಟ ಅಲ್ಲ, ಮನುಷ್ಯ ಅಂತ ಕರೆಯೋದೂ ತಪ್ಪು. ಈಗ ಕೊಲೆ ಆರೋಪದಲ್ಲಿ ತನ್ನ ಸಂಗಾತಿ ಪವಿತ್ರ ಜೊತೆಗೆ ಅರೆಸ್ಟ್ ಆಗಿ ಜೈಲಿನ ಕಂಬಿ ಎಣಿಸಬೇಕಾಗಿರುವ ದರ್ಶನ್ ಅನ್ನೋ ನಟ ಹಿಂದೆ ಮಾಧ್ಯಮ ಪ್ರತಿನಿಧಿಗಳ ಮೇಲೂ ಇದೇ ದುರಂಹಕಾರ ತೋರಿಸಿ ಮಾಧ್ಯಮಗಳಿಂದ ಬ್ಯಾನ್ ಆಗಿದ್ದರು. ಇದು ಕೇವಲ ಸ್ಯಾಂಪಲ್ ಅಷ್ಟೇ. ಹೊರಗೆ ಬರದೇ ಇರೋ ಕರ್ಮ ಕಾಂಡಗಳು ಬೇಕಾದಷ್ಟಿವೆ. ಈ ಹಿಂದೆ ಟಿವಿ ಚಾನೆಲ್ ನಲ್ಲಿ ಕೆಲಸ ಮಾಡುವ ಹುಡುಗನೊಬ್ಬ ಈತನ ಅಸಹ್ಯಗಳನ್ನು ಬೇರೆ ಯಾರಿಗೋ ಹೇಳಿ ಸುದ್ದಿ ಮಾಡಿಸಿದ್ದ ಅನ್ನೋ ಕಾರಣಕ್ಕೆ ಅವನನ್ನು ತನ್ನ ಮನೆಗೆ ಕರೆಸಿ ಗುಂಪುಗೂಡಿಕೊಂಡು ಅವನ ಮೇಲೆ ಮಾತಿನ ದಾಳಿ ಮಾಡಿದ್ದು ಉಂಟು. ಇನ್ನು ಸ್ವಲ್ಪ ಮಿತಿ ಮೀರಿದ್ದರೆ ಅಂದು ಇದೇ ರೀತಿ ಪತ್ರಕರ್ತನೊಬ್ಬನ ಕೊಲೆಯೂ ಆಗಿ ಹೋಗುತ್ತಿತ್ತೇನೋ. ಮಾತೆತ್ತಿದರೆ ತಾನು ಯಾರಿಗೂ ಕಮ್ಮಿ ಇಲ್ಲ ಅಂತ ಕೊಚ್ಚಿಕೊಳ್ಳುವ ಈ ದರ್ಶನ್ ಈ ಹಿಂದೆ ರಾಜ್ ಕುಮಾರ್ ಮಗ ಪುನೀತ್ ಹತ್ರ ಇರೋ ದುಬಾರಿ ಕಾರೇ ನನ್ನ ಬಳಿಯೂ ಇದೆ ಅಂತ ಬಡಾಯಿ ಕೊಚ್ಚಿಕೊಂಡಿದ್ದ. ಈ ಮಾತನ್ನು ನೆನಪಿಸಿಕೊಂಡು, ಪತ್ರಕರ್ತ ಅಜಿತ್ ಹನುಮಕ್ಕನವರ್ ಅವರು ಹೇಳಿರುವ ಈ ಕೆಳಗಿನ ಮಾತಂತೂ ದರ್ಶನ್ ಗೆ ಸಾಯುವವರೆಗೂ ಕಾಡೋದು ನಿಜ. ಪುನೀತ್ ಹತ್ರ ಇರೋ ಕಾರೇ ನನ್ನ ಹತ್ರನೂ ಇರೋದು ಅಂತ ಹೇಳಿಕೊಂಡಿದ್ದ ಈತ ಇವತ್ತು ಹೋಗ್ತಾ ಇರೋದು, ಪೊಲೀಸರ ಬೊಲೆರೋ ಕಾರಿನಲ್ಲಿ

ಸಂಪಾದಕರ ಸದ್ಯಶೋಧನೆ

ತಲೆಬರಹಗಳ ತರಹೇವಾರಿ ತಮಾಷೆ

ಪತ್ರಿಕೆಗಳಲ್ಲಿ ತಪ್ಪುಗಳಾಗುವುದು ಸಹಜ. ಯಾರೂ ಉದ್ದೇಶಪೂರ್ವಕವಾಗಿ ತಪ್ಪು ಮಾಡುವುದಿಲ್ಲ. ಮುದ್ರಣಕ್ಕೆ ಕಳಿಸುವುದಕ್ಕೆ ಮುನ್ನ ಎರಡು-ಮೂರು ಜನರಾದರೂ ನೋಡಿರುತ್ತಾರೆ. ಆದರೂ ತಪ್ಪುಗಳು ನುಸುಳಿಬಿಡುತ್ತವೆ. 'ಪತ್ರಿಕೆಗಳಲ್ಲಾಗುವ ತಪ್ಪುಗಳು ಪ್ರಿಂಟ್ ಆದ ನಂತರವೇ ಗೊತ್ತಾಗುತ್ತವೆ' ಎಂಬುದು ಬರೀ ವಕ್ರತುಂಡೋಕ್ತಿ ಅಲ್ಲ. ಅದು ಅಪ್ಪಟ ಸತ್ಯ ಕೂಡ. ಯಾರು ತಪ್ಪು ಮಾಡಿರುತ್ತಾರೋ, ಅವರಿಗೆ ಆ ತಪ್ಪು ಕಾಣಿಸುವುದಿಲ್ಲ. ಸೋಜಿಗವೆಂದರೆ, ಮರುದಿನ ಪತ್ರಿಕೆ ಓದುವಾಗ ಅವರಿಗೇ ದೃಗ್ಗೋಚರವಾಗುತ್ತದೆ. 'ಪತ್ರಿಕೆಯಲ್ಲಿ ಎಲ್ಲಿ ಬೇಕಾದರೂ ಪ್ರಮಾದಗಳಾಗಲಿ, ಆದರೆ ಹೆಡ್ ಲೈನ್ ಗಳಲ್ಲಿ ಮಾತ್ರ ಆಗಲೇ ಕೂಡದು' ಎಂಬ ಅಲಿಖಿತ ನಿಯಮ ಸುದ್ದಿಮನೆಗಳಲ್ಲಿವೆ. ಕಾರಣವಿಷ್ಟೇ. ಹೆಡ್ ಲೈನ್ ನಲ್ಲಿ ಪ್ರಮಾದವಾದರೆ ಅದು ಎಲ್ಲರ ಗಮನಕ್ಕೂ ಬರುತ್ತದೆ. ಹೆಡ್ ಲೈನ್ ನಲ್ಲೂ ತಪ್ಪು ಮಾಡಿದ್ದಾರೆ ಅಂದ್ರೆ ಅದು ಅಕ್ಷಮ್ಯ. ಇಷ್ಟಾಗಿಯೂ ಹೆಡ್ ಲೈನ್ ನಲ್ಲಿ ಪ್ರಮಾದಗಳಾಗುತ್ತವೆ. ಹೆಡ್ ಲೈನ್ ಆಗುವ ತರೇಹವಾರಿ ತಮಾಷೆಗಳ ಬಗ್ಗೆ ನಮ್ಮ ಪತ್ರಿಕೆಯ ಅಂಕಣಕಾರ ಶ್ರೀವತ್ಸ ಜೋಶಿ ಅವರು ತಮ್ಮ 'ಸ್ವಚ್ಛ ಭಾಷೆ ಅಭಿಯಾನ'ದಲ್ಲಿ ಕೆಲವು ತಿಂಗಳುಗಳ ಹಿಂದೆ ಪ್ರಸ್ತಾಪಿಸಿದ್ದು ನೆನಪಿಗೆ ಬರುತ್ತಿದೆ. ಕನ್ನಡದ ಟಿವಿ ಚಾನೆಲೊಂದು, ನನ್ನ ಮಗನ ಹೇಗೆ ಮರೆಯಲಿ?- ವಿದ್ಯುತ್ ಅವಘಡದಲ್ಲಿ ಮೃತಪಟ್ಟ ತಾಯಿಯ ಕಣ್ಣೀರುಎಂಬ ಶೀರ್ಷಿಕೆ ಬರೆದಿತ್ತು. ಮೃತಪಟ್ಟವನ ತಾಯಿಯ ಕಣ್ಣೀರು ಇರಬಹುದು. ಅಥವಾ, ಪಾಪ ಆಕೆಯ ಕಣ್ಣೀರು ಬತ್ತಿಹೋಯಿತು ಎಂಬುದನ್ನೇ ಮೃತಪಟ್ಟಿತು ಎಂದರೇನೋ! ಮೃತಪಟ್ಟ ತಾಯಿ ಕಣ್ಣೀರು ಹಾಕಲು ಹೇಗೆ ಸಾಧ್ಯ? ನಮ್ಮ ತಾಣಗಳನ್ನು ಬೆಳೆಸೋಣ ಎಂದ ನಟಿಯರು ಎಂಬ ಶೀರ್ಷಿಕೆಯನ್ನು ಪ್ರಮುಖ ಪತ್ರಿಕೆಯೊಂದು ಬರೆದಿತ್ತು. ನಮ್ಮ ದೇಶದ ಪ್ರವಾಸೀ ತಾಣಗಳನ್ನು ಬೆಳೆಸೋಣ ಎಂಬರ್ಥದಲ್ಲೇ ಆ ನಟಿಯರೆಲ್ಲ ಹೇಳಿದ್ದಿರಬಹುದಾದರೂ ನಮ್ಮ ತಾಣಗಳನ್ನು ಬೆಳೆಸೋಣ ಎಂದರೆ ಅಪಾರ್ಥವಾಗುವುದಿಲ್ಲವೇ! ಮತ್ತೆ ಕೋರ್ಟ್ ಕಟಕಟೆಗೆ ಡಿಕೆಶಿಗೆ ಎಂಬ ಶೀರ್ಷಿಕೆಯನ್ನು ಗಮನಿಸಿ. ಕನ್ನಡ ಪತ್ರಿಕೆಗಳು ಒಂದೋ ವಿಭಕ್ತಿಪ್ರತ್ಯಯಗಳನ್ನೇ ಬಳಸುವುದಿಲ್ಲ. ಬಳಸಿದರೆಂದರೆ ಇದ್ದಬಿದ್ದ ಪದಗಳಿಗೆಲ್ಲ ವಿಭಕ್ತಿ ಪ್ರತ್ಯಯ ಬಳಸುತ್ತಾರೆ ಎಂದು ಜೋಶಿ ಹೇಳಿದ್ದರು. ಹಾಗೆ ಇನ್ನೊಂದು ಶೀರ್ಷಿಕೆ ಗಮನಿಸಿ. ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಕಿ ಕವಿತಾ ಕಿವಿಮಾತು: ಎಳ್ಳು-ಬೆಲ್ಲದ ಜತೆಗೆ ಒಳ್ಳೆ ಮಾತಾಡಿ. ಎಳ್ಳು-ಬೆಲ್ಲದ ಜತೆಗೆ ಹೇಗೆ ಮಾತಾಡೋದು? ಎಳ್ಳು-ಬೆಲ್ಲದ ಜತೆಗೆ ಒಳ್ಳೆಯ ಮಾತನಾಡಿ ಆಮೇಲೆ ಅದನ್ನೇ ತಿಂದುಬಿಡುವುದು ದ್ರೋಹವಲ್ಲವೇ? ಎಂದು ಜೋಶಿ ಕೇಳಿದ್ದರು. ಪತ್ನಿ, ಮಗನ ಜತೆ ಅಮ್ಮನ ಸ್ಮಾರಕಕ್ಕೆ ಗುದ್ದಲಿಪೂಜೆ ನೆರವೇರಿಸಿದ ವಿನೋದ್ ರಾಜ್! ಅಂದರೆ ಪತ್ನಿ, ಮಗ ಬದುಕಿರುವಾಗಲೇ ಅವರಿಗೂ ಸ್ಮಾರಕ ಅಂತನಾ? ಅಥವಾ ಗುದ್ದಲಿಪೂಜೆಗೆ ಅವರೂ ಬಂದಿದ್ದರು ಅಂತಾನಾ? ಕೃಷಿಕ ಎಂದೇಳಲು ನಾಚಿಕೆ ಏಕೆ? ಹೈಕೋರ್ಟ್ ಎನ್ನಲು ನಾಲಿಗೆ ಹೊರಳದಿರುವುದು ಹೈಕೋರ್ಟ್‌ನ ನ್ಯಾಯಮೂರ್ತಿಗಳಿಗೋ ಅಥವಾ ವಿಜಯವಾಣಿಯ ಪತ್ರಕರ್ತರಿಗೋ? ಕೊಟ್ಟಿಗೆಯಲ್ಲಿದ್ದ ಹಸು ಕೊಂದ ಚಿರತೆ ಹತ್ಯೆ ಮಾಡದೆ ಮುಚ್ಚಿ ನಡೆದರೆ ಮೆಚ್ಚನಾ ಪರಮಾತ್ಮನು...' ಎಂದ ಆಧುನಿಕ ಪುಣ್ಯಕೋಟಿ ಇರಬೇಕು ಆ ಹಸು. ಆದ್ದರಿಂದಲೇ ಚಿರತೆಯನ್ನು ನಿರ್ದಾಕ್ಷಿಣ್ಯವಾಗಿ ಕೊಂದಿದೆ. ಆಮೇಲೆ ಚಿರತೆಯ ಶವವನ್ನು ಈ ರೀತಿ ತಲೆಬರಹ ಬರೆದ ಪತ್ರಕರ್ತರ ಡೆಸ್ಕಿನ ಹತ್ತಿರ ತಂದಿಡಬೇಕಿತ್ತು ಎಂದು ಜೋಶಿ ಕುಟುಕಿದ್ದಾರೆ. ಇನ್ನೊಂದು ಹೆಡ್ ಲೈನ್ - ಮೂವರು ಮಕ್ಕಳೊಂದಿಗೆ ಚಲಿಸುತ್ತಿದ್ದ ರೈಲಿನ ಮುಂದೆ ಹಾರಿದ ತಂದೆ! ರೈಲಿಗೆ ಮೂವರು ಮಕ್ಕಳಿದ್ದುವೇ? ಅವುಗಳ ಕೈಹಿಡಿದುಕೊಂಡು ಅದು ಚಲಿಸುತ್ತಿತ್ತೇ? ರೈಲಿನ ಮಕ್ಕಳಿಗೆ ಮನೋರಂಜನೆ ಕೊಡೋಣವೆಂದುಕೊಂಡು ಅವುಗಳ ಮುಂದೆ ಹಾರಿದನೇ ಆ ತಂದೆ? ಫೋನ್ಗೆ ಅಳು ಅಡ್ಡಿ: ಮಗು ಕೊಂದ ಅಮ್ಮ ಎರಡು ವರ್ಷದ ಮಗು ಅಮ್ಮನನ್ನು ಕೊಲ್ಲುವುದೆಂದರೆ ಎಷ್ಟು ಕೆಟ್ಟುಹೋಗಿದೆ ಪ್ರಪಂಚ!? ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ಎಂದು ಶಂಕರಾಚಾರ್ಯರು ಹೇಳಿದ್ದು ಮತ್ತೊಮ್ಮೆ ಸಾಬೀತಾಯಿತೇ? 29 ಪತ್ರಕರ್ತರಿಗೆ 2023ನೇ ಸಾವಿನ ವಾರ್ಷಿಕ ಪ್ರಶಸ್ತಿ. ದಿನಾ ಸಾಯೋವ್ರಿಗೆ ಅಳೋರ್ಯಾರು? ಎಂಬ ಗಾದೆ ಹುಟ್ಟಿಕೊಂಡಿದ್ದು ಇಂಥ ಪತ್ರಕರ್ತರಿರುವುದರಿಂದಲೇ ಇರಬೇಕು. ಈ 29 ಮಂದಿ ಪತ್ರಕರ್ತರು 2023 ಸರ್ತಿ ಸತ್ತಿದ್ದಾರಂತೆ!

ರಕ್ತ ವಿಮೋಚನೆಯೂ ಚಿಕಿತ್ಸೆಯಾಗಿತ್ತು

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ
vveditoped@gmail.com

ಒಬ್ಬ ವಯಸ್ಕನ ದೇಹದಲ್ಲಿ ಸರಿ ಸುಮಾರು 5 ಲೀಟರ್ ರಕ್ತವಿರುತ್ತದೆ. ಯಾವುದಾದರೂ ಕಾರಣದಿಂದ ಒಟ್ಟು ರಕ್ತದಲ್ಲಿ ಶೇ.15 ರಕ್ತವು ನಷ್ಟವಾದರೆ, ಅದನ್ನು ಸೌಮ್ಯ ಸ್ವರೂಪದ ರಕ್ತಕಳೆತ (ಮೈಲ್ಡ್ ಬ್ಲಡ್ ಲಾಸ್) ಎನ್ನುತ್ತೇವೆ. ಶೇ.15ರಿಂದ 30ರಷ್ಟು ನಷ್ಟವಾದರೆ, ಅದನ್ನು ಮಧ್ಯ ಪ್ರಮಾಣದ ರಕ್ತಕಳೆತವೆಂದು, ಶೇ.30-40ರಷ್ಟು ರಕ್ತ ನಷ್ಟವಾದರೆ ಅದನ್ನು ತೀವ್ರ ಸ್ವರೂಪದ ರಕ್ತಕಳೆತವೆಂದು ಹಾಗೂ ಶೇ.40ಕ್ಕಿಂತಲೂ ರಕ್ತನಷ್ಟವಾದರೆ ಅದು ಮಾರಕ ರಕ್ತಕಳೆತವೆಂದು ಪರಿಗಣಿಸುತ್ತೇವೆ. ಅಂತಹ ಸಂದರ್ಭದಲ್ಲಿ ನಷ್ಟವಾದ ರಕ್ತವನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮರುಪೂರಣವನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ವ್ಯಕ್ತಿಯು ಸಾಯುವುದು ಬಹುಪಾಲು ಖಚಿತವಾಗುತ್ತದೆ.

ನಮ್ಮ ಬಾಲ್ಯದಲ್ಲಿ ಪೆನ್ಸಿಲ್ಲನ್ನು ಬ್ಲೇಡಿನಿಂದ ಜೀವಬೇಕಾದರೆ, ಎಷ್ಟೋ ಸಲ ಕೈಬೆರಳನ್ನು ಕೊಯ್ದುಕೊಳ್ಳುತ್ತಿದ್ದುದು ಉಂಟು. ಆಗ ನಮ್ಮ ಹಿರಿಯರು ತಕ್ಷಣವೇ ನಮ್ಮ ಬೆರಳನ್ನು ಬಾಯಲ್ಲಿ ಇಟ್ಟುಕೊಂಡು ಚೀಪುವಂತೆ ಹೇಳುತ್ತಿದ್ದರು. ಹೀಗೆ ಚೀಪಿದಾಗ ರಕ್ತಸ್ರಾವವು ನಿಲ್ಲುತ್ತಿತ್ತು. ಸ್ರಾವವಾದ ರಕ್ತವು ನೇರವಾಗಿ ಹೊಟ್ಟೆಯನ್ನು ಸೇರುತ್ತಿತ್ತು. ಅಲ್ಲಿ ರಕ್ತವು ವಿಭಜನೆಯಾಗಿ ಕಬ್ಬಿಣ ಭಾಗವಾದ ಹೀಮ್ ಹಾಗೂ ಪ್ರೋಟೀನ್ ಭಾಗವಾದ ಗ್ಲಾಬಿನ್ ಬೇರೆಯಾಗುತ್ತಿದ್ದವು. ಇವನ್ನು ನಮ್ಮ ಶರೀರವೂ ಮರಳಿ ಬಳಸಿಕೊಳ್ಳುತ್ತಿತ್ತು. ರಕ್ತವು ನಮ್ಮ ದೇಹದ ಜೀವದಾಯಕ ದ್ರವ. ಹಾಗಾಗಿ ರಕ್ತವು ನಷ್ಟವಾಗದಂತೆ ಅಪಾರ ಎಚ್ಚರವನ್ನು ವಹಿಸುತ್ತಿದ್ದೆವು. ಒಂದು ವಿಚಿತ್ರವೆಂದರೆ, ಇಂತಹ ಜೀವದಾಯಕ ರಕ್ತವನ್ನು ಪ್ರಜ್ಞಾಪೂರ್ವಕವಾಗಿ ಹೊರಹರಿಯಬಿಡುವ ಚಿಕಿತ್ಸೆಯು ಸಾವಿರಾರು ವರ್ಷಗಳಿಂದಲೂ ಅಸ್ತಿತ್ವದಲ್ಲಿತ್ತು. ಇದನ್ನು ರಕ್ತವಿಮೋಚನೆ ಅಥವಾ ಬ್ಲಡ್ ಲೆಟ್ಟಿಂಗ್ ಎಂದು ಕರೆಯುತ್ತಿದ್ದರು.

ರಕ್ತವಿಮೋಚನೆಯು ಕನಿಷ್ಠ ಕ್ರಿ.ಪೂ.3000 ವರ್ಷಗಳಿಂದ ಅಸ್ತಿತ್ವದಲ್ಲಿದೆ. ಪ್ರಾಚೀನ ಈಜಿಪ್ಟಿಯನ್ನರು ಹಾಗೂ ಮೆಸೊಪೊಟೋಮಿಯನ್ನರು ರಕ್ತವಿಮೋಚನೆ ಮೂಲಕ ನಾನಾ ರೋಗಗಳನ್ನು ಗುಣಪಡಿಸಬಹುದು ಎಂದು ನಂಬಿದ್ದರು. ಈ ನಂಬಿಕೆಯು ಗ್ರೀಕ್ ಹಾಗೂ ರೋಮನ್ನರಲ್ಲಿಯೂ ವ್ಯಾಪಿಸಿತು. ಅವರ ಮೂಲಕ ಏಷ್ಯಾ ಖಂಡಕ್ಕೂ ಹರಡಿತು. ಆಯುರ್ವೇದದಲ್ಲಿಯೂ ರಕ್ತವಿಮೋಚನೆಯನ್ನು ಚಿಕಿತ್ಸಾ ರೂಪದಲ್ಲಿ ಹಿಂದೆ ಬಳಸುತ್ತಿದ್ದರು. ಈಗಲೂ ಬಳಸುವುದುಂಟು. ಮಧ್ಯಯುಗದ ಯೂರೋಪಿನಲ್ಲಿ ರಕ್ತವಿಮೋಚನೆಯು ಕುಖ್ಯಾತವಾಯಿತು. ಸಾಮಾನ್ಯವಾಗಿ ಕ್ಷೌರಿಕರು ರಕ್ತವಿಮೋಚನೆಯನ್ನು ನಡೆಸುತ್ತಿದ್ದರು. ರಕ್ತವಿಮೋಚನೆಯನ್ನು ಮಾಡಿಸಿಕೊಳ್ಳಬೇಕಾದ ವ್ಯಕ್ತಿಯನ್ನು ಒಂದು ಕಬ್ಬಿಣದ ಕಂಬಕ್ಕೆ ಕಟ್ಟುತ್ತಿದ್ದರು. ಆನಂತರ ವೈದ್ಯರು ಸೂಚಿಸಿದಷ್ಟು ರಕ್ತವನ್ನು ಹೊರಹರಿಸುತ್ತಿದ್ದರು. ವ್ಯಕ್ತಿಯನ್ನು ಕಬ್ಬಿಣದ ಕಂಬಕ್ಕೆ ಕಟ್ಟಿಹಾಕಿರುತ್ತಿದ್ದ ಕಾರಣ, ಆತ ನಿಂತಲ್ಲಿಯೇ ಕಿರುಚಬಹುದಾಗಿತ್ತೇ ಹೊರತು, ತಪ್ಪಿಸಿಕೊಂಡು ಹೋಗಲು ಅವಕಾಶವೇ ಇರುತ್ತಿರಲಿಲ್ಲ. ಅಗತ್ಯ ಪ್ರಮಾಣದ ರಕ್ತವನ್ನು ಹೊರತೆಗೆದ ಮೇಲೆ ಅವನ ಗಾಯಕ್ಕೆ ಬ್ಯಾಂಡೇಜ್ ಕಟ್ಟಿ, ಮನೆಗೆ ಕಳುಹಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಇಂದಿಗೂ ಸಹ ಕ್ಷೌರಿಕರ ಅಂಗಡಿಯ ಮುಂದೆ ಕೆಂಪು-ಬಿಳಿ ಬಣ್ಣದ ಕಂಬವನ್ನು ನೆಡುವುದುಂಟು. ಕೆಂಪು ಬಣ್ಣವು ರಕ್ತವನ್ನು ಸೂಚಿಸಿದರೆ, ಬಿಳಿ ಬಣ್ಣವು ಬ್ಯಾಂಡೇಜ್ ಬಟ್ಟೆಯ ಪ್ರತೀಕವಾಗಿದೆ.

ರಕ್ತವಿಮೋಚನೆಯು ಸರ್ವರೋಗ ನಿವಾರಣೆಯು ಎಂಬ ಮೌಢ್ಯವು ಮಧ್ಯ ಯುಗದಿಂದ 17, 18, 19 ಮತ್ತು 20ನೆಯ ಶತಮಾನಕ್ಕೂ ವ್ಯಾಪಿಸಿತು ಎಂದರೆ ಮನುಷ್ಯನ ಮೌಢ್ಯಕ್ಕೆ ಮಿತಿಯೇ ಇರಲಿಲ್ಲವೇನೋ ಎಂದು ಅನುಮಾನವು ಬರುವುದುಂಟು. 1940ರ ದಶಕದಲ್ಲಿ ಸರ್ ವಿಲಿಯಂ ಆಸ್ಲರ್ (1848-1919) ಬರೆದ, 14ನೆಯ ಆವೃತ್ತಿಯ, 'ಪ್ರಿನ್ಸಿಪಲ್ಸ್ ಅಂಡ್ ಪ್ರಾಕ್ಟೀಸ್ ಆಫ್ ಮೆಡಿಸಿನ್ ಎಂಬ ವೈದ್ಯಕೀಯ ಪ್ರಮಾಣಬದ್ಧ ಪುಸ್ತಕದಲ್ಲಿ ನ್ಯುಮೋನಿಯವನ್ನು ರಕ್ತವಿಮೋಚನೆಯಿಂದ ಗುಣಪಡಿಸಬಹುದು ಎಂದು ಬರೆದಿರುವುದನ್ನು ನೋಡಬಹುದು. ಆಸ್ಲರ್ ವೈದ್ಯಕೀಯ ವೃತ್ತಿ ಮತ್ತು ಶಿಕ್ಷಣಕ್ಕೆ ಘನತೆಯನ್ನು ತಂದುಕೊಟ್ಟ ಆದ್ಯವೈದ್ಯ.

ರಕ್ತವಿಮೋಚನೆಯು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿರಲು ಪ್ರಮುಖ ಕಾರಣ ನಮ್ಮ ಸೀಮಿತ ತಿಳಿವಳಿಕೆ. ಹಿಪ್ಪೋಕ್ರೇಟ್ಸ್ (ಕ್ರಿ.ಪೂ.460-ಕ್ರಿ.ಪೂ.370) ನನ್ನು ಆಧುನಿಕ ವೈದ್ಯಕೀಯ ಪಿತಾಮಹ ಎಂದು ಕರೆಯುವುದುಂಟು. ಮನುಷ್ಯನು ಶರೀರವು ಹೇಗೆ ರಚನೆಯಾಗಿದೆ, ಹೇಗೆ ಕೆಲಸ ಮಾಡುತ್ತದೆ, ರೋಗ ರುಜಿನಗಳಿಗೆ ಕಾರಣವಾಗುವ ಸೂಕ್ಷ್ಮ ಜೀವಿಗಳ ಅಸ್ತಿತ್ವದ ಬಗ್ಗೆ ಲವಲೇಶ ತಿಳಿವಳಿಕೆ ಇರದಿದ್ದ ಕಾಲದಲ್ಲಿ, ಹಿಪ್ಪೋಕ್ರೇಟ್ಸ್ ರೋಗಗಳು ಬರಲು ಕಾರಣಗಳನ್ನು ತನ್ನದೇ ಆದ ಸಿದ್ಧಾಂತವನ್ನು ಮಂಡಿಸಿದ. ಅವನ ತರ್ಕ ಬಹಳ ಸರಳ.

ಮನುಷ್ಯನ ದೇಹವು ನಾಲ್ಕು ಧಾತುಗಳಿಂದ-ಭೂಮಿ, ಗಾಳಿ, ಬೆಂಕಿ ಮತ್ತು ನೀರು-ಗಳಿಂದ ಆಗಿದೆ. ಈ ನಾಲ್ಕು ಧಾತುಗಳ ಮನುಷ್ಯನ ದೇಹದಲ್ಲಿ ರಕ್ತ, ಕಫ, ಕಪ್ಪು ಪಿತ್ತ ಮತ್ತು ಹಳದಿ ಪಿತ್ತಗಳೆಂಬ ರಸಗಳ (ಹ್ಯೂಮರ್ಸ್) ರೂಪದಲ್ಲಿರುತ್ತದೆ.

ಒಂದೊಂದು ರಸವು ಮಿದುಳಿನ ಒಂದೊಂದು ಭಾಗದಲ್ಲಿ ಪ್ರಧಾನವಾಗಿರುತ್ತದೆ. ರಕ್ತವು ಮಿದುಳಿಗೆ, ಕಫವು ಶ್ವಾಸಕೋಶಗಳಿಗೆ, ಗುಲ್ಮವು ಕಪ್ಪುಪಿತ್ತಕ್ಕೆ ಹಾಗೂ ಪಿತ್ತಕೋಶವು ಹಳದಿ ಪಿತ್ತಕ್ಕೆ ಕೇಂದ್ರವಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ಯಾವ ಅಂಗವು ಪ್ರಬಲವಾಗಿದ್ದು, ಪ್ರಬಲರಸವನ್ನು ಹರಿಸುತ್ತದೆಯೋ, ಅದು ಆ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ. ಭೂಮಿ-ರಕ್ತ-ಮಿದುಳು ಆಶಾವಾದಿಗಳನ್ನು (ಸ್ಯಾಂಗ್ವೈನ್), ಗಾಳಿ-ಕಫ-ಶ್ವಾಸಕೋಶವು ಉತ್ಸಾಹಶೂನ್ಯರನ್ನು (ಫ್ಲೆಗ್ಮಾಟಿಕ್), ಬೆಂಕಿ-ಗುಲ್ಮ-ಕಪ್ಪು ಪಿತ್ತವು ವಿಷಣ್ಣರನ್ನು (ಮೆಲಾಂಕೊಲಿಕ್) ಹಾಗೂ ನೀರು-ಪಿತ್ತಕೋಶ-ಹಳದಿಪಿತ್ತವು ಸಿಡುಕರನ್ನು (ಕೋಲೆರಿಕ್) ಇತ್ಯಾದಿ.

ಈ ನಾಲ್ಕು ರಸಗಳು ಸಮತೋಲನದಲ್ಲಿ ಇದ್ದಾಗ ಮನುಷ್ಯನು ಆರೋಗ್ಯವಾಗಿರುತ್ತಾನೆ. ಸಮತೋಲನ ತಪ್ಪಿದರೆ ಕಾಯಿಲೆಗಳು ಬರುತ್ತವೆ. ಸಮತೋಲನ ಏರುಪೇರುಗಳ ಪ್ರಮಾಣದಲ್ಲಿ ವ್ಯತ್ಯಾಸವಾಗಬಹುದು. ಹಾಗಾಗಿ ಆ ವ್ಯತ್ಯಾಸವನ್ನು ಸರಿದೂಗಿಸಿದರೆ ಆರೋಗ್ಯವು ಸಹಜವಾಗಿ ಮರುಕಳಿಸುತ್ತದೆ.



ಸಮತೋಲನೆಯನ್ನು ಸಾಧಿಸಲು ಯಾವ ರಸವು ಅಧಿಕವಾಗಿದೆಯೋ, ಅದನ್ನು ರಕ್ತವಿಮೋಚನೆ, ಭೇದಿ, ವಿರೇಚನ ಮತ್ತು ಮೂತ್ರವರ್ಧನ (ಡೈಯೂರೆಸಿಸ್) ಮೂಲಕ ಹೊರಹರಿಯಬಿಡುತ್ತಿದ್ದರು. ಭೇದಿಯು ದೇಹದಲ್ಲಿದ್ದ ವಿಷಗಳನ್ನು ಹೊರ ಹರಿಸಿದರೆ, ವಿರೇಚನವು ದೇಹ ಮತ್ತು ಮನಸ್ಸುಗಳಲ್ಲಿರುವ ಕಲ್ಮಶಗಳನ್ನು ನಿವಾರಿಸುತ್ತಿತ್ತು.

ಕ್ರಿ.ಶ.ಮೊದಲನೆಯ ಶತಮಾನದಲ್ಲಿ ರೋಮನ್ ವೈದ್ಯ ಗ್ಯಾಲನ್ (129-216) ಮಂಡಿಸಿದ ತರ್ಕ ಗಮನೀಯ. ಮನುಷ್ಯನ ದೇಹದಲ್ಲಿ ಕಫ, ಕಪ್ಪುರಕ್ತ, ಹಳದಿರಕ್ತಗಳಿಗಿಂತ ರಕ್ತವೇ ಪ್ರಧಾನವಾಗಿ ಇರುವ ಕಾರಣ, ಬಹಳಷ್ಟು ರೋಗಗಳಿಗೆ ರಕ್ತ ರಸದ ಏರುಪೇರೇ ಕಾರಣ ಎಂದು ಭಾವಿಸಿದ. ರಕ್ತವಿಮೋಚನೆಯನ್ನೇ ಪ್ರಧಾನವಾಗಿ ಸೂಚಿಸಿದ. ಗ್ಯಾಲನ್ ಸಮಕಾಲೀನ ವೈದ್ಯಕೀಯ ಜಗತ್ತಿನ ಬಹುದೊಡ್ಡ ಮೇಧಾವಿ. ಅವನು ಹೇಳಿದ್ದೆಲ್ಲ ನಿಜ ಎಂಬ ನಂಬಿಕೆಯು ಸರಿಸುಮಾರು 1500 ವರ್ಷಗಳವರೆಗೆ ಯೂರೋಪನ್ನು ಆಳಿತು. ಗ್ರೀಕ್ ಮತ್ತು ರೋಮನ್ ವೈದ್ಯಕೀಯವನ್ನೇ ಅನುಸರಿಸಿದ ಅರಬ್ಬರೂ ಸಹ, ಗ್ಯಾಲನ್ ಹೇಳಿದ ಮಾತನ್ನು ಸತ್ಯವೆಂದು ನಂಬಿ ಪರಿಪಾಲಿಸತೊಡಗಿದರು. ಜ್ವರ, ಅಸ್ತಮ, ನ್ಯುಮೋನಿಯ, ಕ್ಯಾನ್ಸರ್, ಕಾಮಾಲೆ, ಸೆಳವು, ಪ್ಲೇಗ್, ಮನೋರೋಗಗಳು, ವಾಂತಿ, ಋತುಸಮಸ್ಯೆಗಳನ್ನು ಗುಣಪಡಿಸಲು ರಕ್ತವಿಮೋಚನೆಯನ್ನು ಮಾಡಲಾರಂಭಿಸಿದರು.

ರಕ್ತ ವಿಮೋಚನೆಯನ್ನು ಮೂರು ವಿಧಾನಗಳಲ್ಲಿ ಮಾಡುತ್ತಿದ್ದರು. ಮೊದಲನೆಯದು ಸಿರೆಛೇದನ (ವೀನಿಸೆಕ್ಷನ್), ಸೀಳುಕೊಯ್ತ ಮತ್ತು ರಕ್ತಚೂಷಣ (ಸ್ಕ್ಯಾರಿಫಿಕೇಶನ್ ಅಂಡ್ ಕಪ್ಪಿಂಗ್) ಹಾಗೂ ಜಿಗಣೆಗಳು. ಈ ಮೂರು ವಿಧಾನಗಳಲ್ಲಿ ಸಿರೆಛೇದನವು ಸಾಮಾನ್ಯವಾಗಿತ್ತು. ಮುಂದೋಳಿನ ನಡುವಣ ಸಿರೆಯನ್ನು (ಮೀಡಿಯಲ್ ಕ್ಯುಬೈಟಲ್ ವೇಯಿನ್) ಛೇದಿಸಿ ರಕ್ತವನ್ನು ಹರಿಸುತ್ತಿದ್ದರು. ಛೇದನಕ್ಕಾಗಿ ಇತರ ಸಿರೆಗಳನ್ನು ಅಪರೂಪಕ್ಕೆ ಬಳಸುತ್ತಿದ್ದರು. ಈ ವಿಧಾನದಲ್ಲಿ ರಕ್ತಸ್ರಾವವು ತೀವ್ರಸ್ವರೂಪದಲ್ಲಿ ಸಂಭವಿಸಿ, ನಿಲ್ಲಿಸುವುದು ಕಷ್ಟವಾಗುತ್ತಿತ್ತು. ಸೀಳುಕೊಯ್ತ ಎಂದರೆ ಚರ್ಮದ ಮೇಲೆ ಮೇಲ್‌ಸ್ತರದಲ್ಲಿ ಲಂಬವಾಗಿ ಕೊಯ್ಯುವುದು. ನಂತರ ಅದರ ಮೇಲೆ ಹೀರುಲೋಟಗಳನ್ನು ಬೋರಲು ಹಾಕಿ, ನಿರ್ವಾತವನ್ನು ಉಂಟುಮಾಡಿ, ರಕ್ತವನ್ನು ಹೊರಹರಿಸುವುದು. ಈ ವಿಧಾನದಲ್ಲಿ ರಕ್ತನಷ್ಟವು ದೊಡ್ಡ ಪ್ರಮಾಣದಲ್ಲಿ ಆಗುತ್ತಿರಲಿಲ್ಲ, ಹೆಚ್ಚು ಸುರಕ್ಷಿತವಾಗಿರುತ್ತಿತ್ತು. ಮೂರನೆಯದು ಜಿಗಣೆಗಳ ಮೂಲಕ ರಕ್ತವನ್ನು ಹೀರಿಸುವುದು. ಈ ವಿಧಾನವನ್ನು ಪ್ಯಾರಿಸ್ ದೇಶದ ಫ್ರಾನ್ಸ್ವ ಬ್ರೌಸಿಯ (1772-1838) ಜನಪ್ರಿಯಗೊಳಿಸಿದ. ಫ್ರಾನ್ಸ್ ದೇಶವೊಂದರಲ್ಲಿಯೇ ವೈದ್ಯರು ವರ್ಷಕ್ಕೆ ಸರಿಸುಮಾರು 35 ದಶಲಕ್ಷ ಜಿಗಣೆಗಳನ್ನು ಚಿಕಿತ್ಸೆಯಲ್ಲಿ ಬಳಸಲಾರಂಭಿಸಿದರು.

ರಕ್ತವಿಮೋಚನೆಯು 3000 ವರ್ಷಗಳಿಂದ ಅಸ್ತಿತ್ವದಲ್ಲಿದೆ ಎಂದರೆ, ಆ ಚಿಕಿತ್ಸೆಯು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿತ್ತು ಎನ್ನುವ ಪ್ರಶ್ನೆಯು ಏಳುತ್ತದೆ. ಕೆಲವು ಉದಾಹರಣೆಗಳನ್ನು ಪರಿಶೀಲಿಸಬಹುದು.

ಜಾರ್ಜ್ ವಾಷಿಂಗ್ಟನ್ (1732-1799): ಅಮೆರಿಕದ ಮೊದಲ ಅಧ್ಯಕ್ಷ. ಡಿಸೆಂಬರ್, 1799ರಲ್ಲಿ ಈತನಿಗೆ ತೀವ್ರಸ್ವರೂಪದ ಗಂಟಲನೋವು ಉಂಟಾಯಿತು. ವಾಷಿಂಗ್ಟನ್‌ನ ವೈದ್ಯಕೀಯ ತಂಡವು ಗಂಟಲನೋವನ್ನು ಕಡಿಮೆ ಮಾಡಲು ರಕ್ತವಿಮೋಚನೆಯನ್ನು ಸೂಚಿಸಿತು. 12 ಗಂಟೆಗಳ ಅವಧಿಯಲ್ಲಿ ವಾಷಿಂಗ್ಟನ್ನನ ದೇಹದಲ್ಲಿದ್ದ 40% ಹೆಚ್ಚು ರಕ್ತವನ್ನು ಹೊರಹರಿಸಿದರು. ಈ ವಿಪರೀತ ರಕ್ತಸ್ರಾವವನ್ನು ತಡೆದುಕೊಳ್ಳಲಾಗದೇ ವಾಷಿಂಗ್ಟನ್ ಮರಣಿಸಿದ.

ಇಂಗ್ಲೆಂಡಿನ ಇಮ್ಮಡಿ ಚಾರ್ಲ್ಸ್ (1630-1685): 1685ರ ಫೆಬ್ರವರಿ ತಿಂಗಳಿನಲ್ಲಿ ಇಮ್ಮಡಿ ಚಾರ್ಲ್ಸ್ ನಿಗೆ ತೀವ್ರ ಸ್ವರೂಪದ ಸೆಳವು (ಫಿಟ್ಸ್) ಕಾಣಿಸಿಕೊಂಡಿತು. ಈ ಸೆಳವು ಏಕೆ ಬರುತ್ತದೆ ಎಂಬುದರ ಬಗ್ಗೆ ಅರಿವಿರಲಿಲ್ಲ. ಹಾಗಾಗಿ ಅವನ ವೈದ್ಯರು ಲಭ್ಯವಿದ್ದ ಎಲ್ಲರೀತಿಯ ಚಿಕಿತ್ಸೆಯನ್ನು ನೀಡಿದರು. ವಾಂತಿ ಮಾಡಿಸಿದರು, ಭೇದಿ ಮಾಡಿಸಿದರು. ಬರೆಯಿಟ್ಟರು. ರಾಜನ ಆರೋಗ್ಯವು ದುರ್ಬಲವಾಗಲಾರಂಭಿಸಿತು. ಆಗ ರಕ್ತವಿಮೋಚನೆಯನ್ನು ನಡೆಸಿದರು. ರಾಜ ತೀರಾ ನಿಶ್ಯಕ್ತನಾದ. ಪ್ರಜ್ಞಾಹೀನನಾಗಿ ಮರಣಿಸಿದ. ರಾಜನ ಸಾವಿಗೆ ರಕ್ತವಿಮೋಚನೆಯೇ ಪ್ರಮುಖ ಕಾರಣವಾಯಿತು.

ಅಲಿವರ್ ಕ್ರಾಮ್ವೆಲ್ (1599-1658): ಅಲಿವರ್ ಕ್ರಾಮ್ವೆಲ್ ಬ್ರಿಟನ್ನಿನ ಮಿಲಿಟರಿ ಅಧಿಪತಿ ಹಾಗೂ ರಾಜಕಾರಣಿ. ಇವನಿಗೆ ಜ್ವರ ಬಂತು. ಬಹುಶಃ ಮಲೇರಿಯವೋ ಅಥವ ರಕ್ತನಂಜೋ ಆಗಿರಬಹುದು. ಕ್ರಾಮ್ವೆಲ್ ವೈದ್ಯರು ಅಂದಿನ ದಿನಗಳಲ್ಲಿ ಲಭ್ಯವಿದ್ದ ಚಿಕಿತ್ಸೆಯನ್ನು ನೀಡಿದರು. ಜ್ವರ ಕಡಿಮೆಯಾಗಲಿಲ್ಲ. ರಕ್ತವಿಮೋಚನೆಯನ್ನು ಮಾಡಿದರು. ವಿಪರೀತ ರಕ್ತಸ್ರಾವದ ಕಾರಣ ತಲೆದೋರಿದ ನಿತ್ರಾಣವು ಕ್ರಾಮ್ವೆಲ್ ನನ್ನು ಬಲಿತೆಗೆದುಕೊಂಡಿತು.

ಲಾರ್ಡ್ ಬೈರನ್ (1788-1824): ಇಂಗ್ಲಿಷ್ ಕವಿ. ಬೈರನ್ ಗ್ರೀಸ್ ದೇಶದಲ್ಲಿದ್ದಾಗ ಬಹುಶಃ ಸೋಂಕಿನ ಕಾರಣ ತೀವ್ರ ಸ್ವರೂಪದ ಜ್ವರಕ್ಕೆ ತುತ್ತಾದ. ಅಂದಿನ ಸಾಂಪ್ರದಾಯಿಕ ಚಿಕಿತ್ಸೆಗಳು ಉಪಶಮನ ಕೊಡದಿದ್ದಾಗ, ವೈದ್ಯರು ರಕ್ತವಿಮೋಚನೆಯನ್ನು ಮಾಡಿದರು. ಬೈರನ್ ನಿತ್ರಾಣದಿಂದ ಅಸುನೀಗಿದ.

ಪ್ರಾಚೀನ ಜಗತ್ತಿನಲ್ಲಿ ರಕ್ತವಿಮೋಚನೆಯು ಉಪಯುಕ್ತವಾಗಿತ್ತು ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯೂ ದೊರೆಯುವುದಿಲ್ಲ, ಆದರೆ ಅದು ಅತ್ಯಂತ ಅಪಾಯಕಾರಿ ಎನ್ನುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಆದರೂ ರಕ್ತವಿಮೋಚನೆಯು ಇಂದಿಗೂ ಉಳಿದುಬಂದಿದೆ ಎಂದರೆ ಆಶ್ಚರ್ಯವಾಗುತ್ತದೆ. ಇಂದು ರಕ್ತವಿಮೋಚನೆಯನ್ನು ಕೆಲವೇ ಕೆಲವು ರೋಗಗಳಲ್ಲಿ ಸೀಮಿತ ಪ್ರಮಾಣದಲ್ಲಿ ಮಾತ್ರ ಮಾಡುತ್ತಾರೆ. ಮೊದಲಿನ ಹಾಗೆ ಲೀಟರುಗಟ್ಟಲೆ ರಕ್ತವನ್ನು ಹರಿಸುವುದಿಲ್ಲ. ಹೀಮೋಕ್ರೊಮಾಟೋಸಿಸ್ ಎಂಬ ಆನುವಂಶಿಕ ಕಾಯಿಲೆಯಲ್ಲಿ ರಕ್ತದಲ್ಲಿ ಕಬ್ಬಿಣದ ಅಂಶವು ಅತ್ಯಧಿಕ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿರುತ್ತದೆ. ಪಾಲಿಸೈಥೀಮಿಯ ವೆರ ಎನ್ನುವ ಸ್ಥಿತಿಯಲ್ಲಿ ಅಸ್ಥಿಮಜ್ಜೆಯಲ್ಲಿ ವೈಪರೀತ್ಯವಿದ್ದು, ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ಕೆಂಪುರಕ್ತ ಕಣಗಳ ಉತ್ಪಾದನೆಯಾಗುತ್ತದೆ. ಪಾರ್ಫಿರಿಯ ಕ್ಯುಟೇನಿಯ ಟಾರ್ಡ ಎನ್ನುವ ಕಬ್ಬಿಣ ಉಪಾಪಚಯ ವೈಪರೀತ್ಯದಲ್ಲೂ ರಕ್ತವನ್ನು ಹೊರಹರಿಸುವುದುಂಟು. ಇಂತಹ ಸಂದರ್ಭದಲ್ಲಿ ಸೀಮಿತ ಪ್ರಮಾಣದ ರಕ್ತವಿಮೋಚನೆಯನ್ನು ಮಾಡುವುದುಂಟು.

ರಕ್ತವಿಮೋಚನೆಯನ್ನು ನಡೆಸುತ್ತಿದ್ದ ಪ್ರಾಚೀನ ಕಾಲದ ವೈದ್ಯರನ್ನು ಹಳಿಯಬೇಕೆನಿಸುತ್ತದೆ. ಆದರೆ ಅದು ಅನಗತ್ಯ. ಏಕೆಂದರೆ ಮನುಷ್ಯನು ತನ್ನ ತಪ್ಪುಗಳಿಂದಲೇ ಒಪ್ಪನ್ನು ಕಲಿಯುತ್ತಾನೆ. ಇಂದಿಗೆ 100 ವರ್ಷಗಳ ನಂತರ ಬರುವ ವೈದ್ಯರು, ಇಂದು ನಾವು ಮಾಡುತ್ತಿರುವ ಪ್ರತಿಜೈವಿಕಗಳ ದುರುಪಯೋಗ, ಕ್ಯಾನ್ಸರ್ ಚಿಕಿತ್ಸೆಗೆ ನೀಡುವ ರೇಡಿಯೋಥೆರಪಿ, ಕೀಮೋಥೆರಪಿಗಳನ್ನು ಕಂಡು ಅವರು ನಗುವುದರಲ್ಲಿ ಆಶ್ಚರ್ಯವಿಲ್ಲ!

ಪ್ರಜಾಪ್ರಭುತ್ವವೋ ಮಜಾ ಪ್ರಭುತ್ವವೋ?

ಪ್ರಸ್ತುತ

ಮೋಹನದಾಸ ಕಿಣಿ, ಕಾಪು
vveditoped@gmail.com

ರಾಜಕೀಯ ಕ್ಷೇತ್ರದಲ್ಲಿ ಆಗುತ್ತಿರುವ ಕೆಲವೊಂದು ಬೆಳವಣಿಗೆಗಳನ್ನು ನೋಡಿದರೆ ನಾವು ಇರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೋ ಅಥವಾ ಮಜಾಪ್ರಭುತ್ವ ವ್ಯವಸ್ಥೆಯಲ್ಲೋ ಎಂಬುದೊಂದು ಚಿಕ್ಕ ಗೊಂದಲವಾಗುತ್ತದೆ. ಒಂದೆರಡು ಉದಾಹರಣೆಗಳನ್ನು ನೀಡುವುದಾದರೆ, ಇತ್ತೀಚೆಗೆ ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಹಲವಾರು ವರ್ಷಗಳಿಂದ ತನ್ನ ಬಳಿ ಬೇರೆ ಬೇರೆ ಕೆಲಸಗಳಿಗೆ ಬರುತ್ತಿದ್ದ ಮಹಿಳೆಯರನ್ನು ಲೈಂಗಿಕವಾಗಿ ಶೋಷಣೆ ಮಾಡಿದ್ದು ಅದನ್ನು ಆತನ ಕಾರ್ ಚಾಲಕ ಪ್ರಜ್ವಲ್‌ಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ವಿಡಿಯೊ ಮಾಡಿದ್ದು, ಲೋಕಸಭಾ ಚುನಾವಣೆಯ ಮುಂಚಿನ ದಿನ ಅದರ ಸಾವಿರಾರು ಪೆನ್ ಡ್ರೈವ್ ಪ್ರತಿಗಳನ್ನು ಮಾಡಿ ಎಲ್ಲೆಡೆ ಹಂಚಿದ್ದು ಈ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದು ಎಲ್ಲವೂ ಈಗ ಹಳೆಯ ಸುದ್ದಿ. ಮೇ.25ರಂದು ಈ ಸುದ್ದಿ ಪ್ರಕಟವಾಗುತ್ತದೆ. 27ರಂದು ಪ್ರಜ್ವಲ್ ವಿದೇಶಕ್ಕೆ ಪಲಾಯನ ಮಾಡುತ್ತಾರೆ. ತದ ನಂತರ ಸರಕಾರ ತನಿಖಾ ತಂಡ ರಚಿಸಿ ಆದೇಶ ಹೊರಡಿಸುತ್ತದೆ. ಇದನ್ನು ಚುನಾವಣೆಯ ಮೇಲೆ ಪರಿಣಾಮ ಬೀರುವ ಉದ್ದೇಶದಿಂದ ಮಾಡಿದ್ದಲ್ಲಿ ಕನಿಷ್ಠ ಒಂದು ವಾರದ ಮೊದಲಾದರೂ ಮಾಡುತ್ತಿದ್ದರು. ಹಾಗಾದರೆ ಇದರ ಉದ್ದೇಶ?

ಪ್ರಜ್ವಲ್ ತಂದೆ, ಶಾಸಕ ರೇವಣ್ಣ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಮಹಿಳೆಯನ್ನು ಕಿಡ್ನಾಪ್ ಮಾಡಿದ ಆಪಾದನೆ ಮೇರೆಗೆ ದಸ್ತಗಿರಿಯಾಗುತ್ತಾರೆ. ಈ ನಡುವೆ ಆ ಮಹಿಳೆ ತನ್ನನ್ನು ಯಾರೂ ಕಿಡ್ನಾಪ್ ಮಾಡಿಲ್ಲ, ತಾನು ಕ್ಷೇಮವಾಗಿದ್ದೇನೆ ಎಂದು ಹೇಳಿದ್ದಾರೆ ಎನ್ನಲಾದ ವಿಡಿಯೊ ಎಲ್ಲಿಂದಲೋ ಹರಿದಾಡುತ್ತದೆ. ರೇವಣ್ಣ ಜಾಮೀನಿನ ಮೇಲೆ ಬಿಡುಗಡೆಯಾಗುತ್ತಾರೆ! ಆರಂಭದಲ್ಲಿ ವಿಶೇಷ ತನಿಖಾ ದಳದ ಪೋಲೀಸರು ಸಮನ್ಸ್ ನೀಡಲು ಬಂದಾಗ ರೇವಣ್ಣ ಅವರಿಗೇ ಬೆದರಿಕೆ ಹಾಕಿದ್ದರೆನ್ನಲಾಗಿದೆ. ಇದು ನಿಜವಾದರೆ, ನಕಲಿ ವಿಡಿಯೊ ಮಾಡುವುದು, ಜಾಮೀನಿನ ಮೇಲೆ ಹೊರಗೆ ಬಂದು ಸಾಕ್ಷಿ ನಾಶ ಮಾಡುವುದು ಕಷ್ಟದ ವಿಷಯವೇನಲ್ಲ. ಇನ್ನೊಂದು ಪ್ರಕರಣದಲ್ಲಿ, ಸಂತ್ರಸ್ತ ಮಹಿಳೆಯರು ನೀಡುವ ಹೇಳಿಕೆಯನ್ನು ಮಹಿಳಾ ಅಧಿಕಾರಿ ದಾಖಲಿಸಿಕೊಳ್ಳಬೇಕು ಹಾಗೂ ಅದರ ವಿಡಿಯೊ ಚಿತ್ರೀಕರಣ ಮಾಡಬೇಕೆಂದು ಕಾನೂನು ಇದ್ದರೂ ಎರಡನ್ನೂ ಉಲ್ಲಂಘಿಸಲಾಗಿದೆ. ಆ ಪ್ರಕರಣದಲ್ಲೂ ಸಲೀಸಾಗಿ ಜಾಮೀನು ದೊರೆತರೂ ಆಶ್ಚರ್ಯವಿಲ್ಲ.

ಪ್ರಜ್ವಲ್ ರೇವಣ್ಣ ರಾಜ್ಯ ಸರಕಾರದ ವ್ಯಾಪ್ತಿಯಲ್ಲಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದೇಶಬಿಟ್ಟು ಹೋಗುವವರೆಗೂ ಸುಮ್ಮನಿದ್ದು ನಂತರ ಈ ವಿಷಯದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧಪಡದ ಪ್ರಧಾನಿಯವರಿಗೆ ಪತ್ರ ಬರೆದು, ಅದಕ್ಕೆ ಒಂದಿಷ್ಟು ಪ್ರಚಾರ ಕೂಡಾ ನೀಡಿ ಪ್ರಧಾನಿಯವರು ಕ್ರಮ ಕೈಗೊಂಡಿಲ್ಲ ಎಂಬಂತೆ ಬಿಂಬಿಸಲಾಗುತ್ತದೆ. ಇದೆಲ್ಲಾ ನೋಡುವಾಗ ಎಲ್ಲವೂ ಪೂರ್ವನಿಯೋಜಿತ ನಾಟಕದಂತೆ ಭಾಸವಾಗುತ್ತದೆ. ಏಕೆಂದರೆ ಹಾಸನದ ಚುನಾವಣೆ ಮುಗಿದಿದೆ. ಜೆಡಿಎಸ್ ಬಿಜೆಪಿಯ ಮೈತ್ರಿ ಪಕ್ಷ. ಬೇರೆ ರಾಜ್ಯಗಳಲ್ಲಿ ಇದು ಪರಿಣಾಮ ಬೀರಲಿ ಎಂಬುದು ಇದರ ಹಿಂದಿನ ಉದ್ದೇಶವಾಗಿರಬಹುದಲ್ಲ?

ಇದಿಷ್ಟು ರಾಜ್ಯದ ವಿಷಯವಾದರೆ, ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರ ಸಂಪುಟ ಸದಸ್ಯರು ಒಬ್ಬೊಬ್ಬರಾಗಿ ಕಾರಾಗೃಹ ಸೇರುತ್ತಾರೆ. ಒಂಬತ್ತು ಬಾರಿ ಸಮನ್ಸ್ ನೀಡಿದರೂ ವಿಚಾರಣೆಗೆ ಹಾಜರಾಗದ ಕೇಜ್ರಿವಾಲ್ ಅಂತಿಮವಾಗಿ ನ್ಯಾಯಾಲಯದ ಹಸ್ತಕ್ಷೇಪದ ನಂತರ ಹಾಜರಾಗುತ್ತಾರೆ. ಜೈಲು ಸೇರಿದ ನಂತರ ವಿಚಾರಣೆಯ ಹಂತದಲ್ಲಿ ಆರೋಗ್ಯ ಮತ್ತಿತರ ನೆಪವೊಡ್ಡಿ ಜಾಮೀನು ಪಡೆಯಲು ಪ್ರಯತ್ನ ಮಾಡುತ್ತಾರೆ. ನಂತರ, ಚುನಾವಣಾ ಪ್ರಚಾರಕ್ಕೆ ಅವರಿಗೆ ಜಾಮೀನು ಸಿಗುತ್ತದೆ. ಕೇಜ್ರಿವಾಲ್, ರೇವಣ್ಣ ಮತ್ತು ಇನ್ನೂ ಹಲವಾರು ಪ್ರಭಾವಿಗಳು ಜಾಮೀನು ಸಿಗುವವರೆಗೂ ಅನಾರೋಗ್ಯದಿಂದ ಬಳಲುತ್ತಿದ್ದು, ಜಾಮೀನು ಸಿಕ್ಕ ತಕ್ಷಣ ಅವರನ್ನು ಅದ್ದೂರಿಯಾಗಿ ಸ್ವಾಗತಿಸಿ, ಮೆರವಣಿಗೆ ಮಾಡುತ್ತಾರೆ. ಯಾವುದೋ ಬಲುದೊಡ್ಡ ಸಾಧನೆ ಮಾಡಿರುವಂತೆ!ಅದೇ ಜನಸಾಮಾನ್ಯರಿಗೆ ಜಾಮೀನು ಅಂತಿರಲಿ, ವಿಚಾರಣೆಯೇ ಇಲ್ಲದೆ ವರ್ಷಗಳ ಕಾಲ ಜೈಲಿನಲ್ಲಿ ಕೊಳೆಯುವಂತೆ ಮಾಡುತ್ತಾರೆ.

ಕೇಜ್ರಿವಾಲ್ ಜಾರಿ ನಿರ್ದೇಶನಾಲಯದೆದುರು ವಿಚಾರಣೆಗೆ ಹಾಜರಾಗಲು ನ್ಯಾಯಾಲಯ ಮಧ್ಯೆ ಪ್ರವೇಶಿಸಬೇಕಾಯಿತು. ಇದಕ್ಕೂ ಮಿಗಿಲಾಗಿ, ಕೇಜ್ರಿವಾಲ್ ಬಂಧನವಾದ ಕೂಡಲೇ ಅಮೆರಿಕ, ಜರ್ಮನಿ ಮುಂತಾದ ದೇಶಗಳಲ್ಲಿ ಪ್ರತಿಭಟನೆ ನಡೆಯುತ್ತದೆ? ಭ್ರಷ್ಟಾಚಾರದಂತಹ ಗುರುತರ ಆಪಾದನೆ ಇದ್ದರೂ ಚುನಾವಣಾ ಪ್ರಚಾರಕ್ಕಾಗಿ ಜಾಮೀನು ಸಿಗುತ್ತದೆ. ಜಾಮೀನಿನ ಮೇಲೆ ಹೊರಗೆ ಬಂದ ಕೂಡಲೇ ದೇಶದ ಒಳಗೆ ಮಾತ್ರವಲ್ಲ, ಕೆನಡಾದಂತಹ ದೇಶದಲ್ಲಿ ಖಲಿಸ್ತಾನ್ ಬೆಂಬಲಿಸುವ ಪ್ರದೇಶದಲ್ಲಿ, ಸಂಭ್ರಮಾಚರಣೆ ನಡೆಯುತ್ತದೆ,ಮಾತ್ರವಲ್ಲ ಮೋದಿಯವರ ಪ್ರತಿಕೃತಿಯನ್ನು ಒಂದು ಜೈಲಿನ ರೂಪದ ಕಟಾಂಜನದಲ್ಲಿ ಇರಿಸಿ ಘೋಷಣೆ ಕೂಗಲಾಗುತ್ತದೆ. ಇಂತಹ ದೇಶ ವಿರೋಧಿ ಕೃತ್ಯಕ್ಕೆ ಏನನ್ನೋಣ? ಇಷ್ಟು ಮಾತ್ರವಲ್ಲ, ಜಾರಿ ನಿರ್ದೇಶನಾಲಯ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದರೂ ಕೇಜ್ರಿವಾಲ್ ಸಂಪುಟದ ಹಲವಾರು ಸದಸ್ಯರು ವರ್ಷಗಳಿಂದ ಜೈಲಿನಲ್ಲಿದ್ದು ಅವರ ಶಿಕ್ಷೆಯನ್ನು ನ್ಯಾಯಾಲಯ ನೀಡಿದ್ದಾದರೂ, ಚುನಾವಣಾ ಭಾಷಣದಲ್ಲಿ, ತಾನು, ತನ್ನ ಬೆಂಬಲಿಗರು ಬಿಜೆಪಿ ಕಚೇರಿಗೆ ಬರುವುದಾಗಿ, ಈಗಾಗಲೇ ಜೈಲಿನಲ್ಲಿ ಇರುವ ಸಿಸೋಡಿಯಾ ಮುಂತಾದವರೊಂದಿಗೆ ತಮ್ಮನ್ನೂ ಜೈಲಿಗೆ ಕಳುಹಿಸಲಿ ಎಂದು ಪಂಥಾಹ್ವಾನ ನೀಡುತ್ತಾರೆ. ಎಲ್ಲಿಂದೆಲ್ಲಿಯ ಸಂಬಂಧ?

ಚುನಾವಣಾ ಪ್ರಚಾರಕ್ಕೆ ಜಾಮೀನು ನೀಡಿದ ಮಾದರಿಯಲ್ಲಿ ತನಗೂ ಜಾಮೀನು ನೀಡುವಂತೆ ಓರ್ವ ಉಗ್ರಗಾಮಿ ಅರ್ಜಿ ಸಲ್ಲಿಸುತ್ತಾನೆ. ಸಾಲದೆಂಬಂತೆ ಜಾರಿ ನಿರ್ದೇಶನಾಲಯ ನ್ಯಾಯಾಲಯದ ಪೂರ್ವ ಅನುಮತಿ ಇಲ್ಲದೆ ಯಾರನ್ನೂ ಬಂಧಿಸುವಂತಿಲ್ಲ ಎಂದು ಆದೇಶ ಹೊರಡಿಸುತ್ತದೆ. ಸಿಬಿಐ ಅಥವಾ ಜಾರಿ ನಿರ್ದೇಶನಾಲಯ ವಿಚಾರಣೆಯ ಹಂತದಲ್ಲಿ ಬಂಧಿಸಿದರೂ ತಕ್ಷಣವೇ ನ್ಯಾಯಾಲಯದೆದುರು ಹಾಜರುಪಡಿಸಿ, ಅನುಮತಿ ಪಡೆದೇ ವಶಕ್ಕೆ ಪಡೆಯುತ್ತದೆ. ಹಾಗಿರುವಾಗ, ಮುಂದೊಮ್ಮೆ ರಾಷ್ಟ್ರೀಯ ಭದ್ರತಾ ದಳ ಯಾರನ್ನಾದರೂ ದೇಶದ್ರೋಹದ ಆಪಾದನೆ ಮೇರೆಗೆ ವಶಕ್ಕೆ ತೆಗೆದುಕೊಳ್ಳಬೇಕಾದರೂ ನ್ಯಾಯಾಲಯದ ಪೂರ್ವಾನುಮತಿ ಬೇಕು ಎಂದರೆ ಪರಿಸ್ಥಿತಿ ಏನಾಗಬಹುದು?

ಕೊನೆಯದಾಗಿ, ಎರಡು ವಿಭಿನ್ನ ಪ್ರಕರಣಗಳಲ್ಲಿ ಇಬ್ಬರು ಹಿಂದೂ ಹುಡುಗಿಯರ ಕಗ್ಗೊಲೆಯಾಗುತ್ತದೆ. ಒಂದಕ್ಕೆ ಸಂಬಂಧಿಸಿ ವಿಶೇಷ ನ್ಯಾಯಾಲಯ ಸ್ಥಾಪಿಸಲಾಗುವುದೆಂದು ಮುಖ್ಯಮಂತ್ರಿ ಘೋಷಣೆ ಮಾಡುತ್ತಾರೆ. ಇನ್ನೊಂದರ ಬಗ್ಗೆ ಮೌನ. ವಿಷಯ ಇಷ್ಟೇ, ಮೊದಲನೇ ಪ್ರಕರಣದಲ್ಲಿ ಕೊಲೆ ಮಾಡಿದವ ಹಿಂದೂ. ಇನ್ನೊಂದರಲ್ಲಿ ಅಪರಾಧಿ ಅನ್ಯ ಧರ್ಮೀಯ!

ಜನರ ಆಶೋತ್ತರಗಳಿಗೆ ಪೂರಕ ಆಡಳಿತವಿದ್ದರೆ ಅದು ಪ್ರಜಾಪ್ರಭುತ್ವ, ಬದಲಿಗೆ ಸ್ವಾರ್ಥ ಸಾಧನೆಗಾಗಿ ಇದ್ದಾಗ ಮಜಾ ಪ್ರಭುತ್ವ. ಇದೇ ಇಂದಿನ ವ್ಯವಸ್ಥೆಯ ನಿಜವಾದ ಮುಖ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬಸ್ ದರ ಏರಿಕೆ ಸರಿಯಲ್ಲ?

18ನೇ ಲೋಕಸಭೆ ಫಲಿತಾಂಶದ ನಂತರ ರಾಜ್ಯದಲ್ಲಿ ಸರಕಾರಿ ಬಸ್‌ದರ ಏರಿಕೆಗೆ ಸಾರಿಗೆ ಸಚಿವರು ಯೋಚಿಸುತ್ತಿರುವುದು ಪುರುಷ ಪ್ರಯಾಣಿಕರಲ್ಲಿ ಚಳಿ ಮೂಡಿಸಿದೆ. ರಾಜ್ಯದ ಮಹಿಳೆಯರಲ್ಲಿ ಶಕ್ತಿ ಯೋಜನೆ ಖುಷಿ ಮೂಡಿಸಿದೆ. ಮಹಿಳೆಯರಿಗೆ ಉಚಿತ ಶಕ್ತಿ ಯೋಜನೆಯಿದ್ದರೂ ಪುರುಷ ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಕಾರಣ ಕಳೆದ ಒಂದು ವರ್ಷದಲ್ಲಿ ರಾಜ್ಯ ಸಾರಿಗೆ ಸಂಸ್ಥೆಗೆ ಮೂರು ಸಾವಿರ ಕೋಟಿ ರು. ಲಾಭ ಬಂದಿದೆ ! ಹೀಗಿರುವಾಗ ಬಸ್ ಪ್ರಯಾಣ ದರ ಏರಿಕೆ ಬರೇ ಪುರುಷರಿಗಷ್ಟೇ ಹಾಕುವುದು ಸರಿಯೇ?

ಮಹಿಳೆಯರಿಗೆ ಮಾಸಿಕ ಬಸ್ ಪಾಸ್ ಮಾದರಿ ಪ್ರತಿ ತಿಂಗಳು 100 ರು. ಅಥವಾ 50 ರು. ಎಂದು ವಸೂಲು ಮಾಡಿದರೂ ಸಾರಿಗೆ ಸಂಸ್ಥೆಗೆ ಕೊಂಚ ಆದಾಯ ಬರುತ್ತದೆ ಅಲ್ಲವೇ? ! ವಿದ್ಯಾರ್ಥಿಗಳ ಪಾಸ್ ದರವನ್ನು ಕೊಂಚ ಮಾತ್ರ ಏರಿಸಿದರೂ ಸಂಸ್ಥೆಯ ಆಧಾರ ಸ್ವಲ್ಪ ಏರುತ್ತದೆ. ಸಾರಿಗೆ ಸಂಸ್ಥೆಯ ನಿರ್ವಹಣೆ ನಷ್ಟದ ಎಲ್ಲಾ ಹೊರೆ ಬರೆಯನ್ನು ಪುರುಷ ಪ್ರಯಾಣಿಕರಿಗೆ ಮಾತ್ರ ಹಾಕುವುದು ಎಂತಹ ನ್ಯಾಯ.?

ಪುರುಷ ಪ್ರಯಾಣಿಕರ ಸಿಟ್ಟು ಈ ಜೂನ್‌ನ ಲೋಕಸಭೆಯ ಫಲಿತಾಂಶದಲ್ಲಿ ಪ್ರಕಟವಾಗಿದ್ದರೂ, ಸಿ.ಎಂ. ಹಾಗೂ ಡಿಸಿಎಂ ಸಾಹೇಬರು ಪುರುಷ ಪ್ರಯಾಣಿಕರಿಗೆ ಶಾಪವಾಗುವ ಬಸ್ ದರ ಏರಿಕೆಯ ಬಗ್ಗೆ ಸೂಕ್ತ ಕ್ರಮ ಕೈಗೊಂಡರೆ ಚೆನ್ನ. ಜನಪ್ರಿಯ ಸಚಿವ, ಪ್ರಭಾವಿ ನಾಯಕ, ಜನಪ್ರಿಯ ನಾಯಕಿ- ಶಾಸಕಿ ಯಾಗಿದ್ದ ಸೌಮ್ಯರೆಡ್ಡಿ, ಈ 18ನೇ ಲೋಕಸಭೆ ಚುನಾವಣೆಯಲ್ಲಿ ಸೋತಿದ್ದು, ಪುರುಷ ಪ್ರಯಾಣಿಕರ ಶಾಪದಿಂದ ಎನ್ನುವ ಸಂಗತಿ ತಮಾಷೆ ಎನಿಸಿದರೂ ಸಿ.ಎಂ. ಸಾಹೇಬರು ಬಸ್ ದರ ಏರಿಕೆ ಬಗ್ಗೆ ಮತ್ತೊಮ್ಮೆ ಯೋಚಿಸಬಾರದೇ?

- ಮಂಜುಳಾ ರಾಮಶೇಷ, ಹುಲಿಮಂಗಲ

ಮಳೆಗಾಲದಲ್ಲಿ ವಿದ್ಯುತ್ ಅವಘಡದ ಬಗ್ಗೆಯಿರಲಿ ಎಚ್ಚರ

ಬಾಗಲಕೋಟೆ ಜಿಲ್ಲೆ ಮುಧೋಳ್ ತಾಲೂಕಿನ ಗ್ರಾಮವೊಂದರಲ್ಲಿ ಕಟ್ಟಡಕ್ಕೆ ನೀರು ಹೊಡೆಯಲು ಸ್ವಿಚ್ ಆನ್ ಮಾಡಲು ಹೋಗಿ, ಮುಟ್ಟಿದ ಕೂಡಲೇ ಸ್ವಿಚ್ ಬೋರ್ಡ್‌ನಲ್ಲಿ ವಿದ್ಯುತ್ ಸ್ಪರ್ಶವಾಗಿ ಶಾಕ್ ಹೊಡೆದಿದೆ, ಪರಿಣಾಮ ಕ್ಷಣಾರ್ಧದಲ್ಲಿ ಯುವಕನೊಬ್ಬನ ಪ್ರಾಣಪಕ್ಷಿ ಹಾರಿ ಹೋಗಿದೆ. ಈ ರೀತಿಯ ಅವಘಡಗಳು ಮಳೆಗಾಲದಲ್ಲಿ ಹೆಚ್ಚು.

ಮಳೆ ಆರಂಭವಾಗುವ ಸೂಚನೆ ತಿಳಿದ ತಕ್ಷಣಕ್ಕೆ ಮನೆಯಲ್ಲಿರುವ ಎಲೆಕ್ಟ್ರಾನಿಕ್ ಉಪಕರಣಗಳನ್ನು ಅನ್‌ಪ್ಲಗ್ ಮಾಡಿ. ಯಾವುದೇ ಕಾರಣಕ್ಕೂ ಮಳೆ ಆರಂಭವಾದ ಮೇಲೆ ಅಥವಾ ಗುಡುಗು ಸಿಡಿಲು ಬರುವಾಗ ಅನ್‌ಪ್ಲಗ್ ಮಾಡಲು ಪ್ರಯತ್ನಿಸಬೇಡಿ. ಇದರಿಂದ ಮನೆಯ ವಿದ್ಯುತ್ ಸಂಪರ್ಕಕ್ಕೆ ಮಾತ್ರವಲ್ಲ, ಪ್ರಾಣಾಪಾಯವೂ ಎದುರಾಗುವ ಸಾಧ್ಯತೆ ಹೆಚ್ಚು. ಮಳೆಗಾಲದಲ್ಲಿ ತೇವಾಂಶ ಹೆಚ್ಚುವುದು ಸಹಜ. ಗೋಡೆ ಅಥವಾ ಕಿಟಕಿಯ ಭಾಗದಿಂದ ಸ್ವಿಚ್‌ಬೋರ್ಡ್‌ಗೆ ನೀರು ತಾಕುತ್ತಿದ್ದೆಯೇ ನೋಡಿಕೊಳ್ಳಿ. ಒಂದು ವೇಳೆ ನೀರು ತಾಕುತ್ತಿದ್ದರೆ, ಅದಕ್ಕೆ ನೀರು ತಾಕದಂತೆ ಸೂಕ್ತ ವ್ಯವಸ್ಥೆ ಮಾಡಿ. ಮಳೆ, ಗುಡುಗು ಬರುವಾಗ ಯಾವುದೇ ಕಾರಣಕ್ಕೂ ನೀರಿನಂಶ ಇರುವ ಸ್ವಿಚ್ ಬೋರ್ಡ್‌ಗಳನ್ನು ಮುಟ್ಟದಿರಿ. ಮಳೆಗಾಲದಲ್ಲಿ ಬೇಡವೆಂದರೂ ಕೈ ಒದ್ದೆಯಾಗುತ್ತಿರುತ್ತದೆ. ಹಾಗಂತ ಗಡಿಬಿಡಿಯಲ್ಲಿ ಒದ್ದೆಯಲ್ಲಿ ಸ್ವಿಚ್ ಬೋರ್ಡ್ ಮುಟ್ಟುವ ಸಾಹಸಕ್ಕೆ ಕೈ ಹಾಕಬೇಡಿ. ಮಳೆಗಾಲದಲ್ಲಿ ಸ್ವಿಚ್ ಬೋರ್ಡ್ ಬಳಸುವ ಮುನ್ನ ಸಾಕಷ್ಟು ಎಚ್ಚರಿಕೆ ವಹಿಸಿ. ಒದ್ದೆ ಕೈಯಿಂದ ಮುಟ್ಟಿದಾಗ ಶಾಕ್ ಹೊಡೆಯುವ ಅಪಾಯವು ಹೆಚ್ಚಿರುತ್ತದೆ.

- ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ವಿಚ್ಛೇದನ ಹೆಚ್ಚಳ ಆತಂಕಕಾರಿ ಬೆಳವಣಿಗೆ!

ಇತ್ತೀಚೆಗೆ ವಿಚ್ಛೇದನ ಪ್ರಕರಣಗಳು ಹೆಚ್ಚುತ್ತಿವೆ. ಚಂದನ್ ಶೆಟ್ಟಿ ಹಾಗೂ ನಿವೇದಿತಾ ಗೌಡರವರ ವಿಚ್ಛೇದನ ಪ್ರಕರಣ ಇನ್ನೂ ಹಸಿ ಹಸಿ ಆಗಿರುವಾಗಲೇ, ದೊಡ್ಡನೆಯಿಂದ ಯುವರಾಜ್ ಕುಮಾರ್ ದಂಪತಿಗಳು ಕೂಡ ವಿಚ್ಛೇದನಕ್ಕೆ ಮುಂದಾಗಿರುವುದು ಆತಂಕಪಡುವ ಸಂಗತಿಯಾಗಿದೆ. ಇವರೆಲ್ಲ ಸೆಲೆಬ್ರಿಟಿಗಳು ಆಗಿದ್ದರಿಂದ ಹೆಚ್ಚು ಪ್ರಚಾರಗಳು ಆಗಿವೆ. ಆದರೆ ನಿತ್ಯ ಜನಸಾಮಾನ್ಯರ ಜೀವನದಲ್ಲಿ ಇಂತಹ ಹಲವಾರು ಘಟನೆಗಳು ನಡೆಯುತ್ತಲೇ ಇರುತ್ತವೆ. ಮೊದಲೆಲ್ಲ ದಂಪತಿಗಳು ಏನೇ ಸಮಸ್ಯೆ ಇದ್ದರೂ ಅದನ್ನು ಸಹಿಸಿಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ ಈಗ ಪ್ರತಿಯೊಬ್ಬರೂ ಸ್ವತಂತ್ರರಾಗಿದ್ದಾರೆ. ಸಹಿಸಿಕೊಳ್ಳುವ ಮನಸ್ಥಿತಿ ಕೂಡ ಬದಲಾಗಿದೆ. ಸಂಬಂಧಗಳ ಮೌಲ್ಯ ಕಡಿಮೆಯಾಗಿದೆ. ಇತ್ತೀಚೆಗೆ ಸಣ್ಣಪುಟ್ಟ ಸಂಗತಿಗಳಿಗೆಲ್ಲ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುವುದು ಸಾಮಾನ್ಯವಾಗಿ ಬಿಟ್ಟಿದೆ.

ಸಮಸ್ಯೆಗಳ ಕುರಿತು ದಂಪತಿಗಳಿಬ್ಬರೂ ಮುಕ್ತವಾಗಿ ಮಾತನಾಡದೇ, ಚರ್ಚಿಸದೇ ಇರುವುದು, ತಪ್ಪು ಒಪ್ಪಿಕೊಳ್ಳದೇ ಪ್ರತಿಯೊಂದಕ್ಕೂ ವಾದ ಮಾಡುವುದು ವಿಚ್ಛೇದನಗಳು ಹೆಚ್ಚಾಗಲು ಬಹುದೊಡ್ಡ ಕಾರಣವಾಗುತ್ತಿದೆ. ವಿಚ್ಛೇದನದ ಕಾರಣದಿಂದಾಗಿ ಪೋಷಕ-ಮಕ್ಕಳ ಸಂಬಂಧವು ತೊಂದರೆಗೊಳಗಾಗುವ ಅನೇಕ ನಿದರ್ಶನಗಳಿವೆ. ಹೆತ್ತವರ ವಿವಾಹದ ವಿಘಟನೆಯಿಂದ ಮಕ್ಕಳ ಮೇಲೆ ಹಾಗೂ ವೃದ್ಧಾಪ್ಯದ ಅಂಚಿನಲ್ಲಿರುವ ಪೋಷಕರ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ. ಮನುಷ್ಯ ಮನುಷ್ಯರ ನಡುವೆ ಬಿರುಕುಗಳು ಉಂಟಾಗಿ ಮಾನವೀಯ ಸಂಬಂಧಗಳು, ಬಾಂಧವ್ಯಗಳ ಕೊರತೆ ಹೆಚ್ಚಾಗುತ್ತಿದೆ. ವಿಚ್ಛೇದನವು ಪ್ರತಿದಿನ ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕ ಒತ್ತಡಕ್ಕೆ ಸಿಲಿಕಿಸುತ್ತದೆ. ಹೀಗಾಗಿ ಪ್ರತಿಯೊಬ್ಬ ದಂಪತಿಯು ಶಾಂತಿ ಹಾಗೂ ಸಹಾನುಭೂತಿಯ ಪ್ರತಿಕ್ರಿಯೆಯೊಂದಿಗೆ ಭಾವನಾತ್ಮಕವಾಗಿ ಬದುಕಲು ಆರಂಭಿಸುವುದು ಒಳ್ಳೆಯ ಬೆಳವಣಿಗೆ ಆಗಿದೆ.

- ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ನಟರಿಂದ ಮಾದರಿ ಕಾರ್ಯವಾಗಬೇಕು

ಬೆಳ್ಳಿ ಪರದೆಯ ಮೇಲೆ ನಾಯಕ ನಟನಾಗಿ ಮಿಂಚಿದ್ದ ನಟ ದರ್ಶನ ಇದೀಗ ಕೊಲೆ ಪ್ರಕರಣದಲ್ಲಿ ಸೆರೆಯಾಗಿರುವುದು ಜನರನ್ನು ಬೆಚ್ಚಿಬೀಳಿಸುವಂತಹ ಸಂಗತಿಯಾಗಿದೆ. ಕೋಟ್ಯಾನುಗಟ್ಟಲೆ ಅಭಿಮಾನಿಗಳನ್ನು ಹೊಂದಿರುವ ಇಂತಹ ಸೆಲೆಬ್ರೆಟಿಗಳು ಜನರಿಗೆ ಮಾದರಿಯಾಗುವಂತಹ ಕಾರ್ಯಗಳನ್ನು ಮಾಡಬೇಕೆ ಹೊರೆತು ಕೊಲೆಗಳಂತಹ ಅಮಾನವೀಯ ಕೃತ್ಯಗಳಲ್ಲ. ಅದೇನೆ ಇರಲಿ ದರ್ಶನ ಅವರ ಬಂಧನವು ಸೆಲಿಬ್ರೆಟಿಗಳೆ ಆಗಲಿ, ರಾಜಕಾರಣಿಗಳೆ ಆಗಲಿ ಕಾನೂನು ಎಲ್ಲರಿಗು ಒಂದೇ ಎನ್ನುವುದನ್ನು ತೋರಿಸಿಕೊಟ್ಟಿದೆ. ಅದಷ್ಟೇ ಅಲ್ಲದೆ ಜನ ಸಾಮಾನ್ಯರಿಗೂ ಕೂಡ ನ್ಯಾಯ ದೊರೆಯುತ್ತದೆ ಎನ್ನುವ ನಂಬಿಕೆಯನ್ನು ಮೂಡಿಸುವಂತಿದೆ. ಒಟ್ಟಿನಲಿ ನಟ ದರ್ಶನ ಕೊಲೆ ಆರೋಪವನ್ನು ಹೊಂದಿದ್ದು ನ್ಯಾಯಬದ್ಧ ತನಿಕೆ ನಡೆದು ಅಪರಾಧ ಮಾಡಿರುವುದಾಗಿ ಖಾತರಿಯಾದಲ್ಲಿ ತಕ್ಕ ಶಿಕ್ಷೆ ನೀಡುವ ಮೂಲಕ ಕಾನೂನಿನ ಮುಂದೆ ಎಲ್ಲರು ಒಂದೇ ಎನ್ನುವುದನ್ನು ಮತ್ತೊಮ್ಮೆ ಸಾಬಿತು ಮಾಡಬೇಕಿದೆ.

- ಲಕ್ಷ್ಮೀ. ಶಿವಣ್ಣ ದೇವದುರ್ಗ.

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಮಧ್ವರಾಯ, ಉಡುಪಿ**
ಭಟ್ರೇ, 'ಮಣ್ಣಿನ ಮಗ' ತನ್ನ ಖಾತೆಯನ್ನು ಚೆನ್ನಾಗಿ ನಿರ್ವಹಿಸಿದರೆ ಮುಂದೆ ಏನೆಂದು ಪ್ರಸಿದ್ಧಿ ಹೊಂದಿಯಾರು?
– ಉಕ್ಕಿನ ಮಗ!

● **ರುಕ್ಕು, ಚಾಮರಾಜ ಪೇಟೆ**
ಹಿಂದೆ ಜನರು ಸಿನಿಮಾಗಳಲ್ಲಿ ವಿಲನ್ ಅನ್ನು ಹೀರೋ ಹೊಡಿಯುವುದನ್ನು ನೋಡಿ ಸಂತಸ ಪಡುತ್ತಿದ್ದರು. ಈಗಿನವರು?
– ಈಗಿನ ಹೀರೊ ನಿಜವಾಗಿಯೂ ಮರ್ಡರ್ ಮಾಡಿಸುತ್ತಿದ್ದಾರೆ!

● **ಪೂರ್ಣಯ್ಯ, ಮೈಸೂರು**
ನೀಲವೇಣಿ ಖ್ಯಾತಿಯ ಹುಡುಗಿಯರು ಕೂದಲನ್ನು ಕತ್ತರಿಸಿಕೊಳ್ಳೋದು ಸರಿಯೇ?
– 'ನಿನ್ನ ಜಡೆ ಹಾವಿನ ಹೆಡೆ' ಎನ್ನುವ ಹುಡುಗರ ಮಾತು ಕೇಳಿಯೂ ಸುಮ್ಮನಿರಬೇಕಾ?!

● **ಅನಂತ ಪದ್ಮನಾಭ, (ಇಮೇಲ್ ಮೂಲಕ)**
ಭಟ್ರೇ, ಸಚಿವರಾಗುವವರು ಎರಡೆರಡು ಬಾರಿ ಪ್ರಮಾಣ ವಚನ ಮಾಡುತ್ತಾರಲ್ಲ ಯಾಕೆ?
– ಪ್ರಮಾಣ ವಚನ ಸ್ವೀಕಾರ ಮಾಡುತ್ತಿರುವುದು ನಾನೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಪವನ್ ಕಲ್ಯಾಣ್ ಬಿರುಗಾಳಿಯಾದ್ರೆ, ಮೋದಿಜೀ?
– ಸುಂಟರಗಾಳಿ!

● **ರಾಜೇಶ ಪದ್ಯಾಣ, ಬೆಂಗಳೂರು**
ಭಟ್ರೇ, ಸೋಮಣ್ಣಗೆ ಒಳ್ಳೆಯ ಖಾತೆ ಕೊಟ್ಟಿದ್ದಾರಲ್ಲ?
– ಅವರಿಗೆ ರೈಲು ಬಿಡೋದು ಗೊತ್ತು ಅಂತ ಆ ಖಾತೆ ಕೊಟ್ಟಿದ್ದಾರಂತೆ!

● **ನವೀನ ಶ್ರೇಷ್ಠಿ, ಶಿವಮೊಗ್ಗ**
ಭಟ್ರೇ, ಇಲ್ಲೊಬ್ಬ ವಾಟ್ಸಾಪ್ ಮೆಸೇಜುಗಳನ್ನು ಓದುವುದರಲ್ಲಿಯೇ ಕಾಲ ಕಳೆಯುತ್ತಾನಲ್ಲ?
– ಅದು ಅವನೊಬ್ಬನ ಸಮಸ್ಯೆಯಾಗಿದ್ದರೆ ಯೋಚಿಸಬಹುದಿತ್ತು!

● **ನಿರ್ಮಲಾ ಗೋಪಾಲ, ಧಾರವಾಡ**
ಭಟ್ರೇ, ಎಲ್ಲ ಹುಡುಗರೂ ಅಲ್ಲೇ ಫೇಲ್ ಆಗ್ತಾರಲ್ಲ?
– ಹೂಂ.. ಹೆಂಡತಿಯನ್ನು ಆರಿಸುವಾಗ!

● **ಯಶೋದಾ ವಿ.ರಾವ್, ಮೈಸೂರು**
ಭಟ್ರೇ, ನನ್ನ ಯಜಮಾನರಿಗೆ ನೆನಪಿನ ಸಮಸ್ಯೆ. ನನ್ನನ್ನು 'ನೀನು ಯಾರು' ಅಂತ ಕೇಳುತ್ತಾರಲ್ಲ?
– ಬೇರೆ ಹೆಂಗಸನ್ನು ಮದುವೆಯಾಗಿ ಬಂದು 'ನೀನು ಯಾರು' ಅಂತ ಕೇಳುವವರನ್ನು ನೋಡಿದ್ದರೆ ನೀನು ಏನು ಹೇಳ್ತಾ ಇದ್ಯೋ?!

ಭಾರತ ಬೆಳಗಲು ಮೋದಿ ಆಡಳಿತವೇ ಕಾರಣ

ಹತ್ತು ವರ್ಷಗಳ ಮೋದಿ ಆಡಳಿತದಲ್ಲಿ ಭಾರತವು ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ಉಲ್ಲೇಖನೀಯ

ಅಭಿಮತ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
vveditoped@gmail.com

ಭಾರತ ಪ್ರಕಾಶಿಸುತ್ತಿದೆ ಎಂಬ ಶಬ್ದ ಭಾರತದಲ್ಲಿ ಮೊತ್ತಮೊದಲು ಮೊಳಗಿದ್ದೇ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರದ ಅವಧಿಯಲ್ಲಿ. ವಾಜಪೇಯಿಯವರ ಆಡಳಿತದಲ್ಲಿ ಗ್ರಾಮ ಸಡಕ್ ರಸ್ತೆ, ಕುಡಿಯುವ ನೀರು, ಮೂಲಭೂತ ಸೌಕರ್ಯ ಸೇರಿದಂತೆ ಅಭಿವೃದ್ಧಿ ಕಾರ್ಯಗಳು ಜನಸಾಮಾನ್ಯರ ಮನೆ ಬಾಗಿಲಿಗೆ ತಲುಪಿ, ಜನಮಾನಸದಲ್ಲಿ ಅಚ್ಚಳಿಯದೆ ಉಳಿದ ಕಾರಣಕ್ಕೆ ಇಂದಿಗೂ ಅಟಲ್ ಬಿಹಾರಿ ವಾಜಪೇಯಿ ಹೆಸರು ಪಕ್ಷಾತೀತ, ಧರ್ಮಾತೀತವಾಗಿ ಸದಾ ಅಜರಾಮರವಾಗಿ ಉಳಿದಿದೆ. ವಾಜಪೇಯಿ ನಂತರ ಬಂದ ಸರಕಾರಗಳು ಕೇಂದ್ರದಲ್ಲಿ ಹಗರಣಗಳ ಸುಳಿಗೆ ಸಿಲುಕಿ ನರೇಂದ್ರ ಮೋದಿಯವರ ಅಲೆಯಲ್ಲಿ ಕೊಚ್ಚಿಹೋಗಿರುವ ಕಾರಣಕ್ಕೆ ಇಂದಿಗೂ ಚೇತರಿಕೆ ಕಂಡಿಲ್ಲ. ಕಳೆದೊಂದು ದಶಕಗಳ ಹಿಂದೆ ಗುಜರಾತ್ ನ ಮುಖ್ಯಮಂತ್ರಿಯಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮದ ಮೂಲಕ ಅಲ್ಲಿನ ಪ್ರಶ್ನಾತೀತ ನಾಯಕರಾಗಿ ಹೊರಹೊಮ್ಮುತ್ತಲೇ ಬಂದ ಮೋದಿ ಹೆಸರು ಗೋಧ್ರಾ ಘಟನೆಯ ಸಂದರ್ಭದಲ್ಲಿ ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಪರ ವಿರೋಧ ಚರ್ಚೆಗೆ ನಾಂದಿ ಹಾಡಿತು. ವಿರೋಧಿಗಳು ಈ ವ್ಯಕ್ತಿಯನ್ನು ಸಾಕಷ್ಟು ಬಾರಿ ಸಮಾಜದ ಮುಂದೆ ಖಳ ನಾಯಕರಂತೆ ಬಿಂಬಿಸಲು ಹೊರಟರೂ, ರಾಜಕೀಯವಾಗಿ ಕಪ್ಪುಚುಕ್ಕೆಯನ್ನು ತರಲೆತ್ನಿಸಿದರೂ ಇದ್ಯಾವುದಕ್ಕೂ ಸೊಪ್ಪು ಹಾಕದೇ ಅಭಿವೃದ್ಧಿ ಹಾಗೂ ಸಂಘಟನಾ ಮಂತ್ರವನ್ನಷ್ಟೇ ಮೊಳಗಿಸಿದ ಕಾರಣಕ್ಕೆ ಮೋದಿ ನಾಯಕತ್ವ ವಾಜಪೇಯಿ, ಅಡ್ವಾಣಿ ಬಳಿಕ ಬಿಜೆಪಿಗೆ ಅನಿವಾರ್ಯತೆಯನ್ನು ಸೃಷ್ಟಿಸಿತು. ಸಾಮಾಜಿಕ ಮಾಧ್ಯಮ, ದೃಶ್ಯ ಮಾಧ್ಯಮ, ಕೈಗಾರಿಕಾ ರಂಗ, ಉದ್ಯಮ ರಂಗ, ಸಿನಿಮಾ, ಕ್ರೀಡೆ, ಸಾಂಸ್ಕೃತಿಕ ಹಿನ್ನೆಲೆಯ ಪ್ರಮುಖರಿಂದ ಹಿಡಿದು ಜನಸಾಮಾನ್ಯರ ಬಾಯಲ್ಲೂ ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿಯವರನ್ನು ಕಾಣಬೇಕೆಂಬ ಹಂಬಲ,ಆಗ್ರಹ ಬಹುದೊಡ್ಡ ಪ್ರಮಾಣದಲ್ಲಿ ಅಂದು ವ್ಯಕ್ತವಾಗಿತ್ತು. ಮೋದಿಗಾಗಿ ಲಕ್ಷಗಟ್ಟಲೆ ಯುವಕಾರ್ಯಕರ್ತರ ಪಡೆ, ಮೋದಿ ಬ್ರಿಗೇಡ್, ನಮೋ ಸೇನೆ, ನಮೋ ಭಾರತ್, ಯುವ ಭಾರತ್ ನಾನಾ ಹೆಸರುಗಳಲ್ಲಿ ಪಕ್ಷದಿಂದ ಹೊರತಾಗಿ ಸ್ವತಃ ಫೀಲ್ಡಿಗಿಳಿದು ಸ್ವಯಂಪ್ರೇರಿತವಾಗಿ ಕೆಲಸ ನಿರ್ವಹಿಸಿದ ಕಾರಣಕ್ಕೆ ಸ್ವಂತ ಬಲದಲ್ಲಿ ಬಿಜೆಪಿ ಪಕ್ಷ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಆಡಳಿತದ ಚುಕ್ಕಾಣಿ ಹಿಡಿಯಿತು.

ಮೊದಲ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಯೋಜನೆಗಳು, ರಕ್ಷಣಾ ವ್ಯವಸ್ಥೆಯಲ್ಲಿನ ಅಮೂಲಾಗ್ರ ಬದಲಾವಣೆ, ಸೇರಿದಂತೆ ಪಾರದರ್ಶಕತೆಯ ಆಡಳಿತದ ಮೂಲಕ ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವುದಲ್ಲದೆ ಎರಡನೇ ಅವಧಿಯ ಲೋಕಸಭಾ ಚುನಾವಣೆಯಲ್ಲಿ ಕೂಡ ಸ್ವಂತ ಬಲದಲ್ಲಿ ಮೋದಿ ಅಲೆಯಲ್ಲಿ ಬಾಜಾಪ ತನ್ನ ಅಧಿಕಾರದ ಗದ್ದುಗೇರಿರುವುದು ಇತಿಹಾಸ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ, ಆಯುಷ್ಮಾನ್ ಭಾರತ್, ಜಮ್ಮು ಕಾಶ್ಮೀರದಲ್ಲಿನ 371ವಿಧಿ ರದ್ದು, ಬಾಂಗ್ಲಾ ಅಕ್ರಮ ನುಸುಳುಕೋರರಿಗೆ ನಿರ್ಬಂಧ, ಪಾಕ್ ಹಾಗೂ ಚೀನಾ ಗಡಿ ಕ್ಯಾತೆಗೆ ಅಂಕುಶ, ಭವ್ಯ ರಾಮ ಮಂದಿರ ನಿರ್ಮಾಣ, ಕಾಶಿ, ಮಥುರಾ ಕಾರಿಡಾರ್ ಯೋಜನೆ, ತ್ರಿವಳಿ ತಲಾಖ್ ರದ್ದು, ಮೋದಿ ಕ್ಯಾಬಿನೆಟ್ ಕ್ಲೀನ್ ಇಮೇಜ್ ಹೀಗೆ ಸಾವಿರಾರು ಮೋದಿ ಚಿಂತನೆಯ ದೂರದೃಷ್ಟಿಯ ಅಭಿವೃದ್ಧಿ ಯೋಜನೆಗಳು ಭವ್ಯ ಭಾರತದ ಅಡಿಪಾಯವಾಗಿದೆ. ಹಿಂದಿನ ಸರಕಾರಗಳ ಅವಧಿಯಲ್ಲಿ ಭಾರತವನ್ನು ವಿದೇಶಿಗರು ಅವಮಾನಿಸುವ ಸಂಗತಿಗಳು ಎದುರಾಗಿದ್ದರೂ ಪ್ರಸ್ತುತ ಭಾರತ ವಿಶ್ವಗುರುವಾಗುವತ್ತ, ಭಾರತದ ಕಡೆಗೆ ಭರವಸೆಗಳು, ವಿಶ್ವಾಸನೀಯ ಭಾವನೆಗಳು ಜಾಗತಿಕ ಮಟ್ಟದಲ್ಲಿದೆ. ಭ್ರಷ್ಟಾಚಾರ ಮುಕ್ತ ಭಾರತದ ಪರಿಕಲ್ಪನೆ ಏನಿದ್ದರೂ ಹಿಂದಿನ ಅಟಲ್ ಬಿಹಾರಿ ವಾಜಪೇಯಿ ಹಾಗೂ ಹಾಲಿ ನರೇಂದ್ರ ಮೋದಿಯವರ ಆಡಳಿತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದಿದೆ. ನರೇಂದ್ರ ಮೋದಿ ಎಂಬುದು ಕೇವಲ ವ್ಯಕ್ತಿಯಾಗಿರದೆ ಜಾಗತಿಕ ಮಟ್ಟದಲ್ಲಿ ಒಂದು ಬಲಾಢ್ಯ ಶಕ್ತಿಯಾಗಿ ರೂಪುಗೊಂಡಿರುವುದಕ್ಕೆ ವಿದೇಶಿ ನೆಲದಲ್ಲಿ ಮೋದಿಯವರಿಗೆ ದೊರಕುವ ಭರಪೂರ ಅಭಿಮಾನ,ಸ್ವಾಗತವೇ ಸಾಕ್ಷೀಕರಿಸಿದೆ.

ಒಬ್ಬ ನರೇಂದ್ರ ಮೋದಿಯವರನ್ನು ಸೋಲಿಸಲು, ಒಂದು ಬಿಜೆಪಿಯನ್ನು ಸೋಲಿಸಲು ಬಹುದೊಡ್ಡ ಪ್ರಮಾಣದಲ್ಲಿ ಪ್ರತಿಪಕ್ಷಗಳು ಕಟ್ಟಿಕೊಂಡ ಕೋಟೆಯ ಹೆಸರೇ 'ಇಂಡಿಯ'. ಮತದಾರರ ಮುಂದೆ ಮೋದಿ ಹಾಗೂ ಬಿಜೆಪಿಯನ್ನು ಹಣಿಯಲು ಈ ತಂಡ ಕಂಡುಕೊಂಡ ಮಾರ್ಗಗಳು ಹಲವು. ರಾಜತಾಂತ್ರಿಕ ವ್ಯವಸ್ಥೆಯಲ್ಲಿ ಹಲವಾರು ಮಟ್ಟದ ಟೀಕೆಗಳು, ವೈಯಕ್ತಿಕ ಮಟ್ಟದ ಟೀಕೆಗಳು, ಜಾಗತಿಕ ಮಟ್ಟದಲ್ಲಿ ಮುಜುಗರ ತರುವ ಟೀಕೆಗಳು, ದೇಶದ ರೈತ ಹಾಗೂ ಸೈನ್ಯ ವ್ಯವಸ್ಥೆಯನ್ನು ಮುಂದಿಟ್ಟು ನಡೆಸಿದ ಟೀಕೆಗಳು ಭಾರತದ ರಾಜಕಾರಣದ ಮನಸ್ಥಿತಿಯನ್ನು ವಿದೇಶಿಯರ ಮುಂದೆಯೂ ಅನಾವರಣಗೊಳಿಸಿದ ದಿನಗಳಿತ್ತು. ವಿರೋಧ ಪಕ್ಷಗಳ ಈ ಎಲ್ಲಾ ಪ್ರಯತ್ನಗಳು ಕಳೆದೊಂದು ದಶಕಗಳಿಂದ ನರೇಂದ್ರ ಮೋದಿಯವರ ಆಡಳಿತ ವೈಖರಿಯ ಎದುರು ಮಂಕಾಗಿಸಿದೆ. ಪ್ರತಿಪಕ್ಷ ಕಾಂಗ್ರೆಸ್ ಪ್ರಧಾನಿ ಅಭ್ಯರ್ಥಿ ಸಾಲಿನಲ್ಲಿ ರಾಹುಲ್ ಗಾಂಧಿ ಎಂಬ ಪ್ರಬುದ್ಧತೆಯಿಲ್ಲದ ನಾಯಕನನ್ನು ಬಿಂಬಿಸಿರುವುದು ಕೂಡ ಇದಕ್ಕೊಂದು ಕಾರಣವಾಗಿರಲಿಕ್ಕೂ ಸಾಕು. ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ಸರಕಾರಗಳು ಉತ್ತಮ ಜನಪರ ಕೆಲಸ ಕಾರ್ಯಗಳನ್ನು ನಡೆಸಿದಾಗ ರಾಜಕೀಯ ಪಕ್ಷಗಳು ಅವುಗಳನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುವಂತಿರಬೇಕು. ಪ್ರತಿಪಕ್ಷಗಳು ಆಡಳಿತ ಪಕ್ಷದ ವೈಫಲ್ಯ, ಹುಳುಕುಗಳನ್ನು ಎತ್ತಿ ತೋರಿಸುವಂತಿರಬೇಕು. ಆದರೆ ನಮ್ಮ ದೇಶದಲ್ಲಿ ಇವೆಲ್ಲಕ್ಕಿಂತ ಭಿನ್ನ ವಿಭಿನ್ನವಾಗಿ ಕಾಣಲು ಸಾಧ್ಯ.

ಆಡಳಿತಾರೂಢ ಬಿಜೆಪಿ ಅಧಿಕಾರಕ್ಕೇರಲು ಕೊರತೆಯಾಗಿದ್ದ ಎರಡಂಕೆಯ ಬಲವನ್ನು ಮಿತ್ರ ಪಕ್ಷಗಳ ಮೂಲಕ ನೀಗಿಕೊಂಡಿದೆ. ಪ್ರಬಲ ಪ್ರತಿಸ್ಪರ್ಧಿ ಕಾಂಗ್ರೆಸ್ ನೂರು ಸ್ಥಾನಗಳನ್ನಷ್ಟೆ ಪಡೆದಿದೆ. ಬಿಜೆಪಿ ಹಾಗೂ ಎನ್‌ಡಿಎ ಮಿತ್ರ ಪಕ್ಷಗಳು ಮೊದಲೇ ಮಾಡಿಕೊಂಡ ಒಡಂಬಡಿಕೆಯಂತೆ ಶಿವಸೇನೆ, ಟಿಡಿಪಿ, ಜೆಡಿಯು ನೆರವಿನೊಂದಿಗೆ ಎನ್ ಡಿ ಎ ಮೈತ್ರಿ ಕೂಟ ಸರಕಾರ



ಅಧಿಕಾರಕ್ಕೆ ಬಂದಿದೆ. ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ ಅಧಿಕಾರ ಸ್ವೀಕರಿಸಿದ್ದಾರೆ. ಕಳೆದ ಎರಡು ಅವಧಿಯಲ್ಲಿ ನರೇಂದ್ರ ಮೋದಿ ಸರಕಾರ ತನ್ನ ಆಡಳಿತದಲ್ಲಿ ಈ ದೇಶಕ್ಕೆ ಯಾವುದೇ ಸರಕಾರಗಳು ನೀಡದ ಅಭಿವೃದ್ಧಿ ಕೊಡುಗೆಯನ್ನು ನೀಡುತ್ತಾ ಬಂದಿದೆ. ಭ್ರಷ್ಟಾಚಾರ ಮುಕ್ತ ಆಡಳಿತ, ದೂರದೃಷ್ಟಿಯ ಯೋಜನೆಗಳೊಂದಿಗೆ ಈ ದೇಶದ ಪ್ರಬುದ್ಧ ಮತದಾರ, ಹಾಗೂ ಜನಸಾಮಾನ್ಯ ಮತದಾರರು ಯಾವ ಆಶಯ, ನಿರೀಕ್ಷೆಗಳನ್ನು ಸರಕಾರದ ಮೇಲೆ ಹೊಂದಿದ್ದಾರೋ ಅದಕ್ಕೆ ಪೂರಕವಾಗಿಯೇ ಆಡಳಿತ ನಡೆಸಿದರೂ ಹಲವಾರು ಸ್ಥಾನಗಳು ಬಿಜೆಪಿಗೆ ಕೈ ತಪ್ಪಿ ಹೋಗಿರುವುದು ಈ ಬಾರಿ ಆಶ್ಚರ್ಯಕರ ಸಂಗತಿ. ಉತ್ತರ ಪ್ರದೇಶ, ರಾಜಸ್ಥಾನ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕರ್ನಾಟಕದಂತಹ ರಾಜ್ಯಗಳಲ್ಲಿ ತುಸು ಹಿನ್ನಡೆಯನ್ನು ಬಿಜೆಪಿ ಪಕ್ಷ ಅನುಭವಿಸಿದೆ.ಕೆಲ ರಾಜ್ಯಗಳಲ್ಲಿ ಅಲ್ಲಿನ ಸ್ಥಳೀಯ ನಾಯಕತ್ವದ ವೈಫಲ್ಯ, ಟಿಕೆಟ್ ಹಂಚಿಕೆಯಲ್ಲಾದ ಲೋಪದೋಷಗಳು,ಹಾಲಿ ಸಂಸ ದರ ಕ್ಷೇತ್ರದ ನಿರ್ಲಕ್ಷ್ಯ, ಅತಿಯಾದ ಆತ್ಮವಿಶ್ವಾಸ, ಸರಕಾರದ ಗ್ಯಾರಂಟಿ ಯೋಜನೆಗಳು,ಆಮಿಷಗಳು, ಸಂಸದರಾಗಿ ತಾವು ಕೆಲಸ ಮಾಡದಿದ್ದರೂ ಮೋದಿ ಹೆಸರಿನಲ್ಲಿ ಗೆಲ್ಲುತ್ತೇವೆ ಎಂಬ ಭ್ರಮೆ (ಈ ಮನಸ್ಥಿತಿ ಸ್ಥಳೀಯ ಸಂಸ್ಥೆ ಚುನಾವಣೆಯ ಮಟ್ಟಕ್ಕೂ ಬಂದು ನಿಂತಿದೆ)ಕಾರ್ಯಕರ್ತರ ನಿರ್ಲಕ್ಷ್ಯ ಭಾಜಾಪ ತನ್ನ ಸ್ಥಾನಗಳನ್ನು ಕಳೆದುಕೊಳ್ಳಲು ಮೂಲ ಕಾರಣ. ಇನ್ನು ಬಾಕಿ ಉಳಿದಂತೆ 30,000 ಹಾಗೂ 15,000 ಆಸುಪಾಸಿನಲ್ಲಿ ಸೋತ ಬಿಜೆಪಿ ಅಭ್ಯರ್ಥಿಗಳ ಪಟ್ಟಿಯೂ ದೊಡ್ಡ ಪ್ರಮಾಣದಲ್ಲಿದೆ.

ಇನ್ನು ಕರ್ನಾಟಕದ ಪಾಲಿಗೆ ಆಡಳಿತಾರೂಢ ಕಾಂಗ್ರೆಸ್ ಸರಕಾರ ಹಾಗೂ ಅದರ ಗ್ಯಾರಂಟಿ ಯೋಜನೆಗಳು ಒಂದು ಸ್ಥಾನಕ್ಕಿಂತ 9 ಸ್ಥಾನಕ್ಕೆ ಏರಿಕೆ ಕಂಡು ಬಿಜೆಪಿ ಇಲ್ಲಿ ಕೆಲ ಸ್ಥಾನವನ್ನು ಕಳೆದುಕೊಳ್ಳುವಂತಾಗಿದೆ. ಲೋಕಸಭಾ ಚುನಾವಣೆ ಎಂದರೆ ಅದು ಪ್ರಾದೇಶಿಕ ವಿಚಾರ, ಸ್ಥಳಿಯ ವಿಚಾರದ ಆಧಾರದಲ್ಲಿ ನಡೆಯುವ ಚುನಾವಣೆಯಲ್ಲ, ಬದಲಾಗಿ ದೇಶದ ಭವಿಷ್ಯವನ್ನು ರೂಪಿಸುವ ಚುನಾವಣೆ. ನಮ್ಮ ಮುಂದಿನ ಪೀಳಿಗೆಯ ಉಳಿವು ಹಾಗೂ ಭವಿಷ್ಯ ಈ ಚುನಾವಣೆಯ ಹಿಂದೆ ಅಡಕವಾಗಿದೆ. ಸಣ್ಣಪುಟ್ಟ ವ್ಯತ್ಯಾಸಗಳನ್ನೇ ಬಂಡವಾಳವಾಗಿಸಿ, ಇನ್ಯಾವುದೇ ವಿಚಾರಕ್ಕೆ ಬಲಿಬಿದ್ದು ಸ್ಥಾನಗಳನ್ನು ಕಳೆದುಕೊಂಡು ಅನ್ಯಪಕ್ಷಗಳ ಅಧೀನದಲ್ಲಿ ಸರಕಾರ ನಡೆಸಬೇಕಾದ ಸ್ಥಿತಿಗೆ ನರೇಂದ್ರ ಮೋದಿಯಂತಹ ನಾಯಕರನ್ನು ತಂದು ನಿಲ್ಲಿಸಿ ಚುನಾವಣಾ ಬಳಿಕ ಪರಿತಪಿಸುವುದನ್ನು ಇತ್ತೀಚೆಗೆ ಕಂಡಿದ್ದೇವೆ. ಸ್ವಂತ ಬಲದಲ್ಲಿ ಆಡಳಿತ ನಡೆಸು ವುದು ಒಂದು ವಿಚಾರವಾದರೆ ಅನ್ಯಪಕ್ಷಗಳ ಬೆಂಬಲದೊಂದಿಗೆ ಸರಕಾರ ನಡೆಸುವ ಸಂದರ್ಭ ಯಾವುದೇ ಪ್ರಮುಖ ಕಾಯ್ದೆಗಳಿಗೆ, ಮಸೂದೆಗಳ ಅಂಕಿತಕ್ಕೆ ಆ ಪಕ್ಷಗಳನ್ನು ಆಶ್ರಯಿಸಬೇಕಾಗುತ್ತದೆ. ಇದೊಂದು ರೀತಿಯಲ್ಲಿ ಸರಕಾರ ನಡೆಸುವುದು ಮುಳ್ಳಿನ ಹಾಸಿಗೆಯ ಮೇಲಿನ ನಡಿಗೆಯಂತೆಯೇ ಸರಿ. ಎಲ್ಲವನ್ನೂ ಸರಿದೂಗಿಸಿಕೊಂಡು ಒಮ್ಮತದಿಂದ ಸರಕಾರವನ್ನು ಕೊಂಡೊಯ್ಯಬೇಕಾದ ಎಚ್ಚರಿಕೆ ಹಾಗೂ ಅಪಾಯದ ನರೇಂದ್ರ ಮೋದಿಯವರ ಹಾದಿಯೆಂದರೂ ತಪ್ಪಾಗಲಾರದು. ಒಂದಂತೂ ಸತ್ಯ ನರೇಂದ್ರ ಮೋದಿಯೆಂದರೆ ಸ್ವಾಹ ಅಲ್ಲ,ಮೋದಿಯೆಂದರೆ ಸ್ವಜನ ಪಕ್ಷಪಾತ ಅಲ್ಲ,ಮೋದಿಯೆಂದರೆ ಭ್ರಷ್ಟಾಚಾರ ಅಲ್ಲ,ಮೋದಿಯೆಂದರೆ ಭವ್ಯ ಭಾರತದ ಕಲ್ಪನೆಯೊಂದಿಗೆ ಭವಿಷ್ಯದ ಭಾರತದ ಅಭಿವೃದ್ಧಿಯ ಪ್ರತಿರೂಪ.

(ಲೇಖಕರು : ಹವ್ಯಾಸಿ ಬರಹಗಾರರು)

ಪ್ರಸ್ತುತ
ಭಾರತ್ ಜಿ.ವಿ.

ಹಿತ ಆಹಾರ, ಮಿತ ಆಯಾಸ; ಮಿತ ಆಯಾಸ, ಹಿತ ಆಹಾರ

ಹಿತವಾದ ಆಹಾರ, ಯೋಗ್ಯವಾದ ವ್ಯಾಯಾಮ, ಮಾಡಬಹು ದಾದ ವ್ಯಾಯಾಮ ಮತ್ತು ಅದಕ್ಕೆ ತಕ್ಕಂತೆ ಆಹಾರ ಎನ್ನುತ್ತದೆ.

ನಾವು ತಿನ್ನುವ ಆಹಾರವು ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳನ್ನು ಮತ್ತು ಸತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳನ್ನೂ ಸಮತೋಲನದಲ್ಲಿಡಬೇಕು. ಇವುಗಳ ಅಸಮತೋಲ ನದಿಂದ ಕಾಯಿಲೆ ಮತ್ತು ಅಹಿತ ಉಂಟಾಗುತ್ತದೆ. ಅನೇಕ ಸಹಸ್ರ ಮಾನಗಳಿಂದ ಆಯುರ್ವೇದದ ತತ್ವಗಳು ನಮ್ಮ ದೇಶದ ಪದ್ಧತಿಯಾಗಿಬಿಟ್ಟಿವೆ.

ವೈಯಕ್ತಿಕ ಶೌಚ ಮತ್ತು ಸಾಮಾಜಿಕ ಅಂತರವು ನಮ್ಮ ಸಂಸ್ಕೃತಿಯ ಭಾಗವಾಗಿ ನಮಗೆ ಹರಿದು ಬಂದಿದೆ. ಆಚಾರ ಎಂದರೆ ಉತ್ತಮವಾದ ಅಭ್ಯಾಸ ನಮ್ಮ ಪದ್ಧತಿಗಳಾದ ಮನೆಯ ಹೊರಗೆ ಚಪ್ಪಲಿಯನ್ನು ಬಿಡುವುದು, ಒಂದೇ ಪಾತ್ರೆಯಿಂದ ಎಲ್ಲರೂ ತಿಂದು, ನೀರು ಕುಡಿಯದಿರುವುದು, ಪಯಣ ಮಾಡುವಾಗ ನಮ್ಮ ಊಟವನ್ನೇ ಕೊಂಡೊಯ್ಯುವುದು, ಭಾರತದ ಎಲ್ಲೆಡೆಯೂ ಅಭ್ಯಾಸ ಮಾಡುವಂ ತಹ ಆಚಾರಗಳು. ಇದರೊಂದಿಗೆ ಪ್ರತಿಯೊಂದು ಪ್ರಾಂತವೂ ತನ್ನದೇ ಆದ ಸ್ಥಳೀಯ ಪದ್ಧತಿಗಳನ್ನು, ಆಹಾರವನ್ನು, ಜೀವನಶೈಲಿಯನ್ನು ಹೊಂದಿದ್ದವು ಮತ್ತು ಅದನ್ನು ದೇಶಾಚಾರ ಎಂದು ಕರೆಯಲಾಗುತ್ತಿತ್ತು. ಈ ದೇಶಾಚಾರವು ಆಯಾ ಪ್ರದೇಶದ ಸ್ವಭಾವ, ವಾತಾವರಣ ಮತ್ತು ಭೂಗೋಳಕ್ಕೆ ಅನುಗುಣವಾಗಿ ಇರುತ್ತಿತ್ತು.

ಬ್ರಿಟಿಷ್‌ನ ಡಾ. ಜಾನ್ ಝೆಡ್ ಹೊಲ್ವೆಲ್ ಓರ್ವ ಶಸ್ತ್ರಚಿಕಿತ್ಸ ಕರಾಗಿದ್ದರು ಮತ್ತು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಸೇವೆ ಸಲ್ಲಿಸು ತ್ತಿದ್ದರು. ಇವರು ಭಾರತದ ಲಸಿಕೆಯ ಪದ್ಧತಿಯನ್ನು ಗಮನಿಸಿ ದಾಖಲಿಸಿದ್ದಾರೆ. ಅವರ ದಾಖಲೆಗಳಲ್ಲಿ ಒಂದು ನಿರ್ದಿಷ್ಟವಾದ ಜನರಿದ್ದರು ಮತ್ತು ದೂರದ ಪ್ರಾಂತಗಳಿಂದ ಜನರು ವರ್ಷಕ್ಕೊಮ್ಮೆ ಬಂದು, ತಮ್ಮನ್ನು ಎರಡು ಅಥವಾ ಮೂರು ಜನರ ಸಣ್ಣ ಗುಂಪುಗಳಾಗಿ ವಿಭಜಿಸಿಕೊಂಡು ಎಲ್ಲಾ ಹಳ್ಳಿಗಳಿಗೆ ಭೇಟಿ ನೀಡುತ್ತಿದ್ದರು. ಅಲ್ಲಿಂದ ವೈದ್ಯರು ಗೋವಾಸುರಿಯೆಂಬ ಔಷಧವನ್ನು ಎಲ್ಲರಿಗೂ ಕೊಡುತ್ತಿ ದ್ದರು. ಈ ವ್ಯವಸ್ಥೆ ಬಹಳ ಸುಸೂತ್ರವಾಗಿ ಸಾಗುತ್ತಿದ್ದು, ಬ್ರಿಟಿಷರು ಬಂದು ಇದನ್ನು ನಿಲ್ಲಿಸುವವರೆಗೂ ಸಣ್ಣ ಸಿಡುಬು ಬಂದಿರಲೇ ಇಲ್ಲ. ಜೆನ್ನರ್ ಸಣ್ಣ ಸಿಡುಬಿನ ಲಸಿಕೆ ಕಂಡುಹಿಡಿದಿದ್ದರಿಂದ ನಿಲ್ಲಿಸಿಬಿಟ್ಟರು.

ಭಾರತೀಯ ಪದ್ಧತಿಯ ಅಧ್ಯಯನ ನಡೆಸಿ, ಜೆನ್ನರ್ ಲಸಿಕೆಯನ್ನು ಕಂಡುಹಿಡಿದ. ಹಿಂದಿನ ಜನರು ಅಗೋಚರವಾದ ಬ್ಯಾಕ್ಟೀರಿಯ ಮತ್ತು ವೈರಸ್‌ಗಳ ಇರುವಿಕೆಯ ಬಗ್ಗೆ ತಿಳಿದಿದ್ದರು ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಅದರ ಸ್ವಭಾವವನ್ನು ತಿಳಿದಿದ್ದ ಅವರು, ಅದರ ಪ್ರಭಾವವನ್ನು ತಡೆಗಟ್ಟುವ ಬಗ್ಗೆಯೂ ತಿಳಿದಿದ್ದರು. ಆಸಕ್ತಕರವಾಗಿ, ಅಥರ್ವ ವೇದದಲ್ಲಿ ಕ್ರಿಮಿಗಳನ್ನು ನೋಡಲಾಗುವುದಿಲ್ಲವೆಂದೂ ಮತ್ತು ಅದನ್ನು ಕ್ರಿಮಿ ಎಂದೂ ಕರೆಯಲಾಗಿದೆ. ವೈದ್ಯಕೀಯ ಗ್ರಂಥವಾದ ಚರಕ ಸಂಹಿತದಲ್ಲಿ ಕ್ರಿಮಿಗಳು ಅಗೋಚರವಾದವೆಂದೂ ಮತ್ತು ಅವುಗಳ ಬಣ್ಣ ಮತ್ತು ಆಕಾರವನ್ನೂ ವಿವರಿಸಿದೆ. ಅವುಗಳನ್ನು ನೋಡಲು ಅವರ ಬಳಿ ದೂರದರ್ಶಕದ ಯಂತ್ರವಿತ್ತೆ? ಅಷ್ಟು ಸವಿಸ್ತಾರವಾಗಿ ವಿವರಿಸಿದೆ. ಗೌತಮನ ನ್ಯಾಯ ಸಂಹಿತಯಲ್ಲಿದೆ.

ಔಷಧಿಯೇ ಆಹಾರ ಎಂಬುದೇ ನಮ್ಮ ತತ್ವ. ಆಯುರ್ವೇದ ಶೇ.80ರಷ್ಟು ತಡೆಗಟ್ಟುವ ಮತ್ತು ಶೇ.20ರಷ್ಟು ಚಿಕಿತ್ಸೆ ನೀಡುವ ಪದ್ಧತಿಯಾಗಿದೆ. ವಿಚಿತ್ರವಾದ ಆಹಾರ ಪದ್ಧತಿ, ನಮ್ಮದಲ್ಲದ ಆಹಾರ, ಡಬ್ಬಿಯಲ್ಲಿ ಕೂಡಿಡಲಾದ ಆಹಾರ, ದಿಢೀರೆಂದು ತಿನ್ನುವ ಆಹಾರ, ಹೊರಗೆ ತಿನ್ನುವ ಆಹಾರ ಒಂದು ರೂಢಿಯಾಗಿಬಿಟ್ಟಿದೆ ಮತ್ತು ಜೀವನಶೈಲಿಯ ರೋಗಗಳಿಗೆ ಕಾರಣವಾಗಿದೆ. ಈಗ ಸ್ವಲ್ಪ ನಿಂತು ಆಲೋಚಿಸಿ ಪ್ರಕೃತಿಯೊಡನೆ ಸಂಯೋಜಿಸಿಕೊಳ್ಳುವ ಕಾಲ ಬಹುಶಃ ಬಂದಾಗಿದೆ. ಋತುಗಳಿಗೆ ಅನುಗುಣವಾದ ಆಹಾರವನ್ನು ಮತ್ತು ಸ್ಥಳೀಯವಾಗಿ ಬೆಳೆಯಲಾದ ತರಕಾರಿಗಳನ್ನು ತಿನ್ನುವುದರಿಂದ ಆರಂಭಿಸಬಹುದು. ಅವುಗಳು ಬಹಳ ಸ್ವಾದಿಷ್ಟವಾಗಿರುತ್ತವೆ, ಸ್ಥಳೀಯ ಆರ್ಥಿಕತೆಗೆ ಬೆನ್ನೆಲುಬಾಗಿರುತ್ತದೆ. ಇದನ್ನು ಬೆಳೆದ ರೈತನಿಗೆ ನೇರ ಲಾಭವಾಗುತ್ತದೆ.

ಮಾನವರಾಗಿ ಈ ಭೂಮಿಯನ್ನು ಆಸ್ತಿ ಯಾಗಿ ಪಡೆದುಕೊಂಡಿದ್ದೇವೆ. ಇತರ ಜೀವಿಗಳಿಗೂ ಇದರ ಸಂಪನ್ಮೂಲಗಳ ಸಮಾನ ಹಕ್ಕಿದೆ. ನಮ್ಮ ಪ್ರಜ್ಞಾಪೂರ್ವಕವಾದ ಮತ್ತು ನೈತಿಕ ಆಯ್ಕೆಗಳು ಪರಿಸರದ ಮೇಲೆ ದೀರ್ಘ ಕಾಲದ ಪ್ರಭಾವವನ್ನು ಬೀರುತ್ತದೆ. ತಮ್ಮನ್ನೇ ಪೋಷಿಸುವ ಪ್ರಕೃತಿಯನ್ನು ವಿಪರೀತವಾಗಿ ಬಳಸಿ ಮಾನವ ನಾಶ ಮಾಡುತ್ತಿದ್ದಾನೆ. ಅರಣ್ಯಗಳ ನಾಶ , ಕುಡಿಯುವ ನೀರಿನ ಅತೀ ವೇಗವಾದ ಬತ್ತಿಹೋಗುವಿಕೆ ನಮಗೆಲ್ಲರಿಗೂ ಎಚ್ಚರಿಕೆಯ ಕರೆಯಾಗಿದೆ. ನಾವೆಲ್ಲರೂ ಮತ್ತೆ ನಮ್ಮ ನಿಜ ಸ್ವಭಾವಕ್ಕೆ ಮರಳಿ ಬರಬೇಕಾಗಿದೆ ಮತ್ತು ಭೂತಾಯಿ ನಮ್ಮನ್ನು ಸಂರಕ್ಷಿಸುವಂತಾಗಬೇಕು.

ಹಣಕಾಸು ಹೂಡಿಕೆ: ಹೆಜ್ಜೆ ಇಡುವ ಮೊದಲು ಚಿಂತನೆ ಇರಲಿ

ಹೂಡಿಕೆಗೆ ಸಾಕಷ್ಟು ಹಣವಿದ್ದರೆ ಮತ್ತು ನಷ್ಟವನ್ನು ಭರಿಸುವ ಸಾಮರ್ಥ್ಯ ವಿದ್ದರೆ ಸರಿ, ಇಲ್ಲವಾದರೆ ಅಳೆದು ತೂಗಿ ತೀರ್ಮಾನ ತೆಗೆದುಕೊಳ್ಳುವುದು ಅಗತ್ಯ



ವಿಶ್ಲೇಷಣೆ
ರಮಾನಂದ ಶರ್ಮಾ
vveditoped@gmail.com

ಇಂದು ಮನುಷ್ಯ ಕೃತ್ರಿಮ ಬುದ್ಧಿಮತ್ತೆಯನ್ನು ಸೃಷ್ಟಿಸುವಷ್ಟು ಮುಂದುವರಿದಿದ್ದಾನೆ. ಆದರೆ ನಾಳೆಯನ್ನು ಮುಂಗಡವಾಗಿ ತಿಳಿ ಯುವ ವಿಷಯದಲ್ಲಿ ಇನ್ನೂ ಹೆಜ್ಜೆ ಇರಿಸಬೇಕಾಗಿದೆ. ನಾಳೆಗೂ ಮತ್ತು ಅನಿಶ್ಚಿತತೆಗೂ ಒಂದು ರೀತಿಯ ಅವಿನಾಭಾವ ಸಂಬಂಧ ಇದ್ದು, ಈ ನಿಟ್ಟಿನಲ್ಲಿ ಮನುಷ್ಯ ಸದಾ ಪ್ರಶ್ನೆಯಲ್ಲಿಯೇ ಇರುತ್ತಾನೆ. ಹಣದುಬ್ಬರಗಳ ದಿನಗಳಲ್ಲಿ ಮತ್ತು ಬದುಕು ಅನಿಶ್ಚಿತತೆಯ ಗೂಡಾದಾಗ ಮುಂದಿನ ದಿನಗಳ ಹಣಕಾಸು ಬೇಡಿಕೆ ಮತ್ತು ಲಭ್ಯತೆಗಳ ಬಗೆಗೆ ವಿಶೇಷ ಗಮನ ನೀಡಬೇಕಾಗುತ್ತದೆ. ಬದುಕಿನ ವಿಶೇಷತೆ ಎಂದರೆ, ಕೈಯಲ್ಲಿ ಹಣವಿದ್ದಾಗ ಬಂಧುಗಳು ಮತ್ತು ಸ್ನೇಹಿತರು ದೊಡ್ಡ ಸಂಖ್ಯೆಯಲ್ಲಿ ಇರುತ್ತಾರೆ. ಖಾಲಿಯಾದಾಗ, ಸ್ನೇಹಿತರು ಮತ್ತು ಬಂಧುಗಳು ಕೂಡಾ ಖಾಲಿಯಾಗುತ್ತಿದ್ದು, ಬೇಡಿಕೆ ಮತ್ತು ಲಭ್ಯತೆಗಳ ಸಮೀಕರಣದ ಸಿಕ್ಕನ್ನು ಸ್ವತಃ ಬಿಡಿಸಿಕೊಳ್ಳಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಲಾಗಾಯ್ತನಿಂದ ನಾಲ್ಕು ಕಾಸನ್ನು ಕೂಡಿಟ್ಟಿದ್ದರೆ ಎಂದು ಅನಿಸುತ್ತದೆ. ಈ ಪರಿಕಲ್ಪನೆಯ ಮಗುವೇ ಉಳಿತಾಯ ಮತ್ತು ಹೂಡಿಕೆ ಎನ್ನಬಹುದು.

ಉಳಿತಾಯ ಮತ್ತು ಹೂಡಿಕೆ ಹೊಸ ಪರಿಕಲ್ಪನೆಯಲ್ಲ. ಲಾಗಾಯ್ತನಿಂದ ಜನರು ಕಷ್ಟದ ದಿನಗಳಿಗಾಗಿ, ಮುಂದಿನ ದಿನಗಳಿಗಾಗಿ ಒಂದಿಷ್ಟು ಹಣವನ್ನು ಕೊಡದಲ್ಲೋ, ತಂಬಿಗೆಯಲ್ಲಿಯೋ ಹಾಕಿ ಎಲ್ಲೋ ಗೌಪ್ಯವಾಗಿ ಹೂತಿಡುತ್ತಿದ್ದರು. ಮಹಿಳೆಯರು ಅಡುಗೆ ಮನೆಯ ಸಾಸಿವೆ ಡಬ್ಬದಲ್ಲಿ ಚಿಕ್ಕ ಕಾಸುಗಳನ್ನು ಶೇಖರಿಸಿ ಇಡುತ್ತಿದ್ದರು. ಈ ವ್ಯವಸ್ಥೆಯಲ್ಲಿ ಇಟ್ಟಿದ್ದನ್ನು ತೀರಾ ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ಬಳಸಿಕೊಳ್ಳುತ್ತಿದ್ದರು. ಇದರಲ್ಲಿ ಮುಂದೆ ಬರಬಹುದಾದ ಸಂಕಷ್ಟದ ದಿನಗಳ ಭಯ ಮುಖ್ಯವಾಗಿರುತ್ತಿತ್ತೇ ವಿನಾ ಉಳಿತಾಯದ ಕಲ್ಪನೆ ಇರುತ್ತಿರಲಿಲ್ಲ. ಆ ದಿನಗಳಲ್ಲಿ ಈ ವ್ಯವಸ್ಥೆ ಜನರು ತಮ್ಮ ಮಿಗತೆ ಹಣವನ್ನು ಮುಂದಿನ ದಿನಗಳಿಗಾಗಿ ಉಳಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿತ್ತು. ಅದು ಸುರಕ್ಷಿತವಾಗಿರಬೇಕು ಮತ್ತು ಯಾವುದೇ ಕಾರಣಕ್ಕೂ ಕೈತಪ್ಪಿ ಹೋಗಬಾರದು ಎನ್ನುವ ಮುನ್ನೆಚ್ಚರಿಕೆ ಇದರ ಹಿಂದೆ ಇರುತ್ತಿತ್ತು.

ಈ ರೀತಿ ಉಳಿಸಿ ಕೊಂಡಿರುವುದಕ್ಕೆ ಯಾವುದೇ ರೀತಿಯ ಕೂಡಿಕೆ (addition) ಆಗುತ್ತಿರಲಿಲ್ಲ. ಕಾಲಘಟ್ಟದಲ್ಲಿ ಈ ಪದ್ಧತಿ ರೂಪಾಂತರವಾಗುತ್ತಾ ಜನರು ಈ ಮಿಗತೆ ಹಣವನ್ನು ಬೇರೆಯವರ ಬಳಿ ಇಟ್ಟು ಅಥವಾ ಅವರಿಗೆ ನೀಡಿ, ಅದನ್ನು ಬಳಸಿಕೊಂಡಿದ್ದಕ್ಕೆ ಬಾಡಿಗೆ ಪಡೆಯತೊಡಗಿದರು. ಈ ಬಾಡಿಗೆ ಮುಂದಿನ ದಿನಗಳಲ್ಲಿ ಬಡ್ಡಿ ಎನ್ನುವ ಹೆಸರು ಪಡೆದುಕೊಂಡಿದ್ದು ಈಗ ಇತಿಹಾಸ. ತೀರಾ ವೈಯಕ್ತಿವಾಗಿ ಅಲ್ಲಲ್ಲಿ ನಡೆದು ಬರುತ್ತಿದ್ದ ಈ ವ್ಯವಸ್ಥೆಗೆ ಕಾಲಕ್ರಮೇಣ ಅನೇಕ ರೀತಿಯ ಸಂಘ-ಸಂಸ್ಥೆಗಳು ಸೇರಿಕೊಂಡಿದ್ದು, ಬ್ಯಾಂಕುಗಳು ಅನಾವರಣಗೊಂಡಿದ್ದು, ಅದಾಯಕ್ಕಾಗಿ ಅಥವಾ ಬಡ್ಡಿಗಾಗಿ ಹಣ ನೀಡುವ ಮತ್ತು ಪಡೆಯುವ ನಿರ್ದಿಷ್ಟ ವ್ಯವಸ್ಥೆ ಜಾರಿಗೆ ಬಂದಿತು. ಈ ವ್ಯವಸ್ಥೆಯಲ್ಲಿ ಅಗತ್ಯ ಇರುವವರು ಬಡ್ಡಿ ನೀಡಿ ಸಾಲ ಪಡೆಯುತ್ತಾರೆ, ಮಿಗತೆ ಹಣ ಇರುವವರು ಇವುಗಳಲ್ಲಿ ಇಟ್ಟು ಬಡ್ಡಿ ಅಥವಾ ಬೇರೆ ರೂಪದ ಆದಾಯವನ್ನು ಪಡೆಯುತ್ತಾರೆ. ಇದರಲ್ಲಿ ಹಣ ಇಡುವವರನ್ನು ಹೂಡಿಕೆದಾರರು ಎನ್ನುತ್ತಾರೆ. ಇಂಥಹ ಹೂಡಿಕೆ ಮಾಡುವವರಿಗಾಗಿ ಇಂದು ದೇಶದಲ್ಲಿ ಸಾವಿರಾರು,ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಇವೆ. ಇಲ್ಲಿ ಹೂಡುವವರಿಗೆ ಮಾರ್ಗದರ್ಶನ ಮಾಡಲು ಸಲಹೆಗಾರರು ಇರುತ್ತಾರೆ. ಕೆಲವರಿಗೆ ಈ ರೀತಿ ಹೂಡಿಕೆ ಮಾಡುವುದು ಮತ್ತು ಈ ನಿಟ್ಟಿನಲ್ಲಿ ಸಲಹೆ ನೀಡುವುದು ಒಂದು ವೃತ್ತಿಯೂ ಹೌದು ಮತ್ತು ಹಣ ಮಾಡುವ ಹವ್ಯಾಸವೂ ಹೌದು. ಬಹುತೇಕರು ತಮ್ಮಲ್ಲಿರುವ ಮಿಗತೆ ಹಣವನ್ನು ಹೂಡಿಕೆಮಾಡುತ್ತಾರೆ. ಹಾಗೆಯೇ ಸಾಲ ಮಾಡಿ ಹೂಡುವವರೂ ಇಲ್ಲದಿಲ್ಲ. ಇಂಥಹ ಪ್ರಕರಣಗಳಲ್ಲಿ ಸಾಲದ ವೆಚ್ಚ ಮತ್ತು ಹೂಡಿಕೆಯಿಂದ ಬರಬಹುದಾದ ಹೆಚ್ಚುವರಿ ಆದಾಯದ ಲೆಕ್ಕಾಚಾರ ಇರುತ್ತದೆ.

ಹೂಡಿಕೆ ಸಾಮಾನ್ಯವಾಗಿ ತಿಳಿದಂತೆ ಮಕ್ಕಳಾಟವಲ್ಲ ಮತ್ತು ಅಷ್ಟು ಸುಗಮವೂ ಅಲ್ಲ. ಇದರಲ್ಲಿಯೂ ಕಂದಕಗಳು, ಹೊಂಡಗಳು ಮತ್ತು ತಿರುವುಗಳು ಸಾಕಷ್ಟು ಇರುತ್ತವೆ. ಹೂಡಿಕೆ ಮಾಡುವವರಿಗೆ ಸಲಹೆಗಾರರರು ಇದ್ದರೂ, ಸ್ವತಹ ಕೆಲವು ಕನಿಷ್ಟ ಸಾಮಾನ್ಯ ತಿಳುವಳಿಕೆಗಳ ಅವಶ್ಯಕತೆ ಇರುತ್ತದೆ. ಈ ಹೂಡಿಕೆ ವಿಚಾರದಲ್ಲಿ ಅಕಾಶವನ್ನು ತೋರಿಸಿ ಪಾತಾಳಕ್ಕೆ ದೂಡಿ ಕೈಎತ್ತುವವರು ಇರುತ್ತಾರೆ. ಹೂಡಿಕೆಯಲ್ಲಿ ಮನೆಮಾಡಿದವರು ಇದ್ದಂತೆ ಮನೆಮಾರಿಕೊಂಡವರೂ ಇದ್ದಾರೆ. ಇಡಬೇಕಾಗುತ್ತದೆ ಮತ್ತು ಹಲವು ಆಯಾಮಗಳಲ್ಲಿ ಚಿಂತಿಸಬೇಕಾಗುತ್ತದೆ. ಅಕಸ್ಮಾತ್ ಕಳೆದುಕೊಂಡರೆ ಪುನಾಗಳಿಸುವುದು ದುಸ್ತರವಾಗಿರುವುದ ರಿಂದ ಹೂಡಿಕೆದಾರರು ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗುತ್ತದೆ. . ಇವುಗಳಲ್ಲಿ ಮುಖ್ಯ ವಾದವುಗಳನ್ನು ಹೀಗೆ ಪಟ್ಟಿ ಮಾಡಬಹುದು.

ಸುರಕ್ಷಿತತೆ ಮತ್ತು ಭದ್ರತೆ: ಹೂಡಿಕೆ ಮಾಡಿದ ಹಣ ಸುರಕ್ಷಿತವಾಗಿರಬೇಕು, ಭದ್ರವಾಗಿರಬೇಕು ಮತ್ತು ಹಿಂತಿರುಗಿ ಪಡೆಯವಾಗ ಮೋಸವಾಗಬಾರದು, ಎನ್ನುವುದು ಹೂಡಿಕೆ ದಾರರ ಮೊದಲ ಅಧ್ಯತೆಯಾಗಿರುತ್ತದೆ. ಹೂಡಿಕೆ ಮೇಲೆ ರಿಟರ್ನ ಕಡಿಮೆಯಾದರೂ, ಅಥವಾ ಇಲ್ಲದಿದ್ದ ರೂ ಪರವಾಯಿಲ್ಲ, ಹೂಡಿದ ಹಣವಾದರೂ ವಾಪಸು ಬರಬೇಕು ಎನ್ನುವುದು ಮೂಲ ಮಂತ್ರವಾಗಿರುತ್ತದೆ.ಸಾಮಾನ್ಯವಾಗಿ ಹೂಡಿಕೆದಾರರು ಕಷ್ಟಪಟ್ಟು ಉಳಿಸಿದ ಹಣವನ್ನು ಅಥವಾ ಕೆಲವು ಸಂದರ್ಭದಲ್ಲಿ ರಿಟರ್ನ ಹೆಚ್ಚು ದೊರಕುವ ನಿರೀಕ್ಷೆಯಲ್ಲಿ ಸಾಲಮಾಡಿ ಹೂಡಿಕೆ ಮಾಡಿರುತ್ತಾರೆ. ಅಂತೆಯೇ ಈ ನಿಟ್ಟಿನಲ್ಲಿ ಹೂಡಿಕೆದಾರ ಹೆಚ್ಚು ಮುತುವರ್ಜಿ ವಹಿಸುವ ಅವಶ್ಯಕತೆ ಇರುತ್ತದೆ.

ಅದಾಯ: ಹೂಡಿಕೆಯ ಹಿಂದೆ ಹಣ ಸುರಕ್ಷಿತವಾಗಿರಬೇಕು ಮತ್ತು ಭದ್ರವಾಗಿರಬೇಕು ಎನ್ನುವುದು ಆದ್ಯತೆ ಯಾದರೆ ಅದು ಅದರೊಂದಿಗೆ ಅದಾಯವನ್ನೂ ತಂದು ಕೊಡಬೇಕು ಎನ್ನುವುದು ಹೂಡಿಕೆದಾರನ ಮುಂದಿನ ಚಿಂತನೆಯಾಗಿರುತ್ತದೆ. ಅಂತೆಯೇ ಹೆಚ್ಚು ಬಡ್ಡಿ ನೀಡುವ ಅಥವಾ ಡಿವಿಡೆಂಡ್ ನೀಡುವ ಸ್ಥಳದಲ್ಲಿ ಹೂಡಿಕೆದಾರ ಗಮನ ಇರುತ್ತದೆ. ಯಾರಾದರೂ ಹೆಚ್ಚು ಆದಾಯದ ಆಮಿಷ ತೋರಿಸಿದರೆ, ಅವರ ಹಣಕಾಸು ವ್ಯವಹಾರ, ಅದನ್ನು ನಿಭಾಯಿಸುವವರ ಹಿನ್ನೆಲೆ ,ಅವರ ಹಿಂಧಿನ ಇತಿಹಾಸ, ಸಾದನೆ ಮ ತ್ತು ಲೋಪ -ದೋಷಗಳ ಮೇಲೆ ಕಣ್ಣಿಡಬೇಕಾಗುತ್ತದೆ. ಹೆಚ್ಚಿನ ಆಮಿಷ ತೋರಿಸಿ, ಉಚಿತ ಕೊಡುಗೆಗಳನ್ನು ನೀಡಿ ಆಕಾಶ ವನ್ನೇ ನೀಡುವ ಭರವಸೆ ನೀಡಿ ಕೊನೆಗೆ ಎಂದೂ ಮೇಲೆ ಬರಲಾಗದ ಪಾತಾಳಕ್ಕೆ ದೂಡಿದ ಲಕ್ಷಾಂತರ ಉದಾಹರಣೆ ಮತ್ತು ಅವರ ಮಾತಿಗೆ ಮರುಳಾಗಿ ಅವರ ಬಾಯಲ್ಲಿ ನೀರೂರಿಸುವ ಸ್ಕೀಮ್‌ಗಳಿಗೆ ಬೌಲ್ಡ್ ಆಗಿ ಕಳೆದುಕೊಂಡವರ ಕರುಣಾಜನಕ ಕಥೆಗಳು ಹೂಡಿಕೆಯ ಹಿಂದಿನ ಮಾನದಂಡವಾಗಿರಬೇಕು.

ದೀರ್ಘಾವಧಿ ಮತ್ತು ಅಲ್ಪಾವಧಿ ಹೂಡಿಕೆಗಳು: ಹೂಡಿಕೆಯಲ್ಲಿ ಅಲ್ಪಾವಧಿ ಮತ್ತು ದೀರ್ಘಾವದಿ ಎನ್ನುವ ಎರಡು ರೀತಿ ಇರುತ್ತವೆ. ಅಲ್ಪಾವಧಿ ಹೂಡಿಕೆಯು ಒಂದು ವರ್ಷ ಅಥವಾ ಅದಕ್ಕೂ ಕಡಿಮೆ ಅವಧಿಗೆ ಇದ್ದರೆ, ದೀರ್ಘಾವಧಿ ಹೂಡಿಕೆಗಳು ವರ್ಷಕಿಂತ ಹೆಚ್ಚು ಅವಧಿಗೆ ಇರುತ್ತವೆ. ಹೆಚ್ಚು ಹೂಡಿಕೆಯನ್ನು ಆಕರ್ಷಿಸಲು ಹೂಡಿಕೆ ಸ್ವೀಕರಿಸುವವರು ಹೆಚ್ಚು ಅದಾಯ ಬರುವ ಸ್ಕೀಮ್ ನ್ನು ರೂಪಿಸುತ್ತಾರೆ. ಇದು ಒಂದು ರೀತಿಯಲ್ಲಿ ಹೂಡಿಕೆದಾರರಿಗೆ ಅಕರ್ಷಕವಾದರೂ, ಅಕಸ್ಮಾತ್ ಹೂಡಿಕೆಯನ್ನು ಹಿಂಪಡೆಯುವ ಅನಿವಾರ್ಯತೆ ಎರಗಿದರೆ, ಅವಧಿಪೂರ್ವ ಹಿಂಪಡೆತಕ್ಕೆ ಅವಕಾಶ ಇರದಿದ್ದರೆ, ಹೂಡಿಕೆದಾರರಿಗೆ ಅನನುಕೂಲವಾಗುತ್ತದೆ ಅಥವಾ

ಹಿಂಪಡೆಯುವ ಹಣ ದಲ್ಲಿ ಕಡಿತವಾಗುತ್ತದೆ. ಅದಕ್ಕೂ ಮೇಲಾಗಿ ದೀರ್ಘಾವದಿ ಹೂಡಿಕೆಯ ಕಾಲಘಟ್ಟದಲ್ಲಿ ಸಂಬಂಧಿತ ಸಂಸ್ಥೆಯ ಹಣ ಕಾಸು ಪರಿಸ್ಥಿತಿಯಲ್ಲಿ ಏರು ಪೇರು ಅಗುವದನ್ನು ಅಲ್ಲಗೆಳೆಯಲಾಗದು. ಹಾಗೆಯೇ ಸುದೀರ್ಘ ಅವಧಿಯಲ್ಲಿ ಹೂಡಿಕೆಯ ಸ್ಥಿತಿಗತಿಗಳನ್ನು ವಾಚ್ ಮಾಡಲು ಸಾಧ್ಯವಾಗುವದಿಲ್ಲ. ಬಡ್ಡಿ ದರ ಏರಿಕೆಯಲ್ಲಿರುವಾಗ ಅಲ್ಪಾವಧಿ ಹೂಡಿಕೆ (ಮುಖ್ಯವಾಗಿ ಬ್ಯಾಂಕ ಠೇವಣಿ) ಮಾಡಿ, ಬಡ್ಡಿ ದರ ಏರಿಕೆಯ ಲಾಭ ಪಡೆಯ ಬಹುದು. ದೀರ್ಘಾವಧಿಯಲ್ಲಿ ಇಟ್ಟರೆ ಠೇವಣಿ ಅವಧಿ ಮುಗಿಯುವವರೆಗೆ ಬಡ್ಡಿದರ ಏರಿಕೆಯನ್ನು ಪಡೆಯಲಾಗುವುದಿಲ್ಲ.

ಲಿಕ್ವಿಡಿಟಿ ಅಥವಾ ದ್ರವ್ಯತೆ: ಕೆಲವು ಹೂಡಿಕೆಗಳನ್ನು ಸಾಮಾನ್ಯವಾಗಿ ಒಂದುನಿರ್ದಿಷ್ಟ ಅವಧಿಗೆ ಮಾಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಹಣದ ಅರ್ಜೆನ್ಸಿಇದ್ದಾಗ ಅವುಗಳನ್ನು ನಗದು ಮಾಡಿಕೊಳ್ಳಲು ಕಷ್ಟವಾಗುತ್ತದೆ. ಬ್ಯಾಂಕ್ ಠೇವಣಿ, ನ್ಯಾಷನಲ್ ಸೇವಿಂಗ್ಸ ಸರ್ಟಿ ಫಿಕೇ ಟ್ ನಂಥಹ ಹೂಡಿಕೆಯಾದರೆ ಅವುಗಳ ಮೇಲೆ ಸಾಲವನ್ನು ಪಡೆದು ತುರ್ತು ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಎಲ್ಲಾ ಹೂಡಿಕೆಯಲ್ಲಿ ಇದು ಸಾಧ್ಯವಿಲ್ಲ.

ಯಾವುದರಲ್ಲಿ ಹೂಡಿಕೆ? ಸರಕಾರಿ ಅಥವಾ ಖಾಸಗಿ?: ಎಲ್ಲಾ ಖಾಸಗಿ ಹೂಡಿಕೆ ಕೇಂದ್ರಗಳನ್ನು ಒಂದೇ ಬ್ರಾಕೆಟ್‌ನಲ್ಲಿ ತೂಗಲು ಸಾಧ್ಯವಿಲ್ಲ. ಸಾಕಷ್ಟು ಖಾಸಗಿ ಕ್ಷೇತ್ರಗಳಲ್ಲೂ ಹೂಡಿಕೆ ಲಾಭದಾಯಕವಿದೆ. ಸರಕಾರಿ ಕ್ಷೇತ್ರಗಳಲ್ಲೂ ಹೂಡಿಕೆ ವೈಫಲ್ಯ ಕಂಡ ಉದಾಹರಣೆಗಳು ಅಲಲ್ಲಿ ಕಾಣುತ್ತವೆ. ಹಲವು ಖಾಸಗಿ ಕಂಪನಿಗಳ ವೈಫಲ್ಯ ಮತ್ತು ಸರ್ಕಾರಿ ಕ್ಷೇತ್ರದಲ್ಲಿ ಹೂಡಿಕೆ ಸುರಕ್ಷ ಎನ್ನುವ ಭಾವನೆ ಮಾರುಕಟ್ಟೆಯಲ್ಲಿ ಇರುವುದರಿಂದ , ಸರಕಾರಿ ಕ್ಷೇತ್ರದತ್ತ ಒಲವು ಹೆಚ್ಚು ಕಾಣುತ್ತದೆ.

ತೆರಿಗೆ ವಿನಾಯಿತಿ: ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಜಾಗೃತಗೊಳಿಸಲು ಸರಕಾರ ಹೂಡಿಕೆಯ ಮೇಲೆ ಆದಾಯಕರ ವಿನಾಯಿತಿಯನ್ನು ನೀಡುತ್ತಿದೆ. ಜೀವ ವಿಮಾ, ಅರೋಗ್ಯ ವಿಮಾ ಪ್ರೀಮಿಯಂ ಮೇಲೆ ಹಲವು ಹಂತದ ವರೆಗೆ ತೆರಿಗೆ ವಿನಾಯಿತಿ ಇದೆ. ಕೆಲವು ಕ ಟ್ಟು ಪಾಡುಗಳಿಗೆ ಸೀಮಿತವಾಗಿ ಈ ಪ್ರೀಮಿಯಂ ತೆರಿಗೆ ವಿನಾಯಿತಿಗೆ ಒಳಪಡುತ್ತದೆ. ಹಾಗೆಯೇ ಪ್ರಾವಿಡೆಂಟ್ ಫಂಡ್ ಕಂಟ್ರಿ ಬೂಷನ್ ಮೇಲೂ ಕೆಲವು ವಿನಾಯಿತಿ ಇದೆ. ಇದೂ ಕೂಡಾ ಕೆಲವು ಗರಿಷ್ಟ ಮೊತ್ತಕ್ಕೆ ಸೀಮಿತವಾಗಿದೆ. ಈ ವಿನಾಯಿತಿ ಈಗ ಯಾವ ಅದಾಯ ತೆರಿಗೆ ಪದ್ಧತಿಯನ್ನು ಬಳಸಿಕೊಳ್ಳಲಾಗುತ್ತಿದೆ ಎನ್ನುವುದರ ಮೇಲೆ ಇದೆ.

ಬ್ಯಾಂಕ್ ಠೇವಣಿ ನಂತರ ಅತಿ ಸುರಕ್ಷಿತ ಹೂಡಿಕೆ ಎಂದರೆ ಚಿನ್ನ ಮತ್ತು ರಿಯಲ್‌ಎಸ್ಟೇಟ್ ಎನ್ನುವುದು ಸರ್ವಸಮ್ಮತ ಅಭಿ ಪ್ರಾಯ. ಚಿನ್ನ ಖರೀದಿಸುವುದು ಎಂದೂ ನಷ್ಟದಾಯಕವಲ್ಲ ಎನ್ನುವುದು ಲಾಗಾಯ್ತನಿಂದ ಕೇಳಿ ಬರುತ್ತಿರುವ ಮಾತು. ಅದು ಸ ತ್ಯವೂ ಹೌದು. ಚಿನ್ನದ ಬೆಲೆ ಎಂದೂ ಉತ್ತರಮುಖಿಯೇ, ಆದಾಯದ ಶೇ.10 ರಷ್ಟನ್ನು ಚಿನ್ನದಲ್ಲಿ ತೊಡಗಿಸಿದರೂ ಅದು ಲಾಭ ದಾಯಕ ಎಂದು ತಜ್ಞರು ಹೇಳುತ್ತಾರಂತೆ. ಹಾಗೆಯೇ ರಿಯಲ್ ಎಸ್ಟೇಟ್ ಕೂಡಾ. ಭೂಮಿ ತಾಯ ಮೇಲೆ ಹಾಕಿದ ಹಣ ಸದಾ ಬೆಳೆಯುತ್ತದೆ ಮಾತು ಎಂದೆಂದಿಗೂ ಪ್ರಸ್ತುತ. ಈ ಮಾತು ಹಳ್ಳಿಯಲ್ಲಿ ಹೇಗೋ? ಆದರೆ, ಪಟ್ಟಣ ನಗರಗಳಲ್ಲಿ ನಿತ್ಯ ಸತ್ಯ ಎನ್ನಬಹುದು. ಇದರಲ್ಲಿ ಒಂದೇ ಸಮಸ್ಯೆ ಎಂದರೆ ದ್ರವ್ಯತೆ ಇಲ್ಲದಿರುವುದು ಅಥವಾ ದ್ರವ್ಯತೆ ಪಡೆಯಲು ವಿಳಂಬವಾಗುವುದು. ಅಕಸ್ಮಾತ್ ಹಣದ ಅನಿವಾರ್ಯತೆ ಬಂದರೆ ಅದನ್ನು ನಗದೀಕರಿಸಿ ಕೊಳ್ಳುವುದು ತುಂಬಾ ವಿಳಂಬ ಪ್ರಕ್ರಿಯೆ. ಹಾಗೆಯೇ ಖಾ ಲಿ ನಿವೇಶನಗಳು ಇದ್ದರೆ ಅದನ್ನು ರಕ್ಷಿಸಿಕೊಳ್ಳುವುದೂ ತಲೆ ನೋವಿನ ಕೆಲಸ.

ಷೇರು ಮಾರುಕಟ್ಟೆ ಹೂಡಿಕೆಗೆ ಅಲ್ಪಾವಧಿ ಮತ್ತು ದೀರ್ಘಾವದಿ ಎರಡೂ ರೀತಿಯ ಹೂಡಿಕೆಗೆ ಪ್ರಶಸ್ತವಾದ ಅಯ್ಕೆ. ಅದರೆ, ಇದು ಪ್ರತಿಯೊಬ್ಬರೂ ಆಡುವ ಅಟವಲ್ಲ. ಇದರಲ್ಲಿ ಅಡುವವರಿಗೆ ಜಾಣ್ಮೆ ಮತ್ತು ಸ್ಕಿಲ್ ಎರಡೂ ಬೇಕು. ಷೇರು ಮಾರುಕಟ್ಟೆ ಬಗೆಗೆ ಅಪಾರ ಜ್ಞಾನ ಇರಬೇಕು. ಷೇರು ಮಾರುಕಟ್ಟೆ ಅಗೋಚರ ಮಾನದಂಡದ ಮೇಲೆ ಏಳು ಬೀಳುಗಳನ್ನು ಕಾಣುತ್ತಿದ್ದು, ಯಾವುದೇ ನಿರ್ದಿಷ್ಟವಾದ ಮಾನದಂಡ ಇರುವುದಿಲ್ಲ. ಇಂದು ನೂರಕ್ಕೆ ಏರಿದ್ದು ನಾಳೆ ಹತ್ತಕ್ಕೆ ಇಳಿಯಬಹುದು. ಷೇರು ಮಾರುಕಟ್ಟೆಯಲ್ಲಿ ಗಳಿಸಿದವರಷ್ಟೇ ಕಳೆದುಕೊಂಡವರು ಇದ್ದಾರಂತೆ. ಷೇರು ಮಾರುಕಟ್ಟೆಯಲ್ಲಿ ಆಟವಾಡಿ ಮನೆ ಕಟ್ಟಿಸಿ ದವರ ಸಂಖ್ಯೆ ತಿಳಿಯದು. ಅದರೆ ಮನೆಮಾರಿದವರ ಸಂಖ್ಯೆ ಸಾಕಷ್ಟು ಇದೆಯಂತೆ. ಮತಗಟ್ಟೆ ಸಮೀಕ್ಷೆ ಮಾರರನೆ ದಿನ ಷೇರು ಮಾರುಕಟ್ಟೆ 2500 ಪಾಯಿಂಟ್ ಏರಿದರೆ ಚುನಾವಣಾ ಪರಿಣಾಮದ ದಿನ 4500 ಪಾಯಿಂಟ್ ಇಳಿದಿತ್ತು. ಹೂಡಿಕೆದಾರರಿಗೆ ಈ ಏರಿಕೆ ಮತ್ತು ಇಳಿಕೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಾಗ ಮಾರ್ಗದರ್ಶಿಯಾಗಬೇಕು. ಹೂಡಿಕೆ ಸಾಮಾನ್ಯ ಜನರು ತಿಳಿದಷ್ಟು ಸುಲಭವಲ್ಲ. ಹೂಡಿಕೆಗೆ ಸಾಕಷ್ಟು ಹಣವಿದ್ದರೆ ಮತ್ತು ನಷ್ಟವನ್ನು ಭರಿಸುವ ಸಾಮರ್ಥ್ಯ ವಿದ್ದರೆ ಸರಿ. ಹೂಡಿಕೆಗೆ ಹಣದ ಲಭ್ಯತೆ ಮಿತವಾಗಿದ್ದರೆ , ಹೂಡಿಕೆಯ ಮೊದಲು ಸಾಕಷ್ಟು ಸಮೀಕರಣವನ್ನು ಬಿಡಿಸಬೇ ಕಾಗುತ್ತದೆ.

(ಲೇಖಕರು : ಅರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 137

ಸಮಾಚಾರ ಸಣ್ಣದಲ್ಲ

ಕೆನಡಾದಲ್ಲಿ ಭಾರತೀಯ ಮೂಲದ ಯುವಕನ ಹತ್ಯೆ!

ದೆಹಲಿ: ಕೆನಡಾದ ಸರ್ರೆ ಪ್ರದೇಶದಲ್ಲಿ ವಾಸವಿದ್ದ ಭಾರತೀಯ ಮೂಲದ ಯುವಕನನ್ನ ದುಷ್ಕರ್ಮಿಗಳು ಉದ್ದೇಶಿತ ದಾಳಿಯಲ್ಲಿ ಹತ್ಯೆಗೈದಿದ್ದಾರೆ. ಯುವಕ ಇತ್ತೀಚೆಗಷ್ಟೆ ಕೆನಡಾದ ಪೌರತ್ವ ಪಡೆದಿದ್ದ ಎನ್ನಲಾಗಿದೆ. ಪಂಜಾಬ್‌ನ ಲುಧಿಯಾನಾದ ಯುವರಾಜ್ ಗೋಯಲ್(28) ಹತ್ಯೆಯಾದ ಯುವಕನಾಗಿದ್ದು, ಪ್ರಕರಣ ಸಂಬಂಧ ನಾಲ್ವರನ್ನು ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. 2019ರಲ್ಲಿ ವಿದ್ಯಾರ್ಥಿ ವೀಸಾ ಮೇಲೆ ಕೆನಡಾಕ್ಕೆ ಬಂದಿದ್ದ ಯುವರಾಜ್ ಬಳಿಕ ಕಾರ್ ಡೀಲರ್ ಕಂಪನಿಯಲ್ಲಿ ಸೇಲ್ಸ್ ಎಕ್ಸಿಕ್ಯುಟಿವ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಜೂನ್ 7 ರಂದು ಜಿಮ್ ಮುಗಿಸಿ ಬಂದು ತಾಯಿಯ ಜೊತೆ ದೂರವಾಣಿ ಕರೆ ಮುಗಿಸಿದ ಕೆಲವೇ ಕ್ಷಣಗಳಲ್ಲಿ ಈ ಹತ್ಯೆ ನಡೆದಿದೆ ಎನ್ನಲಾಗಿದೆ. ಸರ್ರೆಯ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದು, ಹತ್ಯೆಗೆ ಕಾರಣ ಇನ್ನೂ ತಿಳಿದುಬಂದಿಲ್ಲ.

ವಾರಾಣಸಿ: ಪ್ರಿಯಾಂಕಾ ಸ್ಪರ್ಧೆ- ಮೋದಿ ಸೋಲು

ರಾಯ್ ಬರೇಲಿ: ಒಂದೊಮ್ಮೆ ಸಹೋದರಿ ಪ್ರಿಯಾಂಕಾ ವಾದ್ರಾ ವಾರಣಾಸಿ ಲೋಕಸಭೆ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರೆ ಪ್ರಧಾನಿ ನರೇಂದ್ರ ಮೋದಿ ಎರಡು ಅಥವಾ ಮೂರು ಲಕ್ಷ ಮತಗಳ ಅಂತರದಿಂದ ಸೋಲುತ್ತಿದ್ದರು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ರಾಯ್ ಬರೇಲಿಯಲ್ಲಿ ಮಂಗಳವಾರ ಮತದಾರರಿಗೆ ಕೃತಜ್ಞತೆ ಅರ್ಪಿಸುವ ಸಭೆಯಲ್ಲಿ ಮಾತನಾಡಿದ ರಾಹುಲ್, ಸಂಸತ್ತಿನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಬಲ ಕಡಿಮೆ ಮಾಡಲು ಇಂಡಿಯ ಒಕ್ಕೂಟದ ಪಕ್ಷಗಳು ರಾಯ್‌ಬರೇಲಿ, ಅಮೇಥಿ ಮತ್ತು ದೇಶದ ಇತರ ಭಾಗಗಳಲ್ಲಿ ಒಗ್ಗಟ್ಟಿನಿಂದ ಹೋರಾಡಿದವು ಎಂದರು. ತಾವು ಮತ್ತು ಮಿತ್ರಪಕ್ಷದ ಸಂಸದರು ಚುನಾವಣಾ ಫಲಿತಾಂಶದ ಬಗ್ಗೆ ಮಾತನಾಡಿ ಅಹಂಕಾರಕ್ಕೆ ಬಲಿಯಾಗುವುದಿಲ್ಲ ಎಂದರು. ಕ್ಷೇತ್ರದಲ್ಲಿ ಸಾಮಾನ್ಯರ ಪರವಾಗಿ ಕೆಲಸ ಮಾಡುವುದಾಗಿ ರಾಹುಲ್ ಭರವಸೆ ನೀಡಿದರು. ಅಯೋಧ್ಯೆಯಲ್ಲಿ ಬಿಜೆಪಿಯನ್ನು ಸೋಲಿಸುವ ಮೂಲಕ ಜನಸಾಮಾನ್ಯರು ಮೋದಿಗೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಹೇಳಿದರು. ಅಮೇಥಿ ಮತ್ತು ರಾಯ್‌ಬರೇಲಿ ಕ್ಷೇತ್ರಗಳಲ್ಲಿ ಪಕ್ಷದ ಗೆಲುವಿಗಾಗಿ ಜನರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಧನ್ಯವಾದ ಹೇಳಿದರು.

300ರೂ. ಒಡವೆ 6 ಕೋಟಿಗೆ ಮಾರಾಟ

ಜೈಪುರ: 300 ರೂ. ಕೃತಕ ಆಭರಣವನ್ನು 6 ಕೋಟಿ ರೂ.ಗೆ ಮಾರಾಟ ಮಾಡಿ ರಾಜಸ್ಥಾನದ ಜೈಪುರದ ವರ್ತಕರು ಅಮೇರಿಕ ಮಹಿಳೆಗೆ ವಂಚಿಸಿದ್ದಾರೆ. ಅಮೆರಿಕ ಪ್ರಜೆ ಚೆರಿಶ್ ಎಂಬಾಕೆಗೆ ಮೋಸ ಹೋದವರು. ಚಿನ್ನದ ಪಾಲಿಶ್ ಹಾಕಲಾಗಿದ್ದ ಬೆಳ್ಳಿ ಆಭರಣವನ್ನು ಜೈಪುರದ ಜೋಹ್ರಿ ಬಜಾರಲ್ಲಿ ಖರೀದಿಸಿ ಚೆರಿಶ್ ಮೋಸ ಹೋಗಿದ್ದಾರೆ. ಬಳಿಕ ಆ ಆಭರಣವನ್ನು ಅಮೆರಿಕದ ಕಾರ್ಯಕ್ರಮವೊಂದರಲ್ಲಿ ಪ್ರದರ್ಶಿಸಿದ್ದಾರೆ. ಆಗ ಅದು ನಕಲಿ ಒಡವೆ ಎಂದು ತಿಳಿದುಬಂದಿದೆ. ನಂತರ ಜೈಪುರಕ್ಕೆ ಆಗಮಿಸಿದ ಚೆರಿಶ್, ತನಗೆ ಆಭರಣ ಮಾರಾಟ ಮಾಡಿದ್ದ ಗೌರವ್ ಸೋನಿ ಬಳಿ ವಿಚಾರಿಸಿದ್ದಾರೆ. ಗೌರವ್ ಆಕೆಯ ಆರೋಪಗಳನ್ನು ತಳ್ಳಿಹಾಕಿದ್ದಾನೆ. ಬಳಿಕ ಚೆರಿಶ್ ಪೊಲೀಸರಿಗೆ ದೂರು ದಾಖಲಿಸಿದ್ದಾರೆ. ಅಮೆರಿಕ ರಾಯಭಾರಿ ಕಚೇರಿ ಅಧಿಕಾರಿಗಳ ನೆರವು ಪಡೆದಿದ್ದಾರೆ. 2022 ರಲ್ಲಿ ಇನ್ಸ್ಟಾಗ್ರಾಮ್ ಮೂಲಕ ಪರಿಚಯವಾದ ಗೌರವ್ ಸೋನಿ ಗೆ ಕಳೆದ 2 ವರ್ಷಗಳಲ್ಲಿ 6 ಕೋಟಿ ರೂ. ಪಾವತಿ ಮಾಡಿದ್ದೆ. ಆದರೆ ಆತ ಕೃತಕ ಆಭರಣಗಳನ್ನು ನೀಡಿದ್ದಾನೆ ಎಂದು ದೂರು ದಾಖಲಿಸಿದ್ದಾರೆ. ಪರಾರಿಯಾಗಿರುವ ಗೌರವ್ ಮತ್ತು ಆತನ ತಂದೆ ರಾಜೇಂದ್ರ ಸೋನಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಮಾಸ್ ಉಗ್ರ ದಾಳಿ ಬೆಂಬಲಿಸಿ ಸಂಭ್ರಮ

ನ್ಯೂಯಾರ್ಕ್: ಕೆಲ ಇಸ್ರೇಲಿ ವಿರೋಧಿ ಗುಂಪುಗಳು ನ್ಯೂಯಾರ್ಕ್‌ನಲ್ಲಿ ಹಮಾಸ್ ಭಯೋತ್ಪಾದಕ ದಾಳಿಯನ್ನು ಬೆಂಬಲಿಸಿ ಸಂಭ್ರಮಾಚರಣೆ ನಡೆಸಿದ ಘಟನೆ ಸೋಮವಾರ ರಾತ್ರಿ ನಡೆದಿದೆ.2024 ಅ.7 ರಂದು ಇಸ್ರೇಲ್ ನಲ್ಲಿ ಸಂಗೀತ ಸಂಜೆ ಸಮಯದಲ್ಲಿ ಭಯೋತ್ಪಾದಕ ದಾಳಿ ನಡೆಸಿದ ಹಮಾಸ್ ಉಗ್ರರು 1200 ಕ್ಕೂ ಹೆಚ್ಚು ಜನರ ಜೀವ ತೆಗೆದಿದ್ದರು. ಈ ಘಟನೆಯನ್ನು ನೆನಪು ಮಾಡಿಕೊಂಡು ಇಸ್ರೇಲ್ ವಿರೋಧಿ ಗುಂಪು ಸಂಭ್ರಮ ಪಟ್ಟಿದೆ. ಡೌನ್‌ಟೌನ್ ಮಾನ್ಹಟ್ಟನ್ ಮ್ಯೂಸಿಕ್ ಎಕ್ಸಿಬಿಶನ್ ಎದುರು ಬೆಂಕಿ ಹಚ್ಚಿ,'ಲಾಂಗ್ ಲಿವ್ ದಿ ಇಂತಿಫಾಡಾ' ಎಂದು ಘೋಷಣೆ ಕೂಗಿದೆ. ಇರಾನ್ ಬೆಂಬಲಿತ ಲೆಬನೀಸ್ ಭಯೋತ್ಪಾದಕ ಸಂಘಟನೆ ಹೆಜಬೊಲ್ಲಾ ಬಾವುಟಗ ಳನ್ನು ಹಾರಿಸಿ ವಿಕೃತ ಸಂಭ್ರಮಾರಣೆ ನಡೆಸಲಾಗಿದೆ. ಪ್ರತಿಭಟನೆಯಲ್ಲಿ 'ಇಸ್ರೇಲ್ ಗೋ ಟು ಹೆಲ್' ಎಂಬ ಘೋಷಣೆ ಕೂಗಿದ್ದಾರೆ. ಈಸಂದರ್ಭದಲ್ಲಿ, ಪೊಲೀಸ್ ಮತ್ತು ಪ್ರತಿಭಟನಾಕಾರರ ಮಧ್ಯೆ ಮಾತಿನ ಚಕಮಕಿ ನಡೆದಿದೆ.

{ಒಮರ್ ಅಬ್ದುಲ್ಲಾ} ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ

ಎನ್‌ಡಿಎ ಸರಕಾರದ ಪ್ರಮುಖ ಮಿತ್ರ ಪಕ್ಷಗಳಾದ ಟಿಡಿಪಿ ಮತ್ತು ಜೆಡಿಯು ಹೆಚ್ಚು ಜಾಗ್ರತೆಯಿಂದ ಇರಬೇಕು. ಏಕೆಂದರೆ ಬಿಜೆಪಿ ಹೆಚ್ಚು ಸಮಯ ಮೈತ್ರಿ ಅವಲಂಬನೆ ಇಟ್ಟಿಸದೇ ಮತ್ತೆ ಆಪರೇಷನ್ ಕಮಲ ನಡೆಸುವ ಸಾಧ್ಯತೆಯಿದೆ.



ಆಂಧ್ರ ನೂತನ ಸಿಎಂ ನಾಯ್ಡು ಸಂಜೆ 4.55ಕ್ಕೆ ಪದಗ್ರಹಣ | ಒಡಿಶಾ ಮುಖ್ಯಮಂತ್ರಿಯಾಗಿ ಮಾಝಿ ಸಂಜೆ 5ಕ್ಕೆ ಪ್ರಮಾಣ

ಒಡಿಶಾ, ಆಂಧ್ರ ಹೊಸ ಸರಕಾರ

ಅಮರಾವತಿ/ ಭುವನೇಶ್ವರ: ಆಂಧ್ರ ಪ್ರದೇಶ ಮತ್ತು ಒಡಿಶಾ ರಾಜ್ಯದಲ್ಲಿ ಬುಧವಾರ ಹೊಸ ಸರಕಾರ ರಚನೆ ಆಗಲಿದೆ.

ಆಂಧ್ರ ರಾಜ್ಯದ ಜನತೆ ಐದು ವರ್ಷಗಳ ಬಳಿಕ ಸರಕಾರ ಬದಲಾವಣೆಗೆ ಮತ ನೀಡಿದ್ದಾರೆ. ಆಂಧ್ರಪ್ರದೇಶ ದಲ್ಲಿ ತೆಲುಗು ದೇಶಂ ಪಕ್ಷದ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ ಎನ್ ಡಿಎ ಸರಕಾರ ಆಡಳಿತಕ್ಕೆ ಬರುತ್ತಿದೆ.

ಒಡಿಶಾ ಜನತೆ 25 ವರ್ಷಗಳ ಬಳಿಕ ಸರಕಾರ ಬದಲಿಸಿದ್ದಾರೆ. ಬಿಜು ಜನತಾ ದಳ (ಬಿಜೆಡಿ) ಪಕ್ಷದ ಸರಕಾರ ಸತತ ಎರಡೂವರೆ ದಶಕಗಳ ಆಡಳಿತ ನಡೆಸಿ ಈಗ ಅಧಿಕಾರ ಕಳೆದುಕೊಂಡಿದೆ. ಒಡಿಶಾದಲ್ಲಿ ಮೊದಲ ಬಾರಿಗೆ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುತ್ತಿದೆ.

ಆಂಧ್ರ ಪ್ರದೇಶದ ನೂತನ ಮುಖ್ಯಮಂತ್ರಿಯಾಗಿ ಚಂದ್ರಬಾಬು ನಾಯ್ಡು ಬುಧವಾರ ಸಂಜೆ ಅಮರಾವತಿಯಲ್ಲಿ ಪದಗ್ರಹಣ ಮಾಡಲಿದ್ದಾರೆ. ಸಂಜೆ 4.55ಕ್ಕೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಬಿಜೆಪಿ ನಾಯಕ ಮೋಹನ್ ಚರಣ್ ಮಾಝಿ ಅವರು ಒಡಿಶಾದ ನೂತನ ಮುಖ್ಯಮಂತ್ರಿಯಾಗಿ ಬುಧವಾರ ಸಂಜೆ5 ಕ್ಕೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಮಾಝಿ ಅವರನ್ನು ಬಿಜೆಪಿ ಶಾಸಕರು ಶಾಸಕಾಂಗ ಪಕ್ಷದ ನಾಯಕರಾಗಿ ಮಂಗಳವಾರ ಆಯ್ಕೆ ಮಾಡಿದ್ದಾರೆ.

ಆಂಧ್ರಪ್ರದೇಶ ವಿಧಾನಸಭೆ ಬಲ
ತೆಲುಗು ದೇಶಂ ಪಕ್ಷ - 135
ಜನಸೇನಾ ಪಕ್ಷ-21 ಬಿಜೆಪಿ- 8

ಒಡಿಶಾ ವಿಧಾನಸಭೆ ಬಲ
ಬಿಜೆಪಿ - 78

ಒಡಿಶಾಗೆ ಇಬ್ಬರು ಡಿಸಿಎಂ | ಜಗನ್ನಾಥನ ನೆಲದಲ್ಲಿ ಕಮಲ ಅಧಿಕಾರ

ಮೋಹನ್ ಮಾಝಿ ಒಡಿಶಾ ಮೊದಲ ಬಿಜೆಪಿ ಸಿಎಂ

ಭುವನೇಶ್ವರ: ಶ್ರೀ ಜಗನ್ನಾಥ ಭಗವಾನ್ ನೆಲದಲ್ಲಿ ಮೊದಲ ಬಾರಿಗೆ ಕಮಲ ಪಕ್ಷದ ಅಧಿಕಾರ ಬುಧವಾರ ಶುರುವಾಗಲಿದೆ.

ಮೋಹನ್ ಮಾಝಿ ಒಡಿಶಾ ರಾಜ್ಯ ದಲ್ಲಿ ಪ್ರಥಮ ಬಿಜೆಪಿ ಮುಖ್ಯಮಂತ್ರಿ ಎನಿಸಿಕೊಳ್ಳಲಿ ದ್ದಾರೆ. ಬುಧವಾರ ಸಂಜೆ 5 ಗಂಟೆಗೆ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿದೆ.

ಒಡಿಶಾ ಸಿಎಂ ಯಾರು ಎಂಬ ಚರ್ಚೆಗೆ ಮಂಗಳವಾರ ಸಂಜೆ ತೆರೆಬಿದ್ದಿದೆ. ಮೋಹನ್ ಮಾಝಿ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷ ಒಡಿಶಾದ ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಮಾಡಿದೆ. ಜತೆಗೆ ಕನಕ ವರ್ಧನ ಸಿಂಗ್

ಡಿಯೋ ಹಾಗೂ ಪ್ರವತಿ ಪರಿದಾ ಇಬ್ಬರನ್ನು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ.

ಲೋಕಸಭೆ ಜತೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಒಡಿಶಾದಲ್ಲಿನ 147 ವಿಧಾನಸಭಾ ಕ್ಷೇತ್ರಗಳಲ್ಲಿ 78 ಕ್ಷೇತ್ರಗಳನ್ನು ಗೆದ್ದಿದ್ದು, ಇದೇ ಮೊದಲ ಬಾರಿಗೆ ಬಿಜೆಪಿ ಮುಖ್ಯಮಂತ್ರಿ ಒಡಿಶಾದಲ್ಲಿ ಆಡಳಿತ ನಡೆಸಲಿದ್ದಾರೆ.

ಚುನಾವಣೆ ಫಲಿತಾಂಶ ಬಳಿಕ ಒಡಿಶಾದ ಸಿಎಂ ಯಾರಾಗ್ತಾರೆ ಎಂಬ ಚರ್ಚೆ ಜೋರಾಗಿ ನಡೆದಿತ್ತು. ಕೊನೆಗೂ ಮೊದಲ ಬಿಜೆಪಿ ಮುಖ್ಯಮಂತ್ರಿ ಆಗುವ ಅದೃಷ್ಟ ಮೋಹನ್ ಮಾಝಿ ಅವರಿಗೆ ಒಲಿದಿದೆ.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಆಯ್ಕೆ ಬಳಿಕ ನೂತನ ಶಾಸಕರು ಜಗನ್ನಾಥ ದೇಗುಲಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ ದ್ದಾರೆ. 2000ನೇ ಇಸವಿಯಿಂದ ಸುದೀರ್ಘ ಎರಡೂವರೆ ದಶಕಗಳ ಕಾಲ ಒಡಿಶಾದಲ್ಲಿ ನವೀನ್ ಪಟ್ನಾಯಕ್ ನೇತೃತ್ವದ ಬಿಜೆಡಿ ಪಕ್ಷ ಆಡಳಿತ ನಡೆಸಿತ್ತು. ಆದರೆ ಈ ಬಾರಿಯ ಚುನಾವಣೆಯಲ್ಲಿ 51 ಸ್ಥಾನ ಮಾತ್ರ ಗೆದ್ದು ಅಧಿಕಾರ ಕಳೆದುಕೊಂಡಿದೆ.

ಮೋಹನ್ ಚರಣ್ ಮಾಝಿ

53 ವರ್ಷಗಳ ಮೋಹನ್ ಚರಣ್ ಮಾಝಿ ಆದಿವಾಸಿ ಜನಾಂಗದ ಪ್ರಮುಖ ನಾಯಕ. 2000ನೇ ಇಸವಿಯಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಮುಖ್ಯ (ಸರ್‌ಪಂಚ್)ಆಗಿ ರಾಜಕೀಯ ಜೀವನ ಆರಂಭಿಸಿದ ಇವರು ಕಿಯೋಂಝರ್ ವಿಧಾನಸಭಾ ಕ್ಷೇತ್ರದಲ್ಲಿ ಈಗಿನದು ಸೇರಿ 5 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2005-09ರ ವರೆಗೆ ಬಿಜೆಡಿ ಮತ್ತು ಬಿಜೆಪಿ ಮೈತ್ರಿ ಸರಕಾರದಲ್ಲಿ ಉಪ ಮುಖ್ಯ ಸಚೇತಕರಾಗಿ ಕಾರ್ಯನಿರ್ವಹಿಸಿ ದ್ದಾರೆ. 2024ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಡಿಯ ಮೀನಾ ಮಾಝಿ ವಿರುದ್ಧ 11,577 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ.

ಇನ್ನುಂದೆ ಅಮರಾವತಿ ಆಂಧ್ರಪ್ರದೇಶದ ರಾಜಧಾನಿ

ನಾಯ್ಡು ಆಂಧ್ರಪ್ರದೇಶಕ್ಕೆ ನೂತನ ಎನ್‌ಡಿಎ ಸಿಎಂ

ಅಮರಾವತಿ: ಎನ್‌ಡಿಎ ಮುಖ್ಯಮಂತ್ರಿಯಗಿ ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು ಜೂನ್ 12ರಂದು ಪ್ರಮಣ ವಚನ ಸ್ವೀಕರಿಸಲಿದ್ದಾರೆ. ಕೇಸರಪಲ್ಲಿ ಐಟಿ ಪಾರ್ಕ್ ಮೈದಾನದಲ್ಲಿ ಆಯೋಜಿ ಸಲಾದ ಬೃಹತ ಕಾರ್ಯ ಕ್ರಮದಲ್ಲಿ 25 ಸಚಿವ ರೊಂದಿಗೆ ಚಂದ್ರಬಾಬು ನಾಯ್ಡು ಅಧಿಕಾರ ಸ್ವೀಕರಿಸಲಿದ್ದಾರೆ.



ಪ್ರಮಾಣವಚನಕ್ಕೂ ಒಂದು ದಿನದ ಮುಂಚೆ ಟಿಡಿಪಿ, ಬಿಜೆಪಿ ಹಾಗೂ ಜನಸೇನಾ ಶಾಸಕರ ಜಂಟಿ ಸಭೆ ನಡೆದಿದೆ. ಈ ಸಭೆಯಲ್ಲಿ ಪವನ್ ಕಲ್ಯಾಣ್ ಜನಸೇನಾ ಪಕ್ಷದ ನಾಯಕನಾಗಿ ಆಯ್ಕೆಯಾಗಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಜನಸೇನ ಪಕ್ಷದ ಮೂವರು ಸಚಿವರು, ಬಿಜೆಪಿಯ ಇಬ್ಬರು ಸಚಿವರು ಅಧಿಕಾರ ಸ್ವೀಕರಿಸಲಿದ್ದು ಒಟ್ಟೂ 25 ಸಚಿವರಿಗೆ ರಾಜ್ಯಪಾಲ ಎಸ್ ಅಬ್ದುಲ್ ನಜೀರ್ ಪ್ರಮಾಣ ವಚನ ಬೋಧಿಸಲಿದ್ದಾರೆ. ಚಂದ್ರಬಾಬು ನಾಯ್ಡು ಆಂಧ್ರಪ್ರದೇಶದ ಎನ್‌ಡಿಎ ಸರಕಾರದ ಮೊದಲ ಸಿಎಂ ಆಗಿ ಆಡಳಿತ ನಡೆಸಲಿದ್ದಾರೆ.

ಇನ್ನು ಜನಸೇನ ಪಕ್ಷದ ನಾಯಕ ಪವನ್ ಕಲ್ಯಾಣ್ ಗೆ ಉಪ ಮುಖ್ಯಮಂತ್ರಿ ಸ್ಥಾನ ಸಿಗಲಿದೆ ಎಂಬ ಮಾತು ಕೂಡ ಕೇಳಿ ಬಂದಿದೆ. ಗೃಹ ಸಚಿವ ಅಮಿತ್ ಶಾ ಆಂಧ್ರಪ್ರದೇಶಕ್ಕೆ ಭೇಟಿ ನೀಡಲಿದ್ದು ಪ್ರಮಾಣ ವಚನ ಕಾರ್ಯಕ್ರಮ ಬಳಿಕ ಮಹತ್ವದ ಸಭೆ ನಡೆಯಲಿದೆ .

ಮೂರು ರಾಜಧಾನಿ ಗೊಂದಲ ಅಂತ್ಯ

ಸಭೆ ಬಳಿಕ ಮಾತನಾಡಿದ ಚಂದ್ರಬಾಬು ನಾಯ್ಡು, 'ನಮ್ಮ ಸರಕಾರದಲ್ಲಿ ಮೂರು ರಾಜಧಾನಿಯ ಆಟವಿಲ್ಲ, ನಮ್ಮ ರಾಜಧಾನಿ ಅಮರಾವತಿ ಮಾತ್ರ 'ಎನ್ನುವ ಮೂಲಕ ಬಹುಕಾಲದ ಯೋಜನೆಯನ್ನು ಈ ಬಾರಿ ಜಾರಿಗೊಳಿಸಲು ನಿರ್ಧರಿಸಿದ್ದಾರೆ. ಈ ಮೊದಲು ಹೈದ್ರಾಬಾದ್ ತೆಲಂಗಾಣ ಮತ್ತು ಆಂಧ್ರಪ್ರದೇಶದ ಜಂಟಿ ರಾಜಧಾನಿಯಾಗಿತ್ತು. 10 ವರ್ಷಗಳ ಬಳಿಕ ಅಮರಾವತಿಯನ್ನು ರಾಜಧಾನಿಯನ್ನಾಗಿ ಮಾಡಬೇಕು ಎಂಬುದು ನಾಯ್ಡು ಕನಸಾಗಿತ್ತು ಆದರೆ ನಂತರ ಬಂದ ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರಕಾರ ಆಂಧ್ರಕ್ಕೆ ಮೂರು ರಾಜಧಾನಿ ತರುವ ಯೋಜನೆಯನ್ನು ಮುಂದಿಟ್ಟಿದ್ದರು . ಕೊನೆಗೂ ಅಮರಾವತಿಯನ್ನು ರಾಜಧಾನಿಯನ್ನಾಗಿ ಮಾಡುವ ಚಂದ್ರಬಾಬು ನಾಯ್ಡು ಕನಸು ಈಗ ನಿಜವಾಗಿದೆ.

ಇದು ಎನ್‌ಡಿಎ ಅಲ್ಲ ಸರಕಾರಿ ಪರಿವಾರ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಸಚಿವ ಸಂಪುಟದ ಖಾತೆ ಹಂಚಿಕೆ ವಿಚಾರವನ್ನು ಟೀಕಿಸಿರುವ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ 'ಇದು ಎನ್‌ಡಿಎ ಮೈತ್ರಿಕೂಟ ಅಲ್ಲ, ಸರಕಾರಿ ಪರಿವಾರ' ಎಂದು ವ್ಯಂಗ್ಯವಾಡಿದ್ದಾರೆ.

'ತಲೆಮಾರುಗಳ ಹೋರಾಟ, ಸೇವೆ, ತ್ಯಾಗವನ್ನು ಸ್ವಜನ ಪಕ್ಷಪಾತ ಎಂದು ಕರೆದ ಪಕ್ಷ ಇಂದು ಅಧಿಕಾರವನ್ನು ತಮ್ಮ ಸರಕಾರಿ ಪರಿವಾರದಲ್ಲೇ ಹಂಚುತ್ತಿದೆ. ಪ್ರಧಾನಿ ಮೋದಿ ಮಾತು ಮತ್ತು ಕೆಲಸದಲ್ಲಿ ಭಾರೀ ವ್ಯತ್ಯಾಸವಿದೆ' ಎಂದು ರಾಹುಲ್ ಎಕ್ಸ್ ಸಂದೇಶದಲ್ಲಿ ಟೀಕಿಸಿದ್ದಾರೆ.

ರಾಜಕೀಯ ಪರಿವಾರ ಎಂಬ ಶೀರ್ಷಿಕೆ ನೀಡಿ ಕೇಂದ್ರ ಸಚಿವರ ಪಟ್ಟಿ ಹಂಚಿಕೊಂಡಿರುವ ರಾಹುಲ್, ಮೋದಿ ಪರಿವಾರ ರಾಜಕಾರಣ ವಿರೋಧಿಸುತ್ತೇನೆ ಎನ್ನುತ್ತಲೇ ತಮ್ಮದೇ ಸಂಪುಟದಲ್ಲಿ ರಾಜಕೀಯ ನಾಯಕರ ಕುಟುಂಬಕ್ಕೇ ಖಾತೆ ಹಂಚಿಕೆ ಮಾಡಿದ್ದಾರೆ ಎಂದು ಕುಟುಕಿದ್ದಾರೆ

ಎಚ್.ಡಿ.ಕುಮಾರಸ್ವಾಮಿ	ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಪುತ್ರ
ಜ್ಯೋತಿರಾದಿತ್ಯ ಸಿಂಧಿಯ	ಮಾಜಿ ಕೇಂದ್ರ ಸಚಿವ ಮಾಧವ್ ರಾವ್ ಸಿಂಧಿಯಾ ಪುತ್ರ
ಕಿರಣ್ ರಿಜಿಜು	ಹಂಗಾಮಿ ಸ್ಪೀಕರ್ ರಿಂಚಿನ್ ಖರು ಪುತ್ರ
ರಕ್ಷಾ ಖಡ್ಸೆ	ಮಾಜಿ ಸಚಿವ ಏಕನಾಥ ಖಡ್ಸೆ ಸೊಸೆ
ಜಯಂತ್ ಚೌಧರಿ	ಮಾಜಿ ಪ್ರಧಾನಿ ಚರಣ್ ಸಿಂಗ್ ಮೊಮ್ಮಗ
ಚಿರಾಗ್ ಪಾಸ್ವಾನ್	ಮಾಜಿ ಕೇಂದ್ರ ಸಚಿವ ರಾಮ್ ವಿಲಾಸ್ ಪಾಸ್ವಾನ್ ಪುತ್ರ
ಜೆ ಪಿ ನಡ್ಡಾ	ಮಾಜಿ ಸಂಸದ ಜಯ್ ಶ್ರೀ ಬ್ಯಾನರ್ಜಿ ಅಳಿಯ
ರಾಮ್‌ನಾಥ್ ಠಾಕೂರ್	ಕರ್ಪೂರಿ ಠಾಕೂರ ಪುತ್ರ
ರಾಮ್ ಮೋಹನ್ ನಾಯ್ಡು	ಮಾಜಿ ಕೇಂದ್ರ ಸಚಿವ ಎರ್ರನ್ ನಾಯ್ಡು ಪುತ್ರ
ಜಿತಿನ ಪ್ರಸಾದ್	ಮಾಜಿ ಸಂಸದ ಜಿತೇಂದ್ರ ಪ್ರಸಾದ್ ಪುತ್ರ
ಪೀಯೂಷ್ ಗೋಯಲ್	ಮಾಜಿ ಕೇಂದ್ರ ಸಚಿವ ವೇದ ಪ್ರಕಾಶ್ ಗೋಯಲ್ ಪುತ್ರ

ಬಾಂಗ್ಲಾ ಗಡಿಯಲ್ಲಿ ಶ್ರಮದಾನ: ರೈತರ ಸಾಥ್

ಪಾರ್ಥೇನಿಯಂ ನಾಶಕ್ಕೆ ಯೋಧರು!

ದೆಹಲಿ: ಭಾರತ ಮತ್ತು ಬಾಂಗ್ಲಾದೇಶ ಗಡಿಯಲ್ಲಿ ಬೆಳೆದಿರುವ ಪಾರ್ಥೇನಿಯಂ ಕಳೆಯನ್ನು ಕಿತ್ತು ಎಸೆಯುವ ವಿಶೇಷ ಅಭಿಯಾನಕ್ಕೆ ಭಾರತದ ಗಡಿ ಭದ್ರತಾ ಪಡೆ (ಬಿಎಸ್ ಎಫ್) ಚಾಲನೆ ನೀಡಿದೆ.

ಗಡಿ ಪ್ರದೇಶದ 46 ಕಿಮೀ ಪ್ರದೇಶದಲ್ಲಿ ಬೆಳೆದಿದ್ದ ಪಾರ್ಥೇನಿಯಂ ಕಿತ್ತು ಹಾಕುವ ಬಿಎಸ್ ಎಫ್ ಕಾರ್ಯದಲ್ಲಿ ಸಾವಿರಾರು ಯೋಧರು ಕೈ ಜೋಡಿಸಿದ್ದಾರೆ. ಯೋಧರಿಗೆ ಸ್ಥಳೀಯರು ಮತ್ತು ರೈತರೂ ಕೈಜೋಡಿಸಿದ್ದಾರೆ.

ನಾಡಿಯಾ ಗಡಿ ಪ್ರದೇಶದ ಹಲ್ದಾರ್ ಪಾರಾ, ಬಿಜೋಯ್‌ಪುರ, ನಲುವಾ ಪಾರ, ರಾಂಡಿಪುರ ಪ್ರದೇಶಗಳಲ್ಲಿ ಈ ಪಾರ್ಥೇನಿಯಂ ನಿರ್ಮೂಲನೆ ಅಭಿ ಯಾನ ನಡೆದಿದೆ.

ಬಿಎಸ್‌ಎಫ್‌ನ 32ನೇ ಬೆಟಾಲಿಯನ್ ಮುಖ್ಯಸ್ಥ ಸುಜೀತ್ ಕುಮಾರ್ ಪಾರ್ಥೇನಿಯಂ ಗಿಡದಿಂದಾಗುವ ಹಾನಿಕಾರಕ ಅಂಶಗಳ ಬಗ್ಗೆ ಜನರಿಗೆ ತಿಳಿಸಿಕೊಟ್ಟರು. ನನ್ನ ತಂಡ ಪ್ರತಿದಿನ ಬೆಳಿಗ್ಗೆ 2 ಗಂಟೆ ಈ ಕೆಲಸ ಮಾಡುತ್ತಿದ್ದೇವೆ. ದಿನವಿಡೀ, ಎಲ್ಲಿಯಾದರೂ ಇಂತಹ ಹಾನಿಕಾರಕ ಗಿಡಗಳು ಕಂಡು ಬಂದರೂ, ಅವುಗಳನ್ನು ನಿರ್ಮೂಲನೆ ಮಾಡಲು ಸೈನಿಕರಿಗೆ ಸೂಚಿಸಲಾಗಿದೆ. ಆ ಮೂಲಕ ಈ ಪ್ರದೇಶವನ್ನು ಶೀಘ್ರದಲ್ಲೇ ಪಾರ್ಥೇನಿಯಂ ಮುಕ್ತ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದು ಸುಜೀತ್ ಕುಮಾರ್ ಹೇಳಿದರು. ಈ ಪಾರ್ಥೇನಿಯಂ ಗಿಡಗಳು ನಮ್ಮ ಗ್ರಾಮದಲ್ಲಿ ಹೆಚ್ಚಾಗಿ ಬೆಳೆದಿದ್ದವು. ನಾವು ಯೋಧರೊಂದಿಗೆ ಸೇರಿ ಕಿತ್ತು ಹಾಕುತ್ತಿದ್ದೇವೆ ಎಂದು ರೈತರೊಬ್ಬರು ಹೇಳಿದರು.

ಪರೀಕ್ಷಾ ಪ್ರಾಧಿಕಾರ ಉತ್ತರಿಸಲಿ: ಪೀಠ | ವೈದ್ಯ ಶಿಕ್ಷಣ ಪ್ರವೇಶ ಕೌನ್ಸೆಲಿಂಗ್ ತಡೆಗೆ ನಕಾರ

ನೀಟ್ ಫಲಿತಾಂಶ ವಿವಾದದಿಂದ ಪರೀಕ್ಷೆ ಪಾವಿತ್ರ್ಯ ಹಾಳು: ಸುಪ್ರೀಂ

ದೆಹಲಿ: ನೀಟ್ ಫಲಿತಾಂಶ ವಿವಾದ ಪರೀಕ್ಷೆಯ ಪಾವಿತ್ರ್ಯದ ಮೇಲೆ ಪರಿಣಾಮ ಬೀರಿದೆ. ಈ ವಿಷಯದಲ್ಲಿ ಪರೀಕ್ಷಾ ಪ್ರಾಧಿಕಾರ ಉತ್ತರ ನೀಡಬೇಕಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ನೀಟ್ ಪರೀಕ್ಷಾ ಫಲಿತಾಂಶ ವಿವಾದ ವನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, 'ವಿವಾದ ಅಷ್ಟು ಸರಳವಾಗಿಲ್ಲ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಆದ್ದರಿಂದ ಪರೀಕ್ಷಾ ಪ್ರಾಧಿಕಾರ (ಎನ್ ಟಿಎ) ಉತ್ತರ ನೀಡಲೇಬೇಕಿದೆ ಎಂದು ಹೇಳಿದೆ.

ಈ ವಿವಾದ ಪರೀಕ್ಷೆಯ ಪಾವಿತ್ರ್ಯದ ಮೇಲೆ ಪರಿಣಾಮ ಬೀರಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ 2024ರ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ ಇಡೀ ಪ್ರಕ್ರಿಯೆಯನ್ನು ರದ್ದುಗೊ ಳಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿ ಕುರಿತು ಮಂಗಳವಾರ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು.

ಈ ವೇಳೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ ನೋಟಿಸ್ ಜಾರಿ ಮಾಡಿದ ನ್ಯಾಯಮೂರ್ತಿ ವಿಕ್ರಮ್ ನಾಥ್ ಮತ್ತು ನ್ಯಾ. ಅಹ್ಸಾನುದಿನ್ ಅಮಾನುಲ್ಲಾ ಅವರ ರಜಾಕಾಲದ ಪೀಠ, ಪ್ರಾಧಿಕಾರ ಉತ್ತರ ನೀಡಲಿ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಪ್ರತಿನಿಧಿಸುವ ವಕೀಲರಿಗೆ ಹೇಳಿತು.

ಕೌನ್ಸೆಲಿಂಗ್ ತಡೆ ನೀಡಲು ನಕಾರ

ಇದೇ ವೇಳೆ ಎಂಬಿಬಿಎಸ್, ಬಿಡಿಎಸ್ ಮತ್ತು ಇತರ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಯಶಸ್ವಿ ಅಭ್ಯರ್ಥಿಗಳ ಕೌನ್ಸೆಲಿಂಗ್‌ಗೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಸುಪ್ರೀಂ ಕೋರ್ಟ್ ಶಿವಂಗಿ ಮಿಶ್ರಾ ಮತ್ತು ಇತರರು ಸಲ್ಲಿಸಿದ ಅರ್ಜಿಯನ್ನು ಬಾಕಿ ಉಳಿದಿರುವ ಅರ್ಜಿಯೊಂದಿಗೆ ಸೇರಿಸಿದ್ದು, ಈ ಸಂಬಂಧ ಪ್ರತಿಕ್ರಿಯೆಯನ್ನು ಸಲ್ಲಿಸಲು ಎನ್‌ಟಿಎಗೆ ಸೂಚಿಸಿದೆ.

ಇದಕ್ಕೆ ಉತ್ತರಿಸಲು ನಿಮ್ಮ ಕಕ್ಷೀದಾರರಿಗೆ ಎಷ್ಟು ಸಮಯ ಬೇಕು ಎಂದು ಕೇಳಿದ ಪೀಠ, ತಡವಾದರೆ ಕೌನ್ಸೆಲಿಂಗ್ ಪ್ರಾರಂಭವಾಗುತ್ತದೆ ಎಂದೂ ವಿಷಯದ ಗಂಭೀರತೆಯತ್ತ ಗಮನ ಸೆಳೆಯಿತು.

ಎನ್‌ಟಿಎಗೆ ಸುಪ್ರೀಂ ಕೋರ್ಟ್‌ನ ನೋಟಿಸ್‌ನ ಕುರಿತು ವಕೀಲ ಜೆ. ಸಾಯಿ ದೀಪಕ್, ಪ್ರತಿಕ್ರಿಯಿಸಿದ್ದು, ಕೋರ್ಟ್‌ನಲ್ಲಿ ಬಹಳ ಅರ್ಜಿಗಳನ್ನು ಪಟ್ಟಿ ಮಾಡಲಾಗಿದೆ. ಕೆಲವು ಅರ್ಜಿಗಳನ್ನು ಫಲಿತಾಂಶ ಘೋಷಣೆಗೂ ಮುನ್ನವೇ ಪತ್ರಿಕೆ ಸೋರಿಕೆಯಾಗಿದೆ ಎಂಬ ಆಧಾರದ ಮೇಲೆ ಸಲ್ಲಿಸಲಾಗಿದೆ.

ಆ ಅರ್ಜಿಗಳಿಗೆ ಸಂಬಂಧಿಸಿ ನೋಟಿಸ್ ನೀಡಲಾಗಿದೆ ಎಂದು ಸುದ್ದಿ ಸಂಸ್ಥೆಗೆ ಹೇಳಿದ್ದಾರೆ. ವಕೀಲ ಜೆ.ಸಾಯಿ ದೀಪಕ್ ಅವರು, ಶೈಕ್ಷಣಿಕ ವೇದಿಕೆಯ ಭೌತಶಾಸ್ತ್ರ ವಲ್ಲಾಹ್‌ನ ಸಿಇಒ ಅಲಖ್ ಪಾಂಡೆ ಅವರ ಪರ ವಕಾಲತು ವಹಿಸಿದ್ದಾರೆ.

ನಮ್ಮ ಅರ್ಜಿ ಸ್ವಲ್ಪ ವಿಭಿನ್ನ. ನಾವು 20,000 ವಿದ್ಯಾರ್ಥಿಗಳಿಂದ ಸಹಿ ಸಂಗ್ರಹಿಸಿದ್ದೇವೆ. 1,500 ವಿದ್ಯಾರ್ಥಿಗಳಿಗೆ 70 ರಿಂದ 80 ಅಂಕಗಳನ್ನು ಮನಸೋ ಇಚ್ಛೆ ನೀಡಲಾಗಿದೆ ಎಂದು ತೋರಿಸುತ್ತದೆ. ಗ್ರೇಸ್ ಮಾರ್ಕ್ ವಿಷಯಗಳೊಂದಿಗೆ ನಮ್ಮ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲಾ ಗುವುದು ಎಂದು ನ್ಯಾಯಾಲಯ ಹೇಳಿದೆ ಎಂದರು.

ತಿರುಮಂಕಯ್ ಆಳ್ವಾರ ಕಂಚಿನ ಪ್ರತಿಮೆ ಭಾರತಕ್ಕೆ

ಲಂಡನ್: ತಮಿಳುನಾಡಿನ ದೇವಸ್ಥಾನದಿಂದ ಕಳುವಾದ 500 ವರ್ಷ ಹಿಂದಿನ ಕಂಚಿನ ವಿಗ್ರಹವನ್ನು ಲಂಡನ್‌ನ ಆಕ್ಸ್‌ಫರ್ಡ್ ಯುನಿವರ್ಸಿಟಿ ಭಾರತಕ್ಕೆ ಮರಳಿ ನೀಡಲು ಒಪ್ಪಿದೆ. 16ನೇ ಶತಮಾನದ ಸಂತ ತಿರುಮಂಕಯ್ ಆಳ್ವಾರ ಕಂಚಿನ ಪ್ರತಿಮೆ ಯನ್ನು ಭಾರತ್‌ಕ್ಕೆ ವಾಪಸ್ ನೀಡಬೇಕು ಎಂಬ ಭಾರತೀಯ ಹೈಕಮಿಷನ್ ಮನವಿಯನ್ನು ಆಕ್ಸ್ ಫರ್ಡ್ ಯುನಿವರ್ಸಿಟಿ ಯ ಮಂಡಳಿ ಪುರಸ್ಕರಿ ಸಿದ್ದು, ಅಶ್ಮೋಲಿಯನ್ ಮ್ಯೂಸಿ ಯಂನಲ್ಲಿ ರುವ ಈ ಪ್ರತಿಮೆಯನ್ನು ಭಾರತಕ್ಕೆ ನೀಡುವು ದಾಗಿ ತಿಳಿಸಿದೆ. ಡಾ.ಜೆ ಆರ್ ಬೆಲ್ಮೋಂಟ್ ಎಂಬುವವರಿಂದ 1967ರಲ್ಲಿ ನಡೆದ ಸೊತ್‌ಬೇಸ್ ಹರಾಜಿನಲ್ಲಿ ಆಕ್ಸ್‌ಫರ್ಡ್ ಯುನಿವರ್ಸಿ ಟಿಯ ಅಶ್ಮೋಲಿಯನ್ ಮ್ಯೂಸಿ ಯಂ ಈ 60 ಸೆ,ಮೀ ಉದ್ದದ ಕಂಚಿನ ಸಂತ ತಿರುಮನ್‌ಕೈ ಅಲ್ವಾರ್ ಪ್ರತಿಮೆಯನ್ನು ಖರೀದಿಸಿತ್ತು. ಕಳೆದ ವರ್ಷ ನವೆಂಬರ್‌ನಲ್ಲಿ ಈ ಪ್ರತಿಮೆಯ ಮೂಲ ದ ಹುಡುಕಾಟದಲ್ಲಿರುವಾಗ ಸಂಶೋಧಕರಿಗೆ ಮಾಹಿತಿ ನೀಡಿತ್ತು. ಈ ಮೂಲಕ ಭಾರತಕ್ಕೆ ಈ ಕಂಚಿನ ಪ್ರತಿಮೆ ಲಂಡನ್‌ನಲ್ಲಿರುವುದು ತಿಳಿದು ಬಂದಿದೆ. ಆ ಬಳಿಕ ಭಾರತ ಈ ಪ್ರತಿಮೆ ತಮಿಳುನಾಡಿದ ದೇಗುಲವೊಂದರಿಂದ ಕಳುವಾಗಿತ್ತು ಎಂಬ ಮಾಹಿತಿಯನ್ನು ನೀಡಿದೆ. ಸದ್ಯ ಈ ಪುರಾತನ ಪ್ರತಿಮೆ ಭಾರತಕ್ಕೆ ವಾ ಪಸ್ ಆಗಲಿದೆ. ಹಲವು ಭಾರತದಿಂದ ಕಳು ವಾದ ಪುರಾತನ ವಸ್ತುಗಳು ಯುಕೆಯಲ್ಲಿ ಪತ್ತೆ ಯಾಗಿ ದ್ದು ಇತ್ತಿಚೆಗಷ್ಟೆ ಆಂಧ್ರಪ್ರದೇಶ ಮೂ ಲದ ಒಂದು ಪ್ರತಿಮೆ ಹಾಗೂ ತಮಿಳುನಾಡಿನ ನವನೀತ ಕೃಷ್ಣ ಪ್ರತಿಮೆಗಳನ್ನು ಭಾರತಕ್ಕೆ ವಾಪಸ್ ತರಲಾಗಿದೆ.

ವಿಮಾನದಲ್ಲಿದ್ದ 9 ಪ್ರಯಾಣಿಕರ ಮೃತ್ಯು

ಮಲಾವಿ ಉಪಾಧ್ಯಕ್ಷ ಚಿಲಿಮಾ ಸಾವು

ಲಿಲಾಂಗ್ವೆ: ಮಲಾವಿ ದೇಶದ ಉಪಾಧ್ಯಕ್ಷ ಸೌಲೋಸ್ ಚಿಲಿಮಾ ಹಾಗೂ ಒಂಬತ್ತು ಜನರಿದ್ದ ವಿಮಾನ ಮಂಗಳವಾರ ಪತನಗೊಂಡಿದ್ದು, ಉಪಾಧ್ಯಕ್ಷ ಚಿಲಿಮಾ ಸಹಿತ ಎಲ್ಲಾ ಪ್ರಯಾಣಿಕರು ಸಾವಿಗೀಡಾಗಿದ್ದಾರೆ ಎಂದು ವರದಿಯಾಗಿದೆ. ಚಿಲಿಮಾ ಪ್ರಯಾಣಿಸುತ್ತಿದ್ದ ವಿಮಾನ ಸೋಮವಾರ ನಿಗದಿತ ಸಮಯಕ್ಕೆ ಲ್ಯಾಂಡ್ ಆಗದೆ ನಾಪತ್ತೆಯಾಗಿದೆ ಎಂದು ಮಾಧ್ಯಮದಲ್ಲಿ ವರದಿಯಾ ಗಿತ್ತು. ಮಲಾವಿ ರಾಜಧಾನಿ ಲಿಲಾಂಗ್ವೆನಿಂದ ರಕ್ಷಣಾ ಪಡೆಯ ವಿಮಾನದಲ್ಲಿ ಉಪಾಧ್ಯಕ್ಷ ಚಿಲಿಮಾ ಹಾಗೂ 9 ಪ್ರಯಾಣಿಕರು ಪ್ರಯಾಣಿಸಿದ್ದರು ಎಂದು ಸಿಎನ್ ಎನ್ ವರದಿ ಮಾಡಿತ್ತು.

ಉತ್ತರ ಲಿಲಾಂಗ್ವೆನಿಂದ 380 ಕಿ.ಮೀ. ದೂರದ ಮುಝುಜು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಚಿಲಿಮಾ ಪ್ರಯಾಣಿಸುತ್ತಿದ್ದ ವಿಮಾನ ಲ್ಯಾಂಡ್ ಆಗಬೇಕಿತ್ತು. 2022ರಲ್ಲಿ ಲಂಚ ಹಗರಣದಲ್ಲಿ ಚಿಲಿಮಾರನ್ನು ಬಂಧಿಸಿದ್ದರಿಂದ, ಹುದ್ದೆಗೆ ರಾಜೀನಾಮೆ ನೀಡಿದ್ದರು. ಕಳೆದ ತಿಂಗಳು ಕೋರ್ಟ್ ಚಿಲಿಮಾ ಅವರನ್ನು ದೋಷಮುಕ್ತಗೊಳಿಸಿತ್ತು.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅಚ್ಚರಿ ಹೇಳಿಕೆ

ದಾರ್ಷ್ಟ್ಯದಿಂದ ಕೆಲಸ ಮಾಡುವವ ಎಂದೂ ನಿಜ ಜನಸೇವಕ ಆಗಲಾರ

ದೆಹಲಿ: ದಾರ್ಷ್ಟ್ಯದಿಂದ ಕೆಲಸ ಮಾಡುವವನು ನಿಜವಾದ ಸೇವಕ ಆಗಲು ಸಾಧ್ಯವಿಲ್ಲ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್ ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ಆರ್ ಎಸ್‌ಎಸ್ ಮುಖ್ಯಸ್ಥರ ಈ ಹೇಳಿಕೆ ಬಹಳ ಮಹತ್ವ ಪಡೆದಿದೆ. ಯಾರನ್ನು ಉದ್ದೇಶಿಸಿ ಈ ಮಾತು ಹೇಳಿದ್ದಾರೆ ಎಂಬ ಕುತೂಹಲ ಹೆಚ್ಚಿದೆ.

ಲೋಕಸಭಾ ಚುನಾವಣೆ ಮುಗಿದು 3ನೇ ಬಾರಿ ಬಿಜೆಪಿ ನೇತೃತ್ವದ ಎನ್ ಡಿಎ ಸರಕಾರ ರಚನೆಯಾದ ಬಳಿಕ ಮೊದಲ ಬಾರಿಗೆ ಹೇಳಿಕೆ ನೀಡಿರುವ ಭಾಗವತ್, ನಿಜವಾದ ಜನ ಸೇವಕ' ಘನತೆ ಯಿಂದ ಮಾತನಾಡುತ್ತಾನೆ. ಕೆಲಸ ಮಾಡುವಾಗ ಸಭ್ಯತೆ ಅನುಸರಿಸುತ್ತಾನೆ ಎಂದು ಹೇಳಿದ್ದಾರೆ.

ನಾಗ್ಪುರದಲ್ಲಿ ಮಾತನಾಡಿದ ಅವರು, ನಾನು ಈ ಕೆಲಸ ಮಾಡಿದ್ದೇನೆ' ಎಂದು ಹೇಳುವ ಅಹಂಕಾರವನ್ನು ಯಾರು ಹೊಂದಿರುವುದಿಲ್ಲವೋ ಆ ವ್ಯಕ್ತಿಯನ್ನು ಮಾತ್ರ ನಿಜವಾದ ಜನ ಸೇವಕ' ಎಂದು ಕರೆಯಬಹುದು ಎಂದು ವ್ಯಾಖ್ಯಾನಿಸಿದ್ದಾರೆ. ಲೋಕಸಭಾ ಚುನಾವಣೆ ಯಲ್ಲಿ ಭಾರತೀಯ ಜನತಾ ಪಕ್ಷ ಅಗತ್ಯ ಬಹುಮತ (272 ಸ್ಥಾನ) ಪಡೆಯಲು ವಿಫಲವಾದ ಬಳಿಕ ಭಾಗವತ್ ಅವರ ಈ ಹೇಳಿಕೆ ಬಂದಿರುವುದು ಗಮನಾರ್ಹ.

ಬಿಜೆಪಿಯ ಸೈದ್ಧಾಂತಿಕ ಮಾರ್ಗದರ್ಶಕ ಸಂಸ್ಥೆಯಾದ ಆರ್‌ಎಸ್‌ಎಸ್ ನ ಮುಖ್ಯಸ್ಥರ ಮಾತುಗಳು ಚುನಾವಣೆ ಹಿನ್ನಡೆ ಬಳಿಕ ಬಹಳ ಮಹತ್ವ ಪಡೆದುಕೊಳ್ಳುತ್ತಿವೆ, ಬೇರೆಯದೇ ಅರ್ಥ ಕೊಡುತ್ತಿವೆ. ಆಕ್ರಮಣಕಾರಿ ಚುನಾವಣಾ ಪ್ರಚಾರದ ಹೊರತಾಗಿಯೂ ಎನ್‌ಡಿಎಗೆ ಮಹತ್ವಾಕಾಂಕ್ಷೆಯ 400 ಗಡಿ' ದಾಟಲು ಆಗಲಿಲ್ಲ. 272ರ ಮ್ಯಾಜಿಕ್ ನಂಬರ್ ಪಡೆಯಲೂ ಪಕ್ಷ ವಿಫಲವಾ ಯಿತು. ಸಮ್ಮಿಶ್ರ ಸರ್ಕಾರ ರಚಿಸಲು ಟಿಡಿಪಿಯ ಚಂದ್ರ ಬಾಬು ನಾಯ್ಡು ಮತ್ತು ಜೆಡಿಯು ನಿತೀಶ್ ಕುಮಾರ್ ಸೇರಿದಂತೆ ಎನ್‌ಡಿಎ ಮಿತ್ರಪಕ್ಷಗಳನ್ನು ಅವಲಂಬಿ ಸಬೇಕಾಯಿತು. ಚುನಾವಣೆ ಪ್ರಚಾರ ಸಂದರ್ಭ ಆರ್‌ಎಸ್‌ಎಸ್ ಅನ್ನೂ ಎಳೆದು ತರಲಾಯಿತು ಎಂದು ಬೇಸರ ವ್ಯಕ್ತಪಡಿಸಿದರು. ರಾಜಕೀಯ ಪಕ್ಷಗಳು ಚುನಾವಣಾ ಪ್ರಚಾರದಲ್ಲಿ ಪರಸ್ಪರ ನಿಂದನೆ, ತಂತ್ರಜ್ಞಾನ ದುರ್ಬಳಕೆ ಮಾಡಿಕೊಳ್ಳುವ ಹಾಗೂ ಸುಳ್ಳು ಸುದ್ದಿ ಹಬ್ಬಿಸುವ ರೀತಿ ವರ್ತಿಸುವುದು ಸರಿಯಲ್ಲ ಎಂದರು.

ಟಿಬೆಟ್ 30 ಸ್ಥಳನಾಮ ಬದಲಿಗೆ ಭಾರತ ಸಿದ್ಧತೆ

ದೆಹಲಿ: ಭಾರತ ಸರಕಾರ ನೆರೆಯ ದೇಶ ಟಿಬೆಟ್‌ನ 30 ಸ್ಥಳಗಳ ಹೆಸರು ಬದಲಿಸಲು ಸಿದ್ಧತೆ ನಡೆಸಿದೆ.

ಆ ಮೂಲಕ ಅರುಣಾಚಲ ಪ್ರದೇಶದ ಸ್ಥಳಗಳ ಹೆಸರು ಬದಲಿಸಿ ಕ್ಯಾತೆ ತೆಗೆಯುವ ಚೀನಾಕೆ ಬುದ್ಧಿ ಕಲಿಸಲು ನಿರ್ಧರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಟಿಬೆಟ್ ನ 30 ಪ್ರದೇಶಗಳ ಮರುನಾಮಕರಣಕ್ಕೆ ಅನುಮೋದನೆ ನೀಡಿದ್ದಾರೆ ಎನ್ನಲಾಗಿದೆ.

ಟಿಬೆಟ್‌ನ ಇತಿಹಾಸ, ಸಂಸ್ಕೃತಿಗೆ ಪೂರಕವಾದ ಹೆಸರುಗಳನ್ನೇ ಆಯ್ಕೆ ಮಾಡಲಾಗಿದೆ.ಈ ಹೆಸರುಗಳನ್ನು ಭಾರತೀಯ ಸೇನೆ ಬಿಡುಗಡೆ ಗೊಳಿಸಲಿದೆ. ಬಳಿಕ ಲೈನ್ ಆಫ್ ಆಕ್ಯುವಲ್ ಕಂಟ್ರೋಲ್(ಎಲ್‌ಎಸಿ) ಉದ್ದಕ್ಕೂ ಹೊಸ ಹೆಸರುಗಳನ್ನು ತನ್ನ ಮ್ಯಾಪ್‌ನಲ್ಲಿ ಭಾರತ ಸೇರಿಸಿಕೊಳ್ಳಲಿದೆ.

ಏಪ್ರಿಲ್ ನಲ್ಲಿ ಅರುಣಾಚಲದ 11 ವಸತಿ ಸಮುಚ್ಚಯ, 12 ಗುಡ್ಡ ಪ್ರದೇಶ, 4 ನದಿಗಳು, ಒಂದು ಸರೋವರ ಹಾಗೂ ಒಂದು ಗುಡ್ಡ



ಹಾಗೂ ಕಣಿವೆಯ ಹೆಸರನ್ನು ಚೀನಾ ಮರುನಾಮಕರಣ ಮಾಡಿತ್ತು. 2017ರಲ್ಲಿ 6 ಪ್ರದೇಶ, 2021ರಲ್ಲಿ 15 ಸ್ಥಳ, 2023ರಲ್ಲಿ 11 ಸ್ಥಳಗಳ ಹೆಸರನ್ನು ಬದಲಾಯಿಸಿರುವ ಚೀನಾ, ಈಗ 4ನೇ ಬಾರಿ ಅದೇ ಕೃತ್ಯಕ್ಕೆ ಕೈ ಹಾಕಿದೆ.

ಕೇವಲ ಹೆಸರು ಬದಲಾಯಿಸಿ ಸ್ವಾಮ್ಯತೆ ಹೊಂದಲು ಸಾಧ್ಯವಿಲ್ಲ ಅರುಣಾಚಲಪ್ರದೇಶ ಎಂದಿಗೂ ನಮ್ಮದೇ ಎಂದು ಭಾರತ ಖಡಕ್ ಸಂದೇಶವನ್ನು ಕೂಡ ರವಾನಿಸಿದ್ದು ಈಗ ಟಿಬೆಟ್ ಪ್ರದೇಶಗಳ ಹೆಸರು ಬದಲಾಯಿಸಿ ಚೀನಾಗೆ ಬುದ್ಧಿ ಕಲಿಸಲು ಭಾರತ ನಿರ್ಧರಿಸಿದೆ.



ಜೂನಿಯರ್ ಹಾಕಿಗೆ ಭಾರತ ಆತಿಥ್ಯ

ಸ್ವಿಜರ್ಲೆಂಡ್: ಮುಂದಿನ ವರ್ಷ ನಡೆಯಲಿರುವ ಪುರುಷರ ಜೂನಿಯರ್ ಹಾಕಿ ವಿಶ್ವಕಪ್‌ಗೆ ಭಾರತ ಆತಿಥ್ಯ ವಹಿಸಲಿದೆ.

ಈ ಬಗ್ಗೆ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ ಕಾರ್ಯಕಾರಿ ಮಂಡಳಿ ಪ್ರಕಟಿಸಿದ್ದು, 9 ವರ್ಷಗಳ ಬಳಿಕ ಭಾರತ ಆತಿಥ್ಯ ವಹಿಸಲಿದೆ. ಈ ಟೂರ್ನಿಯು 2025ರ ಡಿಸೆಂಬರ್‌ನಲ್ಲಿ ನಡೆಯಲಿದೆ. ಮೊತ್ತಮೊದಲ ಬಾರಿ ಮುಂದಿನ ಜೂನಿಯರ್ ವಿಶ್ವಕಪ್‌ನಲ್ಲಿ 24 ತಂಡಗಳು ಭಾಗವಹಿಸಲಿವೆ. ಹೆಚ್ಚಿನ ರಾಷ್ಟ್ರೀಯ ಸಂಸ್ಥೆಗಳಿಗೆ ಹೆಚ್ಚು ಅವಕಾಶಗಳನ್ನು ನೀಡುವುದು

ಸಬಲೀಕರಣದ ಆಧಾರಸ್ಥಂಭ ಮತ್ತು ಅವುಗಳನ್ನು ಒಳಗೊಳ್ಳುವಂತೆ ಮಾಡುವುದು ನಮ್ಮ ಕಾರ್ಯತಂತ್ರದ ಭಾಗ ಎಂದು ಎಫ್‌ಐಎಚ್ ಅಧ್ಯಕ್ಷ ತಯ್ಯಬ್ ಇಕ್ರಮ್ ತಿಳಿಸಿದ್ದಾರೆ. ಒಮನ್‌ನಲ್ಲಿ ಈ ವರ್ಷ ನಡೆದ ಎಫ್‌ಐಎಚ್ ಹಾಕಿ ಫೈವ್ಸ್ ವಿಶ್ವಕಪ್‌ನಲ್ಲಿ ಹೆಚ್ಚು ತಂಡಗಳು ಭಾಗವಹಿಸಿದ್ದು, ಅದರ ಮೌಲ್ಯವರ್ಧಿಸಿತು ಎಂದರು. ಹಿಂದಿನ ವರ್ಷ ಜೂನಿಯರ್ ವಿಶ್ವಕಪ್ 2023ರಲ್ಲಿ ಕ್ವಾಲಾಲಂಪುರದಲ್ಲಿ ನಡೆದಿತ್ತು. ಜರ್ಮನಿ 2–1 ರಿಂದ ಫ್ರಾನ್ಸ್ ಮೇಲೆ ಜಯಗಳಿಸಿತ್ತು. ಸ್ಪೇನ್ ಮತ್ತು ಭಾರತ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದಿದ್ದವು.

ಕ್ರಿಕೆಟ್‌ನಲ್ಲಿ ಕೆಲವರ ಸಹಿಷ್ಣುತೆ ಚೆನ್ನಾಗಿರಲ್ಲ, ಕೆಲವರ ಸಹಿಷ್ಣುತೆ ಚೆನ್ನಾಗಿರುತ್ತದೆ. ಆದರೆ ಅವರು ಜಿಮ್‌ನಲ್ಲಿ ದುರ್ಬಲರು, ಭಾರ ಎತ್ತುವಲ್ಲಿ ದುರ್ಬಲರು, ಶಕ್ತಿಯಲ್ಲಿ ದುರ್ಬಲರಾಗಿರುತ್ತಾರೆ. ಹೀಗಾಗಿ, ಯಾರು ಫಿಟ್ ಮತ್ತು ಯಾರು ಫಿಟ್ ಅಲ್ಲ ಎಂಬುದನ್ನು ಟ್ರೈನರ್ ನಿರ್ಧರಿಸಬೇಕು.

– **ಗೌತಮ್ ಗಂಭೀರ್,** ಮಾಜಿ ಕ್ರಿಕೆಟಿಗ

ವಿಶ್ವಕಪ್ ಸೇರಲಿರುವ ಸಂದೀಪ್ ಲಮಿಚಾನೆ

ಕಿಂಗ್ಸ್‌ಟೌನ್: ನೇಪಾಲ ತಂಡದ ಪ್ರಮುಖ ಸ್ಪಿನ್ನರ್ ಸಂದೀಪ್ ಲಮಿಚಾನೆ ಟಿ20 ವಿಶ್ವಕಪ್ ಸಲುವಾಗಿ ವೆಸ್ಟ್ ಇಂಡೀಸ್‌ನಲ್ಲಿರುವ ಕ್ರಿಕೆಟ್ ತಂಡವನ್ನು ಸೇರಿಕೊಂಡಿದ್ದಾರೆ. ಅವರು ನೇಪಾಲದ ಕೊನೆಯ 2 ಲೀಗ್ ಪಂದ್ಯಗಳಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದ್ದು, ಟಿ20 ವಿಶ್ವಕಪ್‌ಗಾಗಿ ನೇಪಾಲ ಪ್ರಕಟಿಸಿದ್ದ 15 ಮಂದಿಯ ತಂಡದಲ್ಲಿ ಲೆಗ್‌ಸಪಿನ್ನರ್ ಅವರ ಹೆಸರಿತ್ತು. ಆದರೆ ಅತ್ಯಾಚಾರ ಪ್ರಕರಣವೊಂದು ಅಡ್ಡಿಯಾಗಿ ಪರಿಣಮಿಸಿತು. ಇದರಲ್ಲಿ ಲಮಿಚಾನೆ ನಿರ್ದೋಷಿ ಎಂದು ಸಾಬೀತಾದರೂ ಅವರಿಗೆ ಯುಎಸ್ ವೀಸಾ ಲಭಿಸುವುದು ವಿಳಂಬವಾಗಿತ್ತು.



ಬಾಲಕನಿಂದ ಬಾಂಬ್ ಬೆದರಿಕೆ: ವಶಕ್ಕೆ

ದೆಹಲಿ: ದೆಹಲಿಯಿಂದ ಟೊರೆಂಟೊಗೆ ತೆರಳುತ್ತಿದ್ದ ವಿಮಾನಕ್ಕೆ ಹುಸಿ ಬಾಂಬ್ ಬೆದರಿಕೆ ಬಂದಿದ್ದು, ಬೆದರಿಕೆ ಹಾಕಿದ್ದ 13 ವರ್ಷದ ಬಾಲಕನನ್ನ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಜೂನ್ 4 ರಂದು ಏರ್ ಕೆನಡಾ ವಿಮಾನ ಎಸಿ 043ಗೆ ರಾತ್ರಿ 11.25ರ ಸುಮಾರಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಇದರಿಂದ ದೆಹಲಿ ವಿಮಾನ ನಿಲ್ದಾಣದಲ್ಲಿ ಹೈ ಅಲರ್ಟ್ ಘೋಷಿಸಲಾಗಿತ್ತು. ಬಳಿಕ ಇದೊಂದು ಹುಸಿ ಬಾಂಬ್ ಕರೆ ಎಂದು ತಿಳಿದು ಬಂದಿದ್ದು, 13 ವರ್ಷದ ಬಾಲಕ ತಮಾಷೆಗಾಗಿ ಈ ಕೃತ್ಯ ಎಸಗಿದ್ದಾನೆ ಎಂದು ತಿಳಿದು ಬಂದಿದೆ. ಉತ್ತರಪ್ರದೇಶದ ಮೀರತ್‌ನ ಬಾಲಕ ನಕಲಿ ಇ ಮೇಲ್ ರಚಿಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿ ಬಳಿಕ ಡಿಲೀಟ್ ಮಾಡಿದ್ದಾನೆ. ಹುಸಿ ಬಾಂಬ್ ಬೆದರಿಕೆ ಸುದ್ದಿಗಳನ್ನು ನೋಡಿದ್ದ ಬಾಲಕ ಪೊಲೀ ಸರಿಗೆ ತನ್ನನ್ನು ಹಿಡಿಯಲು ಸಾಧ್ಯವೇ ಎಂದು ಪರೀಕ್ಷಿ ಸಲು ಈ ರೀತಿ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ.

ವಿದ್ಯುತ್ ಅವ್ಯವಹಾರ: ಕೆಸಿಆರ್‌ಗೆ ನೋಟಿಸ್

ಹೈದರಾಬಾದ್: ವಿದ್ಯುತ್ ಖರೀದಿ ಒಪ್ಪಂದದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು ತನಿಖೆ ನಡೆಸಲಾಗುತ್ತಿದ್ದು, ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರಿಗೆ ನ್ಯಾಯಮೂರ್ತಿ ನರಸಿಂಹ ರೆಡ್ಡಿ ಸಮಿತಿ ನೋಟಿಸ್ ಜಾರಿಗೊಳಿಸಿದೆ. ರೇವಂತ್ ರೆಡ್ಡಿ ನೇತೃತ್ವದ ಸರಕಾರವು ಹಗರಣದ ತನಿಖೆಗಾಗಿ ಸಮಿತಿ ನೇಮಕ ಮಾಡಿತ್ತು. ನೋಟಿಸ್ ಅನ್ನು ಕೆಲ ದಿನಗಳ ಹಿಂದೆಯೇ ಜಾರಿಮಾಡಿದ್ದರೂ, ಈ ವಿಷಯ ಬಹಿರಂಗೊಂಡಿದೆ. ಒಪ್ಪಂಗದಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಕೇಳಿಬಂದಿರುವ ಆರೋಪಗಳ ಬಗ್ಗೆ ಜೂನ್ 15ರ ಒಳಗಾಗಿ ವಿವರವಾದ ಪ್ರತಿಕ್ರಿಯೆ ನೀಡುವಂತೆ ಸೂಚಿಸಲಾಗಿದೆ. ಪ್ರಡತಿಕ್ರಿಯೆ ನೀಡಲು ಜುಲೈ 30ರ ವರೆಗೆ ಕಾಲಾವಕಾಶ ನೀಡಬೇಕು ಎಂದು ಕೆಸಿಆರ್ ಸಮಿತಿಗೆ ಮನವಿ ಮಾಡಿದ್ದಾರೆ. ಕೆಸಿಆರ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಡೆದಿದ್ದ ಯಾದಾದ್ರಿ ಮತ್ತು ದಮರಚೆಲಾರ್ ವಿದ್ಯುತ್ ಸ್ಥಾವರ ನಿರ್ಮಾಣ ಒಪ್ಪಂದ ಮತ್ತು ಛತ್ತೀಸ್ಗಢದಿಂದ 1,000 ಮೆಗಾವಾಟ್ ವಿದ್ಯುತ್ ಖರೀದಿ ಒಪ್ಪಂದದ ಪ್ರಸ್ತಾಪದಲ್ಲಿ ಅವ್ಯವಹಾರದ ಆರೋಪಗಳು ಕೇಳಿಬಂದಿದ್ದವು.

ವಿರಾಮ
ಪ್ರತಿ ಭಾನುವಾರ

ಅಮೆರಿಕಗೆ ಇಂದು ರೋಹಿತ್ ಪಡೆಯ ಸವಾಲು | ಆತ್ಮವಿಶ್ವಾಸದಲ್ಲಿ ಎರಡೂ ತಂಡಗಳು

8ರ ಘಟ್ಟ ತಲುಪಲು ಭಾರತ ಸಜ್ಜು

ನ್ಯೂಯಾರ್ಕ್: ಟಿ20 ವಿಶ್ವಕಪ್‌ನಲ್ಲಿ ಲೀಗ್ ಹಂತದ ಪಂದ್ಯದಲ್ಲಿ ಸತತ 2 ಪಂದ್ಯಗಳನ್ನು ಗೆದ್ದು ಅಜೇಯ ಓಟ ಕಾಯ್ದುಕೊಂಡಿರುವ ಭಾರತ ಮತ್ತು ಅಮೆರಿಕ ಇಂದು ಸೆಣಸಲಿವೆ.

ಈ ಎರಡೂ ತಂಡಗಳ ನಡುವಿನ ಮೊದಲ ಕ್ರಿಕೆಟ್ ಮುಖಾಮುಖಿ ಇದಾಗಿದೆ. ಟೂರ್ನಿ ಇದೀಗ ರೋಚಕ ಹಂತಕ್ಕೆ ಬಂದಿದ್ದು, ಆ ನಿಟ್ಟಿನಲ್ಲಿ ಸೂಪರ್ ಎಂಟರ ಘಟ್ಟಗೆ ತಲುಪಲು ಎಲ್ಲ ತಂಡಗಳು ಕಸರತ್ತನ್ನು ನಡೆಸುತ್ತಿವೆ. ಒಂದೆಡೆ ಭಾರತ ಗೆಲುವಿನ ಲಯದಲ್ಲಿ ಇದ್ದರೆ ಇನ್ನೊಂದೆಡೆ ನೂತನ ತಂಡವೂ ಗೆಲುವಿನ ಹಳಿಯಲ್ಲಿದೆ. ಎರಡೂ ತಂಡಗಳು ಬಲಿಷ್ಠ ಪಾಕಿಸ್ತಾನವನ್ನು ಸೋಲಿಸಿದ್ದು, ಆತ್ಮ ವಿಶ್ವಾಸದಲ್ಲಿವೆ. ಹೀಗಾಗಿ ಪಂದ್ಯವು ರೋಚಕವಾಗಲಿದೆ.

ಭಾರತಕ್ಕೆ ನೂತನ ಸವಾಲು: ಅಮೆರಿಕ ತಂಡ ಕ್ರಿಕೆಟ್ ಶಿಶು ಆಗಿದ್ದರೂ, ತಂಡದಲ್ಲಿ ಆಡುವ ಆಟಗಾರರಿಗೆ ಕ್ರಿಕೆಟ್ ಹೊಸದಲ್ಲ. ಎಲ್ಲ ಆಟಗಾರರಿಗೂ ಅನುಭವವಿದೆ. ಏಕೆಂದರೆ ತಂಡದಲ್ಲಿ ಇರುವ ಆಟಗಾರರು ಈ ಮೊದಲು ಭಾರತ, ಪಾಕಿಸ್ತಾನ, ನ್ಯೂಜಿಲ್ಯಾಂಡ್, ಕೆನಡಾ ಸೇರಿ ಹಲವು ದೇಶಗಳಲ್ಲಿ ಆಡಿದ್ದಾರೆ. ಪ್ರಮುಖವಾಗಿ ಭಾರತೀಯ ಮೂಲದ ಆಟಗಾರರು ಹೆಚ್ಚು ಕಾಣಿಸಿಕೊಂಡಿದ್ದಾರೆ. ಅದರಲ್ಲಿ ಕನ್ನಡಿಗ ನಾಸ್ತುಷ್ ಕೆಂಜಿಗೆ, 2010ರಲ್ಲಿ ಭಾರತ ಪರ 19 ವಿಶ್ವಕಪ್ ಆಡಿದ್ದ ಎಡಗೈ ವೇಗದ ಬೌಲರ್ ಸೌರಭ್ ನೇತ್ರವಲ್ಕರ್, ನಾಯಕ ಮೊನಾಂಕ್ ಪಟೇಲ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ. ಸ್ಫೋಟಕ ಬ್ಯಾಟಿಂಗ್‌ಗೆ ಹೆಸರುವಾಸಿಯಾದ ಆರನ್ ಜೋನ್ಸ್ ಸಹ ಉತ್ತಮ ಬ್ಯಾಟಿಂಗ್ ಲಯದಲ್ಲಿದ್ದಾರೆ. ಹೀಗಾಗಿ ಭಾರತ ಯಾವುದೇ ಕಾರಣಕ್ಕೂ ಎದುರಾಳಿಗಳನ್ನು ಕಡೆಗಣಿಸುವಂತಿಲ್ಲ. ಈಗಾಗಲೇ ಪಾಕಿಸ್ತಾನಕ್ಕೂ ಅಮೆರಿಕ ನೀರು ಕುಡಿಸಿದೆ.

ಆತ್ಮವಿಶ್ವಾಸದಲ್ಲಿ ರೋಹಿತ್ ಪಡೆ: ಇನ್ನು ಭಾರತವೂ ಒಂದೆಡೆ ಆತ್ಮವಿಶ್ವಾಸದಲ್ಲಿ ಇದೆ. ಏಕೆಂದರೆ, ಬ್ಯಾಟಿಂಗ್ ವಿಭಾಗ ತಂಡಕ್ಕೆ ಕೈಕೊಟ್ಟಾಗ ತಂಡದ ಬೌಲಿಂಗ್ ವಿಭಾಗವು

ಕೈಹಿಡಿಯುತ್ತಿದೆ. ಅಲ್ಲದೆ ಬ್ಯಾಟಂಗ್ ವಿಭಾಗದಲ್ಲಿ ನಾಯಕ ರೋಹಿತ್ ಶರ್ಮ ಉತ್ತಮ ಲಯದಲ್ಲಿ ಕಾಣುತ್ತಿದ್ದಾರೆ. ಅದಲ್ಲದೆ ಪಂತ್ ಸಹ ದೊಡ್ಡ ಹೊಡೆತಗಳನ್ನು ಹೊಡೆಯಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಆದರೆ, ಕೊಹ್ಲಿ, ಸೂರ್ಯಕುಮಾರ್ ಯಾದವ್ ಹಾಗೂ ಶಿವಂ ದುಬೆ ಲಯಕ್ಕೆ ಮರಳುವುದು ಅನಿವಾರ್ಯವಾಗಿದೆ. ಪ್ರಮುಖವಾಗಿ ಎರಡೂ ಪಂದ್ಯದಲ್ಲಿ ಕೈಕೊಟ್ಟಿರುವ ಮಧ್ಯಮ ಕ್ರಮಂಕದ ಆಟಗಾರರು ಲಯಕ್ಕೆ ಮರಳುವುದು ಅನಿವಾರ್ಯ ಮೂಲಗಳ ಪ್ರಕಾರ ದುಬೆ ಬದಲು ಸಂಜು ಸ್ಯಾಮ್ಸನ್ ಸ್ಥಾನ ಪಡೆಯಲಿದ್ದಾರೆ ಎನ್ನಲಾಗಿದೆ. ಇನ್ನು ಬಲಿಷ್ಠ ಬೌಲಿಂಗ್ ಪಡೆ ಹೊಂದಿರುವ ಭಾರತಕ್ಕೆ ಬುಮ್ರಾ, ಸಿರಾಜ್ ಹಾಗೂ ಹಾರ್ದಿಕ್ ಮತ್ತೆ ಫಾರ್ಮ್‌ಗೆ ಬಂದಿದ್ದು ಬಲ ತಂದಿದೆ. ಪ್ರಮುಖವಾಗಿ ಪಾಕಿಸ್ತಾನ ವಿರುದ್ಧ ನೀಡಿದ್ದ ಪ್ರದರ್ಶನ ತಂಡಕ್ಕೆ ಆತ್ಮವಿಶ್ವಾಸ ತಂದಿದೆ. ಅಲ್ಲದೆ ಹಾರ್ದಿಕ್ ಪಾಂಡ್ಯ, ಬುಮ್ರಾ ಡೆತ್ ಓವರ್‌ನಲ್ಲಿ ಜಂಟಿ ಕೆಲಸ ಮಾಡುತ್ತಿರುವುದು ತಂಡದ ಬಲವಾಗಿದೆ.

ಗೆದ್ದವರಿಗೆ ಸೂಪರ್ 8 ಟಿಕೆಟ್

ಭಾರತ ಹಾಗೂ ಅಮೆರಿಕ ಅಂಕಪಟ್ಟಿಯ ಎ ಗುಂಪಿನಲ್ಲಿ ಕ್ರಮವಾಗಿ ಮೊದಲನೇ ಹಾಗೂ ಎರಡನೇ ಸ್ಥಾನದಲ್ಲಿ ಇದ್ದು, ಬಹು ತಂಡಗಳು ಆಡಿರುವ ಎರಡೂ ಪಂದ್ಯಗಳಲ್ಲಿ ಗೆಲುವು ಸಾಧಿಸಿವೆ. ಅಲ್ಲದೆ ರನ್ ರೇಟ್‌ನಲ್ಲೂ ಉತ್ತಮವಾಗಿರುವ ಈ ತಂಡಗಳಲ್ಲಿ ಗೆಲ್ಲುವ ತಂಡವು ಎಂಟರ ಘಟ್ಟಕ್ಕೆ ಹೋಗುವುದು ಖಚಿತ ಎನ್ನಲಾಗಿದೆ.

ಪಿಚ್ ರಿಪೋರ್ಟ್

ಪಂದ್ಯವು ನ್ಯೂಯಾರ್ಕ್‌ನ ನಸೌ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಎರಡೂ ತಂಡಗಳ ಬ್ಯಾಟರ್‌ಗಳಿಗೆ ಸವಾಲು ಒಡ್ಡಲಿದೆ. ಬೌಲರ್‌ಗಳಿಗೆ ಹೇಳಿ ಮಾಡಿಸಿರುವ ಪಿಚ್‌ನಲ್ಲಿ ಚೇಸ್ ಮಾಡುವುದು ಕಠಿಣವಾಗಲಿದ್ದು, ಮೊದಲು ಬ್ಯಾಟಿಂಗ್ ಮಾಡುವುದು ಉತ್ತಮ ನಿರ್ಧಾರವಾಗಲಿದೆ. ಅಲ್ಲದೆ, ಈ ಹಿಂದಿನ ಪಂದ್ಯಗಳಲ್ಲಿ ಎರಡೂ ತಂಡಗಳು ಇದೇ ಪಿಚ್‌ನಲ್ಲಿ ಪಾಕ್ ವಿರುದ್ಧ ಗೆದ್ದಿದೆ ಹೀಗಾಗಿ ಅಲ್ಲಿನ ಪರಸ್ಥಿತಿ ತಿಳಿದುಕೊಂಡಿರುವುದು ಬಹು ತಂಡಗಳಿಗೆ ಅನುಕೂಲವಾಗಲಿದೆ.

ವಿಶ್ವಕಪ್‌ನಲ್ಲಿ ಮೊದಲ ಗೆಲುವು ಸಾಧಿಸಿದ ಬಾಬರ್ ಪಡೆ

ಕೊನೆಗೂ ಗೆದ್ದ ಪಾಕಿಸ್ತಾನ

ನ್ಯೂಯಾರ್ಕ್: ಹ್ಯಾರಿಸ್ ರೌಫ್, ಮಹ್ಮದ್ ಅಮೀರ್ ಅವರ ಮಾರಕ ಬೌಲಿಂಗ್ ಹಾಗೂ ರಿಜ್ವಾನ್ ಹಾಗೂ ಬಾಬರ್ ಆಜಂ ಅವರ ಚಾಣಾಕ್ಷ ಬ್ಯಾಟಿಂಗ್ ಫಲದಿಂದಾಗಿ ಪಾಕಿಸ್ತಾನ ತನ್ನ ಮೊದಲ ಗೆಲುವು ಸಾಧಿಸಿದೆ. ಸತತ ಎರಡು ಪಂದ್ಯಗಳನ್ನು ಗೆಲುವಿನ ಸನಿಹ ಬಂದು ಸೋತಿರುವ ಪಾಕಿಸ್ತಾನ, ಈ ಬಾರಿ ಜವಾಬ್ದಾರಿಯಿಂದ ಆಡಿ ಗೆದ್ದಿದೆ. ಆ ಮೂಲಕ ಕುಸಿದಿರುವ ಕೆನಡಾ ತಂಡಕ್ಕೆ ಪಾಕ್ ಶಾಕ್ ನೀಡಿದೆ. ಇಲ್ಲಿನ ನಸೌ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆನಡಾ ತಂಡವು 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು ಕೇವಲ 106 ರನ್ ಗಳಿಸಿತು. ಅದನ್ನು ಬೆನ್ನಹತ್ತಿದ ಪಾಕಿಸ್ತಾನ 3 ವಿಕೆಟ್ ಕಳೆದುಕೊಂಡು 107 ರನ್ ಗಳಿಸಿ ಗೆದ್ದರು.

ಆರಂಭದಿಂದಲೂ ಕುಸಿದ ಕೆನಡಾ: ಮೊದಲು ಬ್ಯಾಟಿಂಗ್ ಮಾಡಿದ ಕೆನಡಾ ತಂಡಕ್ಕೆ ಉತ್ತಮ ಆರಂಭ ಸಿಕ್ಕಿತು. ಆರಂಭಿಕ ಆ್ಯರೋನ್ ಜಾನ್ಸನ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಆದರೆ ಇನ್ನೊಂದೆಡೆ ನವ್‌ನೀತ್ ಆರಂಭದಲ್ಲೆ 4 ರನ್ ಗಳಿಸಿ ವಿಕೆಟ್ ನೀಡಿದರು. ಅವರ ಹಿಂದೆಯೇ ಪರ್ಗತ್ ಸಿಂಗ್ ಸಹ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕಳೆದ ಮ್ಯಾಚ್ ಉತ್ತಮವಾಗಿ ಆಡಿದ್ದ ಕಿರ್ಟೋನ್ 1 ರನ್ ಗಳಿಸಿದ್ದಾಗ ರನೌಟ್‌ಗೆ ಬಲಿಯಾದರು. ಆ ಬಳಿಕ ಬಂದ ಶ್ರೇಯಸ್ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಲ್ಲದೆ ರವೀಂದ್ರಪಾಲ್ ಶೂನ್ಯ ಸುತ್ತಿದರು. ಬಳಿಕ ಬಂದ ಸಾದ್ 10 ರನ್ ಗಳಿಸಿ ವಿಕೆಟ್ ನೀಡಿದರೆ, ಉಳಿದಂತೆ ಕಲೀಮ್ 13, ಡಿಲ್ಲೋನ್ 9 ರನ್ ಗಳಿಸಿದರು. ಆದರೆ,

ಆರಂಭದಿಂದಲೂ ಆಡಿದ ಜಾನ್ಸನ್ 52 ರನ್ ಗಳಿಸಿ ತಂಡದ ಮೊತ್ತ ಏರಿಸಿದರು. ಇನ್ನು ಬೌಲಿಂಗ್ ವಿಭಾಗದಲ್ಲಿ ಅಮೀರ್ 13 ರನ್ ನೀಡಿ 2 ವಿಕೆಟ್ ಪಡೆದರೆ, ಹ್ಯಾರಿಸ್ ರೌಫ್ 26 ರನ್ ನೀಡಿ 2 ವಿಕೆಟ್ ಪಡೆದುಕೊಂಡರು.

ಮಿಂಚಿದ ರಿಜ್ವಾನ್, ಬಾಬರ್ : ಅದನ್ನು ಬೆನ್ನಟ್ಟಿದ ಪಾಕಿಸ್ತಾನಕ್ಕೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಆರಂಭಿಕ ರಜ್ವಾನ್ ತಮ್ಮ ನಿಧಾನಗತಿ ಆಟ ಮುಂದುವರಿಸಿದರು. ಇನ್ನೊಂದೆಡೆ ಆರಂಭದಲ್ಲೇ ಆಯುಬ್ 6 ರನ್ ಗಳಿಸಿ ವಿಕೆಟ್ ನೀಡಿದರು. ಆದರೆ, ಈ ಬಳಿಕ ಜತೆಗೂಡಿದ ನಾಯಕ ಬಾಬರ್ ಆಜಂ ಹಾಗೂ ರಜ್ವಾನ್ ತಂಡವನ್ನು ಗೆಲುವಿನವರೆಗೂ ಕೊಂಡೊಯ್ದರು. ನಿಧಾನ ವಾಗಿ ಆಡಿದರೂ ಕಳೆದ ಬಾರಿ ಮಾಡಿದ ತಪ್ಪುಗಳನ್ನು ಮಾಡದೆ, ಜವಾಬ್ದಾರಿಯುತ ವಾಗಿ ಆಡಿದರು. ಆದರೆ ಈ ವೇಳೆ ಬಾಬರ್ 33 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಫಕರ್ ಜಮಾನ್ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆರಂಭದಿಂದಲೂ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ರಿಜ್ವಾನ್ 53 ರನ್ ಗಳಿಸಿ ಅಜೇಯರಾಗಿ ಉಳಿದರು. ಅಲ್ಲದೆ ಗೆಲುವಿನ ರೂವಾರಿಯಾದರು.

ಭಾರತದ ಎಲ್ಲ ಪಂದ್ಯಗಳನ್ನು ಲಾಹೋರ್‌ನಲ್ಲಿ ಆಡಿಸಲು ಸಲಹೆ

ಚಾಂಪಿಯನ್ಸ್ ಟ್ರೋಫಿಗೆ ಪಾಕ್ ಸಿದ್ಧತೆ

ಕರಾಚಿ: 2025ರಲ್ಲಿ ಪಾಕಿಸ್ತಾನ ಆತಿಥ್ಯದಲ್ಲಿ ವರ್ಷ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೆ.19 ರಿಂದ ಮಾ.9 ರವರೆಗೆ ನಡೆಯಲಿದೆ ಎಂದು ವರದಿಯಾಗಿದ್ದು, ಕುತೂಹಲಗಳ ನಡುವೆ ಭಾರತ ತಂಡದ ಪಂದ್ಯಗಳನ್ನು ಲಾಹೋರ್‌ನಲ್ಲಿ ಆಯೋಜಿಸುವಂತೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಐಸಿಸಿಗೆ ಸಲಹೆ ನೀಡಿದೆ.

ಭಾರತ ಪಾಕಿಸ್ತಾನದಲ್ಲಿ ನಡೆಯುವ ಈ ಟೂರ್ನಿಗೆ ಪಾಲ್ಗೊಳ್ಳುವುದು ಇನ್ನು ಖಚಿತಗೊಂಡಿಲ್ಲ. ಈ ಹಿನ್ನಲೆಯಲ್ಲಿ ಭಾರತದ ಪಂದ್ಯಗಳನ್ನು ಭಾರತ ಗಡಿ ಸೀಪವಿರುವ ಲಾಹೋರ್‌ನಲ್ಲಿ ಆಯೋಜಿಸಲು ಸಿದ್ಧತೆ ನಡೆದಿವೆ ಎನ್ನಲಾಗಿದೆ. ಟೂರ್ನಿ ನಡೆಸಲು ಎಲ್ಲ ಸಿದ್ಧತೆ ನಡೆಸುತ್ತಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಹೆಚ್ಚಿನ ಪ್ರಯಾಣ ತಪ್ಪಿಸಲು ಭಾರತದ ಎಲ್ಲಾ ಪಂದ್ಯ ಗಳನ್ನು ಲಾಹೋರ್ ಕ್ರೀಡಾಂಗಣದಲ್ಲೇ ನಿಗದಿಪಡಿಸಿ ಎಂದು ಐಸಿಸಿಗೆ ತಿಳಿಸಿದೆ ಎನ್ನಲಾಗಿದೆ. ಟೂರ್ನಿಯ ಅಧಿಕೃತ ವೇಳಾ ಪಟ್ಟಿ, ಆತಿಥ್ಯ ನಗರ ಇನ್ನಷ್ಟೇ ಅಧಿಕೃತಗೊಳ್ಳಬೇಕಿದೆ. ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಕೂಡ ಭಾರತ ಈ ಬಾರಿ ಪಾಕ್

ನಲ್ಲಿ ಕ್ರಿಕೆಟ್ ಆಡಲಿದೆ ಎಂದು ಬಲವಾದ ಹೇಳಿಕೆಯನ್ನು ನೀಡಿದ್ದಾರೆ.

ಸರಕಾರ ನೀತಿಗಳ ಎಫೆಕ್ಟ್: 2014ರಿಂದ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಸರಕಾರವು ನೆರೆಯ ರಾಷ್ಟ್ರದೊಂದಿಗೆ ಯಾವುದೇ ಸ್ನೇಹಪರ ರೀತಿಯಲ್ಲಿ ಸಂಬಂಧ ಹೊಂದಿಲ್ಲ. ಶತ್ರು ದೇಶದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಪುಲ್ವಾಮಾ ಮತ್ತು ಉರಿ ದಾಳಿಯ ನಂತರ ಎರಡೂ ದೇಶಗಳ ಸಂಬಂಧ ಹದಗೆಟ್ಟಿದೆ. ಇತ್ತೀಚೆಗೆ ಮುಕ್ತಾಯಗೊಂಡ ಲೋಕ ಸಭಾ ಚುನಾವಣೆಯಲ್ಲಿ ಬಿಜೆಪಿಯು ಎನ್‌ಡಿಎ ಜತೆ ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಬಂದಿದ್ದರೂ ಸಹ ಈ ಸರಕಾರದ ವಿದೇಶಾಂಗ ನೀತಿ ಬದಲಾಗುವ ಸಾಧ್ಯತೆಗಳು ಇಲ್ಲದ ಕಾರಣ ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡ ಪಾಕಿಸ್ತಾನಕ್ಕೆ ಹೋಗುವುದು ಖಚಿತವಲ್ಲ ಎಂದು ಕ್ರಿಕ್‌ಬಜ್ ವರದಿ ಮಾಡಿದೆ. ಆದರೆ, ಪಾಕ್ ಕ್ರಿಕೆಟ್ ಮಂಡಳಿ ಮಾತ್ರ ಭಾರತ ಕೂಡ ಪಾಕ್‌ನಲ್ಲಿಯೇ ಆಡಲಿದೆ ಎಂದು ಬಲವಾಗಿ ನಂಬಿದೆ.

ಏಷ್ಯಾಕಪ್ ಬದಲಾವಣೆ

2023ರಲ್ಲಿ ಪಾಕಿಸ್ತಾನದ ಆತಿಥ್ಯದಲ್ಲಿ ನಡೆದಿದ್ದ ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ಪಾಕ್‌ಗೆ ಹೋಗಲು ಒಪ್ಪದ ಕಾರಣ ಹೈಬ್ರೀಡ್ ಮಾದರಿಯಲ್ಲಿ ಪಾಕ್ ಮತ್ತು ಶ್ರೀಲಂಕಾದಲ್ಲಿ ಆಡಿಸಲಾಗಿತ್ತು. ಭಾರತ ತನ್ನ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡಿತ್ತು. ನವೆಂಬರ್ 2008ರ ಮುಂಬೈ ಭಯೋತ್ಪಾದಕ ದಾಳಿಯಲ್ಲಿ 150 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ ನಂತರ ಭಾರತವು ಪಾಕಿಸ್ತಾನದೊಂದಿಗೆ ದ್ವಿಪಕ್ಷೀಯ ಕ್ರಿಕೆಟ್ ಆಡಿಲ್ಲ.

ವಿಶ್ವ ಶ್ರೇಯಾಂಕದಲ್ಲಿ ಭಾರೀ ಜಿಗಿತ | ಪುರುಷರ ಡ್ರಾದಲ್ಲಿ ಸ್ಥಾನ

ನಗಾಲ್‌ಗೆ ಒಲಿಂಪಿಕ್ಸ್ ಟಿಕೆಟ್

ಜರ್ಮನಿ: ಇಲ್ಲಿ ನಡೆದ ಟೆನ್ನಿಸ್ ಹೀಲ್ ಬ್ರಾನ್ ನ್ಯಾಕರ್‌ಕಪ್ ಚಾಲೆಂಜರ್ ಫೈನಲ್‌ನಲ್ಲಿ ನಾಗಲ್ ಅವರು ಸ್ವಿಟ್ಜರ್ಲೆಂಡ್‌ನ ಅಲೆಕ್ಸಾಂಡರ್ ರಿಚರ್ಡ್ ಅವರನ್ನು 6–1 6(5)–7 6–3 ರಿಂದ ಸೋಲಿಸಿದ್ದು, ಆ ಮೂಲಕ 77 ನೇ ರ‍್ಯಾಂಕಿಂಗ್‌ಗೆ ತಲುಪಿ ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆ ಪಡೆದಿದ್ದಾರೆ.

ಒಲಿಂಪಿಕ್ ಮಾನದಂಡದ ಪ್ರಕಾರ, ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಅಗ್ರ 56 ಆಟಗಾರರು ಸ್ವಯಂಚಾಲಿತವಾಗಿ ಒಲಿಂಪಿಕ್‌ಗೆ ಅರ್ಹತೆ ಪಡೆಯುತ್ತಾರೆ. ಆದರೆ, ಪ್ರತಿ ದೇಶದಿಂದ ಗರಿಷ್ಠ 4 ಆಟಗಾರರು ಮಾತ್ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಸಾಧ್ಯವಾಗುತ್ತದೆ. ಭಾರತದ ಸುಮಿತ್ ನಗಾಲ್ ಸೋಮವಾರ ಬಿಡುಗಡೆ ಮಾಡಿರುವ ಎಟಿಪಿ ಶ್ರೇಯಾಂಕದಲ್ಲಿ 18 ಸ್ಥಾನಗಳ ಭಡ್ತಿ ಪಡೆದು 77ನೇ ಸ್ಥಾನಕ್ಕೆ ತಲುಪಿದ್ದು, ಪ್ಯಾರಿಸ್ ಒಲಿಂಪಿಕ್ಸ್ ಪುರುಷರ ಸಿಂಗಲ್ಸ್ ಡ್ರಾದಲ್ಲಿ ತಮ್ಮ ಸ್ಥಾನವನ್ನು

ಖಚಿತಪಡಿಸಿಕೊಂಡಿದ್ದಾರೆ. ನಾಗಲ್ ಇದೀಗ 713 ಎಟಿಪಿ ಪಾಯಿಂಟ್ ಹೊಂದಿದ್ದಾರೆ. ಜರ್ಮನಿಯಲ್ಲಿ ನಡೆದ ಹೀಲ್‌ಬ್ರಾನ್ ನ್ಯಾಕರ್‌ಕಪ್ ಚಾಲೆಂಜರ್ ಪಂದ್ಯಾವಳಿಯಲ್ಲಿ ನಾಗಲ್ ಅವರು ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದ ಕಾರಣ ಶ್ರೇಯಾಂಕದಲ್ಲಿ ಭರ್ಜರಿ ಜಿಗಿತ ಕಂಡರು. ಇದರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ಮೂರು ಸೆಟ್‌ಗಳ ಫೈನಲ್‌ನಲ್ಲಿ ನಾಗಲ್ ಸ್ವಿಟ್ಜರ್ಲೆಂಡ್‌ನ ಅಲೆಕ್ಸಾಂಡರ್ ರಿಚರ್ಡ್ ಅವರನ್ನು 6–1 6(5)–7 6–3 ರಿಂದ ಸೋಲಿಸಿದರು. ಇದರೊಂದಿಗೆ ನಗಾಲ್ ಸ್ಥಾನ ಪಡೆದಿದ್ದು, 2012ರ ಒಲಿಂಪಿಕ್ಸ್‌ನಲ್ಲಿ ವೈಲ್ಡ್‌ಕಾರ್ಡ್‌ನಿಂದಾಗಿ ಸೋಮದೇವ್ ದೇವವರ್ಮನ್ ಅವರು ಒಲಿಂಪಿಕ್ಸ್‌ನ ಪ್ರಧಾನ ಸುತ್ತಿಗೆ ಪ್ರವೇಶಿಸಿದ ಕೊನೆಯ ಆಟಗಾರನಾಗಿದ್ದರು.

ಹೀಲ್‌ಬ್ರಾನ್‌ನಲ್ಲಿ ಪ್ರಶಸ್ತಿ ಗೆದ್ದಿರುವುದು ನನಗೆ ತುಂಬಾ ಸಂತೋಷವಾಗಿದೆ. ಇದು ನನಗೆ ಪ್ರಮುಖ ವಾರವಾಗಿತ್ತು. ಪಂದ್ಯವು ಸವಾಲಿನದ್ದಾಗಿತ್ತು. ಉತ್ತಮ ಟೆನಿಸ್ ಆಡುವುದು ಮೊದಲ ಗುರಿ, ನಂತರ ಶ್ರೇಯಾಂಕದ ಸ್ಥಾನ ತಾನಾಗಿಯೆ ಬರುತ್ತದೆ, ಎಂದು ಬರೆದುಕೊಂಡಿದ್ದಾರೆ.

–ಸುಮಿತ್ ನಗಾಲ್, ಟೆನ್ನಿಸ್ ಆಟಗಾರ

ಒಲಿಂಪಿಕ್ಸ್ ಅವಳಿ ಸ್ಪರ್ಧೆಗೆ ಶೂಟರ್ ಮನು ಆಯ್ಕೆ

ದೆಹಲಿ: ಒಲಿಂಪಿಕ್ಸ್ ಆಯ್ಕೆಯಲ್ಲಿ ಭಾರತದ ಮಹಿಳಾ ಪಿಸ್ತೂಲ್ ಶೂಟರ್ ಮನು ಭಾಕರ್ ಭಾರೀ ಪ್ರದರ್ಶನ ನೀಡಿದ್ದು, ಒಲಿಂಪಿಕ್ಸ್ ಶೂಟಿಂಗ್‌ನ ಎರಡು ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ.

ಪಿಸ್ತೂಲ್ ಮತ್ತು ರೈಫಲ್ ವಿಭಾಗದ ತಂಡಗಳನ್ನು ರಾಷ್ಟ್ರೀಯ ಶೂಟಿಂಗ್ ಫೆಡರೇಷನ್ ಪ್ರಕಟಿಸಿದ್ದು, ವರ್ಚುವಲ್ ಆಗಿ ನಡೆದ ಆಯ್ಕೆಸಮಿತಿ ಸಭೆಯ ನಂತರ ತಂಡಗಳನ್ನು ಅಂತಿಮಗೊಳಿಸಲಾಯಿತು. ತಂಡದಲ್ಲಿ ಎಂಟು ಮಂದಿ ರೈಫಲ್ ಶೂಟರ್‌ಗಳು ಮತ್ತು ಏಳು ಮಂದಿ ಪಿಸ್ತೂಲ್ ಶೂಟರ್‌ಗಳು ಸ್ಥಾನ ಪಡೆದಿದ್ದಾರೆ. ಟ್ರಯಲ್ಸ್ ಫಲಿತಾಂಶಗಳಿಗೆ ಆಯ್ಕೆಗಾರರು ಆದ್ಯತೆ ನೀಡಿದ್ದು, ವಿಶ್ವ ಚಾಂಪಿಯನ್ ರುದ್ರಾಂಕ್ಷ್ ಪಾಟೀಲ್ ಅಂಥ ಸ್ಪರ್ಧಿಗಳಿಗೆ ಬಾಗಿಲು ಮುಚ್ಚಿದ್ದಾರೆ. ಈ ಹಿಂದೆ ತಮಗೆ ಅವಕಾಶ ನೀಡುವಂತೆ ಪಾಟೀಲ್ ಮನವಿ ಮಾಡಿದ್ದರು. ಮೆಚ್ಚಿನ 10 ಮೀ. ಏರ್ ರೈಫಲ್‌ನಲ್ಲಿ ಅವರು ಕೋಟಾ ಗಿಟ್ಟಿಸಿದ್ದರು. ಆದರೆ ಶೂಟಿಂಗ್‌ನಲ್ಲಿ ದೊರೆಯುವ ಕೋಟಾ, ವೈಯಕ್ತಿಕವಾಗಿ ಶೂಟರ್‌ಗಳಿಗೆ

ಹೋಗುವುದಿಲ್ಲ ಬದಲಾಗಿ ಅದು ಆ ದೇಶಕ್ಕೆ ಲಭಿಸುತ್ತದೆ. ತಂಡದ ಎಲ್ಲ ಸದಸ್ಯರು, ಕೋಚ್ ಮತ್ತು ನೆರವು ಸಿಬ್ಬಂದಿಗಳ ಜೊತೆ ಈಗ ಫ್ರಾನ್ಸ್‌ನಲ್ಲಿ ಶಿಬಿರದಲ್ಲಿದ್ದಾರೆ.

ಭಾರತದ ಶೂಟರ್‌ಗಳು

- **ರೈಫಲ್ ವಿಭಾಗದಲ್ಲಿ: ಸಂದೀಪ್ ಸಿಂಗ್, ಅರ್ಜುನ್ ಬಬುಟಾ (10 ಮೀ. ಏರ್ ರೈಫಲ್, ಪುರುಷರು), ಇಳವೆನಿಲ್ ವಳರಿವನ್, ರಮಿತಾ (10 ಮೀ. ಏರ್ ರೈಫಲ್, ವನಿತೆಯರು), ಸಿಫ್ಟ್ ಕೌರ್ ಸಮ್ರಾ, ಅಂಜುಂ ಮೌದ್ಗಿಲ್ (50 ಮೀ. ರೈಫಲ್ 3 ಪೊಸಿಷನ್ಸ್, ವನಿತೆಯರು), ಐಶ್ವರಿ ತೋಮಾರ್, ಸ್ವಪ್ನಿಲ್ ಕುಸಲೆ (50 ಮೀ. ರೈಫಲ್ 3 ಪೊ. ಪುರುಷರು)**
- **ಪಿಸ್ತೂಲ್ ವಿಭಾಗದಲ್ಲಿ : ಸರಬ್ಜೋತ್ ಸಿಂಗ್, ಅರ್ಜುನ್ ಚೀಮಾ (10 ಮೀ. ಏರ್ ಪಿಸ್ತೂಲ್), ಮನು ಭಾಕರ್, ರಿದಂ ಸಂಗ್ವಾನ್ (10 ಮೀ. ಏರ್ ಪಿಸ್ತೂಲ್, ವನಿತೆಯರು), ಅನಿಶ್ ಭಾನವಾಲ್, ವಿಜಯವೀರ್ ಸಿಧು (25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್), ಮನು ಭಾಕರ್, ಇಶಾ ಸಿಂಗ್ (25 ಮೀ. ರ‍್ಯಾ.ಫೈ. ಪಿಸ್ತೂಲ್, ಮಹಿಳೆಯರು).**

ಖೇಲೋ ಇಂಡಿಯಾ: ತಮಿಳುನಾಡು ಮೇಲುಗೈ

ಬಾಗಲಕೋಟೆ: ನಗರದ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿರುವ ದಕ್ಷಿಣ ಭಾರತದ ಖೇಲೋ ಇಂಡಿಯಾ ಸಬ್ ಜ್ಯೂನಿಯರ, ಜ್ಯೂನಿಯರ್ ಮತ್ತು ಸಿನಿಯರ ಮಹಿಳಾ ಕ್ರೀಡಾಕೂಟದ ಸಬ್ ಜ್ಯೂನಿಯರ್ ವಿಭಾಗದಲ್ಲಿ ತಮಿಳುನಾಡಿನ ಕ್ರೀಡಾಪಟುಗಳು ಮುನ್ನಡೆಯನ್ನು ಕಾಯ್ದುಕೊಂಡಿದ್ದಾರೆ.

ಮಂಗಳವಾರದ ಅಂತ್ಯದಲ್ಲಿ ತಮಿಳುನಾಡಿಗೆ 5 ಚಿನ್ನ, 4 ಕಂಚು, 2 ಬೆಳ್ಳಿ ಪದಕ ಪಡೆದು ಮುನ್ನಡೆ ಸಾಧಿಸಿದ್ದರೆ, ಕೇರಳ 3 ಬೆಳ್ಳಿ, 2 ಚಿನ್ನದ ಪದಕ ಪಡೆದು ದ್ವಿತೀಯ ಸ್ಥಾನದಲ್ಲಿದೆ. ಇನ್ನೂ ಕರ್ನಾಟಕ 1 ಬೆಳ್ಳಿ ಹಾಗೂ 3 ಕಂಚು ಪದಕದೊಂದಿಗೆ ತೃತೀಯ ಸ್ಥಾನದಲ್ಲಿದೆ. ತೆಲಂಗಾಣ 5 ಕಂಚು ಪದಕಗಳನ್ನು ಪಡೆದಿದೆ.

ಚಾಂಗ್ ಕ್ವಾನ್ ವಿಭಾಗದಲ್ಲಿ: ತಮಿಳುನಾಡಿನ ಗೋಕುಲ ವರ್ಷಿಣಿ (ಚಿನ್ನ), ಕೇರಳ ದೀಯಾರೀಜು (ಬೆಳ್ಳಿ), ತೆಲಂಗಾಣದ ಜಿ. ವೈಷ್ಣವಿ ಹಾಗೂ ತಮಿಳುನಾಡಿನ ಎಂ. ಕಲಂದಿಯಾ ಇಲಾಸರೆ (ಕಂಚು) ಪಡೆದಿದ್ದಾರೆ.

ಇನ್ನು ತೈಜಿಜಿಯಾನ ವಿಭಾಗದಲ್ಲಿ ತಮಿಳುನಾಡಿನ ಯಜನಿ (ಚಿನ್ನ) ಹಾಗೂ ಎಸ್. ರಹಿತಾ (ಬೆಳ್ಳಿ), ತೆಲಂಗಾಣದ ಗೋಪಾರ ಜುಲಾ ಹಾಗೂ ಕರ್ನಾಟಕದ ಜೈಷ್ಣಾ ಶ್ರೀ.ಬಿ (ಕಂಚು). ಚಾಂಗ್ವಾನ್ ವಿಭಾಗ: ತಮಿಳುನಾಡಿನ ಎ.ಪ.ಲಹಿಜಾಬಲ್ (ಚಿನ್ನ), ಕೇರಳದ ನೋಯಾ ಜುನ್ನೈದ (ಬೆಳ್ಳಿ), ತಮಿಳುನಾಡಿನ ಗಂಗಾವರ್ಷಿನ.ಜಿ ಹಾಗೂ ತೆಲಂಗಾಣ ಜರುಪುಲಾ ಚಂದನ (ಕಂಚು) ಪಡೆದಿದ್ದಾರೆ.

ಅದರಂತೆ ನಂಕ್ವಾನ ವಿಭಾಗದಲ್ಲಿ ತಮಿಳುನಾಡಿನ ಪಿ.ಅಭಿರುತಾ (ಚಿನ್ನ), ಕೇರಳದ ಹೈಜಾ ಪಾತೀಮಾ ಎಂ.ಪಿ (ಬೆಳ್ಳಿ), ಒಡಿಸ್ಸಾದ ಆರ್.ಪದ್ಮಾ ಹಾಗೂ ಕರ್ನಾಟಕದ ಶ್ರೀಶ್ವಾನ್ವಿ (ಕಂಚು) ಪಡೆದಿದ್ದಾರೆ.

ಜಿಹಾನ್ಸು ವಿಭಾಗ

ಕೇರಳದ ಅನ್ನಮರೀಯಾ ರ್ಕೀಸ್ (ಚಿನ್ನ), ತೆಲಂಗಾಣದ ರವೂಲಾಮೋಕ್ಷಾ (ಬೆಳ್ಳಿ), ಕರ್ನಾಟಕದ ಅನ್ನಪೂರ್ಣೇಶ್ವರಿ ಆರಾಧ್ಯಮಠ ಹಾಗೂ ತಮಿಳುನಾಡಿನ ಜೆ.ಎಲ್. ಶೋಷ್ಣಾ (ಕಂಚು). ಕಿಯಾಂಗ್ಸು ವಿಭಾಗ: ತಮಿಳುನಾಡಿನ ರೀಯಾನ್ಸಕಾ.ಆರ್ (ಚಿನ್ನ), ಕರ್ನಾಟಕದ ಶೃತಿ ಸುಲಾಖೆ (ಬೆಳ್ಳಿ), ಕೇರಳದ ವೈಗಾ ಜಿ.ಎಸ್, ತಮಿಳುನಾಡಿನ ಆರ್.ನೇಹಾ ಮರೀನ (ಕಂಚು).

ಜಿಯಾನ್ಯು ವಿಭಾಗ

ಕೇರಳದ ನೈನಾ ನೌಪಾಲ (ಚಿನ್ನ), ತಮಿಳುನಾಡಿನ ಎಸ್.ರಶ್ಮೀ (ಬೆಳ್ಳಿ), ಕೇರಳದ ನಯನಿಕಾ ಹಾಗೂ ತೆಲಂಗಾಣದ ಮಕಾಂಕ್ಷಾ ಯಾಧವ (ಕಂಚು) ಪಡೆದಿದ್ದು, ತೈಜಿಕ್ವಾನ್ ವಿಭಾಗ: ತಮಿಳುನಾಡಿನ ಪ್ರಕಾಲ್ಯ ಕೆ.ಎಸ್ (ಚಿನ್ನ), ಕೇರಳದ ರೀತಿಕಾ.ಎಂ (ಬೆಳ್ಳಿ), ತಮಿಳುನಾಡಿನ ಅಭಿರಾಮಿ.ಕೆ ಹಾಗೂ ಕರ್ನಾಟಕದ ಸ್ಫೂರ್ತಿ ಗೌಡರ (ಕಂಚು) ಪದಕಕ್ಕೆ ಖುಷಿ ಪಟ್ಟಿದ್ದಾರೆ.

ಸುನೀತಾ ವಿಲಿಯಮ್ಸ್ ತಂಡಕ್ಕೆ ಸೂಪರ್‌ಬಗ್ ಕಂಟಕ

ಬಾಹ್ಯಾಕಾಶ ಕೇಂದ್ರದಲ್ಲಿ ವೈರಸ್ ಪತ್ತೆ

ವಾಷಿಂಗ್ಟನ್: ಮೂರನೇ ಬಾರಿಗೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ(ಐಎಸ್‌ಎಸ್) ಹೊರಟಿರುವ ಗಗನಯಾತ್ರಿಗಳಿಗೆ 'ಸೂಪರ್‌ಬಗ್' ಕಂಟಕ ಎದುರಾಗಿದೆ.

ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ 'ಸೂಪರ್‌ಬಗ್' ಪತ್ತೆಯಾಗಿದ್ದು, ಗಗನಯಾತ್ರಿಗಳ ಸುರಕ್ಷತೆ ಬಗ್ಗೆ ಆತಂಕ ಮೂಡಿಸಿದೆ. ಶ್ವಾಸಕೋಶದ ಮೇಲೆ ಪರಿಣಾಮ ಬೀರುವ ಹೊಸ ಬಗೆ ಬ್ಯಾಕ್ಟೀರಿಯಾವನ್ನು ವಿಜ್ಞಾನಿಗಳು ಐಎಸ್‌ಎಸ್ ನಲ್ಲಿ ಪತ್ತೆ ಹಚ್ಚಿದ್ದಾರೆ. ಭಾರತ ಮೂಲದ ಸುನಿತಾ ವಿಲಿಯಮ್ಸ್ ಹಾಗೂ 8 ಜನರ ತಂಡ ಐಎಸ್‌ಎಸ್‌ಗೆ ಹೊರಟಿರುವಾಗಲೇ ಈ ಆಘಾತಕಾರಿ ಸುದ್ದಿ ಹೊರಬಿದ್ದಿದೆ. ಬಹು ಬಗೆಯ ಔಷಧಗಳನ್ನು ವಿರೋಧಿಸಿ ಮನುಷ್ಯರ ಶ್ವಾಸಕೋಶದ ಮೇಲೆ ಭಾರಿ ಹಾನಿ ಮಾಡಬಲ್ಲ ಬ್ಯಾಕ್ಟೀರಿಯಾ ಇದಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. 'ಎಂಟ್ರೊಬ್ಯಾಕ್ಟರ್ ಬುಗಾಂಡೆನ್ಸಿಸ್' ಎಂಬ ಅಣು ಜೀವಿ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಪತ್ತೆಯಾಗಿದ್ದು, ದಿನದಿಂದ ದಿನಕ್ಕೆ ಶಕ್ತಿಶಾಲಿಯಾಗಿ ಬೆಳವಣಿಗೆ ಹೊಂದುತ್ತಿದೆ ಎಂದು ಬಾಹ್ಯಾಕಾಶ ವಿಜ್ಞಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಸುಲಭಕ್ಕೆ ಬಗ್ಗದು : ಈ ಹೊಸ ಬಗೆಯ ಬ್ಯಾಕ್ಟೀರಿಯಾ ಸದ್ಯ ವೈದ್ಯಕೀಯ ಲೋಕದಲ್ಲಿ ಲಭ್ಯವಿರುವ ಯಾವುದೇ ರೋಗ ನಿರೋಧಕ ಮದ್ದುಗಳಿಗೆ ಸುಲಭವಾಗಿ ಬಗ್ಗದ ಬ್ಯಾಕ್ಟೀರಿಯಾ ಆಗಿದೆ. ಇದೇ ಕಾರಣಕ್ಕೆ ಇವುಗಳನ್ನು 'ಸೂಪರ್‌ಬಗ್' ಎಂದು ಕರೆಯಲಾಗುತ್ತದೆ. ಈ ಸ್ಪೇಸ್ ಬಗ್‌ಗಳು ಅಂತರಿಕ್ಷದಲ್ಲಿ ಉತ್ಪತ್ತಿಯಾಗುವ ಬ್ಯಾಕ್ಟೀರಿಯಗಳಲ್ಲ. ಬದಲಿಗೆ ಗಗನಯಾತ್ರಿಗಳ ಜತೆ ಭೂಮಿಯಿಂದಲೇ ಬಾಹ್ಯಾಕಾಶ ತಲುಪಿ ರೂಪಾಂತರಗೊಂಡ ಬ್ಯಾಕ್ಟೀರಿಯಾ ಆಗಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಈಗಾಗಲೇ ಬಾಹ್ಯಾಕಾಶದಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಹಾಗೂ ಜೂ.6ರಂದು ಐಎಸ್‌ಎಸ್ ತಲುಪಿರುವ ಸುನಿತಾ ವಿಲಿಯಮ್ಸ್ ತಂಡದ ಆರೋಗ್ಯದ ಬಗ್ಗೆ ಆತಂಕ ಮೂಡಿದೆ.

ಕ್ರಿಯಾತ್ಮಕವಾಗಿ ಭಿನ್ನ: ಈ ಬ್ಯಾಕ್ಟೀರಿಯಾಗಳು ಬಾಹ್ಯಾಕಾಶ ಕೇಂದ್ರದಲ್ಲಿ ಪ್ರತ್ಯೇಕವಾದ ತಳಿಗಳಾಗಿ ರೂಪಾಂತರಗೊಂಡಿವೆ. ಅವುಗಳನ್ನು ಭೂಮಿಯ ಪ್ರತಿರೂಪಗಳಿಗೆ ಹೋಲಿಸಿದರೆ ತಳಿ ಮತ್ತು ಕ್ರಿಯಾತ್ಮಕವಾಗಿ ಭಿನ್ನವಾಗಿವೆ ಎಂದು ಅಧ್ಯಯನಗಳು ತಿಳಿಸಿವೆ. ಸೀಮಿತ ಸೌಲಭ್ಯಗಳೊಂದಿಗೆ ಕಾರ್ಯನಿರ್ವಹಿಸುವ ಗಗನಯಾತ್ರಿಗಳು ಹಲವಾರು ಆರೋಗ್ಯ ಸವಾಲುಗಳನ್ನು ಎದುರಿಸುತ್ತಾರೆ. ಅದರಲ್ಲಿ ಇಂತಹ ಬ್ಯಾಕ್ಟೀರಿಯಾಗಳು ಪರಿಣಾಮ ಬೀರಿದರೆ ಸಮಸ್ಯೆ ಉಲ್ಬಣಗೊಳ್ಳಬಹುದು. ಈ ಜೀವಿಯ ಬಗ್ಗೆ ಇನ್ನಷ್ಟು ಅಧ್ಯಯನ ನಡೆಯಬೇಕು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಗ್ಯಾರಂಟಿ ಮುಂದುವರಿಯಲಿದೆ

ಕೇಂದ್ರ ಸಚಿವ ಸಂಪುಟದಲ್ಲಿ ದಲಿತ ನಾಯಕನಿಗಿಲ್ಲ ಅವಕಾಶ: ಸಿಎಂ ಸಿದ್ದರಾಮಯ್ಯ

ಬೆಂಗಳೂರು: ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು ಆಗಾಗ ತಮ್ಮ ಅಜ್ಞಾನ ಪ್ರದರ್ಶನ ಮಾಡುತ್ತಾ ರಾಜ್ಯದ ಜನರಿಗೆ ಮನರಂಜನೆ ನೀಡುತ್ತಿರುತ್ತಾರೆ. ಗ್ಯಾರಂಟಿಗಳು ಕಾಂಗ್ರೆಸ್ ಪಕ್ಷಕ್ಕೆ ಮತ ತಂದು ಕೊಟ್ಟಿಲ್ಲ ಎನ್ನುವುದು ಅವರ ಇತ್ತೀಚಿನ ಸಂಶೋಧನೆ. ಅಶೋಕ್ ಅವರೇ, ನಿಮಗೆ ಮತ್ತು ನಿಮ್ಮ ಪಕ್ಷಕ್ಕೆ ಗ್ಯಾರಂಟಿ ಯೋಜನೆಗಳ ಬಗ್ಗೆ ಏಕೆ ಇಷ್ಟೊಂದು ಸಿಟ್ಟು, ಮತ್ಸರ? ಅದರ ಫಲಾನುಭವಿಗಳಾದ ಬಡವರು, ಮಹಿಳೆಯರು, ಯುವಜನರ ಬಗ್ಗೆ ಏಕೆ ನಿಮಗೆ ಇಷ್ಟೊಂದು ದ್ವೇಷ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ರಾಜ್ಯದ ಜನತೆ ಮಾತ್ರವಲ್ಲ, ದೇಶದ ಜನತೆ ಕೂಡಾ ಸೋಲಿಸಿದ್ದು ಮೋದಿ ಗ್ಯಾರಂಟಿಗಳನ್ನೇ ಹೊರತು, ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳನ್ನಲ್ಲ. ಅಶೋಕ್ ಅವರೇ, ಈಗಲಾದರೂ ಎಚ್ಚೆತ್ತುಕೊಂಡು ಸತ್ಯವನ್ನು ಎದುರಿಸಿ. ಕಳೆದ ಲೋಕಸಭಾ ಚುನಾವಣೆಗಿಂತ ಶೇ. 13ರಷ್ಟು ಹೆಚ್ಚು ಮತಗಳನ್ನು ರಾಜ್ಯದ ಮತದಾರರು ಈ ಬಾರಿ ನಮಗೆ ನೀಡಿದ್ದಾರೆ. ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವಿನ ಮತಪ್ರಮಾಣದ ಅಂತರ ಕೇವಲ ಶೇ 0.63. ಈಗ ಹೇಳಿ ಗೆದ್ದವರು ಯಾರು? ಸೋತವರು ಯಾರು ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿಗೆ ದಲಿತರ ಬಗ್ಗೆ ಕಾಳಜಿ ಇಲ್ಲ

ದಲಿತರ ಬಗೆಗಿನ ಬಿಜೆಪಿ ಕಾಳಜಿ ಎಷ್ಟೊಂದು ಹುಸಿಯಾಗಿದೆ ಎನ್ನುವುದಕ್ಕೆ ಕೇಂದ್ರ ಸಚಿವ ಸಂಪುಟವೇ ಸಾಕ್ಷಿ. ಈ ಸಂಪುಟದಲ್ಲಿ ರಾಜ್ಯದಿಂದ ಒಬ್ಬನೇ ಒಬ್ಬ ದಲಿತ ಇಲ್ಲವೇ ಹಿಂದುಳಿದ ಸಮುದಾಯದ ನಾಯಕನಿಗೆ ಅವಕಾಶ ನೀಡಿಲ್ಲ. ದೇಶದಲ್ಲಿಯೇ ಮೊದಲ ಬಾರಿ ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆಯನ್ನು ಜಾರಿಗೊಳಿಸಿ, ಅವರ ಜನಸಂಖ್ಯೆಗೆ ಅನುಗುಣವಾಗಿ ಒಟ್ಟು ಸಂಪನ್ಮೂಲದ ಶೇಕಡಾ 25ರಷ್ಟನ್ನು ಮೀಸಲು ಇಟ್ಟವರು ನಾವು. ನಿಮಗೆ ದಮ್ಮು-ತಾಖತ್ ಇದ್ದರೆ ಈ ಕಾಯ್ದೆಯನ್ನು ರಾಷ್ಟ್ರಮಟ್ಟದಲ್ಲಿ ಜಾರಿಗೆ ತರಲು ಪ್ರಧಾನಿ ಮೋದಿಯವರಿಗೆ ತಿಳಿಸಿ. ಅದರ ನಂತರ ನಮ್ಮ ಬಗ್ಗೆ ಮಾತನಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟೀಕಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಜಾರಿಯಿಂದಾಗಿ ರಾಜ್ಯ ದಿವಾಳಿಯಾಗಬೇಕು ಎಂಬ ಆಸೆ ನಿಮಗಿದ್ದರೂ ಅದು ಈಡೇರುವುದಿಲ್ಲ. ಗ್ಯಾರಂಟಿ ಯೋಜನೆಗಳು ಮುಂದುವರಿಯುತ್ತದೆ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಸುಭದ್ರವಾಗಿರುತ್ತದೆ. ಸಾಲ ಮಾಡಿ ಸಂಬಳ ಕೊಡುವ ದುಸ್ಥಿತಿಗೆ ನಮ್ಮ ಸರಕಾರ ತಲುಪಿಲ್ಲ. ನಿಮಗೆ ಬರುವ ಸಂಬಳದಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ನನ್ನ ಗಮನಕ್ಕೆ ತನ್ನಿ. ಅದನ್ನು ಸರಿಪಡಿಸುವ ಪ್ರಯತ್ನ ಮಾಡುತ್ತೇನೆ.
-ಸಿದ್ದರಾಮಯ್ಯ ಮುಖ್ಯಮಂತ್ರಿ

ನಮ್ಮ ಗೆಲುವಿನಿಂದ ನಾವು ತೃಪ್ತರಲ್ಲದೇ ಇದ್ದರೂ ರಾಜ್ಯದ ಜನ ಗೆಲ್ಲಿಸಿದ್ದು ನಮ್ಮನ್ನು, ಸೋಲಿಸಿದ್ದು ನಿಮ್ಮನ್ನು ಎನ್ನುವುದನ್ನು ಮರೆಯದಿರಿ. ಜೆಡಿಎಸ್ ಪಕ್ಷದ ಪಾದಕ್ಕೆ ಬಿದ್ದರೂ, 26 ಸ್ಥಾನಗಳಿಂದ 17 ಸ್ಥಾನಕ್ಕೆ ನಿಮ್ಮ ಪಕ್ಷ ಕುಸಿಯುವುದನ್ನು ತಪ್ಪಿಸಲು ಆಗಲಿಲ್ಲ. ಒಂದು ಸ್ಥಾನದಿಂದ ಒಂಬತ್ತು ಸ್ಥಾನಕ್ಕೆ ನಾವು ಏರುವುದನ್ನೂ ನಿಮಗೆ ತಪ್ಪಿಸಲಾಗಲಿಲ್ಲ. ಮೊದಲು ನಿಮ್ಮ ಸೋಲಿಗೆ ಆತ್ಮಾವಲೋಕನ ಮಾಡಿಕೊಳ್ಳಿ. ಆಮೇಲೆ ಕಾಂಗ್ರೆಸ್ ಪಕ್ಷದ ಚುನಾವಣಾ ಫಲಿತಾಂಶದ ವಿಶ್ಲೇಷಣೆ ನಡೆಸಿ ಎಂದಿದ್ದಾರೆ.

ಕೇವಲ ರಾಜಕೀಯ ಲಾಭದ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ನಾವು ಜಾರಿಗೆ ತಂದಿಲ್ಲ. ಅದು ನಮ್ಮ ಬದ್ಧತೆ ಮತ್ತು ರಾಜ್ಯದ ಜನರ ಮೇಲಿನ ಕಾಳಜಿ. ಕೇಂದ್ರ ಸರಕಾರದ ದುರಾಡಳಿತದಿಂದ ನೆಲ ಹಿಡಿದಿರುವ ಜನತೆಗೆ ನೆರವಾಗುವ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಕೇಂದ್ರದ ಸರಕಾರಿ ಯಂತ್ರದ ದುರುಪಯೋಗ, ಮೋದಿ ನಾಮ ಬಲ, ಅಪಾರವಾದ ಸಂಪನ್ಮೂಲಗಳ ಹೊರತಾಗಿಯೂ ಜನತೆ ನಮಗೆ ಆಶೀರ್ವಾದ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಉನ್ನತ ವ್ಯಾಸಂಗಕ್ಕೆ 72.78 ಕೋಟಿ ರು. ಸಾಲ ಸೌಲಭ್ಯ

ಬೆಂಗಳೂರು: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ವೃತ್ತಿಪರ ಶಿಕ್ಷಣದ ವ್ಯಾಸಂಗಕ್ಕಾಗಿ 7,616ದ್ಯಾರ್ಥಿಗಳಿಗೆ 72.78 ಕೋಟಿ ರು.ಶಿಕ್ಷಣ ಸಾಲ ನೀಡಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಫಾರ್ಮಸಿ ಎಂಜಿನಿಯರಿಂಗ್ ಕೋರ್ಸ್ ವ್ಯಾಸಂಗ ಮಾಡಲು ಬಯಸಿದ ಬಡ ಕುಟುಂಬಗಳ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಗರಿಷ್ಠ ಐದು ಲಕ್ಷ ರು. ವರೆಗೆ ಸಾಲದ ಸೌಲಭ್ಯ ಒದಗಿಸಲಾಗಿದೆ. ಇದರ ಜತೆಗೆ ವಿದೇಶದಲ್ಲಿ ವ್ಯಾಸಂಗ ಮಾಡಲು 88 ವಿದ್ಯಾರ್ಥಿಗಳಿಗೆ ಗರಿಷ್ಠ 10 ಲಕ್ಷ ರೂ. ವರೆಗೆ 7.5 ಕೋಟಿ ರೂ. ಸಾಲ ನೀಡಲಾಗಿದೆ ಎಂದು ವಿವರಿಸಿದರು.

961 ಮಹಿಳೆಯರಿಗೆ 4.8 ಕೋಟಿ ರು. ಸಾಲ: ಇದೇ ಮೊದಲ ಬಾರಿಗೆ ಸಣ್ಣ ವ್ಯಾಪಾರಸ್ಥ ಮಹಿಳೆಯರಿಗೆ ವಿಶೇಷ ಯೋಜನೆಯಡಿಯಲ್ಲಿ 961 ಮಂದಿಗೆ 4.8 ಕೋಟಿ ರು., ಸಾಲ ನೀಡಲಾಗಿದ್ದು, ಇದರಲ್ಲಿ ಶೇ. 50ರಷ್ಟು ಸಬ್ಸಿಡಿ, ಉಳಿದ ಶೇ. 50 ರಷ್ಟು ಮರುಪಾವತಿ ವೃತ್ತಿ ಪ್ರೋತ್ಸಾಹ ಯೋಜನೆಯಡಿ 973 ಮಂದಿಗೆ 9.73 ಕೋಟಿ ರು., ಶ್ರಮ ಶಕ್ತಿ ಯೋಜನೆ ಯಡಿ 1000 ಮಂದಿಗೆ 5 ಕೋಟಿ ರು., ಸಾಲ ಒದಗಿಸಲಾಗಿದೆ. ಪ್ರಸಕ್ತ ವರ್ಷ 666 ಕಾರು, 500 ಆಟೋ ಫಲಾನುಭವಿಗಳಿಗೆ ನೀಡಲಾಗುವುದು. 23.75 ಕೋಟಿ ರು., ವೆಚ್ಚ ಮಾಡಲಾಗಿದೆ. ಈ ವರ್ಷ 200.60 ಕೋಟಿ ರು., ಸಾಲ ವಸೂಲಾತಿ ಮಾಡಿದ್ದು, ಕಳೆದ ವರ್ಷಕ್ಕಿಂತ 50 ಲಕ್ಷ ಹೆಚ್ಚು ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ತೆರಿಗೆ: ಶೇ. 110 ಸಂಗ್ರಹ

ಬೆಂಗಳೂರು : ತೆರಿಗೆ ಸಂಗ್ರಹ ನಿಗದಿತ ಗುರಿಗಿಂತ ಶೇ.110 ರಷ್ಟಿದೆ. ಮಾರ್ಗಸೂಚಿ ದರ ಪರಿಷ್ಕರಣೆ ಹಾಗೂ ಆಡಳಿತ ಸುಧಾರಣಾ ಕ್ರಮಗಳಿಂದ ಹೆಚ್ಚಿನ ತೆರಿಗೆ ಸಂಗ್ರಹದ ನಿರೀಕ್ಷೆ ಇದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 2023-24 ನೇ ಸಾಲಿನಲ್ಲಿ 20,000 ಕೋಟಿ ರೂ. ಗುರಿಗೆ ಬದಲಾಗಿ 20287.30 ಕೋಟಿ ರೂ ರಾಜಸ್ವ ಸಂಗ್ರಹವಾಗಿದೆ. ಜಿ.ಐ.ಎಸ್. ಆಧಾರಿತ ಆಸ್ತಿಗಳ ವಿವರ ಹಾಗೂ ಮಾರ್ಗಸೂಚಿ ದರ ನಿಗದಿಯನ್ನು ಜಾರಿಗೊಳಿಸುವ ಮೂಲಕ ತೆರಿಗೆ ಸೋರಿಕೆ ತಡೆಗಟ್ಟಲು ಸಾಧ್ಯವಿದೆ. ಉಪನೋಂದಣಾಧಿಕಾರಿಗಳ ಕಚೇರಿಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಹೆಚ್ಚಿಸುವಂತೆ ಸೂಚಿಸಲಾಗಿದೆ. ದಸ್ತಾವೇಜುಗಳ ನೋಂದಣಿಯನ್ನು ಡಿಜಿಟಲ್ ಆಗಿ ಮಾಡಲು ಕಾಯ್ದೆಗೆ ತಿದ್ದುಪಡಿ ಮಾಡಲಾಗಿದ್ದು ಪ್ರಸಕ್ತ ಸಾಲಿನಲ್ಲಿ ಜಾರಿಗೆ ತರಲಾಗುವುದು ಎಂದು ತಿಳಿಸಿದ್ದಾರೆ.

ಮೆಟ್ರೋ ರೈಲಿನಡಿ ಹಾರಿದ ಯುವಕನ ರಕ್ಷಣೆ

ಬೆಂಗಳೂರು: ಹೊಸಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಯುವಕನೊಬ್ಬ ಮೆಟ್ರೋ ರೈಲಿನ ಅಡಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ನಡೆಸಿದ್ದು, ಬಿಎಂಆರ್‌ಸಿಎಲ್ ಸಿಬ್ಬಂದಿಯ ಸಮಯ ಪ್ರಜ್ಞೆ ಯಿಂದಾಗಿ ಆತ ಪ್ರಾಣಾ ಪಾಯದಿಂದ ಪಾರಾಗಿದ್ದಾನೆ. ಈ ಯುವಕ ರಾತ್ರಿ 8.56ಕ್ಕೆ ರೈಲು ಬರುತ್ತಿರುವುದನ್ನು ಕಂಡು ಆತ್ಮಹತ್ಯೆ ಮಾಡಿಕೊಳ್ಳಲು ಹಾರಿ ರೈಲಿನ ಕೋಚ್‌ಗೆ ತಾಗಿ ಪಕ್ಕಕ್ಕೆ ಬಿದ್ದಿದ್ದು, ಕೂಡಲೇ ಬಿಎಂಆರ್‌ಸಿಎಲ್ ಸಿಬ್ಬಂದಿ ಆತನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಇದರಿಂದ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು ಮತ್ತು ವಿದ್ಯುತ್ ಸರಬರಾಜು ನಿಲ್ಲಿಸಲಾಗಿತ್ತು. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ ಮೈಸೂರು ರಸ್ತೆವರೆಗೆ ಮೆಟ್ರೊ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಮೆಟ್ರೊ ರೈಲುಗಳು ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ತೊಂದರೆ ಅನುಭವಿಸಬೇಕಾಯಿತು. ಕೊನೆಗೆ ರಾತ್ರಿ 9.30ರಿಂದ ರೈಲು ಸಂಚಾರ ಎಂದಿನಂತೆ ಆರಂಭಗೊಂಡಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲ್ಯಾಂಡ್ ಬೀಟ್ ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು: ಕಂದಾಯ ಇಲಾಖೆಯ 14 ಲಕ್ಷ ಸರಕಾರಿ ಆಸ್ತಿಗಳ ರಕ್ಷಿಸಲು ಡಿಜಿಟಲ್ ದಾಖಲೆಗಳನ್ನೊಳಗೊಂಡ (ಸರ್ವೆ ಸಂಖ್ಯೆ, ಭೌಗೋಳಿಕ ಗಡಿ ಸೇರಿದಂತೆ) ಮಹತ್ವದ 'ಲ್ಯಾಂಡ್ ಬೀಟ್ ಪ್ರೋಗ್ರಾಂಗೆ' ಚಾಲನೆ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಜಿಪಿಎಸ್ ಬಳಸಿಕೊಂಡು ಪ್ರತಿ ಆಸ್ತಿಯನ್ನು ಅಪ್ಲಿಕೇಶನ್‌ನಲ್ಲಿ ಮ್ಯಾಪ್ ಮಾಡಲಾಗುತ್ತದೆ. ಒತ್ತುವರಿ ಪರಿಶೀಲಿಸಲು ಅಧಿಕಾರಿಗಳು ಪ್ರತಿ ಸ್ಥಳಕ್ಕೆ ಭೇಟಿ ನೀಡಿ, ಯಾವುದೇ ಸಮಸ್ಯೆಗಳನ್ನು ನೇರವಾಗಿ ಅಪ್ಲಿಕೇಶನ್ ಮೂಲಕ ವರದಿ ಮಾಡಿ, ನಂತರ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

5,90,000 ಕ್ಕೂ ಹೆಚ್ಚು ಆಸ್ತಿಗಳ ಪರಿಶೀಲನೆ: ಗ್ರಾಮ ಆಡಳಿತ ಅಧಿಕಾರಿಗಳು 5,90,000ಕ್ಕೂ ಹೆಚ್ಚು ಆಸ್ತಿಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ಒತ್ತುವರಿ ತೆರವು ಕಾರ್ಯಾಚರಣೆ ನಡೆಯಲಿದೆ. ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳ ಪರಿಶ್ರಮದಿಂದಾಗಿ, ಪ್ರತಿ ಗ್ರಾಮಗಳ ಸರಕಾರಿ ಆಸ್ತಿಗಳ ವಿವರವಾದ ಡಿಜಿಟಲ್ ದಾಖಲೆಗಳು ಇದ್ದು, ಸುರಕ್ಷಿತವಾಗಿಡಲು ಆಗಾಗ್ಗೆ ಸ್ಥಳ ಪರಿಶೀಲನೆ ನಡೆಸಲಾಗುತ್ತದೆ. ಸರಕಾರಿ ಜಮೀನುಗಳು ಒತ್ತುವರಿಯಾಗುವ ದೀರ್ಘಕಾಲದ ಸಮಸ್ಯೆಗೆ, ಈ ಪ್ರೋಗ್ರಾಂ ವ್ಯವಸ್ಥಿತ ಹಾಗೂ ವಿಶ್ವಾಸಾರ್ಹ ಪರಿಹಾರ ನೀಡುತ್ತದೆ ಎಂದು ತಿಳಿಸಿದರು.

ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ: ಅಶೋಕ್

ಬೆಂಗಳೂರು: ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಸಿಎಂ ಸಿದ್ದರಾಮಯ್ಯ ಅಪರೂಪಕ್ಕೆ ಒಮ್ಮೊಮ್ಮೆ ತಮ್ಮ ಪ್ರಗಾಢ ನಿದ್ದೆಯಿಂದ ಎದ್ದು ತಮ್ಮ ಅಹಂಕಾರ, ದರ್ಪ ಪ್ರದರ್ಶನ ಮಾಡುತ್ತಿರುತ್ತಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ.

ಗ್ಯಾರೆಂಟಿಗಳು ಸೋತಿದೆ, ಗ್ಯಾರೆಂಟಿಗಳು ಮತ ತಂದು ಕೊಟ್ಟಿಲ್ಲ, ಗ್ಯಾರೆಂಟಿಗಳ ಬಗ್ಗೆ ಪರಾಮರ್ಶೆ ಮಾಡಬೇಕು ಎಂದು ಹೇಳುತ್ತಿರುವುದು ನಾನಲ್ಲ ಸಿದ್ದರಾಮಯ್ಯನವರೇ, ನಿಮ್ಮ ಸಚಿವರುಗಳು, ಶಾಸಕರುಗಳೇ ಗ್ಯಾರೆಂಟಿಗಳ ಬಗ್ಗೆ ಅಪಸ್ವರ ಎತ್ತುತ್ತಿದ್ದಾರೆ. ಇಡೀ ದೇಶದಲ್ಲಿ 40 ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಸುಳ್ಳು, ಅಪಪ್ರಚಾರ ಮಾಡಿದರೂ ಬಿಜೆಪಿ ತನ್ನ ಸ್ವಂತ ಬಲದ ಮೇಲೆ ಪಡೆದಷ್ಟು ಸೀಟುಗಳನ್ನೂ ಇಂಡಿಯಾ ಮೈತ್ರಿಕೂಟ ಪಡೆಯಲಾಗಲಿಲ್ಲ. ರಾಹುಲ್ ಗಾಂಧಿ ಅವರನ್ನು ಎಷ್ಟು ಬಾರಿ ರೀಲಾಂಚ್ ಮಾಡಿದರೂ ಕಾಂಗ್ರೆಸ್ ತಕ್ಕಡಿ ಎರಡಂಕಿ ದಾಟಲಿಲ್ಲ. ಈಗ ಹೇಳಿ ಸೋತಿದ್ದು ಯಾರು ಗೆದಿದ್ದು ಯಾರು ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ 154 ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಮುನ್ನಡೆ ಸಿಕ್ಕಿದೆ. 17 ಸಂಪುಟ ಸಚಿವರ ತಮ್ಮ ಸ್ವಂತ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಲೀಡ್ ಕೊಡಿಸಲು ವಿಫಲರಾಗಿದ್ದಾರೆ. ಸಚಿವರ ಮಕ್ಕಳು, ತಮ್ಮಂದಿರು, ಕುಟುಂಬ ಸದಸ್ಯರು ಸೋತಿದ್ದಾರೆ. ಈಗ ಹೇಳಿ ಸೋತಿದ್ದು ಯಾರು, ಗೆದ್ದಿದ್ದು ಯಾರು ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಗೋಸುಂಬೆ ರಾಜಕಾರಣ: ಕಾಂಗ್ರೆಸ್ ಪಕ್ಷ ಗೆದ್ದರೆ ಇವಿಎಂ ಸರಿಯಿದೆ. ಕಾಂಗ್ರೆಸ್ ಪಕ್ಷ ಸೋತರೆ ಇವಿಎಂ ಸರಿಯಿಲ್ಲ. ಇದು ನಿಮ್ಮ ಕಾಂಗ್ರೆಸ್ ಪಕ್ಷದ ಗೋಸುಂಬೆ ರಾಜಕಾರಣ. ಶತಾಯ ಗತಾಯ ಹೇಗಾದರೂ ಮಾಡಿ ಗೆಲ್ಲಲೇಬೇಕು ಎಂದು ನೀವು ನೀಡಿದ ಸುಳ್ಳು ಭರವಸೆಗಳಿಂದ ದೇಶಾದ್ಯಂತ ಹೆಣ್ಣುಮಕ್ಕಳು ನಿಮ್ಮ ಪಕ್ಷಕ್ಕೆ ಹೇಗೆ ಶಾಪ ಹಾಕುತ್ತಿದ್ದಾರೆ ಎಂದು ಇಡೀ ದೇಶವೇ ನೋಡುತ್ತಿದೆ. ಕಾಂಗ್ರೆಸ್ ಪಕ್ಷ ಚುನಾವಣೆಗೆ ಹೋಗಿದ್ದು ಮೋದಿ ಅವರನ್ನು ಸೋಲಿಸಲು. ಎನ್‌ಡಿಎ ಚುನಾವಣೆಗೆ ಹೋಗಿದ್ದು ದೇಶವನ್ನ ಗೆಲ್ಲಿಸಲು. ಆದ್ದರಿಂದ ದೇಶ ಗೆದ್ದಿದೆ, ಇಂಡಿಯಾ ಸೋತಿದೆ. ಗ್ಯಾರೆಂಟಿಗಳ ಬಗ್ಗೆ ಬೇಸರ, ಸಿಟ್ಟು, ಅನುಮಾನ ಇವೆಲ್ಲಾ ಇರುವುದು ನಮಗಲ್ಲ, ನಿಮ್ಮ ಸಚಿವರಿಗೆ ಮತ್ತು ನಿಮ್ಮ ಶಾಸಕರಿಗೆ ಎಂದು ಆಋ ಅಶೋಕ್ ತಿಳಿಸಿದ್ದಾರೆ.

ವಿವಾಹದ ಭರವಸೆ ಉಲ್ಲಂಘನೆ ಅತ್ಯಾಚಾರವಲ್ಲ

ಬೆಂಗಳೂರು: ವಿವಾಹವಾಗುವುದಾಗಿ ಭರವಸೆ ನೀಡಿ ಉಲ್ಲಂಘಿಸಿದ ಪ್ರಕರಣವನ್ನು ಅತ್ಯಾಚಾರ ಆರೋಪದಲ್ಲಿ ವಿಚಾರಣೆಗೆ ಒಳಪಡಿಸುವುದು ಅವಿವೇಕತನವಾಗಲಿದೆ. ವಿವಾಹವಾಗುವುದಾಗಿ ಸುಳ್ಳು ಭರವಸೆ ನೀಡುವುದು ಅತ್ಯಾಚಾರ ಅಡಿಯಲ್ಲಿ ಅಪರಾಧವಾಗುವುದಿಲ್ಲ ಎಂದು ಹೈಕೋರ್ಟ್ ಹೇಳಿದೆ.

ಅಮೆರಿಕಾದಲ್ಲಿ ನೆಲೆಸಿರುವ ಕುಂದಾಪುರ ತಾಲೂಕಿನ ಹಕ್ಲಾಡಿ ಗ್ರಾಮದ ಸಂತೋಷ್ ಶೆಟ್ಟಿ ವಿರುದ್ಧ ಅತ್ಯಾಚಾರ ಮತ್ತವರ ಕುಟುಂಬದವರ ವಿರುದ್ಧ ವಂಚನೆ ಆರೋಪದಲ್ಲಿ ಕುಂದಾಪುರ ಪೊಲೀಸರು ಸಲ್ಲಿಸಿದ್ದ ಆರೋಪ ಪಟ್ಟಿ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ಸಂತೋಷ್ ಶೆಟ್ಟಿ ವಿದೇಶಕ್ಕೆ ತೆರಳಿದ ಬಳಿಕ ದುರುದಾರ ಮಹಿಳೆಯೊಂದಿಗೆ ಹಲವು ದಿನಗಳ ಕಾಲ ವಾಟ್ಸ್‌ಆ್ಯಪ್ ಸಂಭಾಷಣೆ ನಡೆಸಿದ್ದಾರೆ. ಆದರೆ, ಎಲ್ಲಿಯೂ ಲೈಂಗಿಕ ಕ್ರಿಯೆಗೆ ಸಂಬಂಧಿಸಿದಂತೆ ಚರ್ಚಿಸಿಲ್ಲ. ದೂರುದಾರರು ಮತ್ತು ಅರ್ಜಿದಾರರ ನಡುವೆ ಹಲವು ವ್ಯತ್ಯಾಸಗಳು ಕಂಡುಬಂದಿದ್ದು, ಇದೇ ಕಾರಣದಿಂದ ನಿಶ್ಚಿತಾರ್ಥವೂ ಮುರಿದು ಬಿದ್ದಿರುತ್ತದೆ. ಪ್ರಕರಣದಲ್ಲಿ ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿಲ್ಲ. ಮದುವೆಯಾಗುವುದಾಗಿ ತಿಳಿಸಿದ್ದು, ಮುಂದಿನ ಪ್ರಕ್ರಿಯೆಗಳನ್ನು ಮುಂದುವರಿಸಲಾಗಿದೆ. ಕಾರಣಾಂತರಗಳಿಂದ ಭರವಸೆ ಈಡೇರಿಸಲು ಸಾಧ್ಯವಾಗಿಲ್ಲ. ವಿವಾಹ ಕಾರಣಾಂತರದಿಂದ ಮುರಿದು ಬಿದ್ದಿದೆ.

ಆದರೆ, ಅರ್ಜಿದಾರರ ಕುಟುಂಬ ದೂರುದಾರರಿಗೆ ಯಾವುದೇ ರೀತಿಯಲ್ಲಿಯೂ ಆಮಿಷ ನೀಡಿಲ್ಲ. ಮದುವೆಗೂ ಮುನ್ನ ಆಗಿರುವ ನಿಶ್ಚಿತಾರ್ಥವೂ ಮುರಿದು ಬಿದ್ದ ಪರಿಣಾಮ ವಿವಾಹ ರದ್ದಾಗಿದೆ. ಆದ್ದರಿಂದ ಈ ಪ್ರಕರಣ ವಂಚನೆ ಆರೋಪದಲ್ಲಿಯೂ ಬರುವುದಿಲ್ಲ. ಹೀಗಾಗಿ ಈ ಪ್ರಕರಣ ಮುಂದುವರಿಕೆಗೆ ಅವಕಾಶ ನೀಡಿದ್ದಲ್ಲಿ ಕಾನೂನಿನ ದುರುಪಯೋಗವಾಗಲಿದೆ ಎಂದು ತಿಳಿಸಿರುವ ನ್ಯಾಯಪೀಠ ಅರ್ಜಿಯನ್ನು ಪುರಸ್ಕರಿಸಿದ್ದು, ಪ್ರಕರಣ ರದ್ದುಪಡಿಸಿ ಆದೇಶಿಸಿದೆ.

ಏನಿದು ಪ್ರಕರಣ?: ಅಮೆರಿಕದ ನ್ಯೂಜೆರ್ಸಿಯಲ್ಲಿ ರಾಯಲ್ ಕೆರಾಬಿಯಾಮ್ ಗ್ರೂಪ್ ಇಂಟರ್ ನ್ಯಾಷನಲ್ ಶಿಪ್ಪಿಂಗ್ ಕಂಪನಿಯಲ್ಲಿ ಮೇಲ್ವಿಚಾರಕಾಗಿ ಸೇವೆ ಸಲ್ಲಿಸುತ್ತಿದ್ದ ಸಂತೋಷ್ ಶೆಟ್ಟಿ ಎಂಬುವರು ಶೆಟ್ಟಿ ಮ್ಯಾಟ್ರಿಮೋನಿಯಲ್ ಎಂಬ ವೆಬ್‌ಸೈಟ್‌ನಲ್ಲಿ ತಮ್ಮ ವಿವರವನ್ನು ಸಲ್ಲಿಸಿದ್ದರು. ನಂತರ ಅವರ ಸಂಪರ್ಕಕ್ಕೆ ಕುಂದಾಪುರ ತಾಲೂಕಿನ ಮಹಿಳೆಯಿಬ್ಬರು ಬಂದಿದ್ದು, ಇಬ್ಬರೂ ಮಾತುಕತೆ ಮುಂದುವರಿಸಿದ್ದರು. 2023ರ ಜನವರಿ 8 ರಂದು ಹಕ್ಲಾಡಿಯ ದೇವಾಲಯದಲ್ಲಿ ಭೇಟಿಯಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದರು. ಬಳಿಕ ಅರ್ಜಿದಾರರು ಮತ್ತು ದೂರುದಾರರ ಕುಟುಂಬದ ನಡುವೆ ಮಾತುಕತೆಗಳು ನಡೆದಿದ್ದು, ಮದುವೆಯ ಪ್ರಸ್ತಾಪ ಬಂದು ಎರಡೂ ಕುಟುಂಬಗಳ ಸದಸ್ಯರು ಒಪ್ಪಿ 2023 ರ ಜನವರಿ 11 ರಂದು ನಿಶ್ಚಿತಾರ್ಥ ನಡೆಸಿದ್ದರು.

ತಂದೆಯಿಂದ ಮಗನ ಕೊಲೆ

ಬೆಂಗಳೂರು: ಬೈಕ್ ವಿಚಾರವಾಗಿ ತಂದೆಯೊಬ್ಬ ಮಗನನ್ನೇ ಕೊಲೆ ಮಾಡಿರುವ ಪ್ರಕರಣ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮುದ್ದಿನಪಾಳ್ಯದಲ್ಲಿ ನಡೆದಿದೆ.

ಅಂಜನ್ ಕುಮಾರ್ (27) ಹತ್ಯೆಗೀಡಾದ ಯುವಕ. ಕೊಲೆ ಆರೋಪಿ ವೆಂಕಟೇಶ್ (57) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಭಾನುವಾರ (ಜೂನ್ 9) ಸಂಜೆ ವೆಂಕಟೇಶ್ ಬೈಕ್ ತೆಗೆದುಕೊಂಡು ಹೋಗಿದ್ದರು. ಸಂಜೆ ಹೊರಗೆ ಹೋಗಿ ಮದ್ಯಪಾನ ಮಾಡಿದ್ದ ಅವರು ಅದೇ ನಶೆಯಲ್ಲಿ ಬೈಕ್ ಕೀ ಕಳೆದುಕೊಂಡಿದ್ದರು. ಇದೇ ಕಾರಣಕ್ಕಾಗಿ ಬೈಕ್ ಬಿಟ್ಟು ಮನೆಗೆ ತೆರಳಿದ್ದರು. ಸೋಮವಾರ ಬೆಳಗ್ಗೆ ಮಗ ಅಂಜನ್ ಬೈಕ್ ಎಲ್ಲಿ ಎಂದು ಪ್ರಶ್ನಿಸಿದ್ದ. ಆಗ ಇಬ್ಬರ ಮಧ್ಯೆ ಜಗಳ ನಡೆದಿದೆ.

ವೆಂಕಟೇಶ್ ಅವರಿಗೆ ಪುತ್ರಿಯೂ ಇದ್ದು, ಆಕೆಗಾಗಿ ಸ್ಕೂಟಿ ಕೊಡಿಸಿದ್ದರು. ರಿಯಲ್ ಎಸ್ಟೇಟ್ ಉದ್ಯಮಿಯಾಗಿರುವ ವೆಂಕಟೇಶ್, ಮಗಳಿಗಾಗಿ ಖರೀದಿಸಿದ ಸ್ಕೂಟಿಯನ್ನು ಮರೆತುಬಂದಿದ್ದರು. ಇದನ್ನು ಅಂಜನ್ ಪ್ರಶ್ನಿಸಿದಾಗ ಇಬ್ಬರ ಮಧ್ಯೆ ಜಗಳ ನಡೆದಿದೆ. ಸಿಟ್ಟಿನಲ್ಲಿ ತಂದೆ ಎಂಬುದನ್ನೂ ನೋಡದ ಅಂಜನ್ ಹೆಲ್ಮೆಟ್‌ನಿಂದ ಹಲ್ಲೆ ಮಾಡಿದ್ದರು. ಇದರಿಂದ ಕುಪಿತಗೊಂಡ ವೆಂಕಟೇಶ್, ಅಡುಗೆ ಮನೆಯಿಂದ ಚಾಕು ತಂದು ಅಂಜನ್‌ಗೆ ಇರಿದಿದ್ದಾರೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (''ಐಎಚ್‌ಎಫ್‌ಎಲ್'') ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **10.04.2021** ರಂದು ಕರೆದು ಸಾಲಗಾರ **ಅಶೋಕ್ ಕೆಂಪಯ್ಯ ಮತ್ತು ವೀಣಾ ಅಶೋಕ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **31.03.2021** ರ ವರೆಗೆ **ರೂ.58,24,134/- (ರೂಪಾಯಿ ಐವತ್ತ ಎಂಟು ಲಕ್ಷದ ಇಪ್ಪತ್ತ ನಾಲ್ಕು ಸಾವಿರದ ಒಂದು ನೂರ ಮೂವತ್ತ ನಾಲ್ಕು ಮಾತ್ರ)** ಸಾಲ ಖಾತೆ ನಂ. **HHLDUB00357220** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **01.04.2021** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಆ ನಂತರದಲ್ಲಿ, **ಐಎಚ್‌ಎಫ್‌ಎಲ್** ಸಾಲಗಾರ/ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಐಎಚ್‌ಎಫ್‌ಎಲ್** ದಿನಾಂಕ **30.09.2021** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಸಂಬಂಧಪಟ್ಟ ಎಲ್ಲಾ ಸೆಕ್ಯುರಿಟಿಗಳನ್ನು **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ಗೆ-ಎಸ್‌ಸಿ** 439 ವಹಿಸಿಕೊಟ್ಟಿದೆ.

ಅನಂತರ, **ಐಎಚ್‌ಎಫ್‌ಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಇಎಆರ್‌ಸಿ ಟ್ರಸ್ಟ್-ಎಸ್‌ಸಿ 439ರ** ಟ್ರಸ್ಟಿ ಆಗಿ ದಿನಾಂಕ **02.11.2023** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು, ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-IV, ಟ್ರಸ್ಟ್‌ನ ('ಆರ್ಸಿಲ್')** ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ** ಜಾಗದಲ್ಲಿ ಆರ್ಸಿಲ್ ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) /ಗ್ಯಾರಂಟರ್(ಗಳ) / ಮಾರ್ಟ್‌ಗೇಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸಾಂಕೇತಿಕ ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **07.06.2024** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **15.02.2024** ರ ವರೆಗೆ **ರೂ. 77,66,533.59 (ರೂಪಾಯಿ ಎಪ್ಪತ್ತ ಏಳು ಲಕ್ಷದ ಅರುವತ್ತ ಆರು ಸಾವಿರದ ಐನ್ನೂರ ಮೂವತ್ತ ಮೂರು ಮತ್ತು ಪೈಸೆ ಐವತ್ತ ಒಂಬತ್ತು ಮಾತ್ರ)** ಮೊತ್ತಕ್ಕೆ, ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **16.02.2024** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೇಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ಅಶೋಕ್ ಕೆಂಪಯ್ಯನವರ ಮಾಲಕತ್ವದಲ್ಲಿರುವ ಸ್ವತ್ತು

ಸದ್ಯಕ್ಕೆ ಬಿಬಿಎಮ್‌ಪಿ ಮಿತಿಯೊಳಗಿರುವ ಮತ್ತು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ಖಾತಾ ನಂ. 25/1/306 ಚಿಕ್ಕಥೋಗೂರು, ಬೇಗೂರು ಸಬ್ ಡಿವಿಜನ್, ಬೆಂಗಳೂರು, 560100, ಕರ್ನಾಟಕ ಇಲ್ಲಿ, ಚಿಕ್ಕಥೋಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿನ ಸರ್ವೆ ನಂ. 25/1ರಲ್ಲಿ ''ಪ್ರಿಸ್ಟೀಜ್ ಕಾಸಾಬೆಲ್ಲಾ'' ಎಂದು ತಿಳಿಯಲಾಗುವ ಕಟ್ಟಡ/ಪ್ರೊಜೆಕ್ಟ್‌ನಲ್ಲಿ ಟವರ್ -6ರ ಬ್ಲಾಕ್ ಎಫ್‌ನ 2ನೇ ಮಹಡಿ/ಲೆವೆಲ್‌ನಲ್ಲಿನ 1404 ಚದರ ಅಡಿ ಬಿಲ್ಟ್ ಅಪ್ ಏರಿಯಾದ ನಂ. 621 ಅನ್ನು ಹೊಂದಿರುವ ವಾಸ್ತವ್ಯದ ಫ್ಲ್ಯಾಟ್, ಬೇಸ್‌ಮೆಂಟ್‌ನಲ್ಲಿ ಒಂದು ಕಾರ್ ಪಾರ್ಕಿಂಗ್ ಜಾಗದೊಂದಿಗೆ.

ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)

ದಿನಾಂಕ : 07.06.2024
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಈಡೆಲ್‌ವಾಯಿಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪೆನಿ ಲಿಮಿಟೆಡ್ (''ಇಎಆರ್‌ಸಿ'') (CIN:U67100MH2007PLC174759) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.02.2022** ರಂದು ಕರೆದು ಸಾಲಗಾರ **ವಂದನಾ ಕುಮಾರ್ ಥಾಕೂರ್ ಮತ್ತು ಬಿ.ರಾಜೇಶ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **02.02.2022** ರ ವರೆಗೆ **ರೂ. 14,97,740.88 (ರೂಪಾಯಿ ಹದಿನಾಲ್ಕು ಲಕ್ಷದ, ತೊಂಬತ್ತ ಏಳು ಸಾವಿರದ ಏಳು ನೂರ ನಲ್ವತ್ತು ಮತ್ತು ಪೈಸೆ ಎಂಬತ್ತ ಎಂಟು ಮಾತ್ರ)** ಸಾಲ ಖಾತೆ ನಂ. **HHLBAG00233145** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **03.02.2022** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಅನಂತರ, **ಐಎಚ್‌ಎಫ್‌ಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಇಎಆರ್‌ಸಿ ಟ್ರಸ್ಟ್-ಎಸ್‌ಸಿ 439ರ** ಟ್ರಸ್ಟಿ ಆಗಿ ದಿನಾಂಕ **02.11.2023** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು, ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-IV, ಟ್ರಸ್ಟ್‌ನ ('ಆರ್ಸಿಲ್')** ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ** ಜಾಗದಲ್ಲಿ ಆರ್ಸಿಲ್ ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) /ಗ್ಯಾರಂಟರ್(ಗಳ) / ಮಾರ್ಟ್‌ಗೇಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸಾಂಕೇತಿಕ ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **07.06.2024** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **28.02.2024** ರ ವರೆಗೆ **ರೂ. 20,34,023.05 (ರೂಪಾಯಿ ಇಪ್ಪತ್ತು ಲಕ್ಷದ ಮೂವತ್ತ ನಾಲ್ಕು ಸಾವಿರದ ಇಪ್ಪತ್ತ ಮೂರು ಮತ್ತು ಪೈಸೆ ಐದು ಮಾತ್ರ)** ಮೊತ್ತಕ್ಕೆ, ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **29.02.2024** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೇಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ವಂದನಾ ಕುಮಾರ್ ಥಾಕೂರ್ ಇವರ ಮಾಲಕತ್ವದಲ್ಲಿರುವ ಸ್ವತ್ತು

ಮಾರಸೂರು ಗ್ರಾಮ, ಕಸಾಬಾ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಅರ್ಬನ್ ಜಿಲ್ಲೆ, ಬೆಂಗಳೂರು-562106, ಕರ್ನಾಟಕ ಇಲ್ಲಿ ಸರ್ವೆ ನಂ.128/3 ಹೊಂದಿರುವ ಪರಿವರ್ತಿತ ಜಮೀನಿನಿಂದ ತಯಾರಿಸಾಲದ ಸೈಟ್ ನಂ.543 ಅನ್ನು ಹೊಂದಿರುವ ಲೇಔಟ್‌ನಲ್ಲಿ ''ಜಿ.ಆರ್.ಕೊಕೊ ನೆಸ್ಟ್ ಫೇಸ್-III''ನಲ್ಲಿನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, 28 ಗುಂಟೆಗಳಷ್ಟು ಮಾಪನ ಹೊಂದಿದೆ.

ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:

ಪೂರ್ವ : ಪ್ಲಾಟ್ ನಂ. 542	ಪಶ್ಚಿಮ : ಪ್ಲಾಟ್ ನಂ. 544
ಉತ್ತರ : ರಸ್ತೆ	ದಕ್ಷಿಣ : ಪ್ಲಾಟ್ ನಂ. 560

ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)

ದಿನಾಂಕ : 07.06.2024
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಈಡೆಲ್‌ವಾಯಿಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪೆನಿ ಲಿಮಿಟೆಡ್ (''ಇಎಆರ್‌ಸಿ'') (CIN:U67100MH2007PLC174759) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **25.04.2022** ರಂದು ಕರೆದು ಸಾಲಗಾರ **ರವೀಂದ್ರನಾಥ್ ಎಮ್. ಬಿ. ಪ್ರೊಪ್ರೈಟರ್ ಮೆಸರ್ಸ್ M/S ಹೋಮ್ ಲೇನ್ ಮತ್ತು ದಿವ್ಯಾ ಆರ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **02.02.2022** ರ ವರೆಗೆ **ರೂ. 54,29,924.14 (ಐವತ್ನಾಲ್ಕು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಒಂಬೈನೂರಾ ಇಪ್ಪತ್ನಾಲ್ಕು ರೂಪಾಯಿ ಮತ್ತು ಹದಿನಾಲ್ಕು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00411376** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **03.02.2022** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಅನಂತರ, **ಐಎಚ್‌ಎಫ್‌ಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಇಎಆರ್‌ಸಿ ಟ್ರಸ್ಟ್-ಎಸ್‌ಸಿ 439ರ** ಟ್ರಸ್ಟಿ ಆಗಿ ದಿನಾಂಕ **02.11.2023** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು, ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-IV, ಟ್ರಸ್ಟ್‌ನ ('ಆರ್ಸಿಲ್')** ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ** ಜಾಗದಲ್ಲಿ ಆರ್ಸಿಲ್ ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) /ಗ್ಯಾರಂಟರ್(ಗಳ) / ಮಾರ್ಟ್‌ಗೇಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸಾಂಕೇತಿಕ ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **07.06.2024** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **18.04.2024** ರ ವರೆಗೆ **ರೂ. 61,00,067.37 (ಅರವತ್ತೊಂದು ಲಕ್ಷದ ಅರವತ್ತೇಳು ರೂಪಾಯಿ ಮತ್ತು ಮೂವತ್ತೇಳು ಪೈಸೆ ಮಾತ್ರ)** ಮೊತ್ತಕ್ಕೆ, ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **19.04.2024** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೇಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ಪ್ರಾಪರ್ಟಿಯ ಮಾಲೀಕರು: **ದಿವ್ಯಾ ಆರ್.**

ಈ ಸಂಪೂರ್ಣ ಸೈಟ್ ನಂ. 7 ಮತ್ತು 8, ಖಾತೆ ನಂ. 150300701901003962, ಮತ್ತು ಜೊತೆಗೆ ಖಾತೆ ನಂ. 309/7 ಮತ್ತು 8; ಸ್ಥಳದ ವಿಳಾಸ: ನಂಜಪ್ಪಲೇ-ಔಟ್, ಅರಿಶಿನಕುಂಟೆ ವಿಲೇಜ್, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ರೂರಲ್ ಜಿಲ್ಲೆ; ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಕಮಿಶನರ್ ಆಫೀಸಿನ ಆರ್ಡರ್ ದಿನಾಂಕ 19.06.1993ರ ಪ್ರಕಾರ ಸರ್ವೇ ನಂ. 41ರಲ್ಲಿ 10 ಗುಂಟೆ ಜಮೀನನ್ನು ತೆಗೆದು ಈ ಸೈಟ್‌ಗಳಾಗಿ ಪರಿವರ್ತಿಸಲಾಯಿತು. ಆರ್ಡರ್ ವಿವರಗಳು: ಬಿ.ಡಿ.ಎಸ್.ಎ.ಎಲ್.ಎನ್‌ಎಸ್.ಆರ್. (ಎನ್‌ಇ) 94/1992-93, ಕೃಷಿ ಭೂಮಿಯನ್ನು ವಾಸಸ್ಥಳವಾಗಿ ಪರಿವರ್ತಿಸಲಾಯಿತು. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 70 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ. ಒಟ್ಟು ವಿಸ್ತೀರ್ಣ 2800 ಚ. ಅಡಿ. ಇದರ ಗಡಿಗಳು ಹೀಗಿವೆ:

ಪೂರ್ವದಲ್ಲಿ : ರಸ್ತೆ	ಪಶ್ಚಿಮದಲ್ಲಿ : ಖಾಸಗಿ ಪ್ರಾಪರ್ಟಿ
ಉತ್ತರದಲ್ಲಿ : ಬೇರೆಯವರ ಪ್ರಾಪರ್ಟಿ	ದಕ್ಷಿಣದಲ್ಲಿ : ಸೈಟ್ ನಂ. 6

ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)

ದಿನಾಂಕ : 07.06.2024
ಸ್ಥಳ : ಬೆಂಗಳೂರು ರೂರಲ್

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಮಖ, ಶುಕ್ಲಪಕ್ಷ, ಷಷ್ಠಿ, ಯೋಗ ಹರ್ಷಣ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ



ಮನೆಮದ್ದು

ಹಲ್ಲುನೋವು ಕಾಡುತ್ತಿದ್ದರೆ, ಹೀಗೆ ಮಾಡಿ. ಒಣಶುಂಠಿಯನ್ನು ಕೆಂಡದ ಮೇಲೆ ಸುಟ್ಟು, ಪುಡಿ ಮಾಡಿ, ಅದಕ್ಕೆ ಉಪ್ಪಿನಪುಡಿ ಬೆರೆಸಿ, ದಿನವೂ ಹಲ್ಲುಜ್ಜುವುದರಿಂದ ಹಲ್ಲುನೋವು ಮಾಯವಾಗುತ್ತದೆ.

ಸೌಂದರ್ಯ ಸೂತ್ರ

ವಿಟಮಿನ್ ಸಿ, ಆ್ಯಂಟಿ ಆಕ್ಸಿಡೆಂಟ್ ಗುಣವುಳ್ಳ ಕೆಂಪು ಈರುಳ್ಳಿ ಮುಖದ ಮೇಲಿನ ಬಂಗು ನಿವಾರಣೆಗೆ ಪರಿಣಾಮಕಾರಿ. ಈರುಳ್ಳಿಯನ್ನು ಕತ್ತರಿಸಿ ಕಪ್ಪು ಕಲೆಗಳಿರುವ ಭಾಗಕ್ಕೆ ದಿನಕ್ಕೆ 2 ಬಾರಿಯಂತೆ ಹಚ್ಚುತ್ತಾ ಬಂದರೆ ಬಂಗಿನ ಸಮಸ್ಯೆ ದೂರವಾಗಿ, ಮುಖ ಕಾಂತಿಯುತವಾಗುತ್ತದೆ.

ದಿನ ಭವಿಷ್ಯ

ಮೇಷ: ಇಂದು ನೀವು ಎಲ್ಲದರಲ್ಲೂ ಮಿಂಚುತ್ತೀರಿ. ಕೆಲಸದಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ಇದು ಉದ್ಯೋಗಿಗಳಿಗೆ ಯಶಸ್ಸನ್ನು ನೀಡುತ್ತದೆ.

ವೃಷಭ: ಇಂದು, ಹವಾಮಾನದ ಕಾರಣದಿಂದಾಗಿ, ಆರೋಗ್ಯವು ಸ್ವಲ್ಪ ಹದಗೆಡಬಹುದು. ವಿದೇಶಿ ಸಂಪರ್ಕ ಹೊಂದಿರುವ ಜನರು ಹಠಾತ್ ಲಾಭ ಪಡೆಯುವಿರಿ.

ಮಿಥುನ: ಕುಟುಂಬ ಜೀವನದಲ್ಲಿ ಅಸ್ಥಿರತೆ ಉಂಟಾಗ ಬಹುದು. ಪೋಷಕ ರೊಂದಿಗೆ ಕೆಲವು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಹೊಂದಿರಬಹುದು.

ಕಟಕ: ಪ್ರೇಮ ವ್ಯವಹಾರಗಳಿಗೆ ಸಮಯ ಅನುಕೂಲಕರವಾಗಿದೆ. ಇಂದು ಪ್ರಚಾರ ಅಥವಾ ಸಂಬಂಧಿತ ಮಾತುಕತೆಗಳು ನಡೆಯಲಿವೆ.

ಸಿಂಹ: ಮಗನಿಂದ ಇಂದು ಶ್ಲಾಘನೀಯ ಕೆಲಸ ನಡೆಯಲಿದೆ. ಸಂಬಳ ಪಡೆಯುವ ಜನರು ಕಠಿಣ ಪರಿಶ್ರಮದಿಂದ ತಮ್ಮ ಮೇಲಾಧಿಕಾರಿಗಳನ್ನು ತೃಪ್ತಿಪಡಿಸಬಹುದು.

ಕನ್ಯಾ: ಯಾವುದೇ ಹೊಸ ಉದ್ಯಮಕ್ಕೆ ಇಂದು ಉತ್ತಮ ಸಮಯ. ಹಣವನ್ನು ಮರಳಿ ಪಡೆಯುತ್ತೀರಿ ಮತ್ತು ನೀವು ಹಣವನ್ನು ಹೂಡಿಕೆ ಮಾಡಬಹುದು.

ತುಲಾ: ಇಂದು ವಿವಿಧ ಹಂತಗಳಲ್ಲಿ ತೊಂದರೆಗಳನ್ನು ಎದುರಿಸಬೇಕಾಗಬಹುದು. ಗೊಂದಲದ ಪರಿಸ್ಥಿತಿ ಕೆಲಸವನ್ನು ಸಮಯಕ್ಕೆ ಪೂರ್ಣಗೊಳಿಸುವುದನ್ನು ತಡೆಯುತ್ತದೆ.

ವೃಶ್ಚಿಕ: ಸಂಪನ್ಮೂಲಗಳ ಕೊರತೆಯಿಂದಾಗಿ ಕೆಲವು ವ್ಯಾಪಾರ ಯೋಜನೆಗಳನ್ನು ತಡೆಹಿಡಿಯಬೇಕಾಗಬಹುದು. ಸಂಗಾತಿಯೊಂದಿಗೆ ಪ್ರಮುಖ ವಿಷಯಗಳನ್ನು ಹಂಚಿಕೊಳ್ಳುವಿರಿ.

ಧನು: ಹಿರಿಯರು ಮತ್ತು ಸಜ್ಜನರನ್ನು ಗೌರವಿಸುವಲ್ಲಿ ನೀವು ಮುಂಚೂಣಿಯಲ್ಲಿರುತ್ತೀರಿ. ಇಂದು ನಿಮ್ಮ ಕಾರ್ಯಕ್ಷಮತೆ ಉತ್ತಮವಾಗಿರಲಿದೆ.

ಮಕರ: ನಿಮ್ಮ ನಿತ್ಯದ ಕೆಲಸಗಳ ಹೊರತಾಗಿ ಏನನ್ನಾದರೂ ಮಾಡಲು ಪ್ರಯತ್ನಿಸಿದರೆ, ನೀವು ಯಶಸ್ವಿಯಾಗುತ್ತೀರಿ. ಉದ್ಯೋಗಸ್ಥರಿಗೆ ಇಂದು ನೆಮ್ಮದಿಯ ದಿನ.

ಕುಂಭ: ವ್ಯಾಪಾರಸ್ಥರಿಗೆ ದಿನವು ಅಷ್ಟೇನು ಆಶಾದಾಯಕವಾಗಿಲ್ಲ. ಇಂದು ನೀವು ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಬಹುದು.

ಮೀನ: ಇಂದು ಆರ್ಥಿಕವಾಗಿ ಮತ್ತು ವಾಣಿಜ್ಯಿಕವಾಗಿ ಲಾಭದಾಯಕ ಪ್ರಯಾಣಗಳು ಸಾಧ್ಯ. ಇದು ನಿಮಗೆ ಆಹ್ಲಾದಕರ ಅನುಭವ ನೀಡುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ



ಮಳೆಗಾಲದ ಸಂದರ್ಭ ಹಚ್ಚಹಸಿರಿನಿಂದ ಕಂಗೊಳಿಸುತ್ತಿರುವ ಉತ್ತರ ಕನ್ನಡ ಜಿಲ್ಲೆಯ ಮಿರ್ಜಾನ್ ಕೋಟೆಯ ಮನೋಹರ ದೃಶ್ಯ ಇದು. ಮಿರ್ಜಾನ್ ಕೋಟೆ ಗೋಕರ್ಣದಿಂದ ಸುಮಾರು 13 ಕಿ.ಮೀ ದೂರದಲ್ಲಿದೆ. ಗೇರುಸೊಪ್ಪವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸತತ 54 ವರ್ಷಗಳ ಕಾಲ ಆಳ್ವಿಕೆ ನಡೆಸಿದ ಕಾಳು ಮೆಣಸಿನ ರಾಣಿ ಖ್ಯಾತಿಯ ರಾಣಿ ಚನ್ನಭೈರಾದೇವಿ ಈ ಕೋಟೆ ಕಟ್ಟಿಸಿದ್ದಳು. ಮೀರ್ಜಾನ್ ಕೋಟೆ ಅದ್ಭುತವಾದ ನಿರ್ಮಾಣ ಕೌಶಲ್ಯಕ್ಕೆ ಹೆಸರಾಗಿದೆ. ಕೋಟೆಯು ಸುಮಾರು 11.5 ಎಕರೆಗಳಷ್ಟು ವಿಸ್ತಾರವಾಗಿದೆ ಮತ್ತು ಇದನ್ನು ನಿರ್ಮಿಸಲು ಸ್ಥಳೀಯವಾಗಿ ದೊರೆಯುವ ಕೆಂಪು ಕಲ್ಲುಗಳನ್ನು ಬಳಸಲಾಗಿದೆ. ಕೋಟೆಯು ನಾಲ್ಕು ದ್ವಾರಗಳನ್ನು ಹೊಂದಿದ್ದು, ಪ್ರತಿಯೊಂದು ದ್ವಾರದಲ್ಲು ಅಗಲವಾದ ಮೆಟ್ಟಿಲುಗಳಿವೆ. ಕೋಟೆಯ ಒಳಗಡೆ ಒಂದು ಮುಖ್ಯ ದ್ವಾರ, ಒಂದು ಗುಪ್ತ ದ್ವಾರ, ಒಂಬತ್ತು ಬಾವಿ, ಹಾಳು ಬಿದ್ದ ದೊಡ್ಡ ದರ್ಬಾರ್ ಹಾಲ್ ಮತ್ತು ಬಹಳ ವಿಸ್ತಾರವಾದ ಮಾರುಕಟ್ಟೆ ಜಾಗವಿದೆ.

ಸಮಯ ಪ್ರಜ್ಞೆ ಇಲ್ಲದೆ ಕೈಚೆಲ್ಲದಿರಿ ಅವಕಾಶಗಳ

ಒಂದು ಹಳ್ಳಿಯಲ್ಲಿ ಒಬ್ಬ ಮರಕಡಿಯುವವನು ತನ್ನ ಹೆಂಡತಿಯೊಂದಿಗೆ ಗುಡಿಸಲಿನಲ್ಲಿ ವಾಸಿಸುತ್ತಿದ್ದನು. ಬಡವರಾದರೂ ಇಬ್ಬರೂ ನೆಮ್ಮದಿಯ ಜೀವನ ನಡೆಸುತ್ತಿದ್ದರು.

ಕೆಲವು ಶ್ರೀಮಂತರು ಅವರ ಗುಡಿಸಲಿನ ಬಳಿ ಮನೆಗಳನ್ನು ಕಟ್ಟಿಕೊಂಡರು. ಅವರ ಐಶಾರಾಮಿ ಜೀವನವನ್ನು ನೋಡಿದ ಇವರಿಗೂ ಅವರಂತೆ ಬದುಕುವ ಆಸೆಯಾಯಿತು. 'ಕೆಲವರು ಹಣವಂತರಾಗೇ ಹುಟ್ಟುತ್ತಾರೆ, ಹಣವಿದ್ದರೆ ನಮಗೆ ಬೇಕಾದ ಎಲ್ಲವನ್ನೂ ಖರೀದಿಸಿ ಆರಾಮವಾಗಿರಬಹುದು' ಹೆಂಡತಿ ದುಃಖದಿಂದ ಹೇಳಿದಳು.

'ಈ ಶ್ರೀಮಂತರಿಗೆ ಸುಖವಾಗಿರುವುದು ಹೇಗೆ ಅಂತ ತಿಳಿದಿರುವುದಿಲ್ಲ, ನನ್ನಲ್ಲಿ ದುಡ್ಡಿದ್ದರೆ ಅದೆಷ್ಟು ಸುಖವಾಗಿ ಇರುತ್ತಿದ್ದೇನೋ' ಎಂದನು ಗಂಡ.

'ಹಿಂದಿನ ಕಾಲದಲ್ಲಿ ದೇವರುಗಳು ಕಾಣಿಸಿಕೊಂಡು ಬಯಸಿದ ವರಗಳನ್ನು ಕೊಡುತ್ತಿದ್ದರಂತೆ, ಅದೇ ರೀತಿ ಯಾವುದಾದರೂ ದೇವತೆ ಬಂದು ನಮಗೆ ವರವನ್ನು ನೀಡಿದರೆ ಎಷ್ಟು ಚೆನ್ನ!' ಎಂದಳು ಹೆಂಡತಿ.

ಅವಳ ಮಾತು ಮುಗಿಸುವ ಮುನ್ನವೇ ಹಠಾತ್ತನೆ ಗುಡಿಸಲಿನಲ್ಲಿ ಒಬ್ಬ ಹೆಂಗಸು ಕಾಣಿಸಿಕೊಂಡಳು. ಅವಳನ್ನು ಕಂಡರೆ ಗೊತ್ತಾಗುತ್ತಿತ್ತು, ಆಕೆ ಸಾಮಾನ್ಯ ಮನುಷ್ಯಳಲ್ಲವೆಂದು.

'ನಾನು ದೇವತೆ. ನೀವು ವರಗಳಿಗಾಗಿ ಹಾತೊರೆಯುತ್ತಿರುವಿರಿ, ನಾನು ನಿಮಗೆ ಕೇವಲ ಮೂರು ವರಗಳನ್ನು ನೀಡುತ್ತೇನೆ. ಅದರಿಂದಲೇ ತೃಪ್ತರಾಗಿರಿ' ಎಂದು ಹೇಳುತ್ತಾ ದೇವಿ ಅಂತರ್ಧಾನಳಾದಳು.

ಆಕಸ್ಮಿಕವಾದ ಈ ಘಟನೆಯಿಂದ ಆಘಾತಕ್ಕೊಳಗಾಗಿದ್ದ ಅವರು ತಮಗೇನು ಬೇಕು ಎಂಬ ಗೊಂದಲದಲ್ಲಿದ್ದರು. 'ನನ್ನನ್ನು ಕೇಳಿದರೆ, ನಾವು ಶ್ರೀಮಂತರಾಗಲು ಬಯಸಿದರೆ ಉತ್ತಮ' ಎಂದು ಹೆಂಡತಿ ಉತ್ಸಾಹದಿಂದ ಹೇಳಿದಳು.

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

'ನಿನ್ನ ಮುಖ! ಹಣವಿದ್ದರೆ ಸಾಕಾ, ರೋಗ-ರುಜಿನಗಳು ಬರುವುದಿಲ್ಲವೆ? ಆದ್ದರಿಂದ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯ ಇದ್ದರೆ ಒಳ್ಳೆಯದು' ಎಂದನು ಗಂಡ. 'ಅವಸರ ಮಾಡುವುದು ಬೇಡ ಆಲೋಚಿಸಿ ವರಗಳ ಪಡೆಯೋಣ!' ಎಂದು ಇಬ್ಬರೂ ಅಂದುಕೊಂಡರು

ಹೆಂಡತಿ ಅಡುಗೆ ಮಾಡಲು ಒಲೆ ಹಚ್ಚುತ್ತಾ, ಇಂದು ಊಟಕ್ಕೆ ಮೀನು ಇದ್ದರೆ ಒಳ್ಳೆಯದಿತ್ತಲ್ಲ ಎಂದು ಗಂಡನಿಗೆ ಅಂದಳು.

ಹಾಗೆ ಹೇಳುತ್ತಿದ್ದಂತೆ ಅವಳ ಮುಂದೆ ಒಂದಷ್ಟು ಮೀನುಗಳು ಬಿದ್ದವು.

ಮೂರು ವರಗಳಲ್ಲಿ ಒಂದು ವರ ಮುಗಿಯಿತು ಎಂದು ಅರಿತ ಗಂಡ, 'ಪಾಪಿಯವಳೇ ಎಂತಾ ಕೆಲಸ ಮಾಡಿಬಿಟ್ಟೆ? ಈ ಮೀನೆಲ್ಲಾ ನಿನ್ನ ಕೊರಳಿಗೆ ಹಾರವಾಗಿ ಬಿದ್ದಿದ್ದರೆ ಚೆನ್ನಾಗಿತ್ತಲ್ಲವೇ !' ಕೋಪದಿಂದ ಅವಳನ್ನು ಮೂದಲಿಸುತ್ತ ಬೈದನು.

ಮರುಕ್ಷಣವೇ ಆ ಮೀನುಗಳೆಲ್ಲ ಹಾರವಾಗಿ ರೂಪುಗೊಂಡು ಹೆಂಡತಿಯ ಕೊರಳನ್ನು ಅಲಂಕರಿಸಿದವು.

'ನೀನು ಮಾಡಿದ ಘನ ಕಾರ್ಯವಾದರೂ ಏನು? ನಾನು ಒಂದು ವರವನ್ನು ಹಾಳುಮಾಡಿದರೆ, ನೀನು ಇನ್ನೊಂದು ವರವನ್ನು ಹಾಳು ಮಾಡಿದಿ' ಎನ್ನುತ್ತಾ ಅವಳು ತನ್ನ ಕುತ್ತಿಗೆಯಲ್ಲಿದ್ದ ಮೀನಿನ ಹಾರವನ್ನು ತೆಗೆದುಹಾಕಲು ಪ್ರಯತ್ನಿಸಿದಳು, ಅದು ಕೊರಳಿಗೆ ಅಂಟಿಕೊಂಡಿದ್ದು ಅದನ್ನು ತೆಗೆಯಲು ಆಗಲಿಲ್ಲ. 'ಛೀ, ಛೀ! ನೀನು ಮೀನುಗಳನ್ನು ಊಟಕ್ಕೂ ಇಲ್ಲದಂತೆ ಮಾಡಿಬಿಟ್ಟೆ, ನನಗೆ ಜೀವ ಹೋದಂತಾಗುತ್ತಿದೆ, ಹೇಗಾದರೂ ಈ ಮೀನುಗಳ ಹಾರವನ್ನು ನನ್ನ ಕೊರಳಿಂದ ತೆಗೆ, ಈ ವರಗಳ ಫಜೀತಿಯೇ ಬೇಡ ' ಎಂದಳು ಪತ್ನಿ. ಅವಳು ಒದ್ದಾಡುತ್ತಿದ್ದುದನ್ನು ಕಂಡ ಅವನು ವಿಧಿಯಿಲ್ಲದೆ ತನ್ನ ಹೆಂಡತಿಯ ಕೊರಳಲ್ಲಿರುವ ಹಾರವು ಕಳಚಲಿ ಎಂದು ಬಯಸಿದನು. ತಕ್ಷಣ ಮೀನಿನ ಹಾರ ಕೆಳ ಬಿದ್ದಿತು. ಗಂಡ ಹೆಂಡತಿಯರ ಮೂರ್ಖತನದಿಂದ ಮೂರನೆಯ ವರವೂ ವ್ಯರ್ಥವಾಯಿತು.

ಕೆಲವೊಮ್ಮೆ ಬದುಕು ನಮಗೆ ಕೊಡುವ ಅವಕಾಶಗಳನ್ನು ಸರಿಯಾದ ಸಮಯದಲ್ಲಿ ಸಮರ್ಥವಾಗಿ ಬಳಸಿಕೊಳ್ಳಲು ನಮಗೆ ಸರಿಯಾದ ಸಮಯ ಪ್ರಜ್ಞೆಯೇ ಇಲ್ಲದಂತಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮಗೆ ಜೀವನದಲ್ಲಿ ಬೇಕಾಗಿರುವುದು ಯಾವ ಸಮಯದಲ್ಲಿ ಯಾವ ನಿರ್ಧಾರವನ್ನು ಮಾಡಿ ಹೇಗೆ ನಮ್ಮ ಜೀವನದಲ್ಲಿ ಒಳಿತನ್ನು ಬರಮಾಡಿಕೊಳ್ಳಬೇಕು ಎನ್ನುವ ಸೂಕ್ಷ್ಮಪ್ರಜ್ಞೆ. ಇದಕ್ಕಾಗಿ ಭಗವಂತನ ಕೃಪಾಕಟಾಕ್ಷ ಹೊಂದಿದ್ದರೆ ಜೀವನದಲ್ಲಿ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ಮುಂದೆ ಹೆಜ್ಜೆ ಇಡಲು ಅನುಕೂಲವಾಗುತ್ತದೆ. ತಾಳ್ಮೆ ಇರಲಿ ಬದುಕು ಎಲ್ಲರಿಗೂ ಅವಕಾಶಗಳನ್ನು ನೀಡುತ್ತದೆ.

ಒಂದೊಳ್ಳೆ ಮಾತು

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಯಾವ ರಾಜ್ಯ ಸರ್ಕಾರವು ಇತ್ತೀಚೆಗೆ ರಾಜ್ಯದಲ್ಲಿ ಗ್ರೀನ್ ಹೈಡ್ರೋಜನ್ ನೀತಿಯನ್ನು ಅನುಮೋದಿಸಿದೆ?

- ಎ. ಆಂಧ್ರ ಪ್ರದೇಶ
- ಬಿ. ಕರ್ನಾಟಕ
- ಸಿ. ತಮಿಳುನಾಡು.
- ಡಿ. ಉತ್ತರ ಪ್ರದೇಶ

ಉತ್ತರ : ಡಿ. ಉತ್ತರ ಪ್ರದೇಶ

ಮಾಹಿತಿ

ಗ್ರೀನ್ ಹೈಡ್ರೋಜನ್ ನೀತಿ ಮತ್ತು ಎನ್‌ಟಿಪಿಸಿ ಸಹಯೋಗದಲ್ಲಿ 8,624 ಕೋಟಿ ರೂಪಾಯಿ ವೆಚ್ಚದಲ್ಲಿ ಅನ್ಪಾರಾದಲ್ಲಿ 800 ಮೆಗಾವ್ಯಾಟ್‌ನ ಎರಡು ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆಗೆ ಉತ್ತರ ಪ್ರದೇಶ ಸರ್ಕಾರ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಗ್ರೀನ್ ಹೈಡ್ರೋಜನ್ ನೀತಿಯನ್ನು 5 ವರ್ಷಗಳವರೆಗೆ ನಿಗದಿಪಡಿಸಲಾಗಿದೆ. ಈ ನೀತಿಯ ಉದ್ದೇಶವನ್ನು ಸಾಧಿಸಲು, ಗ್ರೀನ್ ಹೈಡ್ರೋಜನ್ ಮಿಷನ್ ಮತ್ತು ಭಾರತ ಸರ್ಕಾರದ ನೀತಿಗಳಿಗೆ ಅನುಗುಣವಾಗಿ ರಾಜ್ಯದಲ್ಲಿ ಹಸಿರು ಹೈಡ್ರೋಜನ್ ಬಳಕೆ ಉತ್ತೇಜಿಸುವುದು, ಸಂಶೋಧನೆ, ಅಭಿವೃದ್ಧಿ ಮತ್ತು ತಾಂತ್ರಿಕ ನಾವೀನ್ಯತೆ ಚಟುವಟಿಕೆಗಳನ್ನು ನಡೆಸಲು ನಾಲ್ಕು ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯನ್ನು ಸರಕಾರ ಹೊಂದಿದೆ.

ವಿಜ್ಞಾನ ವಿಸ್ಮಯ

ಕೆ. ನಟರಾಜ್

ವಿಶ್ವದ ಬಗ್ಗೆ ನಮಗೆ ಗೊತ್ತಿರುವುದೆಷ್ಟು? ಇದುವರೆಗೂ ಖಗೋಳ ಶಾಸ್ತ್ರಜ್ಞರು- ನಕ್ಷತ್ರ, ಗ್ರಹಗಳು, ಗ್ಯಾಲಕ್ಸಿಗಳು, ಇತರೆ ಆಕಾಶಕಾಯಗಳ ಬಗ್ಗೆ ಏನನ್ನು ಕಂಡುಹಿಡಿದಿದ್ದಾನೋ ಅದು ಕೇವಲ ವಿಶ್ವದ ಶೇಕಡಾ 5ರಷ್ಟು ಮಾತ್ರ. ವಿಶ್ವದ ಬಗ್ಗೆ ನೋಡುವುದು, ತಿಳಿಯುವುದು ಬೇಕಾದಷ್ಟಿದೆ ಎನ್ನುತ್ತಾರೆ ವಿಜ್ಞಾನಿಗಳು.

ಕಾಲದೊಂದಿಗಿನ ನಮ್ಮ ಪಯಣ

ಎಷ್ಟೋ ಇಂಗ್ಲಿಷ್ ಮೂವೀಗಳಲ್ಲಿ ಕಾಲದ ಹಿಂದಿನ ಪಯಣ ಸಾಧ್ಯ ಎಂದು ತೋರಿಸಲಾಗುತ್ತಿದೆ. ಆದರೆ ಮಾನವರಾದ ನಮ್ಮಿಂದ ಅದು ಸಾಧ್ಯವಿಲ್ಲದ ಮಾತು.

ಬೆರಗುಗೊಳಿಸುವ ಖಗೋಳ

ಐನ್‌ಸ್ಟೈನ್‌ರ ಪ್ರಕಾರ ಕಾಲ, ಅವಕಾಶ ಹಾಗೂ ಗುರುತ್ವಗಳು ಒಂದಕ್ಕೊಂದು ಸಂಬಂಧಿಸಿವೆ ಎಂಬುದು ನಮಗೆ ಗೊತ್ತಿದೆ. ಇದನ್ನು ಸರಳವಾಗಿ ವಿವರಿಸಿ ಹೇಳುವುದಾದರೆ: ನೀವು ವೇಗವಾಗಿ ಹೋದಂತೆಲ್ಲಾ, ಬೇರೆ ವಸ್ತುಗಳ ಚಲನೆ ನಿಧಾನವಾದಂತೆ ಭಾಸವಾಗುತ್ತದೆ! ಒಂದು ಅಂತಾ ರಾಷ್ಟ್ರೀಯ ಸ್ಪೇಸ್ ನಿಲ್ದಾಣ 28,163 ಮೈಲಿ ವೇಗದಲ್ಲಿ ಚಲಿಸುತ್ತಿದೆ ಹಾಗೂ ಅದರ ಮೇಲೆ ನೀವು ಕುಳಿತು ಚಲಿಸುತ್ತಿರುವಿರಿ ಎಂದಾದರೆ, ನಿಮ್ಮ ಕಾಲ, ಭೂಮಿ ಯ ಮೇಲಿನ ಕಾಲಕ್ಕಿಂತ ಬೇರೆಯ ದರದಲ್ಲೇ ಕಂಡು ಬರುತ್ತದೆ! ಆಗ ನಿಮ್ಮ ನಿಮಿಷ, ಗಂಟೆ, ದಿನ ಹಾಗೂ ವರ್ಷಗಳೇ ವ್ಯತ್ಯಯವಾಗುತ್ತವೆ!

ವಿಶ್ವದ ಅತ್ಯಂತ ದೊಡ್ಡ ನಕ್ಷತ್ರ

ವಿಶ್ವದಲ್ಲೇ ಅತ್ಯಂತ ದೊಡ್ಡ ನಕ್ಷತ್ರದ ಹೆಸರು, ಯು-ವೈ ಸ್ಕೂಟಿ ಎಂದು. ಇದು ನಮ್ಮ ಆಕಾಶಗಂಗೆ ಲಾಕ್ಸಿಯ ಮಧ್ಯ ಭಾಗದಲ್ಲಿ ಕಂಡುಬರುತ್ತದೆ. ಭೂಮಿಯಿಂದ 9,500 ಬೆಳಕಿನ ವರ್ಷಗಳ ದೂರದಲ್ಲಿದೆ. ಇದರ ಫ ತ್ರಿಜ್ಯವೇ ಸೂರ್ಯನ ತ್ರಿಜ್ಯದ 1,700 ಪಟ್ಟು ಹೆಚ್ಚಿದೆ. ಅಂದರೆ ನಮ್ಮ 5 ದಶಲಕ್ಷ ಸೂರ್ಯರನ್ನು ಈ ಯು-ವೈ ಸ್ಕೂಟಿ ನಕ್ಷತ್ರದೊಳಗೆ ತುಂಬಬಹುದಂತೆ!

- **ನಮ್ಮ ಸೂರ್ಯ ಒಂದು ಸಣ್ಣ ಚುಕ್ಕೆ ;** ಇದು ಅಕ್ಷರಶಃ ಸತ್ಯ! ನಮ್ಮ ಸೂರ್ಯ ಈ ವಿಶ್ವದಲ್ಲಿ ಒಂದು ಸಾಧಾರಣ ನಕ್ಷತ್ರ. ನಮ್ಮ ಕಣ್ಣಿಗೆ ಪ್ರಕಾಶಮಾನವಾಗಿ ಕಾಣುವ ಸಿರಿಯಸ್ ನಕ್ಷತ್ರ ಸೂರ್ಯನ ಎರಡು ಪಟ್ಟು ದೊಡ್ಡದಾಗಿದ್ದಾನೆ. ನಮ್ಮ ಗೆಲಾಕ್ಸಿಯಲ್ಲಿ ಸೂರ್ಯನ ನೂರು, ಸಾವಿರ ಪಟ್ಟು ದೊಡ್ಡದಾದ ನಕ್ಷತ್ರಗಳೇ ಬಹಳ ಸಂಖ್ಯೆಯಲ್ಲಿವೆ. ಇನ್ನು ನಮ್ಮ ಭೂಮಿಯ ಗಾತ್ರವನ್ನು ಹೇಗೆ ಹೇಳುವುದು? ನಮ್ಮ ಸೂರ್ಯನಲ್ಲಿ 1,300,000 ಭೂಮಿಗಳನ್ನು ತುಂಬಬಹುದಂತೆ!
- **ಅದ್ಭುತ ಗಾತ್ರದ ಕಪ್ಪುರಂಧ್ರ;** ನಮ್ಮ ವಿಜ್ಞಾನಿಗಳ ಸಿದ್ಧಾಂತದ ಪ್ರಕಾರ ಕಪ್ಪುರಂಧ್ರಗಳು ನಮ್ಮ ಗೆಲಕ್ಸಿಯ ಕೇಂದ್ರ ಭಾಗದಲ್ಲಿ ಕೇಂದ್ರೀಕೃತಗೊಂಡಿವೆ. ಅಂತಹ ಒಂದು ದೈತ್ಯ ಗೆಲಾಕ್ಸಿ ಸೆಗೆಟೇರಿಯಸ್-ಎ. ಇದು ನಮ್ಮಿಂದ 27,000 ಬೆಳಕಿನ ವರ್ಷ ದೂರದಲ್ಲಿದೆ.
- **ಚಂದ್ರನ ಹುಟ್ಟು ಭೂಮಿಯಿಂದ:** ಸುಮಾರು 4.5 ಬಿಲಿಯನ್ ವರ್ಷಗಳ ಹಿಂದೆ ಭೂಮಿಯನ್ನು ಇನ್ನೊಂದು ಆಕಾಶಕಾಯ ಢಿಕ್ಕಿ ಹೊಡೆದ ಪರಿಣಾಮವಾಗಿ ಭೂಮಿಯ ಒಂದು ತುಣುಕು ಬೇರ್ಪಟ್ಟು ಚಂದ್ರನಾಗಿ ರೂಪುಗೊಂಡಿದೆಯಂತೆ.

ಇದಕ್ಕೆ ವಿಜ್ಞಾನಿಗಳು ಕೊಡುವ ಪುರಾವೆ- ಭೂಮಿಯ ಮೇಲಿನ ಬಹಳಷ್ಟು ವಸ್ತುಗಳು ಚಂದ್ರನಲ್ಲೂ ಕಂಡು ಬಂದಿರುವುದು!

ಪದಬಂಧ



ಎಡದಿಂದ ಬಲಕ್ಕೆ:

2. ಇಪ್ಪತ್ತನಾಲ್ಕು ಘಂಟೆಗಳ ಅವಧಿ (3)
4. ಮತ್ತೊಬ್ಬರನ್ನು ಸೋಲಿಸು ಎಂದರ್ಥ (3)
6. ಮಣಿಯೊಂದಿಗೆ ಬಂದಿರುವ ಚೆಲುವೆ (3)
7. ಅನ್ಯರಲ್ಲಿ ಬೇಡುವವನು (3)
8. ಪಾವತಿಪತ್ರಕ್ಕೆ ಇನ್ನೊಂದು ಹೆಸರು (3)
10. ತಿರುಗಿ ಬಂದಿರುವ ಸಂಬಳ (3)
14. ಹೊಡೆಯುವುದು ಎಂದರ್ಥ (3)
16. ದ್ರವರೂಪದ ಲೋಹವನ್ನು ಅಚ್ಚಿಗೆ ಎರೆಯುವಿಕೆ (3)
19. ಹತ್ತಿಯಿಂದ ಮಾಡಿದ ಮೇಲುಹೊದಿಕೆ (3)
20. ತಾವರೆಗೆ ಮತ್ತೊಂದು ಹೆಸರು (3)
21. ಧಾನ್ಯವನ್ನು ಸಂಗ್ರಹಿಸುವ ಸ್ಥಳ (3)
22. ತಿರುಗಿ ಬಂದಿರುವ ಟಿಸಿಲು (3)

ಮೇಲಿನಿಂದ ಕೆಳಕ್ಕೆ:

1. ಸಮಯ ಸೂಚಿಸುವ ಯಂತ್ರ (4)
2. ಜಗವ ಬೆಳಗುವ ಸೂರ್ಯನಿಗೆ ಮತ್ತೊಂದು ಹೆಸರು (4)
3. ವಿದ್ಯಾ ದೇವತೆ ಈಕೆ (4)
4. ಬೆಲೆಬಾಳುವ ರತ್ನಗಳಿಂದ ಮಾಡಿದ ಮಾಲೆ (4)
5. ಕಾಮನ ಬಿಲ್ಲಿಗೆ ಒಂದು ಚಂದದ ಹೆಸರು (4)
9. ದೇಶದ ಗಡಿ (2)
11. ಎಣ್ಣೆಯನ್ನು ಅಥವಾ ಕಬ್ಬಿನ ರಸವನ್ನು ತೆಗೆಯುವ ಯಂತ್ರವಿದು (2)
12. ಮಳೆ ತರಬಹುದಾದ ಮೇಘವಿದು (2)
13. ವಿಷಯವೊಂದರ ತಿರುಳು (2)
14. ಯಾವಾಗಲೂ ಇರುವಂತಹದ್ದಲ್ಲ, ಹಂಗಾಮಿ (4)
15. ನರ್ತಿಸುವ ಶಿವನೇ? (4)
16. ಅನ್ಯರಿಂದ ಪಡೆದ ಸಾಲ (4)
17. ಲೆಕ್ಕ ಬರೆಯುವವನು (4)
18. ಗಿಡವೊಂದರ ಮುಖ್ಯವಾದ ಬೇರು (4)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: ದಿನಾಂಕ 2. ಕಣ್ಣುತಿರುಗು 5. ಕನಸಿನಗಂಟು 7. ಡಾಕು 9. ಚಾತಕ 10. ಕಲಿಲ 14. ರಿಪು 15. ತಿಲಾಂಜಲಿಬಿಡು 17. ಸಮರವೀರ 18. ಕೊರಡು

ಮೇಲಿನಿಂದ ಕೆಳಕ್ಕೆ: ದಿನಕರ 2. ಕತುಗಂಟ 3. ತಿಪ್ಪೆ 4. ಗುರುಕುಲ 6. ಸಿರಿತನ 8. ಗಲಿಬಿಲಿ 11. ಪರಿಹಾಸ 12. ತಲಾಂತರ 13. ಸುಡುಗಾಡು 16. ಕ್ಷಾರ

ದಿನಕ್ಕೊಂದು ಮಾಹಿತಿ

ಆಸ್ಟ್ರೇಲಿಯಾ ಚಂದ್ರನಿಗಿಂತ ವಿಶಾಲ



ಆಸ್ಟ್ರೇಲಿಯಾ ಚಂದ್ರನಿಗಿಂತ ವಿಶಾಲವಾಗಿದೆ. ಚಂದ್ರನು 3400 ಕಿಮೀ ವ್ಯಾಸದಲ್ಲಿ ಕುಳಿತಿದ್ದರೆ, ಪೂರ್ವದಿಂದ ಪಶ್ಚಿಮಕ್ಕೆ ಆಸ್ಟ್ರೇಲಿಯಾದ ವ್ಯಾಸವು ಸುಮಾರು 4000 ಕಿಮೀ. ಹಾಗಂತ ಆಸ್ಟ್ರೇಲಿಯಾವು ಚಂದ್ರನಿಗಿಂತ ದೊಡ್ಡದಾಗಿದೆ ಎಂದು ಅರ್ಥವಲ್ಲ ಆಸ್ಟ್ರೇಲಿಯಾ ಸಮತಟ್ಟಾಗಿದ್ದು ಅದರ ಮೇಲ್ಮೈ 7,617,930 ಚದರ ಕಿ.ಮೀ. ಚಂದ್ರನ ಮೇಲ್ಮೈ ದುಂಡಗಿದ್ದು, 37,940,000 ಚದರ ಕಿ.ಮೀ.ವಿಸ್ತೀರ್ಣ ಹೊಂದಿದೆ. ಉಳಿದಂತೆ ರಷ್ಯಾ, ಕೆನಡಾ, ಚೀನಾ, ಅಮೆರಿಕಾ ಮತ್ತು ಬ್ರೆಜಿಲ್ ನಂತರ ಆಸ್ಟ್ರೇಲಿಯಾವು ವಿಶ್ವದ ಆರನೇ ದೊಡ್ಡ ದೇಶವಾಗಿದೆ.

ಪುಸ್ತಕ ಲೋಕ



ಆರ್ಟ್ ಆಫ್ ಹ್ಯಾಪಿನೆಸ್

ದಲೈ ಲಾಮಾ ಬರೆದಿರುವ ಆರ್ಟ್ ಆಫ್ ಹ್ಯಾಪಿನೆಸ್, ನಮ್ಮ ಜೀವನದ ಮುಖ್ಯ ಉದ್ದೇಶ ಸಂತೋಷದ ಕಡೆಗೆ ಎನ್ನುವ ಸಂದೇಶವನ್ನು ಸಾರುತ್ತದೆ. ಇದು ಮನೋವಿಜ್ಞಾನ ಮತ್ತು ಅಧ್ಯಾತ್ಮದ ಒಳನೋಟ ಹೊಂದಿರುವ ಕೈಪಿಡಿಯು ಹೌದು. ಬದುಕಿನ ಮೂಲ ಗುರಿಯೇನು, ಸಂತೋಷದ ಮಾರ್ಗಗಳು ಯಾವುವು? ಇವನ್ನೆಲ್ಲಾ ಈ ಪುಸ್ತಕದಲ್ಲಿ ಚೆಂದವಾಗಿ ವಿವರಿಸಿದ್ದಾರೆ. ಮನೋವೈದ್ಯ ಹೊವಾರ್ಡ್ ಇ ಕಟ್ಲರ್, ಈ ಕೃತಿಯ ಸಹ ಲೇಖಕರು. ಓದುತ್ತಾ ಹೋದಂತೆ ಆಳವಾದ ಪ್ರಭಾವ ಬೀರುವ ಈ ಕೃತಿಯು ಸುಂದರ ಬದುಕಿಗೆ ಮಾರ್ಗದರ್ಶಿ.

ಟ್ವೀಟ್‌ಮೆಂಟ್

ಸೋಜಲ್ ಸೂದ್: ಈಗ ತಾನೇ ರೂ. 193 ಕೊಟ್ಟು ಏರ್‌ಪೋರ್ಟ್ ಅಲ್ಲಿ ಮ್ಯಾಗಿ ತೊಗೊಂಡೆ.
ಆದ್ರೆ, ಮ್ಯಾಗಿ ಅಂಥ ಪದಾರ್ಥವನ್ನು ಅಷ್ಟೊಂದು ಹೆಚ್ಚಿನ ಬೆಲೆಗೆ ಮಾರುವುದಾದರೂ ಏಕೆ?!

ದೆಬ್ಜಿತ್ ಬಿ: ನಂಗನಿಸೋ ಪ್ರಕಾರ ಆ ಮ್ಯಾಗಿಯನ್ನ ವಿಮಾನಕ್ಕೆ ಬಳಸುವ ಇಂಧನದಿಂದ ಮಾಡಿರಬಹುದು!
ಯಾರಿಗೆ ಗೊತ್ತು!

ಕಲಿಯುಗದ ಅಮೃತ ಜೇನುತುಪ್ಪ

ಕ್ಷೇಮಸಮಾಚಾರ

ಪುರುಷೋತ್ತಮ ವೆಂಕಿ, ಚಿತ್ರದುರ್ಗ

ನೈಸರ್ಗಿಕವಾಗಿ ಸಿಗುವ ವಸ್ತುಗಳಿಗೆ ಅದರದ್ದೇ ಆದ ಹಿರಿಮೆ ಇದೆ. ಅದಕ್ಕೊಂದಷ್ಟು ಪುರಾಣ, ಇತಿಹಾಸಗಳೂ ಇರುತ್ತದೆ. ಇಂತಹ ಶ್ರೇಷ್ಠತೆಯೊಂದಿಗೆ ಗುರುತಿಸಿಕೊಂಡಿರುವುದರಲ್ಲಿ ಜೇನುತುಪ್ಪ ಕೂಡ ಒಂದು. ಜೇನುತುಪ್ಪ ತಿನ್ನಲು ಎಷ್ಟು ಸವಿಯೋ ಅಷ್ಟೇ ರೋಗನಿರೋಧಕ ಶಕ್ತಿಯನ್ನು ಹೊಂದಿದೆ.

ವೈದ್ಯಕೀಯ ಮೌಲ್ಯದ ಜತೆಗೆ ಗುರುತಿಸಿಕೊಂಡ ಜೇನುತುಪ್ಪ, ಆಯುರ್ವೇದದ ಪ್ರಮುಖ ಭಾಗವೂ ಹೌದು.

ಬೆಚ್ಚಗಿನ ನೀರು ಮತ್ತು ಜೇನುತುಪ್ಪ:

ಜೇನುತುಪ್ಪವನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಬೆರೆಸಿ ಕುಡಿಯುವುದರಿಂದ ರಕ್ತಕಣಗಳ ಮೇಲೆ ಪ್ರಯೋಜನಕಾರಿ ಪರಿಣಾಮ ಬೀರುತ್ತದೆ. ರಕ್ತದ ಹಿಮೋಗ್ಲೋಬಿನ್ ಮಟ್ಟವನ್ನು ಹೆಚ್ಚಿಸುತ್ತದೆ. ಆ ಮೂಲಕ ರಕ್ತಹೀನತೆಯನ್ನು ಕಡಿಮೆ ಮಾಡುತ್ತದೆ. ಯೋಗಾಭ್ಯಾಸ ಮಾಡುವ ಮೊದಲು ನೀರಿನಲ್ಲಿ ಜೇನುತುಪ್ಪವನ್ನು ಬೆರೆಸಿ ಕುಡಿಯುವುದರಿಂದ ದೈಹಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಇದರ ಜತೆಗೆ ದೇಹದ ತೂಕ ನಿರ್ವಹಣೆಗೆ ಅನುಕೂಲವಾಗಿದೆ.

ಸೋಂಕು ನಿವಾರಕ;

ಜೇನುತುಪ್ಪ ಬ್ಯಾಕ್ಟೀರಿಯಾ ವಿರೋಧಿ ಮತ್ತು ನಂಜು ನಿರೋಧಕವಾಗಿದೆ. ಗಾಯಗಳಲ್ಲಿನ ಬ್ಯಾಕ್ಟೀರಿಯಾಗಳನ್ನು ಇದು ದೂರ ಮಾಡುತ್ತದೆ. ಈ ಕುರಿತು ಹಲವು ಅಧ್ಯಯನಗಳನ್ನು ನಡೆಸಿದ್ದು 59 ರೋಗಿಗಳ ಗಾಯ ಮತ್ತು ಕಾಲಿನ ಹುಣ್ಣುಗಳಿಗೆ ಸಂಸ್ಕರಿಸಿದ ಜೇನುತುಪ್ಪದೊಂದಿಗೆ ಚಿಕಿತ್ಸೆ ನೀಡಿತು. ಒಂದು ವಾರದಲ್ಲಿ ಸೋಂಕಿತ ಗಾಯಗಳು ಕ್ರಿಮಿರಹಿತವಾದವು. ಜೇನುತುಪ್ಪವು ಸೋಂಕು ಹರಡುವಿಕೆಯ ಅನೇಕ ಹಂತಗಳಲ್ಲಿ ಹೋರಾಡುತ್ತದೆ. ಈ ಕಾರಣಕ್ಕೆ ಕೊರೊನಾ ಕಾಲದಲ್ಲಿ ಇದರ ಬಳಕೆಯನ್ನು ಹೆಚ್ಚು ಮಾಡಲು ಸೂಚಿಸಲಾಗಿತ್ತು.

ಇನ್ನಿತರ ಅನುಕೂಲ:

ಕಫ, ಶೀತ, ಹೃದಯ ಸಂಬಂಧಿ ಸಮಸ್ಯೆಗಳು ಮತ್ತು ಅಸ್ತಮಾದಂತಹ ಕಾಯಿಲೆಗಳನ್ನು ಎದುರಿಸಲು ದಿನನಿತ್ಯ ಜೇನುತುಪ್ಪದ ಸೇವನೆಯನ್ನು ಸೂಚಿಸಲಾಗುತ್ತದೆ. ಚರ್ಮದ ಸಮಸ್ಯೆಗೆ ಮತ್ತು ತಲೆಯಲ್ಲಿ ಉಂಟಾಗುವ ಹೊಟ್ಟಿನ ನಿವಾರಣೆಗೆ ಜೇನುತುಪ್ಪವನ್ನು ಹಚ್ಚಿ ಮಸಾಜ್ ಮಾಡಿಕೊಳ್ಳುವುದರಿಂದ ತಲೆತುರಿಕೆ ಕಡಿಮೆಯಾಗುತ್ತದೆ. ಜೇನುತುಪ್ಪವನ್ನು ಮುಖಕ್ಕೆ ಹಚ್ಚುವುದರಿಂದ ಕಪ್ಪು ಕಲೆಗಳು ಕೂಡ ದೂರವಾಗುತ್ತದೆ ಮತ್ತು ಮುಖದ ಹೊಳಪು ಹೆಚ್ಚುತ್ತದೆ. ಚಿಕ್ಕ ಮಕ್ಕಳಿಗೂ ಕೂಡ ಜೇನುತುಪ್ಪವನ್ನು ತಿನಿಸಲಾಗುತ್ತದೆ, ಆ ಮೂಲಕ ಮಕ್ಕಳು ಕೆಮ್ಮು ಇಂತಹ ಸಮಸ್ಯೆಗಳಿಲ್ಲದೆ ಚೆನ್ನಾಗಿ ನಿದ್ರೆ ಮಾಡಲು ಸಹಕಾರಿಯಾಗುತ್ತದೆ.

ಜೇನುತುಪ್ಪದ ಬಗ್ಗೆ ನಿಮಗೆ ಎಷ್ಟು ಗೊತ್ತು?

ಜೇನುನೊಣವು ಹೂವಿನ ಮಕರಂದವನ್ನು ಹೀರಿ ಜೇನು ಸಂಗ್ರಹವಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಜೇನುನೊಣಗಳ ವೈವಿಧ್ಯತೆ ಬಗ್ಗೆ ತಿಳಿಸುವುದಾದರೆ ತುಡುವೆ ಜೇನ, ಹೆಜ್ಜೇನು, ನುಸರಿ ಜೇನು, ಕೋಲು ಜೇನು ಮುಂತಾದ ವೈವಿಧ್ಯತೆಗಳಿವೆ. ಜೇನುತುಪ್ಪವನ್ನು ಕೂಡ ಇಚ್ಚಿ ಜೇನುತುಪ್ಪ, ನೇರಳೆ ಜೇನುತುಪ್ಪ, ಹೆಜ್ಜೇನು ತುಪ್ಪ, ಮಾವು, ತುಳಸಿ ಕಾಡು ಮುಜಂಟಿ ಇತ್ಯಾದಿಯಾಗಿ ವಿಂಗಡಿಸಲಾಗುತ್ತದೆ.

ಜೇನುತುಪ್ಪದ ಇನ್ನೊಂದು ವಿಶೇಷತೆ ಎಂದರೆ, ಇದು ಬೇರೆ ಔಷಧಿಗಳಂತಲ್ಲದೇ, ದೀರ್ಘಕಾಲದವರೆಗೆ ಬಾಳಿಕೆ ಬರುತ್ತದೆ. ಜತೆಗೆ ಉಪಯೋಗಕ್ಕೂ ಅನುಕೂಲಕರವಾಗಿದೆ.

ಈ ದಿನ ಇತಿಹಾಸ

- 1984 – ಕನ್ನಡದ ಖ್ಯಾತ ನಟ ಡಾರ್ಲಿಂಗ್‌ಕೃಷ್ಣ ಜನನ
- 1915 – ಲೇಖಕ, ರಂಗ ಕಲಾವಿದ, ನಿರ್ದೇಶಕ, ಪತ್ರಕರ್ತ, ಸಾಮಾಜಿಕ ಕಾರ್ಯಕರ್ತ ಸಿ.ಕೆ.ನಾಗರಾಜ ರಾವ್ ಜನನ
- 1964 – ನೆಲ್ಸನ್ ಮಂಡೇಲಾ ಅವರಿಗೆ ದಕ್ಷಿಣ ಆಫ್ರಿಕಾದಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು.

ವಿಶ್ವ ಬಾಲಕಾರ್ಮಿಕ ವಿರೋಧಿ ದಿನ

ಚಿತ್ರಸ್ಫೂರ್ತಿ



ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಬುಧವಾರ
12 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಸಮಯ ಪ್ರಜ್ಞೆ ಇಲ್ಲದೆ ಕೈಚೆಲ್ಲದಿರಿ ಅವಕಾಶಗಳ

ಕಲಿಯುಗದ ಅಮೃತ ಜೇನುತುಪ್ಪ

ಬಿ ಪಾಸಿಟಿವ್

ಒಂದು ಬದುಕು ಹಲವು ಹುರುಪು

ಬದುಕುವುದು ನಮಗೆ ಅಷ್ಟು ಅನಿವಾರ್ಯವಲ್ಲದಿದ್ದರೂ ಹೆತ್ತು ಸಲಹಿದ ನಮ್ಮ ತಂದೆ ತಾಯಿಗೆ ನಮ್ಮ ಜೀವ ಬಹಳಷ್ಟು ಅನಿವಾರ್ಯ, ಅನಿವಾರ್ಯಕ್ಕಿಂತಲೂ ನಮ್ಮ ಮೇಲಿನ ಪ್ರೀತಿ, ಮಮಕಾರ ಅವರಿಗೆ ಇರುವುದು ಸಹಜ. ಕಷ್ಟಗಳು

ಬಂದಾಗ ಈ ಜೀವನವೇ ಬೇಡ ಎಂಬ ಮನಸ್ಥಿತಿ ಹುಟ್ಟಿಕೊಳ್ಳುತ್ತದೆ. ಜನನ ಹಾಗೂ ಮರಣ ಆಕಸ್ಮಿಕ. ಜೀವನದ ಆನಂದ ಸವಿಯುವುದು ಮಾತ್ರ ನಮ್ಮ ಕೈಯಲ್ಲಿದೆ. ಹಾಗಂತ ನಮ್ಮ ನಮ್ಮ ಜೀವನವನ್ನು ಅಂತ್ಯಗೊಳಿಸುವ ಯಾವ ಹಕ್ಕು ನಮಗಿಲ್ಲ. ಆತ್ಮಹತ್ಯೆ ಎಂಬುವುದು ತಪ್ಪು ಎಂದು ಗೊತ್ತಿದ್ದರೂ, ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಒಂದು ಬಾರಿ ಹೆತ್ತವರ ಬಗ್ಗೆ ಯೋಚಿಸಿ ನೋಡಿ. ಯಾಕೆಂದರೆ ಇಂತಹ ಮನಸ್ಥಿತಿ ಅಂದು ತಂದೆ ತಾಯಿಗೂ ಕಷ್ಟ ಬಂದಾಗ ಅವರ ಮನಸ್ಸಿನಲ್ಲಿಯೂ ಇಂತಹ ಭಾವನೆ ಬಂದಿರುತ್ತದೆ. ಅವರು ಕೂಡ ನಿಮ್ಮ ಬಗ್ಗೆ ಯೋಚಿಸದೆ ಕಷ್ಟ ಬಂತು ಎಂದು ಸಾಯುವ ನಿರ್ಧಾರವನ್ನು ತೆಗೆದುಕೊಂಡಿದ್ದರೆ, ಈ ಜೀವನವೇ ನಿಮಗೆ ದೊರೆಯುತ್ತಿರಲಿಲ್ಲ. ಕ್ಷುಲ್ಲಕ ಕಾರಣಗಳಿಗೆ ತಮ್ಮ ಜೀವನವನ್ನೇ ಕೆಡಿಸಿಕೊಂಡ ಹಲವಾರು ನಿದರ್ಶನಗಳು ಇದೆ. ಯಾವುದೇ ಒಂದು ನಿರ್ಧಾರವನ್ನು ತೆಗೆದುಕೊಳ್ಳುವಾಗ ಅದು ಕೆಟ್ಟದೇ ಆಗಿರಲಿ, ಒಳ್ಳೆಯದೇ ಆಗಿರಲಿ ನಿಮ್ಮ ಮನೆಯವರನ್ನು ಒಂದು ಬಾರಿ ನೆನೆದುಕೊಳ್ಳಿ. ಆಗ ನೀವು ತೆಗೆದುಕೊಂಡ ನಿರ್ಧಾರ ಸರಿಯೋ, ತಪ್ಪೋ ಎಂಬುದು ನಿಮಗೆ ತಿಳಿಯುತ್ತದೆ. ಕಷ್ಟ ಬಂದಾಗ ಸಾಯುವುದೇ ಮದ್ದಲ್ಲ. ಕಷ್ಟ ಜೀವನದ ಒಂದು ಭಾಗ, ನಾಲಿಗೆಗೆ ಕಹಿಯ ಅನುಭವ ಆದರೆ ಮಾತ್ರ ಸಕ್ಕರೆ ಅಥವಾ ಬೆಲ್ಲದ ಮಹತ್ವ ತಿಳಿಯುವುದು, ಅದೇ ರೀತಿ ಕಷ್ಟಗಳನ್ನು ಅನುಭವಿಸಿದಾಗಲೇ ಸುಖದ ಮೌಲ್ಯ ತಿಳಿಯಲು ಸಾಧ್ಯ. ಗೌರವ, ಆತ್ಮವಿಶ್ವಾಸ, ತಾಳ್ಮೆ ಇದ್ದಾಗ ಮಾತ್ರ ಮುಂದೊಂದು ದಿನ ಇನ್ನೊಬ್ಬರ ಕಷ್ಟಗಳಿಗೆ ಸ್ಪಂದಿಸಲು ಸಾಧ್ಯ.

● ಯಶ್ವಿತಾ, ಪೂಜಾರಿಗದ್ದೆ

ಲವ್ಎವೆರಿ ಬಾಡಿ

ಯಾವತ್ತೂ ಬೆವರುವುದಿಲ್ಲ. ಎಷ್ಟೇ ಸೆಖೆಯಿದ್ದರೂ ದೇಹದ ಒಂದು ಅಂಗ ಮಾತ್ರ ಯಾವತ್ತೂ ಬೆವರುವುದಿಲ್ಲ. ಅದಾವುದು ಎಂಬುದು ನಿಮಗೆ ಗೊತ್ತೇ? ಬೇಸಿಗೆಯಲ್ಲಿ ದೇಹದ ಎಲ್ಲಾ ಭಾಗಗಳು ಬೆವೆತು ಬಿಡುತ್ತವೆ. ತೊಡೆ, ಕತ್ತು, ಕಂಕುಳು, ಹೊಟ್ಟೆ, ಕೈ, ಪಾದಗಳು ಎಲ್ಲ ಕಡೆಯಿಂದಲೂ ಬೆವರು ಬರುತ್ತದೆ. ಈ ಬೆವರಿನಿಂದ ಪಾರಾಗಲು ಸ್ವಲ್ಪ ಎಸಿ, ಫ್ಯಾನ್ ಸಿಕ್ಕರೆ ಸಮಾಧಾನ. ಆದರೂ ನೀರಿಳಿಯುವುದು ಕಡಿಮೆಯಾಗುವುದಿಲ್ಲ. ಇರಿಸು-ಮುರಿಸು ಉಂಟಾಗುತ್ತದೆ. ಆದರೆ ಈ ಬೆವರಿನ ಬಗ್ಗೆ ಒಂದು ತಮಾಷೆಯಿದೆ. ಬೇಸಿಗೆಯ ಧಗೆ ಸುಡುತ್ತಿದ್ದರೂ ನಮ್ಮ ತುಟಿಗಳು ಎಂದಿಗೂ ಬೆವರುವುದಿಲ್ಲ. ತುಟಿಗಳಲ್ಲಿ ಬೆವರು ಗ್ರಂಥಿಗಳಿಲ್ಲ. ಇದರಿಂದಾಗಿ ಬೇಗನೆ ಒಣಗುತ್ತವೆ. ಇದೇ ಕಾರಣಕ್ಕೆ ತುಟಿಗಳಲ್ಲಿ ಹೆಚ್ಚಿನ ಸಮಯ ನೀರು ಉಳಿಯುವುದಿಲ್ಲ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಬೆಳವಣಿಗೆಯ ಬೀಜಾಕ್ಷರ

ನಮ್ಮ ಜೀವನದ ಎಲ್ಲ 'ಬೇಕು' ಗಳಿಗೆ ಸ್ವಯಂ ಸಲಹೆ ರಾಜಮಾರ್ಗ. ಕನಿಷ್ಠ 21 ದಿನಗಳ ತನಕವಾದರೂ ಸಲಹೆಮಾರ್ಗಗಳನ್ನು ನಿಶ್ಚಿತ ಸಮಯದಲ್ಲಿ ಅನುಸರಿಸಿ ನೋಡಿ. ನಮ್ಮ ಭವಿಷ್ಯದ ರೂವಾರಿ ನಾವೇ, ಅದರ ಕೀಲಿಕೈ ನಮ್ಮ ಕೈಯಲ್ಲೇ ಇದೆ.

ವೈಯಕ್ತಿಕ ಬೆಳವಣಿಗೆ ಮತ್ತು ವ್ಯಕ್ತಿ ವಿಕಸನ ಮಾರ್ಗಗಳಲ್ಲಿ, ಸ್ವಯಂ ಸಲಹೆ ಅಥವಾ ಸೂಚನೆ ವಿಧಾನ ಅತ್ಯಂತ ಪುರಾತನವಾದದ್ದು. ಯೋಚನೆ ಹುಟ್ಟಿಕೊಳ್ಳುವ ಎಚ್ಚರಾವಸ್ಥೆಯ ಮನಸ್ಸು ಮತ್ತು ಸುಪ್ತಾವಸ್ಥೆಯ ಮನಸ್ಸಿನ ನಡುವಿನ ಸೇತು ಸ್ವಯಂ ಸಲಹೆ. ಸ್ವಯಂ ಸಲಹೆ ಮೂಲಕ, ಸುಪ್ತ ಭಾಗಕ್ಕೆ ಹರಿಬಿಡುವ ವಿಧಾನ ಕ್ರಮಬದ್ಧವಾದದ್ದು. ಎಚ್ಚರ ಮನಸ್ಸು ನಮ್ಮ ಸಲಹೆ/ಸಂದೇಶಗಳಿಗೆ ಹೌದು ಅಥವಾ ಅಲ್ಲವೆನ್ನುವ ರೀತಿಯಲ್ಲಿ ಪ್ರತಿಕ್ರಿಯಿಸಿದರೆ ಸುಪ್ತ ಮನಸ್ಸಿನ ಪರಿಯೇ ಬೇರೆ. ನೀವು ಒಪ್ಪುವ ಎಲ್ಲ ವಿಷಯಗಳನ್ನು ಅದು ಬೇಷರತ್ ಒಪ್ಪುತ್ತದೆ. ನೀವು, ಖಂಡಿಸುವ ಸಂದೇಶಗಳನ್ನು ಅದೇ ರೀತಿಯಲ್ಲಿ ಖಂಡಿಸುತ್ತದೆ. ಭಾವ ಭಕ್ತಿಗೆ ಸರಿಯಾಗಿ ಭವತಿಯಲ್ಲವೆ?

ಮನಸ್ಸೇ ರಿಲ್ಯಾಕ್ಸ್

● ಡಾ. ಎನ್ ಜಯರಾಮ ಶೆಟ್ಟಿ

ನಮ್ಮನ್ನು ನಾವು ಕಾಣುವ ರೀತಿಯೇ ನಾವೇನಾಗಬೇಕೆಂಬುದನ್ನು ನಿರ್ಧರಿಸುತ್ತದೆ. ಯೋಚನೆಗಳು ಕೋಳಿಯಂತೆ ಕೂರಬಹುದು, ಹಕ್ಕಿಯಂತೆ ಹಾರಲೂಬಹುದು. ಪ್ರಬಲ ಯೋಚನೆಗಳಿಂದ ಮಾತು, ಮಾತುಗಳಿಂದ ಕೃತಿ, ಕೃತಿಗಳಿಂದ ಚಾರಿತ್ರ್ಯ, ಚಾರಿತ್ರ್ಯ ಪುನರಾವರ್ತನೆಯಿಂದ ಸಾರ್ಥಕ ಬದುಕು. ಹೀಗೆ ಕೊಂಡಿಯನ್ನು ಬೆಳೆಸಿಕೊಳ್ಳುವ ಜವಾಬ್ದಾರಿ ನಮ್ಮದು.

ಆರು ಹೆಜ್ಜೆಗಳು

ಸುಪ್ತ ಮನಸ್ಸು ನಮ್ಮ ಆಪ್ತ ಮಿತ್ರ ಮತ್ತು ವೈಯಕ್ತಿಕ ಸಂಪತ್ತು. ನಿಮಗೇನು ಬೇಕೆಂಬುದನ್ನು ಖಚಿತವಾಗಿ ನೀವೇ ನಿರ್ಧರಿಸಿಕೊಳ್ಳಿ. ನಿಮ್ಮ ಬೇಡಿಕೆಗಳು ಹಣ, ಆಸ್ತಿ, ವಿದ್ಯೆ, ಸ್ಥಾನ, ಸಾಧನೆ ಯಾವುದೇ ಆಗಿರಲಿ. ನಿಮ್ಮ ಆಯ್ಕೆಯ ಅನಂತರ ಈ ಆರು ಹೆಜ್ಜೆಗಳನ್ನು ನೀವು ಅನುಸರಿಸಲೇಬೇಕು.

ನಮ್ಮ ದಿಕ್ಕು, ನಮ್ಮ ಬದುಕು

ಬದುಕಿನಲ್ಲಿ ದಿಕ್ಕಿನ ನಿರ್ಧಾರ ನಮ್ಮ ಕೈಯಲ್ಲೇ ಇದೆ. ಮನಸ್ಸೇ ನಮ್ಮದಾಗಿರುವಾಗ ನಾವೇಕೆ ಬಡವರಾಗಿರಬೇಕು? ಆಂಡ್ರಿವ್ ಕಾರ್ನಿಗಿ ಎನ್ನುವ ಸ್ಕಾಟ್‌ಲ್ಯಾಂಡ್ ವ್ಯಕ್ತಿ ಅಮೆರಿಕ ದೇಶಕ್ಕೆ ಕಾಲಿಡುವಾಗ ನಿರ್ಗತಿಕನಾಗಿದ್ದ. ಸ್ವಪ್ರತಿಭೆ, ದೃಢ ಛಲ, ಬಲದಿಂದ ಹೆಜ್ಜೆ ಹೆಜ್ಜೆಗೂ ಮೇಲೇರಿ ಅಮೆರಿಕದ ಅತಿ ಶ್ರೀಮಂತ ಉಕ್ಕು ಕಾರ್ಖಾನೆಗಳ ಮಾಲೀಕನಾದ. ಒಂದು ಕಾಲದಲ್ಲಿ ಸುಮಾರು 43 ಮಿಲಿಯಾಧೀಶರು ಕಾರ್ನಿಗಿಯ ಕೆಳಗೆ ಕೆಲಸ ಮಾಡುತ್ತಿದ್ದರು. ಈತ ಕೇವಲ ಲೌಕಿಕ ಸಂಪತ್ತಿನ ಅಧಿಪತಿ ಮಾತ್ರವಲ್ಲ, ತನ್ನ ಸ್ವಯಂ ಸಲಹೆಗಳ ಸರದಾರನಾಗಿದ್ದ. ಸ್ವಯಂ ಸಲಹೆಯ ಆರೂ ಹೆಜ್ಜೆಗಳ ಮೂಲಕ ತನಗೆ ಏನು ಬೇಕೋ ಅದನ್ನೆಲ್ಲ ಪಡೆದಿದ್ದ; ತನ್ನ ಅಪಾರ ಸಂಪತ್ತನ್ನು ರಾಷ್ಟ್ರಕ್ಕೆ ನೀಡಿದ್ದ. ಮಹಾ ಸಾಧಕ ಥಾಮಸ್ ಆಲ್ವಾ ಎಡಿಸನ್ ಸ್ವತ: ಈ ಆರು ಹೆಜ್ಜೆಗಳನ್ನು ಮನಸಾರೆ ಮೆಚ್ಚಿದ್ದರಂತೆ.

- ನಿಮಗೇನು ಬೇಕು, ನೀವೇನಾಗಬೇಕು ಅದರ ಸುಸ್ಪಷ್ಟ ಖಚಿತ ಚಿತ್ರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಿ.
- ಅಪೇಕ್ಷೆ, ಬೇಡಿಕೆಗಳ ಸಾಕಾರಕ್ಕಾಗಿ ನೀವೇನನ್ನು ನೀಡಲು/ ಮಾಡಲು ಸಿದ್ಧರಿದ್ದೀರಿ ಅದನ್ನು ಅಷ್ಟೇ ಖಾತರಿಯಾಗಿ ನಿರ್ಧರಿಸಿಕೊಳ್ಳಿ.
- ಗುರಿಯ ಕಾಲಮಿತಿ ಮತ್ತು ಸಾಧನೆಯ ಮಟ್ಟ ಎಷ್ಟು/ಏನು ಬಗೆಗೆ ಸ್ಪಷ್ಟತೆ ಇರಲಿ. ಗುರಿ ಸಾಧನೆಯ ದೃಢ ಯೋಜನೆ ಸಿದ್ಧವಾಗಲಿ. ಯೋಜನೆಯಂತೆ ಕೂಡಲೇ ಕಾರ್ಯ ಪ್ರವೃತ್ತರಾಗುವುದು ಅತಿಮುಖ್ಯ. ಈ ಹಂತದಲ್ಲಿ ನಂಬಿಕೆ-ಅಪನಂಬಿಕೆ ಮುಖ್ಯವಲ್ಲ, ಕ್ರಿಯಾಶೀಲರಾಗುವುದು ಅತಿ ಮುಖ್ಯ. ಹಿಂದಿನ ನಾಲ್ಕು ಹೆಜ್ಜೆಗಳಲ್ಲಿ ಏನೇನು ಮಾಡಿದ್ದೀರಿ, ಮಾಡಲಿದ್ದೀರಿ ಅದರ ಸಂಕ್ಷಿಪ್ತ ವರಗಳನ್ನು ದಾಖಲು ರೂಪದಲ್ಲಿ ಸ್ಪಷ್ಟವಾಗಿ ಬರೆದಿಟ್ಟುಕೊಳ್ಳಿ.

ಮೇಲಿನ ಒಕ್ಕಣೆಯನ್ನು ಪ್ರತಿದಿನ ಗಟ್ಟಿಯಾಗಿ, ಸ್ಪಷ್ಟವಾಗಿ ಓದಬೇಕು, ರಾತ್ರಿ ಸಮಯ ನಿದ್ದೆಗೆ ಜಾರುವ ಮುಂಚೆ ಮತ್ತು ಬೆಳಗ್ಗೆ ಎದ್ದ ತಕ್ಷಣ ಗಟ್ಟಿಯಾಗಿ ಓದುವುದು ಅತಿ ಅಗತ್ಯ. ಓದುತ್ತಿದ್ದಂತೆ ಆ 'ಕೆಲಸ,' ಆ 'ಗುರಿ' ಕೈಗೂಡುತ್ತಿದ್ದಂತೆ, ಕೈ ಸೇರುತ್ತಿರುವಂತೆ ಭಾವಿಸಿಕೊಳ್ಳಿ ಮತ್ತು ನಂಬಿ. ನಂಬಿಕೆಯ ಜ್ವಲಂತ ಆಕಾಂಕ್ಷೆ ಇಡೀ ಮನಸ್ಸನ್ನು ಆವರಿಸಲಿ.

ಆರು ಹೆಜ್ಜೆಗಳ ಅನುಸರಣೆ ಮತ್ತು ಕ್ರಮಬದ್ಧವಾಗಿ ದಿನದ ನಿಶ್ಚಿತ ಸಮಯದಲ್ಲಿ , ಆರನೆಯ 'ಗಟ್ಟಿ ಓದಿನ' ಪ್ರಕ್ರಿಯೆಯನ್ನು ಸ್ವಯಂ ಸಲಹೆ ರೂಪದಲ್ಲಿ ಸುಪ್ತ ಮನಸ್ಸು ಸ್ವೀಕರಿಸುತ್ತದೆ. ಎಷ್ಟೋ ವರ್ಷಗಳ ಅಭ್ಯಾಸದಂತೆ, ಪ್ರತಿನಿತ್ಯ ಬೆಳಗ್ಗೆ ಆರು ಗಂಟೆ ಎಂದುಕೊಳ್ಳಿ. ಆದರೆ ನಾಳೆ ಬೆಳಗ್ಗೆ 4 ಗಂಟೆಗೆ ನಿಮ್ಮ ಮುಖ್ಯ ಪ್ರಯಾಣವಿದೆ. ಕನಿಷ್ಟ 3 ಗಂಟೆಗೆ ನೀವು ಏಳಲೇಬೇಕು. ಮೂರು ಗಂಟೆಗೆ ಏಳುವುದೇ ಬದುಕು, ಇಲ್ಲವಾದರೆ ಎಲ್ಲ ಕಳೆದುಕೊಂಡಂತೆ - ಇಷ್ಟು ಸಂದೇಶ ಸಾಕು. ಮಲಗುವ ಮುನ್ನ ನೀವು ಮೂರು ಗಂಟೆಗೆ ಎದ್ದೇಳುವ ನಿಮ್ಮ ಸಲಹೆಗೆ ಸುಪ್ತ ಮನಸ್ಸಿನ ಎಚ್ಚರಗಂಟೆ ಚಾಚೂ ತಪ್ಪದೆ ಬಾರಿಸುತ್ತದೆ. ಈ ಅನುಭವ ನಿಮಗೆ ಒಂದಲ್ಲ ಒಂದು ರೀತಿಯಲ್ಲಿ ಆಗಿದ್ದಿರಬಹುದು. ನಮ್ಮ ಮನಸ್ಸು ನಮ್ಮ ಉದ್ದೇಶವನ್ನು ಈಡೇರಿಸಿ ಕೊಡುವ ಪರಮಮಿತ್ರ.

ಸ್ವಯಂ ಸಲಹೆ ವರ್ತಮಾನ ಕಾಲದಲ್ಲಿಯ ವಾಕ್ಯವಾಗಿರಬೇಕು ಮತ್ತು ಇತ್ಯಾತ್ಮಕ ರೂಪದಲ್ಲಿರಬೇಕು. 'ನನಗೆ ನೆನಪಿನ ಶಕ್ತಿ ಕಡಿಮೆ' ಎಂದು ಕೆಲವರು ಯಾವಾಗಲೂ ಹೇಳಿಕೊಳ್ಳುವುದಿದೆ. ಈ ರೀತಿ ಹೇಳಿಕೊಳ್ಳುವವರು ನೆನಪನ್ನು ಮಾಡಿಕೊಳ್ಳುವ ಪ್ರಯತ್ನಗಳಿಗಿಂತ, ಆ ಸಂದೇಶವನ್ನು ಪುನ: ಪುನ: ಹೇಳಿಕೊಂಡು ಅದೇ ನಿಜವಾಗುವಂತೆ ಸಹಕರಿಸುತ್ತಾರೆ! ಅವರ ನಕಾರಾತ್ಮಕ ಸ್ವಯಂ ಸಲಹೆಯೇ ಮರೆವಿಗೆ ಕಾರಣವೆಂದು ಸಂಶೋಧನಗಳು ತಿಳಿಸಿವೆ.

ಅಭ್ಯಾಸಗಳನ್ನು ರೂಢಿಸಿಕೊಳ್ಳಲು, ದುಶ್ಚಟಗಳನ್ನು ದೂರೀಕರಿಸುವಲ್ಲಿ, ಹೊಸ ಕೌಶಲ/ಕಲೆಗಳನ್ನು ಕರಗತ ಮಾಡಿಕೊಳ್ಳುವಲ್ಲಿ ಅದೇಕೆ ನಮ್ಮ ಜೀವನದ ಎಲ್ಲ 'ಬೇಕು' ಗಳಿಗೆ ಸ್ವಯಂ ಸಲಹೆ ರಾಜಮಾರ್ಗ. ಕನಿಷ್ಠ 21 ದಿನಗಳ ತನಕವಾದರೂ ಸಲಹೆಮಾರ್ಗಗಳನ್ನು ನಿಶ್ಚಿತ ಸಮಯದಲ್ಲಿ ಅನುಸರಿಸಿ ನೋಡಿ, ನಮ್ಮ ಭವಿಷ್ಯದ ರೂವಾರಿ ನಾವೇ, ಅದರ ಕೀಲಿಕೈ ನಮ್ಮ ಕೈಯಲ್ಲೇ ಇದೆ.

ಬೈಸಿಕಲ್ ಸವಾರಿ ಪರಿಸರಕ್ಕೆ ಉಪಕಾರಿ

● ರಜತ್ ರಾಜ್ ಡಿ.ಹೆಚ್, ಮಡಿಕೇರಿ

ನಮ್ಮ ದೇಶದಲ್ಲಿ ಸುಮಾರು ನಲವತ್ತು, ಐವತ್ತು ದಶಕಗಳ ಹಿಂದೆ ಬೈಸಿಕಲ್, ಜನರ ಜೀವನದ ಒಂದು ಭಾಗವಾಗಿತ್ತು. ಸಾರ್ವಜನಿಕ ಸಂಪರ್ಕ ವಾಹನಗಳನ್ನು ಬಿಟ್ಟರೆ ಬೈಸಿಕಲ್ಲೇ ಜನರ ನಾಡಿಮಿಡಿತವಾಗಿತ್ತು. ಆದರೀಗ ಕಾಲ ಬದಲಾಗುತ್ತಿದ್ದಂತೆ ಜನರ ಜೀವನಶೈಲಿಯೂ ಬದಲಾಗುತ್ತಿದೆ. ಮನೆಯ ಪ್ರತಿ ಸದಸ್ಯನಿಗೂ ಪ್ರತ್ಯೇಕ ಕಾರು, ಬೈಕು ಇವೆಲ್ಲಾ ಸಾಮಾನ್ಯವೆನಿಸಿದೆ. ಪರಿಣಾಮ ಪರಿಸರ ಮಾಲಿನ್ಯವೂ ದುಪ್ಪಟ್ಟಾಗಿದೆ. ವ್ಯಾಯಾಮದ ಕೊರತೆಯಿಂದ ಇಲ್ಲದ ರೋಗಗಳು ಕಾಡತೊಡಗಿವೆ. ಈ ಕಾರಣದಿಂದಲೇ, ಆರೋಗ್ಯ, ಸುಸ್ಥಿರತೆ ಮತ್ತು ಸಾಮಾಜಿಕ ಸೇರ್ಪಡೆಗಾಗಿ ಸೈಕ್ಲಿಂಗ್‌ನ್ನು ಉತ್ತೇಜಿಸಲು, ಜೂನ್ 3ನ್ನು ವಿಶ್ವ ಬೈಸಿಕಲ್ ದಿನವನ್ನಾಗಿ ಆಚರಿಸಲಾಗುತ್ತದೆ. ವಿಶ್ವಾದ್ಯಂತ ಸರ್ಕಾರಗಳು ಎಲ್ಲಾ ವಯೋಮಾನದವರಲ್ಲಿ ಸೈಕ್ಲಿಂಗ್ ಅನ್ನು ಉತ್ತೇಜಿಸಲು ಮತ್ತು ಸಮಾಜದಲ್ಲಿ ಬೈಸಿಕಲ್ ಸಂಸ್ಕೃತಿಯನ್ನು ಬೆಳೆಸಲು ಈ ದಿನ ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ.

ಮೊದಲ ಪ್ರಾಯೋಗಿಕ ಬೈಸಿಕಲ್‌ನ್ನು 1817 ರಲ್ಲಿ, ಜರ್ಮನ್‌ನ ಕಾರ್ಲ್ ಫ್ರೀಹೆರ್ ವಾನ್ ಡ್ರಾಯಿಸ್ ಎಂಬಾತ ಕಂಡುಹಿಡಿದ. ನಂತರದ ದಿನಗಳಲ್ಲಿ ಬೈಸಿಕಲ್‌ನ್ನು ಪ್ರಯಾಣ, ಕ್ರೀಡೆ, ಮನರಂಜನೆ ಹಾಗೂ ವ್ಯಾಯಾಮಕೋಸ್ಕರ ಪ್ರಪಂಚದಾದ್ಯಂತ ವ್ಯಾಪಕವಾಗಿ ಬಳಸಲಾಗುತ್ತಿದೆ.

ಉತ್ತಮ ಆರೋಗ್ಯಕ್ಕೆ ರಹದಾರಿ

- **ತೂಕ ನಿರ್ವಹಣೆ:** ನಿಯಮಿತ ಸೈಕ್ಲಿಂಗ್, ದೇಹದ ಕೊಬ್ಬಿನ ಮಟ್ಟವನ್ನು ಕಡಿಮೆ ಮಾಡಲು ಮತ್ತು ಆರೋಗ್ಯಕರ ತೂಕ ನಿರ್ವಹಣೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಸ್ಪ್ರಿಂಟಿಂಗ್ ಮತ್ತು ಶಕ್ತಿ ತರಬೇತಿಯೊಂದಿಗೆ ಸೈಕ್ಲಿಂಗ್‌ನ್ನು ಸಂಯೋಜಿಸುವುದರಿಂದ,

ಚಯಾಪಚಯವನ್ನು ಹೆಚ್ಚಿಸುತ್ತದೆ. ಹೆಚ್ಚಿನ ಕ್ಯಾಲೊರಿಗಳನ್ನು ಕರಗಿಸಲು ಅನುವು ಮಾಡಿಕೊಡುತ್ತದೆ.
- **ಕಾಲಿನ ಶಕ್ತಿ:** ಬೈಸಿಕಲ್ ಅಭ್ಯಾಸ, ಅತಿಯಾಗಿ ಒತ್ತಡ ನೀಡದೆ ಕಾಲಿನ ಸ್ನಾಯುಗಳನ್ನು ಸದೃಢಗೊಳಿಸುತ್ತದೆ. ಕಾಲಿನ ಬಲ ಹೆಚ್ಚಿಸಲು ಸ್ಕ್ವಾಟ್‌ಗಳು, ಲೆಗ್ ಪ್ರೆಸ್‌ನ್ನು ಮಾಡಬಹುದು.
- **ಕೊಲೆಸ್ಟ್ರಾಲ್‌ನಲ್ಲಿ ಸುಧಾರಣೆ:** ಸೈಕ್ಲಿಂಗ್ ಕೊಲೆಸ್ಟ್ರಾಲ್ ಮಟ್ಟದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಇದು ಹೆಚ್‌ಡಿಎಲ್ (ಉತ್ತಮ) ಕೊಲೆಸ್ಟ್ರಾಲ್‌ನ್ನು ಹೆಚ್ಚಿಸಬಹುದು ಮತ್ತು ಎಲ್‌ಡಿಎಲ್ (ಕೆಟ್ಟ) ಕೊಲೆಸ್ಟ್ರಾಲ್ ಮತ್ತು ಟ್ರೈಗ್ಲಿಸರೈಡ್‌ನ್ನು ಕಡಿಮೆ ಮಾಡುತ್ತದೆ. ಹೃದಯಾಘಾತ ಮತ್ತು ಪಾರ್ಶ್ವವಾಯು ಅಪಾಯವನ್ನು ಕಡಿಮೆ ಮಾಡುತ್ತದೆ.
- **ಮಾನಸಿಕ ಆರೋಗ್ಯ ವರ್ಧಕ:** ಸೈಕ್ಲಿಂಗ್ ಒತ್ತಡ, ಖಿನ್ನತೆ ಮತ್ತು ಆತಂಕವನ್ನು ನಿವಾರಿಸುತ್ತದೆ. ರಸ್ತೆಯ ಮೇಲೆ ಕೇಂದ್ರೀಕರಿಸುವುದು, ಏಕಾಗ್ರತೆ ಮತ್ತು ಅರಿವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಹೊರಾಂಗಣದಲ್ಲಿ ಬೈಕಿಂಗ್ ವಯಸ್ಸಾದ ವಯಸ್ಕರಿಗೆ ಅರಿವು ಮತ್ತು ಯೋಗಕ್ಷೇಮವನ್ನು ಸುಧಾರಿಸುತ್ತದೆ.

ಸೈಕ್ಲಿಂಗ್ ಬಳಸುವ ದೇಶಗಳು

- **ನೆದರ್ ಲ್ಯಾಂಡ್:** ಜನರಲ್ಲಿ ಸೈಕ್ಲಿಂಗ್ ಸಂಸ್ಕೃತಿ ತೀರಾ ಜನಜನಿತವಾಗಿದೆ. ನೆದರ್‌ಲ್ಯಾಂಡ್‌ನಲ್ಲಿ ಜನ ಒಂದು ಕಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಮಾಡಲು ಬೈಸಿಕಲನ್ನು ಅವಲಂಬಿಸುವುದು ಸಾಮಾನ್ಯವಾಗಿ ಕಂಡು ಬರುವ ದೃಶ್ಯವಾಗಿದೆ.
- **ಜಪಾನ್:** ಜಪಾನಿನ ಜನರಿಗೆ ಬೈಸಿಕಲ್ ಓಡಿಸುವುದು ತಮ್ಮ ಜೀವನದ ಒಂದು ಭಾಗವಾಗಿದೆ. ಏಕೆಂದರೆ ಅವರು ಪ್ರಯಾಣಕ್ಕೆ ಸೈಕಲನ್ನು ಹೆಚ್ಚಾಗಿ ಬಳಸುತ್ತಾರೆ. ಜೀವನನ ಶೈಲಿಯಲ್ಲಿ ದಿನ ನಿತ್ಯದ ಒಂದು ಹವ್ಯಾಸವಾಗಿಯೂ ಜನರು ಬೈಸಿಕಲ್ ಓಡಿಸುವುದನ್ನು ರೂಢಿಸಿಕೊಂಡಿದ್ದಾರೆ. ಶಾಪಿಂಗ್‌ನಿಂದ ಹಿಡಿದು ದೂರ ಪ್ರಯಾಣಕ್ಕೂ ಇಲ್ಲಿನ ಜನರಿಗೆ ಬೈಸಿಕಲ್ ಏರಿ ಪ್ರಯಾಣ ಆರಂಭಿಸುವ ಗೀಳು ಬೆಳೆದುಕೊಂಡು ಬಂದಿದೆ. ಸೈಕ್ಲಿಂಗ್‌ಗೆಂದೇ ಹೇಳಿ ಮಾಡಿಸಿದಂತಿರುವ ಹಾದಿಗಳು, ಸ್ಥಳೀಯ ಬೈಸಿಕಲ್ ಕ್ಲಬ್ ಗಳು, ದೊಡ್ಡ ಮಟ್ಟದ ಸೈಕ್ಲಿಂಗ್ ಕಾರ್ಯಕ್ರಮಗಳು ಜಪಾನಿನಾದ್ಯಂತ ಸೈಕ್ಲಿಂಗ್ ಪ್ರಾಮುಖ್ಯತೆಯನ್ನು ಮಾನ್ಯವೆಂಬಂತೆ ಹೆಚ್ಚಿಸಿದೆ.
- **ಚೀನಾ:** ಚೀನಾದಲ್ಲಿ ಹಿಂದೆ ಸೈಕಲ್ ಅತಿಯಾಗಿ ಬಳಕೆಯಲ್ಲಿತ್ತು. ದಿನ ಕಳೆದಂತೆ ತಂತ್ರಜ್ಞಾನದ ಅಭಿವೃದ್ಧಿ ಹಾಗು ಬದಲಾದ ಜೀವನ

ಶೈಲಿಯ ಕಾರಣದಿಂದ ಜನರು ಕಾರು ಹಾಗು ಮೋಟಾರ್ ಬೈಕ್‌ಗಳತ್ತ ಆಕರ್ಷಿತರಾದರು. ಈಗಲೂ ಚೀನಾದ ಕೆಲವು ನಗರಗಳಲ್ಲಿ ಹಿಂದಿನಂತೆಯೇ ಬೈಸಿಕಲ್ ಬಳಕೆಯನ್ನು ಜನ ಮಾಡುತ್ತಾರೆ.

ಗುಟ್ಟೊಂದ ಹೇಳುವೆ!

● ಹುಳಿಗೆರೆ ಮಲ್ಲಿಕಾರ್ಜುನ್

ತುಂಬಾ ಜನರ ಪ್ರಶ್ನೆಯೊಂದೇ, ನನ್ನೊಳಗೆ ಇರುವ ಗುಟ್ಟನ್ನು, ನೋವನ್ನು, ದುಃಖವನ್ನು, ಅಸಮಾಧಾನವನ್ನು ಯಾರಿಗೆ ಹೇಳಲಿ? ಹೇಳಿದರೆ ಏನಾಗಿ ಬಿಡುತ್ತೋ ಎಂಬ ಭಯ.ಒಬ್ಬರ ಬಾಯಿಂದ ಒಬ್ಬರ ಬಾಯಿಗೆ ಹೋಗುತ್ತಾ,ಅದಕ್ಕೆ ರೆಕ್ಕೆ ಪುಕ್ಕಗಳನ್ನು ಕಟ್ಟಿಕೊಳ್ಳುತ್ತಾ ಮೂಲ ವಿಷಯಕ್ಕಿಂತ ಮತ್ತೊಂದು ರೀತಿಯ ವಿಷಯವೇ ಬಂದು ಬಿಡುತೆ! ಗುಟ್ಟುಗಳನ್ನು, ನೋವುಗಳನ್ನು ನಮ್ಮೊಳಗೆ ನಾವೇ ಇಟ್ಟುಕೊಳ್ಳುವುದಿದೆ ನೋಡಿ ಅದು ಬಹಳ ಅಪಾಯ. ನಿಂತು ನಿಂತು ನೀರು ವಾಸನೆ ಬರುವಂತಾಗುತ್ತದೆ.

ಒಂದು ಬಲೂನಿಗೆ ಗಾಳಿ ತುಂಬಿಸಲು ಪ್ರಯತ್ನಿಸುತ್ತೀರಿ, ಎಷ್ಟು ತುಂಬಿಸುತ್ತೀರಿ ಅದು ಅಷ್ಟನ್ನು ಹಿಡಿಯುತ್ತದೆ. ಅಷ್ಟನ್ನು ಮಾತ್ರ ಗಾಳಿ ತುಂಬಿಸಬೇಕು ಹೆಚ್ಚಾದರೆ ಆ ಬಲೂನ್ ಡಂ ಎಂದು ಪುಡಿಯಾಗುತ್ತ ಹೋಗುತ್ತದೆ.

ಮನಸ್ಸು ಕೂಡ ಅಷ್ಟೇ ದುಃಖವನ್ನು ಸಹಿಸುವ ಅದರ ಶಕ್ತಿ ಸೀಮಿತವಾಗಿದೆ. ನೋವು, ಸಂಕಟ, ಗುಟ್ಟನ್ನು ಬಚ್ಚಿಟ್ಟುಕೊಂಡು ಕೊರಗುತ್ತಿದ್ದರೆ ಆ ನೋವು ಕಡಿಮೆಯಾಗುವುದಿಲ್ಲ. ಆದ್ದರಿಂದ ನೋವು ಕಡಿಮೆ ಮಾಡಿಕೊಳ್ಳಲೇಬೇಕು. ಅವು ತಮ್ಮ ಪಾಡಿಗೆ ತಾವು ಕಡಿಮೆಯಾಗುವುದಿಲ್ಲ, ಹಾರಿಹೋಗುವುದಿಲ್ಲ. ಹಾಗಾಗಿ ನಿಮ್ಮ ಭಾವನೆಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಲೇಬೇಕು. ಆ ರೀತಿ ಆದಾಗ ಮಾತ್ರ ಮನಸ್ಸು ಹಗುರವಾಗುತ್ತದೆ, ನಿರಾಳವಾಗುತ್ತೆ, ಹಾಯ್ ಎನ್ನಿಸುತ್ತದೆ.

ಯಾರಿಗೆ ಹೇಳಬೇಕೆನ್ನುವುದೇ ಸಮಸ್ಯೆ

ಇಂದು ಮಿತ್ರ, ಗೆಳೆಯ, ಆತ್ಮೀಯರಾಗಿರುವವರು ನಾಳೆ ಮಹಾನ್ ಶತ್ರುಗಳಾಗುತ್ತಾರೆ. ಮನಸ್ಸು ಹಗುರವಾಗಲಿ, ನೋವು ಸ್ವಲ್ಪ ಶಮನವಾಗಲಿ ಅಂತ ಯಾರಿಗೆ ಬೇಕು ಅವರಿಗೆ ನಿಮ್ಮ ವಿಷಯಗಳನ್ನು, ಗೌಪ್ಯಗಳನ್ನು ರಟ್ಟು ಮಾಡಿದರೆ ಅಲ್ಲಿಗೆ ನಿಮ್ಮ ಕತೆ ಮುಗಿತು. ನಿಮ್ಮನ್ನು ಬೀದಿಗಿಟ್ಟು ಹರಾಜು ಹಾಕುತ್ತಾರೆ. ಬೇರೆಯವರ ಬಾಯಿಗೆ ಆಹಾರವಾಗುತ್ತೀರಾ!

- **ಆತ್ಮೀಯರ ಹತ್ತಿರ ಹೇಳಿಕೊಳ್ಳಬೇಕು. ಆತ್ಮಕ್ಕೆ ಹತ್ತಿರವಾದವರನ್ನು ತೂಗಿ ನೋಡಿ ಅವಸರಕ್ಕೆ ಬಿದ್ದು ಹೇಳಬೇಡಿ. ಬಣ್ಣ -ಬಣ್ಣದ, ಅಂದವಾಗಿ ಮಾತನಾಡಿದ ಮಾತ್ರಕ್ಕೆ ಅವರು ಆತ್ಮೀಯರಲ್ಲ.**
- **ಈ ವಿಷಯನ ಯಾರಿಗೂ ಹೇಳಬೇಡಿ, ನೀವು ಕ್ಲೋಸ್ ಅಂತ ಹೇಳುತ್ತಿದ್ದೇನೆ. ಅಂತ ಹೇಳಿದ ಮಾತ್ರಕ್ಕೆ ಅವರು ಆತ್ಮೀಯರಲ್ಲ. ಅವರೇ ಊರ ತುಂಬಾ ಹೇಳಿಕೊಂಡು ಬಂದು ನೀವು ಹೇಳಿದ್ದು ಅಂತ ನಿಮ್ಮ ಮೇಲೆ ಗೂಬೆ ಕೂರಿಸುತ್ತಾರೆ.**

- **ಆ ವ್ಯಕ್ತಿಯ ಪೂರ್ವ-ಪರ, ಹಿಂದೆ- ಮುಂದೆ ತಿಳಿದು ಯೋಚಿಸಿ, ಆತ್ಮೀಯರು ಅನ್ನಿಸಿದ ನಂತರವೇ ಗುಟ್ಟು ಹೇಳಬೇಕು. ನೀವು ಅವರಿಂದ ದೂರಾದರೂ ಆ ಗುಟ್ಟು ಅವರಲ್ಲಿಯೇ ಇರಬೇಕು. ದೂರಾದ ತಕ್ಷಣ ಬಣ್ಣ ಸೇರಿಸಿ ಹೇಳುವವರು ನಯವಂಚಕರು.**
- **ಇನ್ನು ಕೆಲವರು ಇರುತ್ತಾರೆ. ಬಾಯಿ ಬಿಟ್ಟರೆ ಸಾಕು ತಾಯಿ ಮೇಲೆ, ಮಕ್ಕಳ ಮೇಲೆ, ತಂದೆ ಮೇಲೆ ಆಣೆ ಹಾಕುತ್ತಾರೆ. ಇಂತಹವರು ನಂಬಿಕೆ ಅಷ್ಟೊಂದು ಅರ್ಹರಲ್ಲ.**

ಅದರಲ್ಲೇನಿದೆ ರಹಸ್ಯ ?

ನಿನ್ನೊಳಗೆ ಯಾವುದೇ ವಿಷಯ ರಹಸ್ಯವಾಗಿದ್ದರೆ ಅದು ಗುಟ್ಟು. ಅದು ಹೊರಬಂದು ಮತ್ತೊಬ್ಬರ ಕಿವಿಗೆ ಹಾಕಿದರೆ ರಟ್ಟು.!

ನಮ್ಮ ಗುಟ್ಟುಗಳೇನು ಪರಮ ರಹಸ್ಯಗಳೇನಲ್ಲ. ಹೇಳಬಾರದಂತ ವಿಷಯಗಳಲ್ಲ. ಕೊಲೆಗೆ ಸಂಬಂಧಿಸಿದಂಥವೂ ಅಲ್ಲ. ಮನೆತನಗಳನ್ನು ಹಾಳು ಮಾಡಿದ ಮ್ಯಾಟರ್‌ಗಳು ಅಲ್ಲ. ಅದು ಸುಳ್ಳಿನದು ಇರಬಹುದು, ಪ್ರೇಮದ್ದು ಆಗಿರಬಹುದು. ಇಲ್ಲವೇ ಸಾಲದ್ದು ಇರಬಹುದು. ಕೆಲವೊಮ್ಮೆ ಕದ್ದು ಮುಚ್ಚಿದ ಸಂಬಂಧಗಳಿರಬಹುದು. ಆಗೆಲ್ಲಾ ಹೇಳಿಕೊಂಡರೆ ನಾನೆಲ್ಲಿ ಕಡಿಮೆ ಆಗಿ ಬಿಡುತ್ತೇನೋ ಎಂಬ ಭಯ.! ಹೇಳಿಕೊಳ್ಳದಿದ್ದರೆ ಮನಸ್ಸು ರಾಡಿಯಾಗುತ್ತದೆ ಎಂಬ ಅಳುಕು. ನಿಮ್ಮ ಗುಟ್ಟನ್ನು ಗುಟ್ಟಾಗಿಡುವ ಆತ್ಮೀಯರು ಸಿಕ್ಕಲಿಲ್ಲವೆಂದರೆ ಏಕಾಂತದಲ್ಲಿ ದೇವರ ಕೋಣೆಗೆ ಹೋಗಿ ಕೇಳಿಕೊಳ್ಳಿ. ಸ್ನಾನದ ಗೃಹದಲ್ಲಿ ನೀರು ಬಿಡುತ್ತ ಹೇಳಿಕೊಳ್ಳಿ. ಪ್ರಾರ್ಥನೆ, ಧ್ಯಾನ ಯೋಗಕ್ಕೆ ಮೊರೆಹೋಗಿ, ಮನಸ್ಸು ಹಗುರವಾಗುತ್ತದೆ. ನಿಮ್ಮಷ್ಟಕ್ಕೆ ಹಾಡು ಹೇಳಿ, ಇಲ್ಲವೇ ಕೇಳಿ. ಆದರೆ ಒಂದು ಮಾತು ನೆನಪಿರಲಿ. ನಿಮ್ಮ ಗುಟ್ಟು ಬೇರೆಯವರ ವಿಷಯಕ್ಕೆ ಹೋಲಿಸಿದರೆ ಏನಕ್ಕೂ ಸಮಾನವಲ್ಲ. ಸೋ ಬಿಟ್ಹಾಕ್ರಿ! ಇರುವುದೊಂದೇ ಜೀವನ ನಗುತಾ ಇರಿ.